ಬುಧವಾರ, ಸೆಪ್ಟೆಂಬರ್ 1, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ದಹಿ ಹಂಡಿ
ಶ್ರೀಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಮುಂಬೈನಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ದಹಿ ಹಂಡಿ (ಮೊಸರು ಕುಡಿಕೆ) ಉತ್ಸವದಲ್ಲಿ ಮುಖಗವಸು ಧರಿಸಿ ಪಾಲ್ಗೊಂಡಿದ್ದ ಯುವಕ

ಸರ್ಕಾರಕ್ಕೆ ಸಾಲ ಜನರಿಗೆ ತೆರಿಗೆ ಶೂಲ

ನಿರ್ವಹಣೆ ಶುಲ್ಕದ ಜತೆ 'ದಂಡನೆ'





• ಪ್ರವೀಣ ಕುಮಾರ್ ಪಿ.ವಿ.

ಬೆಂಗಳೂರು: ಕೋವಿಡ್ ಸಂದರ್ಭದಲ್ಲಿ ನಗರದ ಜನ ಸಂಕಷ್ಟಕ್ಕೆ ಸಿಲುಕಿದ್ದರೆ, ಇನ್ನೊಂದೆಡೆ ಶುಲ್ಕ ಹೆಚ್ಚಳದ ಬಿಸಿಯೂ ಅವರಿಗೆ ತಟ್ಟಿದೆ. ಅದರ ಜೊತೆಗೆ 'ನಿರ್ವಹಣಾ ಶುಲ್ಕ'ದ ಹೆಸರಿನಲ್ಲಿ ಹೊಸ ಹೊರೆಯನ್ನೂ ಹೊರಬೇಕಾಗಿದೆ.

ನಗರದ ವಸತಿ ಪ್ರದೇಶಗಳಲ್ಲಿ ಬಹುತೇಕವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಅಭಿವೃದ್ಧಿಪಡಿಸಿರುವ ಬಡಾವಣೆಗಳು. ಇಲ್ಲಿನ ನಿವೇಶನದಾರರಿಗೆ, ಅರ್ಜಿ ಶುಲ್ಕದಿಂದ ಖಾತಾ ಶುಲ್ಕದವರೆಗೆ ಹತ್ತು ಹಲವು ಶುಲ್ಕಗಳನ್ನು ಬಿಡಿಎ ಹೆಚ್ಚಳ ಮಾಡಿದೆ. ವಿವಿಧ ಅಳತೆಗಳ ನಿವೇಶನಗಳ ಖಾತಾ ಶುಲ್ಕ 2020ಕ್ಕಿಂತ ಹಿಂದಿನ ದರಕ್ಕೆ ಹೋಲಿಸಿದರೆ ದುಪ್ಪಟ್ಟಾಗಿದೆ. ಅರ್ಜಿ ಶುಲ್ಕ ಹಾಗೂ ನೋಂದಣಿ ಶುಲ್ಕಗಳನ್ನು ಎರಡೂವರೆ ಪಟ್ಟು ಹೆಚ್ಚಿಸಲಾಗಿದೆ.

ಈ ಬಡಾವಣೆಗಳಲ್ಲಿ ನಿವೇಶನ ಮಂಜೂರಾಗಿ ಐದು ವರ್ಷ ಕಳೆದ ಬಳಿಕವೂ ವಸತಿ ನಿರ್ಮಿಸದವರ ಖಾಲಿ ನಿವೇಶನಗಳಿಗೆ ವಿಧಿಸುವ ದಂಡನಾ ಶುಲ್ಕವನ್ನೂ ಶೇ 50ರಷ್ಟು ಹೆಚ್ಚಳ ಮಾಡಲಾಗಿದೆ. ನಿರ್ವಹಣಾ ಶುಲ್ಕ ಹೆಸರಿನಲ್ಲಿ ಬಿಡಿಎ ವಿವಿಧ ಅಳತೆಯ ನಿವೇಶನಗಳಿಗೆ ಪ್ರತಿ ತಿಂಗಳಿಗೆ ₹ 100ರಿಂದ ₹300ರವರೆಗೆ ವಸೂಲಿ ಮಾಡಲು ಶುರುಮಾಡಿದೆ.

'ನಾಲ್ಕೈದು ವರ್ಷಗಳಿಂದ ಯಾವುದೇ ಶುಲ್ಕ ಹೆಚ್ಚಳ ಮಾಡಿರಲಿಲ್ಲ. ಹಾಗಾಗಿ ಶುಲ್ಕ ಹೆಚ್ಚಳ ಮಾಡುವುದು ಅನಿವಾರ್ಯವಾಗಿತ್ತು' ಎಂಬುದು ಬಿಡಿಎ ಸಮರ್ಥನೆ.

ಶುಲ್ಕ ಹೆಚ್ಚಳ ಮಾಡಿದ್ದಕ್ಕೆ ಬಿಡಿಎ ಬಡಾವಣೆಗಳ ನಿವೇಶನದಾರರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. 'ಬಿಡಿಎ ನಮಗೆ ನೀಡುವ ಸೇವೆಯ ಗುಣಮಟ್ಟ ಅಷ್ಟರಲ್ಲೇ ಇದೆ. ಈಗಲೂ ಸರಿಯಾಗಿ ಮೂಲಸೌಕರ್ಯಗಳನ್ನೂ ಕಲ್ಪಿಸಿಲ್ಲ. ಆದರೂ ಶುಲ್ಕ ಹೆಚ್ಚಳದ ಹೊರೆ ಹೊರಿಸುತ್ತಿರುವುದು ಅನ್ಯಾಯ' ಎಂದು ದೂರುತ್ತಾರೆ ನಿವೇಶನದಾರರು.

ಬಿಡಿಎ ಬಡಾವಣೆಯ ಒಂದು ನೋಟ

> ಬಿಡಿಎಯು ಅರ್ಕಾವತಿ ಬಡಾವಣೆಗಂತೂ ಯಾವುದೇ ಮೂಲ ಸೌಕರ್ಯ ಕಲ್ಪಿಸಿಲ್ಲ. ಆದರೆ ಈ ವರ್ಷದಿಂದ ನಿರ್ವಹಣೆ ಶುಲ್ಕದ ಹೆಸರಿನಲ್ಲಿ ಆಸ್ತಿ ತೆರಿಗೆ ಜೊತೆಗೆ ವರ್ಷಕ್ಕೆ ₹ 1800 ವಸೂಲಿ ಮಾಡುತ್ತಿದೆ. ಖಾಲಿ ನಿವೇಶನಕ್ಕೆ ದುಬಾರಿ ದಂಡ ವಿಧಿಸುತ್ತಿದೆ. ನಮ್ಮ ನಿವೇಶನಕ್ಕೆ ಸಂಪರ್ಕ ರಸ್ತೆಯೂ ಇಲ್ಲ. ಕೋವಿಡ್ ಸಂಕಷ್ಟ ಕಾಲದಲ್ಲಿ ನಮಗೆ ಮತ್ತು ಹೊರೆ ಹೊರಿಸಿದ್ದಾರೆ. ಹೊರೆ ತಗ್ಗಿಸುವಂತೆ ಮಾಡಿದ ಮನವಿಗೆ ಬಿಡಿಎ ಸ್ಪಂದಿಸಿಲ್ಲ
>
> **ಜಿ.ಶಿವಪ್ರಕಾಶ್,** ಅರ್ಕಾವತಿ ಬಡಾವಣೆ ನಿವೇಶನದಾರ

ಖಾಲಿ ನಿವೇಶನಗಳಿಗೆ ದಂಡನಾ ಶುಲ್ಕ (₹ಗಳಲ್ಲಿ)

ನಿವೇಶನ ವಿಸ್ತೀರ್ಣ	ಹಿಂದಿನ ದರ	ಪರಿಷ್ಕೃತ ದರ	ನಿರ್ವಹಣೆ ಶುಲ್ಕ (ಪ್ರತಿ ತಿಂಗಳಿಗೆ)
20x30 ಅಡಿ	5 ಸಾವಿರ	5 ಸಾವಿರ	100
20x30 ಅಡಿಯಿಂದ 30x40 ಅಡಿವರೆಗೆ	10 ಸಾವಿರ	15ಸಾವಿರ	150
30x40 ಅಡಿ	40ಸಾವಿರ	60 ಸಾವಿರ	200
30x40 ಅಡಿಯಿಂದ 40x60 ಅಡಿವರೆಗೆ	50ಸಾವಿರ	1.20 ಲಕ್ಷ	200
40x60 ಅಡಿಯಿಂದ 50x80 ಅಡಿವರೆಗೆ	2.50 ಲಕ್ಷ	3.75 ಲಕ್ಷ	250
50x80 ಅಡಿ ಮೇಲ್ಪಟ್ಟು	4 ಲಕ್ಷ	6 ಲಕ್ಷ	300

ಪ್ರಸಕ್ತ ತ್ರೈಮಾಸಿಕ ಅವಧಿ ನಂತರ ಮೊದಲಿನ ದರ 'ಹೇರಿಕೆ'

ಅಕ್ಟೋಬರ್‌ಗೆ ಮತ್ತೆ 'ವಿದ್ಯುತ್ ಶಾಕ್' !

• ಗುರು ಪಿ.ಎಸ್.

ಬೆಂಗಳೂರು: ಏನಿದು, ಪ್ರತಿ ತಿಂಗಳಿಗಿಂತ ಈಗ ₹150ರಿಂದ ₹300 ರವರೆಗೆ ಕಡಿಮೆ ವಿದ್ಯುತ್ ಶುಲ್ಕ ಬರುತ್ತಿದೆ ಎಂದು ನೀವು ಖುಷಿ ಪಡುತ್ತಿರಬಹುದು. ಆದರೆ, ಈ ಸಂಭ್ರಮ ಸೆಪ್ಟೆಂಬರ್‌ವರೆಗೆ ಮಾತ್ರ. ಅಕ್ಟೋಬರ್‌ನಿಂದ ವಿದ್ಯುತ್ ದರವೂ ಏರಿಕೆಯ ಮುಗಿಲೆಡೆಗೆ ಸಾಗಲಿದೆ.

ಈ ತ್ರೈಮಾಸಿಕದಲ್ಲಿ (ಜುಲೈ,ಆಗಸ್ಟ್ ಮತ್ತು ಸೆಪ್ಟೆಂಬರ್) ಎಲ್ಲ ವಿದ್ಯುತ್ ಸರಬರಾಜು ಕಂಪನಿಗಳು (ಎಸ್ಕಾಂ) ಪ್ರತಿ ಯುನಿಟ್‌ಗೆ ಸರಾಸರಿ 50 ಪೈಸೆ ಕಡಿಮೆ ಮಾಡಿವೆ. ಈ ದುಬಾರಿ ಕಾಲದಲ್ಲಿ ವಿದ್ಯುತ್ ಬಿಲ್‌ಗಳು ಮಾತ್ರ ಆಪ್ಯಾಯಮಾನವಾಗಿ ಕಾಣಲು ಇದೂ ಕಾರಣ. ವಿದ್ಯುತ್ ಉತ್ಪಾದಕ ಕಂಪನಿಗಳು ವಿದ್ಯುತ್ ಖರೀದಿ ದರವನ್ನು ಕಡಿಮೆ ಮಾಡಿರುವುದರಿಂದ ಎಸ್ಕಾಂಗಳು ಪ್ರತಿ ಯುನಿಟ್‌ಗೆ 50 ಪೈಸೆ 'ಕೊಡುಗೆ'ಯನ್ನು ಬಳಕೆದಾರರಿಗೆ ನೀಡುತ್ತಿವೆ. ಆದರೆ, ಇದು ಸೀಮಿತ ಅವಧಿಯ 'ಕೊಡುಗೆ'.

ಎಸ್ಕಾಂಗಳು ವಿದ್ಯುತ್ ಉತ್ಪಾದನಾ ಕಂಪನಿಗಳೊಂದಿಗೆ ಖರೀದಿ ಒಪ್ಪಂದ ಮಾಡಿಕೊಳ್ಳುತ್ತವೆ. ಇದು 25 ವರ್ಷಗಳ ಅವಧಿಯ ಒಪ್ಪಂದ. ಈ ಒಪ್ಪಂದದ ದರದ ಜೊತೆಗೆ ವ್ಯತ್ಯಾಸದ ಮೊತ್ತವು ಪ್ರತಿ ತ್ರೈಮಾಸಿಕ ಅವಧಿಗೆ ಹೆಚ್ಚುತ್ತಾ ಹೋಗುತ್ತದೆ. ವಿದ್ಯುತ್ ಖರೀದಿ ದರವು 2019ರಲ್ಲಿ ₹5.63 ಇತ್ತು. 2020ಕ್ಕೆ ಇದು ₹5.91ಕ್ಕೆ ಏರಿತ್ತು. 2021ರಲ್ಲಿ ₹5.78ರಂತೆ ಎಸ್ಕಾಂಗಳು ವಿದ್ಯುತ್ ಖರೀದಿ ಮಾಡಿವೆ. ಕೋವಿಡ್ ಅವಧಿಯಲ್ಲಿ ವಿದ್ಯುತ್ ಬಳಕೆ ಕಡಿಮೆ ಆಗಿದ್ದರಿಂದ ಖರೀದಿ ದರವೂ ಕಡಿಮೆ ಆಗಿದೆ. ಜೊತೆಗೆ, ವ್ಯತ್ಯಾಸದ ಮೊತ್ತವೂ ಕಡಿಮೆ ಆಗಿರುವುದರಿಂದ ಬಳಕೆದಾರರಿಗೆ ಪ್ರತಿ ಯುನಿಟ್‌ಗೆ 50 ಪೈಸೆ ಉಳಿತಾಯವಾಗುತ್ತಿದೆ.

ಸದ್ಯ, ಪ್ರತಿ ಯುನಿಟ್‌ಗೆ ಸರಾಸರಿ (ವಸತಿ) ₹7.23 ವಿದ್ಯುತ್ ದರವಿದೆ. ಇದರಲ್ಲಿ 50 ಪೈಸೆ ಕಡಿಮೆಯಾಗಿರುವುದರಿಂದ ಬಳಕೆದಾರರಿಗೆ ಈಗ ₹6.73ಕ್ಕೆ ಒಂದು ಯುನಿಟ್ ವಿದ್ಯುತ್ ಸಿಗುತ್ತಿದೆ. ಆದರೆ, ಅಕ್ಟೋಬರ್‌ನಿಂದ ಮತ್ತೆ ಪ್ರತಿ ಯುನಿಟ್‌ಗೆ ₹7.23ರಂತೆಯೇ ದರ ಜಾರಿ ಆಗುವುದರಿಂದ ಬಳಕೆದಾರರ 'ಜೇಬು' ಶರವೇಗದಲ್ಲಿ ಬರಿದಾಗುತ್ತಾ ಹೋಗಲಿದೆ !

ಅಲ್ಲದೆ, ಮೊದಲ 30 ಯುನಿಟ್ ವರೆಗಿನ ಬಳಕೆಯನ್ನು ಒಂದು ಹಂತ ಎಂದು ನಿಗದಿ ಮಾಡಲಾಗಿತ್ತು. ಅಂದರೆ, 0ಯಿಂದ 30 ಯುನಿಟ್‌ವರೆಗೆ, ಪ್ರತಿ ಯುನಿಟ್‌ಗೆ ₹4 ದರ ಇತ್ತು. ಈಗ ಮೊದಲ ಹಂತವನ್ನು 50 ಯುನಿಟ್‌ಗೆ ವಿಸ್ತರಿಸಲಾಗಿದೆ. ಅಂದರೆ, 0ಯಿಂದ 50 ಯುನಿಟ್‌ವರೆಗೆ ವಿದ್ಯುತ್ ಬಳಸಿದರೆ ಪ್ರತಿ ಯುನಿಟ್‌ಗೆ ₹4.10 ಇದೆ. ಮೊದಲು, 31 ಯುನಿಟ್‌ನಿಂದ 'ಸ್ಲ್ಯಾಬ್' ಬದಲಾಗುತ್ತಿದ್ದುದರಿಂದ ದರವೂ ಸರಸರನೇ ಏರುತ್ತಿತ್ತು.

70 ಪೈಸೆ ಏರಿಕೆ: ಕೋವಿಡ್ ಬಿಕ್ಕಟ್ಟಿನ ಸಂದರ್ಭದಲ್ಲಿಯೇ 2 ಬಾರಿ ವಿದ್ಯುತ್ ದರ ಏರಿಕೆ ಮಾಡಲಾಗಿದೆ. 2020ರ ನವೆಂಬರ್ 4ರಂದು ಪ್ರತಿ ಯುನಿಟ್‌ಗೆ 40 ಪೈಸೆ, 2021ರ ಜೂನ್ 9ರಂದು 30 ಪೈಸೆ ಸೇರಿ ಒಟ್ಟು ಪ್ರತಿ ಯುನಿಟ್‌ಗೆ 70 ಪೈಸೆ ಏರಿಕೆ ಮಾಡಲಾಗಿದೆ.

ವಿದ್ಯುತ್ ಉತ್ಪಾದನಾ ಕಂಪನಿಗಳ ಜೊತೆಗೆ ಒಪ್ಪಂದ ಮಾಡಿಕೊಂಡಿರುವುದರಿಂದ, ನಾವು ನಿರ್ದಿಷ್ಟ ವಿದ್ಯುತ್ ಖರೀದಿಸಲಿ, ಬಿಡಲಿ ನಿಶ್ಚಿತ ಶುಲ್ಕವನ್ನು (ಎಫ್‌ಸಿ) ನಾವು ಪಾವತಿಸಲೇಬೇಕಾಗುತ್ತದೆ. ದರ ಏರಿಕೆಗೂ ಇದೂ ಕಾರಣ ಎನ್ನುವುದು ಎಸ್ಕಾಂಗಳು ಕೊಡುವ ಸಮರ್ಥನೆ.



ಜೀವನ ಸುಡುತ್ತಿರುವ 'ಇಂಧನ'

• ವಿಶ್ವನಾಥ ಎಸ್.

ಬೆಂಗಳೂರು: ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಕೆಯು ಸರಕು ಸಾಗಣೆ, ಸಾರ್ವಜನಿಕ ಸಾರಿಗೆ, ಆಹಾರ ವಸ್ತುಗಳ ದರ ಏರಿಕೆಗೆ ಕಾರಣವಾಗುತ್ತಿದ್ದು ಜನರಿಗೆ ಹೊರೆಯಾಗಿ ಪರಿಣಮಿಸಿದೆ. ಬೆಂಗಳೂರು, ಮುಂಬೈ, ದೆಹಲಿ, ಕೋಲ್ಕತ್ತ ಸೇರಿದಂತೆ ಪ್ರಮುಖ ನಗರಗಳಲ್ಲಿ ಪೆಟ್ರೋಲ್ ದರವು ಲೀಟರಿಗೆ ₹ 100 ರ ಗಡಿ ದಾಟಿದೆ. ಡೀಸೆಲ್ ದರ ಕೆಲವು ಪ್ರದೇಶಗಳಲ್ಲಿ ₹ 100ನ್ನು ದಾಟಿದ್ದರೆ, ಇನ್ನು ಕೆಲವು ಕಡೆಗಳಲ್ಲಿ ₹ 100ರ ಸಮೀಪಕ್ಕೆ ಬಂದಿದೆ.

'ಕೋವಿಡ್ ಹಾಗೂ ಲಾಕ್‌ಡೌನ್‌ಗೂ ಮೊದಲು ನನಗೆ ಪ್ರತಿನಿತ್ಯ ಕಚೇರಿಗೆ ಹೋಗಿಬರಲು ಅಂದಾಜು ₹ 1,500 ಬೇಕಾಗುತ್ತಿತ್ತು. ಪೆಟ್ರೋಲ್ ಬೆಲೆಯಲ್ಲಿ ಶೇಕಡ 40ರಷ್ಟು ಹೆಚ್ಚಳ ಆಗಿರುವುದರ ಕಾರಣದಿಂದಾಗಿ ಈಗ ₹ 2,100 ಬೇಕಾಗುತ್ತಿದೆ' ಎಂದು ಬೆಂಗಳೂರಿನ ರಾಜಾಜಿನಗರ ನಿವಾಸಿಯೊಬ್ಬರು ಬೆಲೆ ಏರಿಕೆಯ ಬಿಸಿ ತಮಗೆ ತಟ್ಟಿರುವ ಬಗೆಯನ್ನು ವಿವರಿಸಿದರು. ಈ ಅವಧಿಯಲ್ಲಿ ಅವರ ವೇತನ ಕಡಿತ ಆಗಿದೆ, ವೇತನ ಇನ್ನು ಯಾವಾಗ ಮೊದಲ ಸ್ಥಿತಿಗೆ ತಲುಪಬಹುದು ಎಂಬುದು ಅವರಿಗೂ ಗೊತ್ತಿಲ್ಲ.

ಇಂಧನ ದರ ಏರಿಕೆಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ದರ ಏರಿಕೆಯ ಜೊತೆಗೆ ಕೇಂದ್ರ ಸರ್ಕಾರ ವಿಧಿಸುತ್ತಿರುವ ಎಕ್ಸೈಸ್ ಸುಂಕ ಮತ್ತು ರಾಜ್ಯಗಳು ವಿಧಿಸುತ್ತಿರುವ ಮೌಲ್ಯವರ್ಧಿತ ತೆರಿಗೆ (ವ್ಯಾಟ್) ಕೂಡ ಕಾರಣ.

ಇಂಧನದ ಮೇಲಿನ ಸುಂಕ ಕೇಂದ್ರ, ರಾಜ್ಯಗಳಿಗೆ ವರಮಾನದ ಪ್ರಮುಖ ಮೂಲ. 2020ರ ಏಪ್ರಿಲ್‌ನಿಂದ 2021ರ ಮಾರ್ಚ್‌ವರೆಗಿನ ಅವಧಿಯಲ್ಲಿ ಪೆಟ್ರೋಲ್ ಮತ್ತು ಡಿಸೆಲ್ ಮೇಲಿನ ಎಕ್ಸೈಸ್ ಸುಂಕ ಸಂಗ್ರಹವು ₹ 3.35 ಲಕ್ಷ ಕೋಟಿಗೆ ಏರಿಕೆ ಆಗಿದೆ. ಅದಕ್ಕೂ ಹಿಂದಿನ ಆರ್ಥಿಕ ವರ್ಷದಲ್ಲಿ ಎಕ್ಸೈಸ್ ಸುಂಕ ಸಂಗ್ರಹವು ₹ 1.78 ಲಕ್ಷ ಕೋಟಿ ಆಗಿತ್ತು. ವರ್ಷದಿಂದ ವರ್ಷಕ್ಕೆ ಎಕ್ಸೈಸ್ ಸುಂಕ ಸಂಗ್ರಹ ಹೆಚ್ಚುತ್ತಲೇ ಇದ್ದು, ಕೇಂದ್ರಕ್ಕೆ ಬರುವ ವರಮಾನವೂ ಹೆಚ್ಚಾಗುತ್ತಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ದರದಲ್ಲಿ ಆಗಿದ್ದ ಇಳಿಕೆಯನ್ನು ಪರಿಗಣಿಸಿ ಕೇಂದ್ರ ಸರ್ಕಾರವು ಕಳೆದ ವರ್ಷ ಪೆಟ್ರೋಲ್ ಮೇಲಿನ ಎಕ್ಸೈಸ್ ಸುಂಕವನ್ನು ಲೀಟರಿಗೆ ₹ 19.98ರಿಂದ ₹ 32.9ಕ್ಕೆ ಏರಿಸಿತು. ಅದೇ ರೀತಿ, ಡೀಸೆಲ್ ಮೇಲಿನ ಎಕ್ಸೈಸ್ ಸುಂಕವನ್ನು ಲೀಟರಿಗೆ ₹ 15.83ರಿಂದ ₹ 31.8ಕ್ಕೆ ಹೆಚ್ಚಿಸಿತು. ಈ ಏರಿಕೆಯ ಹೊರೆಯನ್ನು ಕಂಪನಿಗಳು ಇಂಧನ ದರವನ್ನು ಆಗಾಗ ಹೆಚ್ಚಿಸುವ ಮೂಲಕ ಗ್ರಾಹಕರಿಗೆ ವರ್ಗಾಯಿಸಲಾರಂಭಿಸಿ ದವು. ತಮಿಳುನಾಡು ಸರ್ಕಾರವು ಪ್ರತಿ ಲೀಟರ್ ಪೆಟ್ರೋಲ್ ಮೇಲಿನ ತೆರಿಗೆಯನ್ನು ಈಚೆಗೆ ₹ 3ರಷ್ಟು ತಗ್ಗಿಸಿದೆ. ಕರ್ನಾಟಕದಲ್ಲಿ ಈ ಬಗೆಯ ಕ್ರಮ ಜಾರಿಗೆ ಬಂದಿಲ್ಲ. ಕೇಂದ್ರ ಸರ್ಕಾರವು ತೈಲೋತ್ಪನ್ನಗಳ ಮೇಲಿನ ಸುಂಕ ಇಳಿಕೆ ಇಲ್ಲ ಎಂದು ಸ್ಪಷ್ಟಪಡಿಸಿದೆ.

ಎಕ್ಸೈಸ್ ಸುಂಕ ಸಂಗ್ರಹ (₹ಲಕ್ಷ ಕೋಟಿಗಳಲ್ಲಿ)

2018–19	2.13
2019–20	1.78
2020–21	3.35

ಗ್ರಾಮೀಣರ ಮೇಲೂ ಬೀಳಲಿದೆ ತೆರಿಗೆ ಭಾರ

• ವಿನಾಯಕ ಭಟ್

ದಾವಣಗೆರೆ: ಆಸ್ತಿಯ ಮೂಲ(ಮಾರ್ಗಸೂಚಿ ದರ) ಮೌಲ್ಯದ ಆಧಾರದ ಮೇಲೆ ತೆರಿಗೆ ವಿಧಿಸಲು ಗ್ರಾಮ ಪಂಚಾಯಿತಿಗಳಲ್ಲೂ ಸಿದ್ಧತೆ ನಡೆಯುತ್ತಿದ್ದು, ಕೋವಿಡ್ ಪರಿಣಾಮ ಆರ್ಥಿಕ ಸಂಕಷ್ಟದಲ್ಲಿರುವ ಗ್ರಾಮೀಣ ಪ್ರದೇಶದ ನಾಗರಿಕರ ಮೇಲೂ ತೆರಿಗೆ ಭಾರದ ತೂಗುಗತ್ತಿ ನೇತಾಡುತ್ತಿದೆ.

ಮೊದಲು ನಾಲ್ಕು ವರ್ಷಗಳಿಗೆ ಒಮ್ಮೆ ಪರಿಷ್ಕರಣೆಯಾಗುತ್ತಿದ್ದ ಆಸ್ತಿ ತೆರಿಗೆಯನ್ನು ಈಗ ಎರಡು ವರ್ಷಗಳಿಗೆ ಒಮ್ಮೆ ಪರಿಷ್ಕರಿಸುವುದು ರೂಢಿ. ಮನೆ, ವಾಣಿಜ್ಯ ಕಟ್ಟಡ, ಖಾಲಿ ನಿವೇಶನಗಳ ಅಳತೆ ಆಧಾರದಲ್ಲಿ ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಈ ಹಿಂದೆ ನಿಗದಿಯಾಗಿದ್ದ ಅಲ್ಪ ಪ್ರಮಾಣದ ತೆರಿಗೆ ಮೊತ್ತಕ್ಕೇ ಶೇ 5ರಿಂದ ಶೇ 10ರ ವರೆಗೆ ಹೆಚ್ಚಿಸಲಾಗುತ್ತಿತ್ತು. ಆದರೆ, ಇದೀಗ ಪಂಚಾಯತ್ ರಾಜ್ ಇಲಾಖೆಯು ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ನಿಗದಿ ಮಾಡಿರುವ ಆಸ್ತಿಯ ಮೌಲ್ಯ ಆಧರಿಸಿ ತೆರಿಗೆ ವಿಧಿಸುವಂತೆ ನಿರ್ದೇಶನ ನೀಡಿದೆ. ಕೋವಿಡ್ ಕಾರಣಕ್ಕೆ ಬಹುತೇಕ ಪಂಚಾಯಿತಿಗಳು ಇದನ್ನು ಇನ್ನೂ ಜಾರಿಗೆ ತಂದಿಲ್ಲ.

'ಕೋವಿಡ್ ಸಂಕಷ್ಟ ಇರುವುದರಿಂದ ಸದ್ಯ ಅಳತೆ ಆಧಾರದಲ್ಲೇ ಲೆಕ್ಕ ಹಾಕಿ ತೆರಿಗೆ ಸಂಗ್ರಹಿಸುತ್ತಿದ್ದೇವೆ. ಮುಂದಿನ ಆರ್ಥಿಕ ಸಾಲಿನಿಂದ ಆಸ್ತಿಯ ಮೂಲ ಮೌಲ್ಯದ ಆಧಾರದಲ್ಲಿ ತೆರಿಗೆ ವಿಧಿಸುವ ಬಗ್ಗೆ ಸಾಮಾನ್ಯ ಸಭೆಯಲ್ಲಿ ನಿರ್ಧಾರ ತೆಗೆದುಕೊಳ್ಳಬಹುದೇನೋ. ಆಗ ಸಹಜವಾಗಿಯೇ ಜನ ಕಟ್ಟುವ ತೆರಿಗೆ ಪ್ರಮಾಣ ಹೆಚ್ಚಾಗಲಿದೆ' ಎಂದು ದಾವಣಗೆರೆ ತಾಲ್ಲೂಕಿನ ಆನಗೋಡು ಗ್ರಾಮ ಪಂಚಾಯಿತಿ ಪಿಡಿಒ ಸುರೇಶ್ ಎನ್.ಬಿ. 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಜಿಲ್ಲಾ ಕೇಂದ್ರ, ತಾಲ್ಲೂಕು ಕೇಂದ್ರ ಹಾಗೂ ನಗರ ಸಮೀಪದ ಗ್ರಾಮಗಳಲ್ಲಿನ ಆಸ್ತಿಯ ಮೌಲ್ಯ ಹೆಚ್ಚಿರುವುದರಿಂದ ಅಲ್ಲಿನ ನಿವಾಸಿಗಳಿಗೆ ಹೆಚ್ಚಿನ ತೆರಿಗೆಯ ಹೊರೆ ಬೀಳಲಿದೆ. ಈಗ ನಿಗದಿಗೊಳಿಸಿರುವ ತೆರಿಗೆಯನ್ನೇ ಸಂಗ್ರಹಿಸಲು ಕಷ್ಟವಾಗುತ್ತಿರುವಾಗ ತೆರಿಗೆ ಹೆಚ್ಚಿಸಿದರೆ ಹೇಗೆ ವಸೂಲಿ ಮಾಡುವುದು ಎಂಬ ಚಿಂತೆ ಪಂಚಾಯಿತಿ ಅಧಿಕಾರಿಗಳನ್ನೂ ಕಾಡುತ್ತಿದೆ. ಈಗಾಗಲೇ ಆಸ್ತಿಯ ಮೌಲ್ಯದ ಆಧಾರದಲ್ಲಿ ಪರವಾನಗಿ ಶುಲ್ಕವನ್ನುವಸೂಲಿಮಾಡಲಾಗುತ್ತಿದೆ,ನಾಗರಿಕರಿಂದ ಆಕ್ಷೇಪಗಳು ಕೇಳಿಬರುತ್ತಿವೆ.

ದಾವಣಗೆರೆಗೆ ಸಮೀಪದಲ್ಲಿರುವ ಆನಗೋಡು ಗ್ರಾಮದಲ್ಲಿ ಸದ್ಯ ಹೆಂಚಿನ ಮನೆಗೆ ₹ 250, ಶೀಟ್ ಮನೆಗೆ ₹ 350, ಆರ್.ಸಿ.ಸಿ ಮನೆಗೆ ₹ 800 ರಿಂದ ₹1,000 ತೆರಿಗೆ ವಿಧಿಸಲಾಗುತ್ತಿದೆ. ಹೊಸ ಮಾದರಿಯಲ್ಲಿ ತೆರಿಗೆ ನಿಗದಿಯಾದರೆ ₹ 30 ಲಕ್ಷ ಮೌಲ್ಯದ ಮನೆಗೆ ಶೇ 0.05 ತೆರಿಗೆ ವಿಧಿಸಿದರೆ ವಾರ್ಷಿಕ ₹1,500 ಪಾವತಿಸಬೇಕಾಗುತ್ತದೆ ಎನ್ನುತ್ತವೆ ಸರ್ಕಾರದ ಮೂಲಗಳು.

'2019ರಲ್ಲಿ ವಾಣಿಜ್ಯ ಉದ್ದೇಶ ಕಟ್ಟಡದ ತೆರಿಗೆ ಚದರ ಮೀಟರ್‌ಗೆ ₹ 30 ಇತ್ತು. ಈಗ ಅದು ₹ 45ರ ವರೆಗೂ ಹೆಚ್ಚಾಗಿದೆ. ಸಾಮಾನ್ಯರಿಗೆ ಬರೆ ಎಳೆದಂತಾಗಿದೆ' ಎನ್ನುತ್ತಾರೆ ಮಂಡ್ಯ ಜಿಲ್ಲೆಯ ಇಂಡುವಾಳು ಗ್ರಾಮದ ಬಸವರಾಜು.

'ಜನ ಕೆಲಸ ಕಳೆದುಕೊಂಡು ಜೀವನ ಸಾಗಿಸಲು ಪರದಾಡುತ್ತಿರುವ ಸಂದರ್ಭದಲ್ಲಿ ಸರ್ಕಾರ ಎರಡು ವರ್ಷದ ಆಸ್ತಿ ತೆರಿಗೆಯಲ್ಲಿ ಶೇ 50 ರಷ್ಟು ರಿಯಾಯಿತಿ ಕೊಡಬೇಕಿತ್ತು. ಆದರೆ, ಹೊಸ ತೆರಿಗೆ ಜಾರಿ ಮಾಡಿದ್ದು, ಇನ್ನಷ್ಟು ಆರ್ಥಿಕ ಸಮಸ್ಯೆ ತಲೆದೋರಿದೆ' ಎನ್ನುವುದು ಕಲಬುರ್ಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ದಂಡೋತಿ ಗ್ರಾಮಸ್ಥ ಸಾಬಣ್ಣ ಭರಾಟೆ ಅವರ ಅಳಲು.

> **ಕೋವಿಡ್‌ನಿಂದಾಗಿ ಹಲವರಿಗೆ ಸಂಕಷ್ಟ ಎದುರಾಗಿದ್ದು, ಗ್ರಾಮ ಪಂಚಾಯಿತಿ ಅವರು ವಿವಿಧ ತೆರಿಗೆಗಳನ್ನು ಹೆಚ್ಚಿಸಿ ಗಾಯದ ಮೇಲೆ ಬರೆ ಎಳೆದಿದ್ದಾರೆ.**
>
> **ಎಂ.ಸಿ.ಪರೀಕ್ಷಿತ್**
> ಗ್ರಾಮಸ್ಥ, ಜಾವಳಿ, ಮೂಡಿಗೆರೆ ತಾಲ್ಲೂಕು

ಆಸ್ತಿ ಮೌಲ್ಯದ ಮೇಲೆ ತೆರಿಗೆ ವಿಧಿಸಲು ಅವಕಾಶ*

ಆಸ್ತಿ ಮಾದರಿ	ತೆರಿಗೆ ಪ್ರಮಾಣ
ನಿವಾಸದ ಕಟ್ಟಡಗಳಿಗೆ	ಕನಿಷ್ಠ ಶೇ 0.05 ರಿಂದ ಗರಿಷ್ಠ ಶೇ 0.1ರ ವರೆಗೆ
ವಾಣಿಜ್ಯ ಕಟ್ಟಡಗಳಿಗೆ	ಕನಿಷ್ಠ ಶೇ 0.2ರಿಂದ ಗರಿಷ್ಠ ಶೇ 0.5ರ ವರೆಗೆ
ಕೈಗಾರಿಕೆಗಳಿಗೆ	ಕನಿಷ್ಠ ಶೇ 0.4 ರಿಂದ ಗರಿಷ್ಠ ಶೇ 1ರವರೆಗೆ
ಖಾಲಿ ನಿವೇಶನಗಳಿಗೆ	ಕನಿಷ್ಠ ಶೇ 0.01ರಿಂದ ಗರಿಷ್ಠ ಶೇ 0.1ರವರೆಗೆ

*ಆಸ್ತಿಯ ಮೌಲ್ಯ ಆಧರಿಸಿ ತೆರಿಗೆ ವಿಧಿಸಿದರೆ ಹಾಲಿ ಕಟ್ಟುತ್ತಿರುವ ತೆರಿಗೆಗಿಂತ ಕನಿಷ್ಠ ದುಪ್ಪಟ್ಟು ಹಣ ಭರಿಸಬೇಕಾಗುತ್ತದೆ

ವಾರ್ಷಿಕ ನೀರಿನ ಕರ ₹1,500 ಕ್ಕೆ ಏರಿಕೆ?

ಬಹುತೇಕ ಕಡೆ ಕುಡಿಯುವ ನೀರಿನ ಕರವನ್ನು ತಿಂಗಳಿಗೆ ₹ 50 ನಿಗದಿಗೊಳಿಸಲಾಗಿದೆ. ಆದರೆ, ಜಲ ಜೀವನ್ ಮಿಷನ್ ನಡಿ ಪ್ರತಿ ಮನೆಗೂ ಮೀಟರ್ ಇರುವ ನಳ ಜೋಡಿಸಲಾಗುತ್ತಿದೆ. ಮುಂಬರುವ ದಿನಗಳಲ್ಲಿ ನೀರಿನ ಕರ ವಾರ್ಷಿಕ ₹1,500ಕ್ಕಿಂತಲೂ ಹೆಚ್ಚಾಗಬಹುದು ಎಂಬ ಆತಂಕವೂ ನಾಗರಿಕರನ್ನು ಕಾಡುತ್ತಿದೆ.

ಶೇ 40ರಷ್ಟು ಪ್ರಮಾಣದವರೆಗೂ ಏರಿಕೆ

ಭೂಮಿ ಮೌಲ್ಯವೇ ಆಧಾರ: ತೆರಿಗೆ ವಸೂಲಿಯ ಹೊಸ ಕತ್ತಿ

• ಮಹಮ್ಮದ್ ನೂಮಾನ್

ಮೈಸೂರು: ಕೋವಿಡ್‌ನಿಂದ ಉದ್ಯೋಗ ಕಳೆದುಕೊಂಡು ಜನರು ಜೀವನ ಸಾಗಿಸಲು ಪರದಾಡುತ್ತಲೇ ಇದ್ದರೆ, ನಗರ ಸ್ಥಳೀಯ ಸಂಸ್ಥೆ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಹೆಚ್ಚಳದ ಮೂಲಕ ತನ್ನ ಆದಾಯ ಹೆಚ್ಚಿಸಿಕೊಳ್ಳುವ 'ಸಾಹಸ'ವನ್ನು ಸರ್ಕಾರಿ ಸಂಸ್ಥೆಗಳು ಮಾಡುತ್ತಿವೆ.

ಇಲ್ಲಿಯವರೆಗೆ ವಾರ್ಷಿಕ ಇಂತಿಷ್ಟು ಪ್ರಮಾಣದಲ್ಲಿ ಎಂಬ ಲೆಕ್ಕಾಚಾರದಲ್ಲಿ ಹೆಚ್ಚಳ ಮಾಡಲಾಗುತ್ತಿತ್ತು. ರಾಜ್ಯ ಸರ್ಕಾರದ ಸೂಚನೆಯ ಮೇರೆಗೆ, ಒಂದೇ ನಗರದ ವ್ಯಾಪ್ತಿಯೊಳಗೆ ಭೂಮಿಯ ಮಾರ್ಗಸೂಚಿ ದರ ಆಧರಿಸಿ ಆಸ್ತಿ ತೆರಿಗೆ ಪರಿಷ್ಕರಣೆ ಮಾಡಿರುವ ನಗರ ಸ್ಥಳೀಯ ಸಂಸ್ಥೆಗಳು, ತಮ್ಮ ಬೊಕ್ಕಸ ತುಂಬಿಸಿಕೊಳ್ಳುವ ಹೊಸ ಮಾರ್ಗ ಹಿಡಿದಿರುವುದು ಕೋವಿಡ್ ಕಾಲದ ಹೊಸ ಬೆಳವಣಿಗೆ.

ಮೈಸೂರಿನ ರಾಮಾನುಜ ರಸ್ತೆಯಲ್ಲಿ 15X40 ನಿವೇಶನದಲ್ಲಿ ಎರಡು ಮಹಡಿಗಳ ಕಟ್ಟಡ ಹೊಂದಿರುವ ಮಾಲೀಕರು 2018–19 ರಲ್ಲಿ ₹9,197 ಆಸ್ತಿ ತೆರಿಗೆ ಪಾವತಿಸಿದ್ದರೆ, 2019–20 ರಲ್ಲಿ 9,471 ಹಾಗೂ 2021–22ರ ಸಾಲಿನಲ್ಲಿ ₹9,915 ಪಾವತಿಸಿದ್ದಾರೆ.

ಅಗ್ರಹಾರದಲ್ಲಿ 30X40 ನಿವೇಶನದಲ್ಲಿ ಮನೆ ಹೊಂದಿರುವ ಮಾಲೀಕರು ಕಳೆದ ವರ್ಷ ₹3,056 ಪಾವತಿಸಿದ್ದರೆ, ಈ ಸಾಲಿನಲ್ಲಿ ₹3,495 ತೆರಿಗೆ ಕಟ್ಟಿದ್ದಾರೆ.

ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಹೆಚ್ಚಳದ ಸ್ಯಾಂಪಲ್ ಇದು. ತೆರಿಗೆ ಹೆಚ್ಚಳ ಮೈಸೂರು ಪಾಲಿಕೆಗಷ್ಟೇ ಸೀಮಿತವಾಗಿಲ್ಲ. ರಾಜ್ಯದ ವಿವಿಧ ಪಾಲಿಕೆ, ನಗರಸಭೆ ಮತ್ತು ಪುರಸಭೆ ವ್ಯಾಪ್ತಿಯಲ್ಲೂ ತೆರಿಗೆ ಭಾರ ಏರುತ್ತಲೇ ಇದೆ.

ಖಾಲಿ ಭೂಮಿಗೂ ತೆರಿಗೆ: ಸರ್ಕಾರದ ಆಸ್ತಿ ತೆರಿಗೆ ಪರಿಷ್ಕರಣೆಯಂತೆ ಕಟ್ಟಡಕ್ಕೆ ಹೊಂದಿಕೊಂಡಿರುವ ಖಾಲಿ ಭೂಮಿಗೂ ಆಸ್ತಿ ತೆರಿಗೆ ವಿಧಿಸಲಾಗುತ್ತದೆ. 1 ಸಾವಿರ ಚದರ ಅಡಿವರೆಗಿನ ಖಾಲಿ ಜಾಗಕ್ಕೆ ವಿನಾಯಿತಿ ನೀಡಿ, ಅದಕ್ಕಿಂತ ಹೆಚ್ಚು ಇರುವ ಭೂಮಿಗೆ ತೆರಿಗೆ ಪಾವತಿಸಬೇಕು.

ಮೈಸೂರಿನಲ್ಲಿ 25 ರಿಂದ 30 ವರ್ಷಗಳಿಗಿಂತ ಹಿಂದೆ ಕಟ್ಟಿದ್ದ ಬಹುತೇಕ ಮನೆಗಳ ಸುತ್ತಲೂ ಖಾಲಿ ಜಾಗ ಬಿಡಲಾಗಿದೆ. ಉತ್ತಮ ಗಾಳಿ, ಬೆಳಕು ಬರಲಿ ಎಂದು ಮನೆಯ ಸುತ್ತ ಖಾಲಿ ಜಾಗ ಬಿಟ್ಟಿದ್ದವರು ಇದೀಗ ಹೆಚ್ಚುವರಿ ತೆರಿಗೆ ಪಾವತಿಸಬೇಕಿದೆ.

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯಲ್ಲಿ 2018–19ರಿಂದ 2020–21ರವರೆಗೂ ತೆರಿಗೆಯಲ್ಲಿ ಸ್ಥಿರತೆ ಕಂಡುಬಂದಿದೆ. 2021–22ನೇ ಸಾಲಿನಲ್ಲಿ ಮಹಾನಗರದ ಆಯಾ ಪ್ರದೇಶದ ಭೂಮಿ ಮೌಲ್ಯಕ್ಕೆ ಅನುಗುಣವಾಗಿ ಶೇ 25–40ರಷ್ಟು ಹೆಚ್ಚು ತೆರಿಗೆ ವಸೂಲಿ ಮಾಡಿದೆ.

ತೆರಿಗೆ ಹೆಚ್ಚಿಸಿ, ವಾಪಸ್ ಪಡೆದ ಪಾಲಿಕೆ: ಕಲಬುರ್ಗಿ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ವಿವಿಧ ಆಸ್ತಿಗಳ ತೆರಿಗೆ ಪರಿಷ್ಕರಿಸಿ, ಶೇ 15 ರಷ್ಟು ಹೆಚ್ಚಳ ಮಾಡಿ ಏಪ್ರಿಲ್ 1 ರಿಂದಲೇ ಜಾರಿಗೆ ತರಲು ಕಲಬುರ್ಗಿ ಮಹಾನಗರ ಪಾಲಿಕೆ ಕ್ರಮ ಕೈಗೊಂಡಿತ್ತು. ಆದರೆ, ಸಾರ್ವಜನಿಕರಿಂದ ತೀವ್ರ ವಿರೋಧ ವ್ಯಕ್ತವಾಗಿದ್ದರಿಂದ ನಿರ್ಧಾರ ವಾಪಸ್ ಪಡೆದಿದೆ.

> **ಮಹಾನಗರದ ಪ್ರದೇಶದ ಭೂಮಿ ಮೌಲ್ಯದ ಆಧಾರದ ಮೇಲೆ ತೆರಿಗೆಯನ್ನು ಹೆಚ್ಚಿಸಲಾಗುತ್ತಿದೆ. 2015ರಿಂದ ಈವರೆಗೂ ನೀರಿನ ಕರ ಏರಿಸಿಲ್ಲ**
>
> **ಸುರೇಶ ಇಟ್ನಾಳ**
> ಹುಬ್ಬಳ್ಳಿ–ಧಾರವಾಡ ಪಾಲಿಕೆ ಆಯುಕ್ತ

ತೆರಿಗೆ ಏರಿಕೆಯ ಬಿಸಿ

2018–19	₹2,152
2021–22	₹3,992
3 ವರ್ಷದಲ್ಲಾದ ಏರಿಕೆ ಮೊತ್ತ	₹1,740

*ಹುಬ್ಬಳ್ಳಿಯ ವಿದ್ಯಾನಗರದಲ್ಲಿ 1ಸಾವಿರ ಚದರ ಅಡಿಯ ಅಪಾರ್ಟ್‌ಮೆಂಟ್ ನಿವಾಸಿಯೊಬ್ಬರು ಕಟ್ಟಿದ ತೆರಿಗೆ

ನೀರಿನ ಶುಲ್ಕ ಹೆಚ್ಚಳ

ನಗರಸಭೆ, ಪುರಸಭೆ ವ್ಯಾಪ್ತಿಯಲ್ಲಿ ಕಾಲಕಾಲಕ್ಕೆ ತೆರಿಗೆ ಪರಿಷ್ಕರಣೆ, ನೀರಿನ ಶುಲ್ಕ ಹೆಚ್ಚಳ ನಡೆಯುತ್ತಿದೆ. ಮೈಸೂರು ಜಿಲ್ಲೆ ಎಚ್.ಡಿ.ಕೋಟೆ ಪುರಸಭೆ ವ್ಯಾಪ್ತಿಯಲ್ಲಿ ಈ ಬಾರಿ ನೀರಿನ ಶುಲ್ಕ ಹೆಚ್ಚಿಸಲಾಗಿದೆ. 2019 ರಲ್ಲಿ ಪ್ರತಿ ತಿಂಗಳು ₹ 90 ಇದ್ದದ್ದನ್ನು ₹110 ಕ್ಕೆ ಏರಿಕೆ ಮಾಡಲಾಗಿದೆ. ವಾಣಿಜ್ಯ ಬಳಕೆಗೆ ತಿಂಗಳು ₹ 300 ಕಟ್ಟುತ್ತಿದ್ದವರು ಈಗ ₹ 420 ಪಾವತಿಸಬೇಕು.

ಪ್ರಯಾಣಿಕರ ಜೇಬಿಗೆ ರೈಲ್ವೆ 'ಕತ್ತರಿ' ಸೇವೆ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ರೈಲು ಪ್ರಯಾಣ ದರವನ್ನು ಘೋಷಣೆ ಮಾಡಿ ನೇರವಾಗಿ ಏರಿಕೆ ಮಾಡದಿದ್ದರೂ ಪರೋಕ್ಷವಾಗಿ ಪ್ರಯಾಣಿಕರ ಜೇಬಿಗೆ ಕೈ ಹಾಕಿದೆ.

ಪ್ಯಾಸೆಂಜರ್ ರೈಲುಗಳನ್ನು ಎಕ್ಸ್‌ಪ್ರೆಸ್ ರೈಲುಗಳಾಗಿ, ಎಕ್ಸ್‌ಪ್ರೆಸ್ ರೈಲುಗಳನ್ನು ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ ರೈಲುಗಳಾಗಿ ಪರಿವರ್ತಿಸಲಾಗಿದೆ. 200 ಕಿಲೋ ಮೀಟರ್‌ಗೂ ಹೆಚ್ಚಿನ ದೂರ ಸಂಚರಿಸುವ ಪ್ಯಾಸೆಂಜರ್ ರೈಲುಗಳನ್ನು ಹೀಗೆ ಮಾರ್ಪಡಿಸಿ ಶೇ 30ರಷ್ಟು ದರ ಏರಿಕೆ ಮಾಡಲಾಗಿದೆ.

ಕೋವಿಡ್ ಸಂದರ್ಭದಲ್ಲಿ ಕೆಲವೆಡೆಗೆ ವಿಶೇಷ ರೈಲುಗಳ ಸಂಚಾರ ಆರಂಭಿಸಲಾಗಿದೆ. ಬೇರೆ ರೈಲುಗಳಿಗೆ ಹೋಲಿಸಿದರೆ ಅವುಗಳಲ್ಲಿನ ಪ್ರಯಾಣ ದರ ಶೇ 30ರಷ್ಟು ಹೆಚ್ಚಿದೆ. ಹೊರ ರಾಜ್ಯಗಳ ರೈಲುಗಳಲ್ಲೂ ಪರೋಕ್ಷವಾಗಿ ಪ್ರಯಾಣದರ ಏರಿಕೆಯಾಗಿದೆ.

ಇನ್ನೊಂದೆಡೆ ನಿಲ್ದಾಣ ಪ್ರವೇಶಕ್ಕೆ (ಪ್ಲಾಟ್‌ಫಾರಂ ಟಿಕೆಟ್) ಕೋವಿಡ್ ಸಂದರ್ಭದಲ್ಲಿ ₹50 ದರ ನಿಗದಿ ಮಾಡಲಾಗಿತ್ತು. ಈಗ ಮತ್ತೆ ₹10ಕ್ಕೆ ಇಳಿಸಲಾಗಿದೆ. 58 ವರ್ಷ ಮೇಲ್ಪಟ್ಟ ಮಹಿಳೆಯರಿಗೆ ಶೇ 50ರಷ್ಟು ಮತ್ತು 60 ವರ್ಷ ಮೇಲ್ಪಟ್ಟ ಪುರುಷರಿಗೆ ಪ್ರಯಾಣ ದರದಲ್ಲಿ ಶೇ 40ರಷ್ಟು ರಿಯಾಯಿತಿ ಇತ್ತು. ಆದರೆ, ಈಗ ಅದನ್ನು ಹಿಂಪಡೆಯಲಾಗಿದೆ.

ಟೋಲ್‌ಗಳಲ್ಲೂ ಹೆಚ್ಚಿನ ದರ

ಟೋಲ್ ರಸ್ತೆಗಳಲ್ಲಿ ಸುಂಕ ಸಂಗ್ರಹ ಈಗ ಫಾಸ್ಟ್‌ಟ್ಯಾಗ್ ಮೂಲಕ ಆನ್‌ಲೈನ್‌ನಲ್ಲೇ ನಡೆಯುತ್ತಿದೆ. ಇಲ್ಲಿ ವಾಹನ ಸವಾರರ ಕಣ್ಕಟ್ಟಿ ಹೆಚ್ಚಿನ ಸುಂಕ ಸಂಗ್ರಹಿಸಲಾಗುತ್ತಿದೆ.

ವಾಹನಗಳ ಮಾಲೀಕರು ಫಾಸ್ಟ್‌ಟ್ಯಾಗ್‌ಗೆ ರೀಚಾರ್ಜ್ ಮಾಡಿಕೊಂಡಿದ್ದರೆ ಸುಂಕ ಸಂಗ್ರಹ ಕೇಂದ್ರ ದಾಟುವಾಗ ನಿಗದಿಯಷ್ಟೇ ದರ ಪಾವತಿಯಾಗುತ್ತದೆ. ಎಷ್ಟು ಪಾವತಿಯಾಗಿದೆ ಎಂಬುದನ್ನು ತಕ್ಷಣಕ್ಕೆ ವಾಹನ ಚಾಲಕರು ನೋಡಿಕೊಳ್ಳುವುದಿಲ್ಲ. ಇದರ ದುರ್ಲಾಭವನ್ನು ಸುಂಕ ಸಂಗ್ರಹ ಕಂಪನಿಗಳು ಮಾಡಿಕೊಳ್ಳುತ್ತಿವೆ. ₹40 ದರ ಇದ್ದ ಕಡೆ ₹50 ಅಥವಾ ₹55 ಪಾವತಿ ಮಾಡಿಕೊಳ್ಳಲಾಗುತ್ತದೆ ಎಂಬ ಆರೋಪಗಳಿವೆ.

ಇದು ಎಲ್ಲಾ ಟೋಲ್‌ಗಳಲ್ಲೂ ನಡೆಯುತ್ತಿಲ್ಲ, ಕೆಲವು ಟೋಲ್‌ಗಳಲ್ಲಿ ಈ ರೀತಿ ಮಾಡಲಾಗುತ್ತಿದೆ ಎಂಬ ದೂರುಗಳಿವೆ. ಫಾಸ್ಟ್‌ಟ್ಯಾಗ್ ಹೊಸ ಪದ್ಧತಿ ಜಾರಿಗೆ ತಂದ ಮೇಲೆ, ಫಾಸ್ಟ್‌ಟ್ಯಾಗ್ ಇಲ್ಲದೇ ಇರುವವರು, ರೀಚಾರ್ಜ್ ಆಗದೇ ಇರುವವರಿಂದ ನಿಗದಿತ ದರಕ್ಕಿಂತ ದುಪ್ಪಟ್ಟು ದರ ಪಡೆಯಲಾಗುತ್ತಿದೆ.

29.50 ಲಕ್ಷದತ್ತ ಕೋವಿಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮಂಗಳವಾರ 1,217 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಈವರೆಗೆ ವರದಿಯಾದ ಕೋವಿಡ್ ಪ್ರಕರಣಗಳ ಒಟ್ಟು ಸಂಖ್ಯೆ 29.50 ಲಕ್ಷ ಸಮೀಪಿಸಿದೆ.

1.95 ಲಕ್ಷಕ್ಕೆ ಕಳೆದ ವಾರ ಏರಿದ್ದ ಪರೀಕ್ಷೆಗಳ ಸಂಖ್ಯೆ ಇಳಿಮುಖ ಮಾಡಿದೆ. ಒಂದು ದಿನದಲ್ಲಿ 1.28 ಲಕ್ಷ ಮಾದರಿಗಳನ್ನು ಪರೀಕ್ಷಿಸಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 0.94ರಷ್ಟಿದೆ. 11 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿಯಲ್ಲಿದೆ. ಬೀದರ್, ಬಾಗಲಕೋಟೆ, ಬಳ್ಳಾರಿ ಹಾಗೂ ರಾಯಚೂರಿನಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಹೊಸದಾಗಿ ಮೂರು ಡೆಲ್ಟಾ ಪ್ರಕರಣಗಳು ದೃಢಪಟ್ಟಿದ್ದು, ಈ ಪ್ರಕರಣಗಳ ಒಟ್ಟು ಸಂಖ್ಯೆ 1,092ಕ್ಕೆ ಏರಿಕೆಯಾಗಿದೆ. ಒಂದು ಕಪ್ಪಾ ಪ್ರಕರಣ ಖಚಿತಪಟ್ಟಿದ್ದು, ಈ ತಳಿಯ ವೈರಾಣು ಹೊಂದಿದವರ ಸಂಖ್ಯೆ 160ಕ್ಕೆ ತಲುಪಿದೆ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 224, ಮೈಸೂರಿನಲ್ಲಿ 127 ಹಾಗೂ ಕೊಡಗಿನಲ್ಲಿ ತಲಾ 89 ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 287 ಮಂದಿ ಹಾಗೂ ಉಡುಪಿಯಲ್ಲಿ 150 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ಇವೆ. ಕೋವಿಡ್ ಪೀಡಿತರಲ್ಲಿ 25 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 10 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಸೋಂಕಿತರಲ್ಲಿ 1,198 ಮಂದಿ ಚೇತರಿಸಿಕೊಂಡಿದ್ದಾರೆ.

ಲಸಿಕಾ ಮೇಳ: 15 ಲಕ್ಷ ಡೋಸ್ ಗುರಿ

ಬೆಂಗಳೂರು: ರಾಜ್ಯದಲ್ಲಿ ಬುಧವಾರ ನಡೆಯುವ ಲಸಿಕಾ ಮೇಳದಲ್ಲಿ, ಒಂದೇ ದಿನ 15 ಲಕ್ಷ ಮಂದಿಗೆ ಲಸಿಕೆ ನೀಡುವ ಗುರಿ ಹಮ್ಮಿಕೊಳ್ಳಲಾಗಿದೆ ಎಂದು ಆರೋಗ್ಯ ಇಲಾಖೆಯ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಜಾವೇದ್ ಅಖ್ತರ್ ತಿಳಿಸಿದ್ದಾರೆ.

ಈ ಬಗ್ಗೆ ಅವರು ಸುತ್ತೋಲೆ ಹೊರಡಿಸಿದ್ದಾರೆ. 'ಪ್ರತಿ ಬುಧವಾರ ಲಸಿಕಾ ಮೇಳ ನಡೆಸಬೇಕು. ಉಳಿದ ದಿನ ಪ್ರತಿನಿತ್ಯ 6 ಲಕ್ಷ ಡೋಸ್‌ಗಳನ್ನು ವಿತರಿಸಬೇಕು. ಇದಕ್ಕೆ ಫಲಾನುಭವಿಗಳನ್ನು ಸಜ್ಜುಗೊಳಿಸಿ, ವಿವಿಧ ಇಲಾಖೆಗಳ ಸಹಕಾರ ಪಡೆದುಕೊಳ್ಳಬೇಕು' ಎಂದು ಸೂಚಿಸಿದ್ದಾರೆ.

ಕಳೆದೊಂದು ವಾರದಿಂದ ರಾಜ್ಯದಲ್ಲಿ ಲಸಿಕಾ ಅಭಿಯಾನಕ್ಕೆ ವೇಗ ನೀಡಲಾಗಿದ್ದು, ಮಂಗಳವಾರ 5.68 ಲಕ್ಷ ಡೋಸ್‌ಗಳನ್ನು ನೀಡಲಾಗಿದೆ. ಈವರೆಗೆ 4.23 ಕೋಟಿ ಡೋಸ್‌ಗಳನ್ನು ವಿತರಿಸಲಾಗಿದೆ. 3.19 ಕೋಟಿ ಮಂದಿ ಮೊದಲ ಡೋಸ್ ಹಾಗೂ 1.03 ಕೋಟಿ ಮಂದಿ ಎರಡನೇ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ. 5,642 ಸರ್ಕಾರಿ ಆಸ್ಪತ್ರೆಗಳು ಸೇರಿದಂತೆ 6,069 ಕೇಂದ್ರಗಳಲ್ಲಿ ಲಸಿಕೆ ವಿತರಿಸಲಾಗುತ್ತಿದೆ. ಆಗಸ್ಟ್ ತಿಂಗಳಲ್ಲಿ ಪ್ರತಿನಿತ್ಯ ಸರಾಸರಿ 3 ಲಕ್ಷ ಡೋಸ್‌ಗಳನ್ನು ನೀಡಲಾಗಿದೆ.

ಹೊರರಾಜ್ಯಗಳಿಂದ ಬರುವವರಿಗೆ ಕ್ವಾರಂಟೈನ್: ಸಚಿವ ಸುಧಾಕರ್

ಚಿಕ್ಕಬಳ್ಳಾಪುರ: ಕೇರಳ ಸೇರಿದಂತೆ ಹೊರರಾಜ್ಯಗಳಿಂದ ರಾಜ್ಯಕ್ಕೆ ಬರುವವರನ್ನು ಕಡ್ಡಾಯವಾಗಿ ಒಂದು ವಾರ ಸಾಂಸ್ಥಿಕ ಕ್ವಾರಂಟೈನ್ ಮಾಡಲು ಮುಖ್ಯಮಂತ್ರಿ ನೇತೃತ್ವದ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ತಿಳಿಸಿದ್ದಾರೆ.

ತಾಲ್ಲೂಕಿನ ಕುಪ್ಪಹಳ್ಳಿಯಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸಾಂಸ್ಥಿಕ ಕ್ವಾರಂಟೈನ್ ಸಂಬಂಧ ಶೀಘ್ರದಲ್ಲಿಯೇ ಮಾರ್ಗಸೂಚಿ ಬಿಡುಗಡೆ ಮಾಡಲಾಗುವುದು' ಎಂದು ತಿಳಿಸಿದರು.

ರಾಜ್ಯದಲ್ಲಿ ಕೋವಿಡ್ ನಿಯಂತ್ರಣದಲ್ಲಿದೆ. ಶಿಕ್ಷಣ, ಉದ್ಯೋಗ, ವಹಿವಾಟು ಕಾರಣದಿಂದ ಕೇರಳದಿಂದ ಪ್ರತಿ ದಿನ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ, ಚಾಮರಾಜನಗರಕ್ಕೆ ಜನರು ಬರುತ್ತಿದ್ದಾರೆ. ಅಂತಹವರು ರಾಜ್ಯದಲ್ಲಿ ಹೇಗಿರಬೇಕು ಎನ್ನುವ ಬಗ್ಗೆ ಮಾರ್ಗಸೂಚಿ ಹೊರಡಿಸಲಾಗುವುದು ಎಂದರು. ವಿಮಾನ, ರೈಲುಗಳ ಮೂಲಕ ರಾಜ್ಯಕ್ಕೆ ಬರುವವರಿಗೆ ಕಡ್ಡಾಯವಾಗಿ ಸಾಂಸ್ಥಿಕ ಕ್ವಾರಂಟೈನ್‌ಗೆ ಒಳಪಡಿಸಲಾಗುವುದು. ಸಾರ್ವಜನಿಕ ಗಣೇಶೋತ್ಸವಕ್ಕೆ ಸಂಬಂಧಿಸಿ ಇಲಾಖೆಯ ಸಲಹೆ ಹಾಗೂ ತಾಂತ್ರಿಕ ಸಲಹಾ ಸಮಿತಿಯ ಶಿಫಾರಸುಗಳನ್ನು ಮುಖ್ಯಮಂತ್ರಿಗೆ ತಿಳಿಸಲಾಗಿದೆ. ಎಲ್ಲವನ್ನೂ ಪರಿಶೀಲಿಸಿ ಅವರು ಅಂತಿಮ ನಿರ್ಧಾರ ಕೈಗೊಳ್ಳುವರು ಎಂದರು.

ಬುಧವಾರ, ಸೆಪ್ಟೆಂಬರ್ 1, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 244 | ಪುಟ 16

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಅನುಭವ ಮಂಟಪ
ಖರೀದಿ ಶಕ್ತಿಗೆ ಆರ್ಥಿಕ ಸಾಮರ್ಥ್ಯವೇ ಮಾನದಂಡವಲ್ಲ

ಜಿಡಿಪಿ: ದಾಖಲೆಯ ಬೆಳವಣಿಗೆ 10

ಅಧಿಕಾರಿಗಳೇ ಹಳ್ಳಿಗೆ ನಡೆಯಿರಿ: ಬೊಮ್ಮಾಯಿ 6

ಸೆನ್ಸೆಕ್ಸ್	ನಿಫ್ಟಿ	₹/$
57,552 ▲	17,132 ▲	73 ▲

ದುರಿತ ಕಾಲದಲ್ಲೇ ತೆರಿಗೆ ಏರಿಕೆ ಬರೆ • ₹20 ಸಾವಿರ ಕೋಟಿ ಸಾಲ ಎತ್ತಲು ತಂದ 'ಸುಧಾರಣೆ'ಯ ಪರಿಣಾಮ

ಸರ್ಕಾರಕ್ಕೆ ಸಾಲ: ಜನರಿಗೆ ತೆರಿಗೆ ಶೂಲ

• ಎಸ್. ರವಿಪ್ರಕಾಶ್

ಬೆಂಗಳೂರು: ಬರಿದಾದ ಬೊಕ್ಕಸ ತುಂಬಿಸಿಕೊಳ್ಳಲು ತೆರಿಗೆಯ 'ಉಕ್ಕಿನ ಬಲೆ' ಬೀಸಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಡ ಮತ್ತು ಮಧ್ಯಮ ವರ್ಗದವರ ಬೆನ್ನಿಗೆ ಕರ ಭಾರ ಹೇರುತ್ತಿವೆ. ಕೋವಿಡ್‌ನ ದುರಿತ ಕಾಲದಲ್ಲಿ ಸರ್ಕಾರ ಹಾಕಿದ ಹೊರೆ ತಾಳದೇ ಶ್ರೀಸಾಮಾನ್ಯರು ನಿತ್ಯವೂ ಕಣ್ಣೀರಿಡುವ ಸ್ಥಿತಿ ನಿರ್ಮಾಣವಾಗಿದೆ.

ಕೇಂದ್ರ ಸರ್ಕಾರವು ತೆರಿಗೆ ಪಾಲಿನ ಹಂಚಿಕೆ, ಸಹಾಯಾನುದಾನ ಹಾಗೂ ಜಿಎಸ್‌ಟಿ ಜಾರಿಗೊಳಿಸಿದ ಮೇಲೆ ಕೊಡಬೇಕಾದ ನಷ್ಟ ಪರಿಹಾರ ರೂಪದಲ್ಲಿ ಸಂಪನ್ಮೂಲವನ್ನು ರಾಜ್ಯ ಸರ್ಕಾರಗಳಿಗೆ ಹಂಚಿಕೆ ಮಾಡಲೇಬೇಕು. ಆದರೆ, ಈ ಪಾಲಿನಲ್ಲಿ ಎಲ್ಲವನ್ನೂ ಕೇಂದ್ರ ಕಡಿಮೆ ಮಾಡಿತು. ಹೀಗಾಗಿ, ರಾಜ್ಯ ಸರ್ಕಾರ ಸಾಲದ ಮೊರೆ ಹೋಗಬೇಕಾಯಿತು. ಆದರೆ, ಅದಕ್ಕೆ ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಮತ್ತು ಆಯವ್ಯಯ ನಿರ್ವಹಣೆ ಕಾಯ್ದೆ–2003 ಅಡ್ಡಿಯಾಗಿತ್ತು. ಏಕೆಂದರೆ, ಈ ಕಾಯ್ದೆ ಅನುಸಾರ ಆಯಾ ವರ್ಷದ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿ (ಜಿಎಸ್‌ಡಿಪಿ) ಶೇ 3 ರಷ್ಟು ಸಾಲ ತೆಗೆಯಲು ಹಾಗೂ ಒಟ್ಟಾರೆ ಸಾಲವು ಜಿಎಸ್‌ಡಿಪಿ ಶೇ 25 ರ ಮಿತಿಯನ್ನು ಮೀರಲು ಅವಕಾಶ ಇರಲಿಲ್ಲ. ಆರ್ಥಿಕ ಬಿಕ್ಕಟ್ಟಿನಿಂದ ಪಾರಾಗಲು ಸಾಲವನ್ನೇ ನೆಚ್ಚಿಕೊಳ್ಳಬೇಕಾದ್ದರಿಂದಾಗಿ ₹33 ಸಾವಿರ ಕೋಟಿವರೆಗೆ ಹೆಚ್ಚುವರಿ ಸಾಲ ಪಡೆಯಲು 'ವಿತ್ತೀಯ ಹೊಣೆಗಾರಿಕೆ ಕಾಯ್ದೆಗೆ' 2020ರಲ್ಲಿ ರಾಜ್ಯ ಸರ್ಕಾರ ತಿದ್ದುಪಡಿ ತಂದಿತು. ಇದರನ್ವಯ ರಾಜ್ಯದ ಜಿಎಸ್‌ಡಿಪಿ ಶೇ 3ರಷ್ಟಿದ್ದ ಸಾಲ ಪಡೆಯುವ ಮಿತಿಯನ್ನು ಶೇ 5ಕ್ಕೆ ಹೆಚ್ಚಿಸಲಾಯಿತು. ಆ ಮಿತಿಯನ್ನು ಶೇ 4ರಲ್ಲೇ ಉಳಿಸಿಕೊಂಡ ರಾಜ್ಯ ಸರ್ಕಾರ ಅದರ ಬಲದಲ್ಲೇ ₹20 ಸಾವಿರ ಕೋಟಿ ಹೆಚ್ಚುವರಿ ಸಾಲ ಪಡೆಯುತ್ತಿದೆ.

ಹೀಗೆ, ಹೆಚ್ಚುವರಿ ಸಾಲ ಕೊಡಿಸುವ ಮುನ್ನ ಕೇಂದ್ರ ಸರ್ಕಾರ 'ಸುಧಾರಣೆ'ಗಳ ಹೆಸರಿನಲ್ಲಿ ನಾಲ್ಕು ಷರತ್ತುಗಳನ್ನು ವಿಧಿಸಿತು. ಸರ್ಕಾರ ವಿಧಿಸಿರುವ ಷರತ್ತುಗಳೆಂದರೆ (ಪಾಲಿಸಿ ಕಂಡಿಷನ್ಸ್) ವಿದ್ಯುತ್ ಸರಬರಾಜು ಖಾಸಗೀಕರಣ, ನಗರ ಸ್ಥಳೀಯ ಸಂಸ್ಥೆಗಳ ಆದಾಯ ಪ್ರಮಾಣ ಹೆಚ್ಚಿಸುವುದು, ಆಹಾರ ಕಲ್ಯಾಣ ಯೋಜನೆಗಳನ್ನು ರಾಷ್ಟ್ರೀಯ ಗ್ರೀಡ್‌ಗೆ ಜೋಡಿಸುವ 'ಒನ್ ನೇಷನ್ ಒನ್ ಕಾರ್ಡ್' ಇವುಗಳನ್ನು ರಾಜ್ಯ ಸರ್ಕಾರಗಳು ಜಾರಿಗೆ ತರಬೇಕು. ಇದರಿಂದಾಗಿ ನೀರು, ವಿದ್ಯುತ್, ನಿವೇಶನ, ಕಟ್ಟಡಗಳ ಮೇಲಿನ ತೆರಿಗೆ ಸದ್ದಿಲ್ಲದೇ ಹೆಚ್ಚಿಸಲಾಗಿದೆ. ಅಲ್ಲದೆ, ಸ್ಥಳೀಯ ಸಂಸ್ಥೆಗಳ ಬಜೆಟ್ ಗಾತ್ರವನ್ನೂ ಪರಿಷ್ಕರಿಸಲಾಗಿದೆ. ಅಲ್ಲದೆ, ಆದಾಯ ಸಂಗ್ರಹಕ್ಕಾಗಿ ಸಂಚಾರಿ ಪೊಲೀಸರು ಮತ್ತು ಸಾರಿಗೆ ಇಲಾಖೆ ಸಿಬ್ಬಂದಿ ವಾಹನ ಸವಾರರನ್ನು ಕಂಡ ಕಂಡಲ್ಲಿ ಅಡ್ಡಗಟ್ಟಿ ಪೀಡಿಸುತ್ತಿರುವುದೂ ಹೆಚ್ಚಳವಾಗಿದೆ.

ಪ್ರಜಾವಾಣಿ ವಿಶೇಷ

ಪ್ರತ್ಯಕ್ಷ ಮತ್ತು ಪರೋಕ್ಷ ತೆರಿಗೆಗಳಲ್ಲದೇ, ಶಾಲಾ ಶುಲ್ಕ, ಆಸ್ಪತ್ರೆ ಮತ್ತು ಔಷಧದ ಖರ್ಚು, ಸಾಲಗಳ ಮೇಲಿನ ತಿಂಗಳ ಇಎಂಐ, ಕೈಸಾಲ ಹೀಗೆ ಎಲ್ಲದ್ದಕ್ಕೂ ಹಣ ಪಾವತಿಸಿ 'ಬರಿಗೈ ದಾಸ'ನಾಗಿರುವ 'ಆಮ್ ಆದ್ಮಿ' ಕಣ್ಣೀರಿನಲ್ಲಿ ಕೈತೊಳೆಯುವಂತಾಗಿದೆ.

ಬೆಂಗಳೂರು ಸೇರಿ ವಿವಿಧ ನಗರಗಳು ಮತ್ತು ಪಟ್ಟಣಗಳಲ್ಲಿ ಆಸ್ತಿ ತೆರಿಗೆಯನ್ನು ಹೆಚ್ಚಿಸಲಾಗಿದೆ. ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಕೆಲವೆಡೆ ತೆರಿಗೆ ಏರಿಕೆ ಜಾರಿಯಾಗಿದ್ದರೆ, ಇನ್ನೂ ಕೆಲವು ಕಡೆ ಪರಿಷ್ಕರಣೆ ಅನುಷ್ಠಾನ ಹಂತದಲ್ಲಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧೀನದ ನಿವೇಶನದಾರರಿಗೆ, ಅರ್ಜಿ ಶುಲ್ಕದಿಂದ ಖಾತಾ ಶುಲ್ಕದವರೆಗೆ ಹತ್ತು ಹಲವು ಶುಲ್ಕಗಳನ್ನು ಬಿಡಿಎ ಹೆಚ್ಚಳ ಮಾಡಿದೆ. ವಿವಿಧ ಅಳತೆಗಳ ನಿವೇಶನಗಳ ಖಾತಾ ಶುಲ್ಕ 2020ಕ್ಕಿಂತ ಹಿಂದಿನ ದರಕ್ಕೆ ಹೋಲಿಸಿದರೆ ದುಪ್ಪಟ್ಟಾಗಿದೆ. ಅರ್ಜಿ ಶುಲ್ಕ ಹಾಗೂ ನೋಂದಣಿ ಶುಲ್ಕಗಳನ್ನು ಎರಡೂವರೆ ಪಟ್ಟು ಹೆಚ್ಚಿಸಲಾಗಿದೆ. ನಿವೇಶನ ಮಂಜೂರಾಗಿ ಐದು ವರ್ಷ ಕಳೆದ ಬಳಿಕವೂ ವಸತಿ ನಿರ್ಮಿಸದವರ ಖಾಲಿ ನಿವೇಶನಗಳಿಗೆ ವಿಧಿಸುವ ದಂಡನಾ ಶುಲ್ಕವನ್ನೂ ಶೇ 50ರಷ್ಟು ಹೆಚ್ಚಳ ಮಾಡಲಾಗಿದೆ.

ರಾಜ್ಯದ ವಿವಿಧ ನಗರಗಳಲ್ಲಿ ನೀರಿನ ಶುಲ್ಕದ ಪ್ರಮಾಣ 2019 ಕ್ಕೆ ಹೋಲಿಸಿದರೆ ಈ ವರ್ಷ ₹20 ರಿಂದ ₹120 ರಷ್ಟು ಹೆಚ್ಚು ಮೊತ್ತವನ್ನು ಪಾವತಿಸಬೇಕಾಗಿದೆ. ಜಲಜೀವನ್ ಮಿಷನ್ ಪೂರ್ಣ ಅನುಷ್ಠಾನಗೊಂಡರೆ, ಈಗ ನೀಡುತ್ತಿರುವ ನೀರಿನ ಕರ ದುಪ್ಪಟ್ಟಾಗಲಿದೆ.

ಬೆಂಗಳೂರಿನಲ್ಲಿ ಪೆಟ್ರೋಲ್ ದರ ಒಂದು ಲೀಟರ್‌ಗೆ ಈಗ ಸರಾಸರಿ ₹105 ಇದ್ದು, ಇದರಲ್ಲಿ ₹65 ರಿಂದ ₹67 ರಷ್ಟು ತೆರಿಗೆ ರೂಪದಲ್ಲಿದೆ. ಜನ ಸಾಮಾನ್ಯರು ಸಂಚಾರಕ್ಕಾಗಿ ದ್ವಿಚಕ್ರ ವಾಹನಗಳನ್ನೇ ಅವಲಂಬಿಸಿದ್ದಾರೆ. ಇಂಧನ ಬೆಲೆ ಏರಿಕೆಯಿಂದ ಬಸ್ಸು ಅಥವಾ ಟ್ಯಾಕ್ಸಿಗಳ ಪ್ರಯಾಣ ದರವೂ ಏರಿಕೆಯಾಗಿದೆ. ರೈಲು ದರವೂ ಇದಕ್ಕೆ ಹೊರತಾಗಿಲ್ಲ. ಟಿಕೆಟ್ ದರವನ್ನು ಅಲ್ಪ ಪ್ರಮಾಣದಲ್ಲಿ ಹೆಚ್ಚಿಸಲಾಗಿದೆ. ಆಯ್ದ ರೈಲ್ವೆ ನಿಲ್ದಾಣಗಳಲ್ಲಿ ಪ್ಲಾಟ್‌ಫಾರಂ ಟಿಕೆಟ್ ದರವನ್ನು ₹10 ರಿಂದ ₹ 50 ಕ್ಕೆ ನಿಗದಿ ಮಾಡಲಾಗಿದೆ.

ಕಳೆದ ಎರಡು ವರ್ಷಗಳಲ್ಲಿ ಬೆಲೆ ಏರಿಕೆ ಶೇ 100 ರಿಂದ ಶೇ 200 ರಷ್ಟು ಆಗಿದೆ. ಇನ್ನೊಂದು ಕಡೆ ಹಣದುಬ್ಬರದಿಂದ ದಿನ ಬಳಕೆಯ ವಸ್ತುಗಳ ಬೆಲೆ ಗಗನಕ್ಕೆ ಏರಿದೆ. ಖಾದ್ಯತೈಲ ಬೆಲೆ ಪ್ರತಿ ಲೀಟರ್‌ಗೆ ₹80 ರಿಂದ ₹90 ಇದ್ದದ್ದು, ₹190 ರಿಂದ ₹230 ರವರೆಗೆ ತಲುಪಿದೆ. ಅಡುಗೆ ಅನಿಲದ ಸಿಲಿಂಡರ್ ದರ ಈಗ ಸುಮಾರು ₹859 ತಲುಪಿದೆ. ಮದ್ಯದ ಮೇಲಿನ ತೆರಿಗೆ ಶೇ 80 ರಿಂದ ಶೇ 130 ರಷ್ಟು ಏರಿಕೆಯಾಗಿದೆ. ಇವೆಲ್ಲವೂ ಜನ ಸಾಮಾನ್ಯರಿಗೆಾಯದ ಮೇಲೆ ಬರೆ ಹಾಕಿದಂತಾಗಿದೆ.

ಒಬ್ಬ ವ್ಯಕ್ತಿ ಪಾವತಿಸುವ ಪರೋಕ್ಷ ತೆರಿಗೆ ₹1 ಲಕ್ಷ !

ಆದಾಯ ತೆರಿಗೆ ಪಾವತಿಸುವವರಿಗೆ ವರ್ಷಕ್ಕೆ ಇಷ್ಟೇ ಮೊತ್ತ ಕಟ್ಟುತ್ತೇವೆ ಎಂಬ ಲೆಕ್ಕ ಸಿಗುತ್ತದೆ. ಆದರೆ, ಖರೀದಿ–ಸೇವೆ ಆಧಾರದ ಮೇಲೆ ವಸೂಲು ಮಾಡುವ ತೆರಿಗೆಯ ಮೊತ್ತ ಎಷ್ಟು ಎಂಬುದು ಗೊತ್ತೇ ಆಗುವುದಿಲ್ಲ. ಅದರ ಅಂದಾಜು ಇಲ್ಲಿದೆ.

ಗಾರೆ ಕಾರ್ಮಿಕರೊಬ್ಬರ ಉದಾಹರಣೆಯನ್ನೇ ತೆಗೆದುಕೊಂಡರೆ, ಒಬ್ಬರ ದಿನಗೂಲಿ ಸುಮಾರು ₹ 500ರಿಂದ ₹700ರವರೆಗೆ ಇರುತ್ತದೆ. ಆತ ಪ್ರತಿದಿನ ದ್ವಿಚಕ್ರ ವಾಹನದಲ್ಲಿ 15 ರಿಂದ 25 ಕಿ.ಮಿ ದೂರದ ಪ್ರದೇಶಕ್ಕೆ ಕೆಲಸಕ್ಕಾಗಿ ಹೋಗಬೇಕಾಗುತ್ತದೆ. ಅದಕ್ಕೆ ದಿನವೂ 1 ಲೀಟರ್ (₹100 ಇದ್ದರೆ) ಪೆಟ್ರೋಲ್ ಬಳಸಿದರೆ, ಆತ ತೆರಬೇಕಾದ ತೆರಿಗೆ ಮೊತ್ತ ₹65 ರಿಂದ ₹67. ಆತ ಮದ್ಯಪಾನ ಮಾಡುವವನಾಗಿದ್ದರೆ, ಪ್ರತಿ ದಿನ ಅದಕ್ಕಾಗಿ ₹200 ಖರ್ಚು ಮಾಡುತ್ತಾರೆ ಎಂದು ಕೊಂಡರೆ ಅದರ ತೆರಿಗೆ ಮೊತ್ತ ಶೇ 50ರಿಂದ ಶೇ 80 ರಷ್ಟಾಗುತ್ತದೆ. ಇದರ ಜತೆಗೆ ಖಾದ್ಯ ತೈಲ, ದಿನಸಿ, ಪೇಸ್ಟ್, ಸೋಪು ಸೇರಿದಂತೆ ಬಹುತೇಕ ದಿನ ಬಳಕೆ ಶೇ 18ರವರೆಗೆ ತೆರಿಗೆ ಇದೆ. ಅನಾರೋಗ್ಯ– ವಯೋಸಹಜ ಕಾಯಿಲೆಯ ಔಷಧ ಖರ್ಚು ಇದ್ದರೆ ಅದಕ್ಕೆ ಶೇ 12 ರಿಂದ ಶೇ 28 ರಷ್ಟು ತೆರಿಗೆ ಇದೆ. ಈ ರೀತಿಯ ಪರೋಕ್ಷ ತೆರಿಗೆ ಪಾವತಿಸುವ ಮೊತ್ತ ಲೆಕ್ಕ ಹಾಕಿದರೆ ವರ್ಷಕ್ಕೆ ಸುಮಾರು ₹ 1 ಲಕ್ಷದವರೆಗೆ ಆಗುತ್ತದೆ.

ಸರ್ಕಾರದ ಸಾಲ

2021 ರ ಆರ್ಥಿಕ ವರ್ಷದ ಅಂತ್ಯದಲ್ಲಿ (ಮಾರ್ಚ್) ರಾಜ್ಯ ಸರ್ಕಾರದ ಒಟ್ಟು ಸಾಲ ₹3,68,692 ಕೋಟಿ. 2022 ರ ಮಾರ್ಚ್‌ಗೆ ಈ ಸಾಲದ ಪ್ರಮಾಣ ₹4,57,899 ಕೋಟಿಗೆ ಏರಬಹುದು ಎಂದು ಅಂದಾಜಿಸಲಾಗಿದೆ. ಅಂದರೆ ಜಿಎಸ್‌ಡಿಪಿಯ ಶೇ.26.9 ರಷ್ಟು ಆಗಲಿದೆ. ತಮಿಳುನಾಡಿನಲ್ಲಿ ಈ ಸಾಲದ ಪ್ರಮಾಣ ಶೇ 26.7 ಮತ್ತು ಕೇರಳದಲ್ಲಿ ಶೇ 37.2 ರಷ್ಟು ಇದೆ.



(ಆಧಾರ: ಕೇಂದ್ರ ಪೆಟ್ರೋಲಿಯಂ ಇಲಾಖೆ. ಹೋಲಿಕೆಗೆ ದೆಹಲಿ ನಗರದ ದರವನ್ನು ಪರಿಗಣಿಸಲಾಗಿದೆ)

ವಿವಿಧ ದೇಶಗಳಲ್ಲಿ ತೆರಿಗೆ ಪದ್ಧತಿ (ಶೇಕಡವಾರು)

ದೇಶ	ಕಾರ್ಪೊರೇಟ್ ತೆರಿಗೆ	ಆದಾಯ ತೆರಿಗೆ (ಕಡಿಮೆ ಆದಾಯದವರು)	ಆದಾಯ ತೆರಿಗೆ(ಹೆಚ್ಚು ಆದಾಯ)	ವ್ಯಾಟ್/ ಜಿಎಸ್‌ಟಿ/ ಮಾರಾಟ ತೆರಿಗೆ
ಆಸ್ಟ್ರೇಲಿಯಾ	30	0	45	10
ಬಾಂಗ್ಲಾದೇಶ	35	0	25	15
ಚೀನಾ	25	0	45	6/9/13
ಜರ್ಮನಿ	29.65	14	53	7/19
ಭಾರತ	17.1 ರಿಂದ 25.17	5 ರಿಂದ 20	30	5 ರಿಂದ 28
ಇಸ್ರೇಲ್	23	11.5	50	17
ಜಪಾನ್	29.74	15	66	8/10
ಪಾಕಿಸ್ತಾನ	31	5	31	17
ಇಂಗ್ಲೆಂಡ್	19	0	49	0/5/20
ಅಮೆರಿಕ	33	3-10	51.8	11.72

ಭಾರತದ ಎರಡಂಕಿ ಸಾಧನೆ

ಟೋಕಿಯೊ(ಪಿಟಿಐ): ಭಾರತ ತಂಡದ ಅಥ್ಲೀಟ್‌ಗಳು ಇಲ್ಲಿ ನಡೆಯುತ್ತಿರುವ ಪ್ಯಾರಾಲಿಂಪಿಕ್ಸ್‌ನಲ್ಲಿ ಮಂಗಳವಾರ ಮೂರು ಪದಕಗಳನ್ನು ಗೆದ್ದುಕೊಂಡರು. ಇದರೊಂದಿಗೆ ಭಾರತದ ಪದಕಗಳ ಸಂಖ್ಯೆ ಹತ್ತಕ್ಕೇರಿತು.

ಬೆಂಗಳೂರಿನಲ್ಲಿ ತರಬೇತಿ ಪಡೆಯುತ್ತಿರುವ ಮಾರಿಯಪ್ಪನ್ ತಂಗವೇಲು ಪುರುಷರ ಹೈಜಂಪ್ ಟಿ63ಯಲ್ಲಿ ಬೆಳ್ಳಿ ಪದಕ ಜಯಿಸಿದರು. ಹೋದ ಸಲ ಅವರು ಚಿನ್ನದ ಪದಕ ಜಯಿಸಿದ್ದರು. ಇದೇ ವಿಭಾಗದಲ್ಲಿ ಭಾರತದ ಶರದ್ ಕುಮಾರ್ ಕಂಚು ಗೆದ್ದರು. ಅಮೆರಿಕದ ಸ್ಯಾಮ್ ಗ್ರೀವ್ 1.88 ಮೀಟರ್ಸ್ ಜಿಗಿತ ದಾಖಲಿಸಿ ಚಿನ್ನದ ಪದಕ ಜಯಿಸಿದರು. ಪುರುಷರ ವಿಭಾಗದ ಏರ್‌ಪಿಸ್ತೂಲ್‌ನಲ್ಲಿ ಸಿಂಗರಾಜ್ ಅದಾನಾ ಕಂಚಿನ ಪದಕ ಗೆದ್ದರು.

ಪುರುಷರ ಹೈಜಂಪ್ ಟಿ63

ಸಿಂಗರಾಜ್ ಅದಾನಾ ಕಂಚು
216.8 ಪಾಯಿಂಟ್ಸ್
ಪುರುಷರ 10 ಮೀ. ಏರ್ ಪಿಸ್ತೂಲ್ ಎಸ್‌ಎಚ್1

ಶರದ್ ಕುಮಾರ್ ಕಂಚು
1.83 ಮೀ.
ಪುರುಷರ ಹೈಜಂಪ್ ಟಿ63

ತಮಿಳುನಾಡಿಗೆ ನೀರು ಹರಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ತಮಿಳುನಾಡಿಗೆ ಆಗಸ್ಟ್ 31ರವರೆಗೆ ಹರಿಸಬೇಕಾಗಿರುವ ನೀರಿನ ಪೈಕಿ, ಸದ್ಯಕ್ಕೆ 7 ಟಿಎಂಸಿ ಅಡಿಯಷ್ಟು ನೀರು ಹರಿಸುವಂತೆ ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರವು ಕರ್ನಾಟಕಕ್ಕೆ ಮಂಗಳವಾರ ಸೂಚಿಸಿದೆ.

ಕಾವೇರಿ ನದಿ ನೀರು ಹಂಚಿಕೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೀಡಿದ ಅಂತಿಮ ತೀರ್ಪಿನ ಪ್ರಕಾರ, ಕರ್ನಾಟಕವು ಸಾಮಾನ್ಯ ವರ್ಷದಲ್ಲಿ ಜೂನ್‌ನಿಂದ ಆಗಸ್ಟ್ ಅಂತ್ಯದವರೆಗೆ 86.83 ಟಿಎಂಸಿ ಅಡಿ ನೀರನ್ನು ತಮಿಳುನಾಡಿಗೆ ಹರಿಸಬೇಕು.

ಆದರೆ, ಮಳೆ ಕೊರತೆಯಿಂದಾಗಿ ಕಾವೇರಿ ಜಲಾನಯದ ಪ್ರದೇಶದ ಜಲಾಶಯಗಳು ಭರ್ತಿ ಆಗದೇ ಇರುವುದರಿಂದ, ಕರ್ನಾಟಕವು ಕರ್ನಾಟಕವು ಆಗಸ್ಟ್ 30ರವರೆಗೆ, 57.04 ಟಿಎಂಸಿ ಅಡಿ ನೀರನ್ನು ಮಾತ್ರ ಹರಿಸಿದೆ. ಸೆಪ್ಟೆಂಬರ್‌ನಲ್ಲಿ ಉತ್ತಮ ಮಳೆಯಾದರೆ, ಬಾಕಿ ನೀರನ್ನು ತಮಿಳುನಾಡಿಗೆ ಹರಿಸುವುದಾಗಿ ಕರ್ನಾಟಕವು ಪ್ರಾಧಿಕಾರಕ್ಕೆ ತಿಳಿಸಿದೆ.

ಆದರೆ, ಈ ಅವಧಿಯಲ್ಲಿ ತನಗೆ ಬರಬೇಕಾದ ಬಾಕಿ ಇರುವ ಅಷ್ಟೂ ನೀರನ್ನು ಕರ್ನಾಟಕದ ಜಲಾಶಯಗಳಿಂದ ಬಿಡುಗಡೆ ಮಾಡುವಂತೆ ತಮಿಳುನಾಡು ಆಗ್ರಹಿಸಿತ್ತು.

3A ಪುಟ ನೋಡಿ

ಭಾರತ –ತಾಲಿಬಾನ್ ಮೊದಲ ಮಾತುಕತೆ

ನವದೆಹಲಿ (ಪಿಟಿಐ): ಕತಾರ್‌ಗೆ ಭಾರತದ ರಾಯಭಾರಿ ಆಗಿರುವ ದೀಪಕ್ ಮಿತ್ತಲ್ ಅವರು ತಾಲಿಬಾನ್ ಮುಖಂಡ ಶೇರ್ ಮೊಹಮ್ಮದ್ ಅಬ್ಬಾಸ್ ಸ್ಟಾನೆಕ್‌ಜಾಯ್ ಅವರನ್ನು ಭೇಟಿಯಾಗಿದ್ದಾರೆ. ತಾಲಿಬಾನ್ ಜತೆಗಿನ ಔಪಚಾರಿಕ ಮತ್ತು ಬಹಿರಂಗವಾಗಿ ಘೋಷಿತವಾದ ಮೊದಲ ಸಂಪರ್ಕ ಇದು. ಭಾರತ ವಿರೋಧಿ ಚಟುವಟಿಕೆ ಮತ್ತು ಭಯೋತ್ಪಾದನೆಗೆ ಅಫ್ಗಾನಿಸ್ತಾನದ ನೆಲವು ಬಳಕೆ ಆಗಬಾರದು ಎಂದು ಈ ಭೇಟಿಯ ವೇಳೆ ಭಾರತವು ಹೇಳಿದೆ.

ದೋಹಾದಲ್ಲಿರುವ ಭಾರತೀಯ ರಾಯಭಾರ ಕಚೇರಿಯಲ್ಲಿ ಈ ಸಭೆ ನಡೆದಿದೆ.

ಅಫ್ಗಾನಿಸ್ತಾನದಲ್ಲಿ ಸಿಲುಕಿರುವ ಭಾರತೀಯರ ಭದ್ರತೆ, ಅವರ ಸುರಕ್ಷಿತ ವಾಪಸಾತಿ ಬಗ್ಗೆಯೂ ಮಾತುಕತೆಯಲ್ಲಿ ಪ್ರಸ್ತಾಪ ಆಗಿದೆ.

ಈ ಎಲ್ಲ ವಿಚಾರಗಳ ಬಗ್ಗೆ ಸಕಾರಾತ್ಮಕ ಕ್ರಮ ಕೈಗೊಳ್ಳುವುದಾಗಿ ಶೇರ್ ಮೊಹಮ್ಮದ್ ಭರವಸೆ ನೀಡಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯವು ತಿಳಿಸಿದೆ.

ತಾಲಿಬಾನ್ ಜತೆಗೆ ಮಾತುಕತೆಯ ದಾರಿಯನ್ನು ಭಾರತವು ಮೊದಲೇ ತೆರೆದುಕೊಂಡಿತ್ತು. ಆದರೆ, ಅಧಿಕೃತವಾಗಿ ಅದನ್ನು ಘೋಷಿಸಿರಲಿಲ್ಲ ಎಂದು ಮೂಲಗಳು ತಿಳಿಸಿವೆ. ಅಮೆರಿಕದ ಸೇನೆಯ ತೆರವು ಕಾರ್ಯಾಚರಣೆ ಪೂರ್ಣಗೊಂಡ ಬಳಿಕ ಭಾರತ–ತಾಲಿಬಾನ್ ಪ್ರತಿನಿಧಿಯ ಭೇಟಿ ನಡೆದಿದೆ.

ಇನ್ನಷ್ಟು ಸುದ್ದಿಗಳು 11

ಒಳ ಪುಟ

ಅಪಘಾತ: ಶಾಸಕನ ಮಗ ಸೇರಿ ಏಳು ಮಂದಿ ದುರ್ಮರಣ 6

ರಾಜ್ಯ ಕೋವಿಡ್

ಅಂಕಿ–ಅಂಶ

29,49,445 ▲ ಒಟ್ಟು ಸೋಂಕಿತರು (29,48,228 ನಿನ್ನೆಯ ವಿವರ)

18,386 ▼ ಸಕ್ರಿಯ ಪ್ರಕರಣಗಳು

28,93,715 ▲ ಗುಣಮುಖರಾದವರು

37,318 ▲ ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,217	▲
ಗುಣಮುಖ	1,198	▼
ಸಾವು	25	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಚಿನಕುರಳಿ

ಪ್ರಕಾಶ್ ಶೆಟ್ಟಿ

ಕರ್ನಾಟಕದವರಾದ ನ್ಯಾಯಮೂರ್ತಿ ಬಿ.ವಿ.ನಾಗರತ್ನ (ಬಲಬದಿ) ಅವರು ಮಂಗಳವಾರ ನವದೆಹಲಿಯಲ್ಲಿ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯಾಗಿ ಪ್ರಮಾಣವಚನ ಸ್ವೀಕರಿಸಿದ ಬಳಿಕ ಮುಖ್ಯ ನ್ಯಾಯಮೂರ್ತಿ ಎನ್‌.ವಿ.ರಮಣ ಅವರೊಂದಿಗೆ ಫೋಟೊಗೆ ಪೋಸ್ ನೀಡಿದರು. ಜತೆಗೆ ಪ್ರಮಾಣವಚನ ಸ್ವೀಕರಿಸಿದ ಇನ್ನಿಬ್ಬರು ಮಹಿಳಾ ನ್ಯಾಯಮೂರ್ತಿಗಳಾದ ಬೇಲಾ ಎಂ.ತ್ರಿವೇದಿ, ಹಿಮಾ ಕೊಹ್ಲಿ ಹಾಗೂ ಇದುವರೆಗೆ ಏಕೈಕ ಮಹಿಳಾ ಪ್ರತಿನಿಧಿಯಾಗಿದ್ದ ನ್ಯಾಯಮೂರ್ತಿ ಇಂದಿರಾ ಬ್ಯಾನರ್ಜಿ ಇದ್ದಾರೆ –ಪಿಟಿಐ ಚಿತ್ರ

ವರದಿ ಪುಟ 11

ಶೌಚಾಲಯಗಳ ಕುರಿತ ಸಮೀಕ್ಷೆಗೆ ಸೂಚನೆ

ಬೆಂಗಳೂರು: ನಗರದಲ್ಲಿರುವ ಸಾರ್ವಜನಿಕ ಶೌಚಾಲಯಗಳ ಸ್ಥಿತಿಗತಿ ಕುರಿತು ಸಮೀಕ್ಷೆ ನಡೆಸಿ ವರದಿ ನೀಡುವಂತೆ ರಾಜ್ಯ ಕಾನೂನು ಸೇವಾ ಪ್ರಾಧಿಕಾರಕ್ಕೆ ಹೈಕೋರ್ಟ್ ಮಂಗಳವಾರ ನಿರ್ದೇಶನ ನೀಡಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಸಾರ್ವಜನಿಕ ಶೌಚಾಲಯಗಳ ನಿರ್ವಹಣೆ ಸಮರ್ಪಕವಾಗಿಲ್ಲ ಎಂದು ದೂರಿ ಲೆಟ್ಜ್‌ಕಿಟ್ ಫೌಂಡೇಷನ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿದ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ನೇತೃತ್ವದ ವಿಭಾಗೀಯ ಪೀಠ, ನಾಲ್ಕು ವಾರಗಳೊಳಗೆ ವರದಿ ಸಲ್ಲಿಸುವಂತೆ ಸೂಚಿಸಿತು.

ಶೌಚಾಲಯಗಳ ನಿರ್ವಹಣೆ ವಿಚಾರದಲ್ಲಿ ಬಿಬಿಎಂಪಿಯು ಕರ್ನಾಟಕ ನಗರಾಡಳಿತ ಕಾಯ್ದೆ, ಸಂವಿಧಾನದ 47ನೇ ವಿಧಿ ಹಾಗೂ ನಿರ್ದೇಶಕ ತತ್ವಗಳನ್ನು ಪಾಲಿಸುತ್ತಿಲ್ಲ ಎಂದು ಅರ್ಜಿದಾರರು ದೂರಿದ್ದಾರೆ. ಪುಣೆಯ ಅಖಿಲ ಭಾರತ ಸ್ಥಳೀಯ ಸರ್ಕಾರ ಸಂಸ್ಥೆಯು ರೂಪಿಸಿರುವ ನಗರ ನೈರ್ಮಲ್ಯ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಕ್ರಮ ಕೈಗೊಳ್ಳುವಂತೆ ಹಿಂದಿನ ವಿಚಾರಣೆ ವೇಳೆ ಬಿಬಿಎಂಪಿಗೆ ನ್ಯಾಯಾಲಯ ನಿರ್ದೇಶನ ನೀಡಿತ್ತು.

ಸಾರ್ವಜನಿಕ ಶೌಚಾಲಯಗಳ ಸ್ಥಿತಿ ಮತ್ತು ನಿರ್ವಹಣೆಗೆ ವಾರ್ಡ್‌ವಾರು ಅಗತ್ಯವಿರುವ ಕ್ರಮಗಳ ಕುರಿತು ಮೌಲ್ಯಮಾಪನ ನಡೆಸಿ, ವರದಿ ಸಿದ್ಧಪಡಿಸುವಂತೆ ಪಾಲಿಕೆಗೆ ಸೂಚಿಸಿರುವ ವಿಭಾಗೀಯ ಪೀಠ, ವಿಚಾರಣೆಯನ್ನು ಅಕ್ಟೋಬರ್ 7ಕ್ಕೆ ಮುಂದೂಡಿದೆ.

ನಗರದಲ್ಲಿ ಅಂಚೆ ಇಲಾಖೆಯು ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ತೋಟಗಾರಿಕೆ ಸಚಿವ ಮುನಿರತ್ನ ಅವರು ವಿವಿಧ ಉತ್ಪನ್ನಗಳ ಅಂಚೆ ಲಕೋಟೆಗಳನ್ನು ಬಿಡುಗಡೆ ಮಾಡಿದರು. ಕರ್ನಾಟಕ ವೃತ್ತದ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಶಾರದಾ ಸಂಪತ್ ಇದ್ದರು ಪ್ರಜಾವಾಣಿ ಚಿತ್ರ

ಬಸ್ ಪಾಸ್‌ಗಳ ಅವಧಿ ವಿಸ್ತರಣೆ

ಬೆಂಗಳೂರು: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು (ಬಿಎಂಟಿಸಿ) 2020–21ನೇ ಸಾಲಿನ ವಿದ್ಯಾರ್ಥಿ ಪಾಸ್‌ಗಳ ಮಾನ್ಯತೆಯ ಅವಧಿಯನ್ನು ಸೆಪ್ಟೆಂಬರ್ 30ರವರೆಗೆ ವಿಸ್ತರಿಸಿದೆ.

‘ಲಾಕ್‌ಡೌನ್ ತೆರವಾಗಿರುವ ಕಾರಣ ಹಲವು ಕಾಲೇಜುಗಳು ಭೌತಿಕ ತರಗತಿಗಳನ್ನು ಆರಂಭಿಸಿವೆ. ಐಟಿಐ, ಡಿಪ್ಲೊಮಾ, ಪದವಿ, ಸ್ನಾತಕೋತ್ತರ ಪದವಿ, ಪಿಎಚ್‌.ಡಿ, ವೈದ್ಯಕೀಯ ಹಾಗೂ ಸಂಜೆ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ’ ಎಂದು ಪ್ರಕಟಣೆ ತಿಳಿಸಿದೆ.

ಆಡಳಿತ ಪಕ್ಷದ ಶಾಸಕರಿಗೆ ದುಪ್ಪಟ್ಟು ಅನುದಾನ

ಶೇ 74ರಷ್ಟು ಅನುದಾನ ಬಿಜೆಪಿ ಶಾಸಕರ ಪಾಲು!

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ನಗರದ ವಿವಿಧ ವಿಧಾನಸಭಾ ಕ್ಷೇತ್ರಗಳ ಅಭಿವೃದ್ಧಿಗಾಗಿ ಜಿಲ್ಲಾ ಉಸ್ತುವಾರಿ ಸಚಿವರ ವಿವೇಚನಾ ಕೋಟಾದಡಿ ಒದಗಿಸುವ 2021–22ನೇ ಸಾಲಿನ ಅನುದಾನದ ಹಂಚಿಕೆಯಲ್ಲಿ ತಾರತಮ್ಯ ಮಾಡಲಾಗಿದೆ ಎಂದು ಕಾಂಗ್ರೆಸ್ ಹಾಗೂ ಜೆಡಿಎಸ್ ಶಾಸಕರು ಆಕ್ಷೇಪಿಸಿದ್ದಾರೆ.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಹಾಗೂ ಎಚ್‌.ಡಿ.ಕುಮಾರಸ್ವಾಮಿ ನೇತೃತ್ವದ ಜೆಡಿಎಸ್– ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದಲ್ಲಿ ಅನುದಾನ ಹಂಚಿಕೆಯಲ್ಲಿ ತಾರತಮ್ಯವಾಗಿದೆ ಎಂದು ಬಿಜೆಪಿ ಶಾಸಕರು ಆರೋಪಿಸಿದ್ದರು. ಅನುದಾನ ಹಂಚಿಕೆಯಲ್ಲಿ ತಾರತಮ್ಯ ಮಾಡುವ ಚಾಳಿಯನ್ನು ಈಗ ಬಿಜೆಪಿ ನೇತೃತ್ವದ ಸರ್ಕಾರವೂ ಮುಂದುವರಿಸಿದೆ.

ರಾಜ್ಯ ಸರ್ಕಾರವು 2021–22ನೇ ಸಾಲಿನ ಬಜೆಟ್‌ನಲ್ಲಿ ಬೆಂಗಳೂರು ನಗರ ಜಿಲ್ಲೆಗೆ ಒಟ್ಟು ₹ 250 ಕೋಟಿ ಅನುದಾನವನ್ನು ಹಂಚಿಕೆ ಮಾಡಿದೆ. ನಗರದ 27 ಶಾಸಕರಲ್ಲಿ 15 ಮಂದಿ ಬಿಜೆಪಿಯಿಂದ, 11 ಮಂದಿ ಕಾಂಗ್ರೆಸ್‌ನಿಂದ ಹಾಗೂ ಒಬ್ಬರು ಜೆಡಿಎಸ್‌ನಿಂದ ಆಯ್ಕೆಯಾದವರು. ಹಂಚಿಕೆಯಾದ ಒಟ್ಟು ಅನುದಾನದಲ್ಲಿ ಶೇ 74ರಷ್ಟನ್ನು (₹185 ಕೋಟಿ) ಆಡಳಿತ ಪಕ್ಷದ ಶಾಸಕರು ಪ್ರತಿನಿಧಿಸುವ ಕ್ಷೇತ್ರಗಳಿಗೆ ಒದಗಿಸಲಾಗಿದೆ. ಕಾಂಗ್ರೆಸ್ ಪಕ್ಷದ ಶಾಸಕರು ಪ್ರತಿನಿಧಿಸುವ ಕ್ಷೇತ್ರಗಳಿಗೆ ಶೇ 23.6ರಷ್ಟು (₹ 59 ಕೋಟಿ) ಹಾಗೂ ಜೆಡಿಎಸ್ ಶಾಸಕರು ಪ್ರತಿನಿಧಿಸುವ ಕ್ಷೇತ್ರಕ್ಕೆ ಶೇ 2.4 (₹ 6ಕೋಟಿ) ಅನುದಾನ ಹಂಚಿಕೆ ಮಾಡಲಾಗಿದೆ. ಬಿಜೆಪಿಯ ಕೆಲವು ಶಾಸಕರು ಪ್ರತಿನಿಧಿಸುವ ಕ್ಷೇತ್ರಗಳಿಗೆ ₹ 15 ಕೋಟಿವರೆಗೂ ಅನುದಾನ ನೀಡಲಾಗಿದೆ. ಕಾಂಗ್ರೆಸ್ ಹಾಗೂ ಜೆಡಿಎಸ್ ಶಾಸಕರು ಪ್ರತಿನಿಧಿಸುವ ಯಾವುದೇ ಕ್ಷೇತ್ರಗಳಿಗೆ ₹ 6 ಕೋಟಿಗಿಂತ ಹೆಚ್ಚು ಅನುದಾನ ಸಿಕ್ಕಿಲ್ಲ.

‘ನಗರದ ಕೇಂದ್ರ ಪ್ರದೇಶಗಳಲ್ಲಿರುವ ಕ್ಷೇತ್ರಗಳು ಈಗಾಗಲೇ ಅಭಿವೃದ್ಧಿಯಾಗಿವೆ. ಅವುಗಳಿಗೆ ಕಡಿಮೆ ಅನುದಾನ ನೀಡಿ, ಹೊರವಲಯದ ಕ್ಷೇತ್ರಗಳಿಗೆ ಹೆಚ್ಚು ಅನುದಾನ ನೀಡುವುದನ್ನು ಸಮರ್ಥಿಸಬಹುದು. ಏಕೆಂದರೆ, ಹೊರ ವಲಯದ ಕ್ಷೇತ್ರಗಳಲ್ಲಿ ಈಗಲೂ ಮೂಲಸೌಕರ್ಯ ಕೊರತೆ ಇದೆ. ಈ ಮಾನದಂಡ ಅನುಸರಿಸದೇ ಆಡಳಿತ ಪಕ್ಷದ ಶಾಸಕರು ಪ್ರತಿನಿಧಿಸುವ ಕ್ಷೇತ್ರಗಳಿಗೆ ಹೆಚ್ಚು ಅನುದಾನ ನೀಡುವುದನ್ನು ಒಪ್ಪಲಾಗದು’ ಎನ್ನುತ್ತಾರೆ ವಿರೋಧ ಪಕ್ಷಗಳ ಶಾಸಕರು.

ಬೆಂಗಳೂರು ನಗರದ ಉಸ್ತುವಾರಿ ಸಚಿವರೂ ಆಗಿದ್ದ ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡುವುದಕ್ಕೆ ಒಂದು ವಾರ ಮುನ್ನ ವಿವಿಧ ಕ್ಷೇತ್ರಗಳಿಗೆ ಅನುದಾನ ಹಂಚಿಕೆ ಮಾಡಿದ್ದರು.

ಜಿಲ್ಲಾ ಉಸ್ತುವಾರಿ ಸಚಿವರ ವಿವೇಚನಾ ಕೋಟಾ ಅನುದಾನ ಹಂಚಿಕೆ ವಿವರ

ಕ್ಷೇತ್ರ	ಹಂಚಿಕೆಯಾದ ಮೊತ್ತ (₹ಕೋಟಿಗಳಲ್ಲಿ)
ಬಿಜೆಪಿ ಶಾಸಕರು ಪ್ರತಿನಿಧಿಸುವ ಕ್ಷೇತ್ರಗಳು	
ಯಲಹಂಕ	12
ಕೆ.ಆರ್.ಪುರ	12
ಯಶವಂತಪುರ	12.50
ಆರ್.ಆರ್.ನಗರ	12
ಮಹಾಲಕ್ಷ್ಮಿ ಲೇಔಟ್	12.50
ಮಲ್ಲೇಶ್ವರ	12
ಸಿ.ವಿ.ರಾಮನ್‌ನಗರ	12
ರಾಜಾಜಿನಗರ	12
ಗೋವಿಂದರಾಜನಗರ	15
ಚಿಕ್ಕಪೇಟೆ	12
ಬಸವನಗುಡಿ	12
ಪದ್ಮನಾಭನಗರ	12
ಮಹದೇವಪುರ	12.50
ಬೊಮ್ಮನಹಳ್ಳಿ	12.50
ಬೆಂಗಳೂರು ದಕ್ಷಿಣ	12
ಕಾಂಗ್ರೆಸ್ ಪಕ್ಷದ ಶಾಸಕರು ಪ್ರತಿನಿಧಿಸುವ ಕ್ಷೇತ್ರಗಳು	
ಬ್ಯಾಟರಾಯನಪುರ	6
ಹೆಬ್ಬಾಳ	5
ಪುಲಿಕೇಶಿನಗರ	5
ಸರ್ವಜ್ಞನಗರ	6
ಶಿವಾಜಿನಗರ	5
ಶಾಂತಿನಗರ	5
ಗಾಂಧಿನಗರ	6
ವಿಜಯನಗರ	5
ಚಾಮರಾಜಪೇಟೆ	5
ಬಿಟಿಎಂ ಲೇಔಟ್	6
ಜಯನಗರ	5
ಜೆಡಿಎಸ್ ಶಾಸಕರು ಪ್ರತಿನಿಧಿಸುವ ಕ್ಷೇತ್ರ	
ದಾಸರಹಳ್ಳಿ	6

‘ಎಲ್ಲ ರೀತಿಯ ಅನುದಾನ ಹಂಚಿಕೆಯಲ್ಲೂ ತಾರತಮ್ಯ’

ದಾಸರಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಎಲ್ಲ ವಿಧದ ಅನುದಾನಗಳ ಹಂಚಿಕೆಯಲ್ಲೂ ತಾರತಮ್ಯ ನಡೆಸಲಾಗಿದೆ. ಬಿಬಿಎಂಪಿಗೆ 110 ಗ್ರಾಮಗಳು ಹೊಸತಾಗಿ ಸೇರ್ಪಡೆಯಾದ ಆರು ಕ್ಷೇತ್ರಗಳಲ್ಲಿ ಈ ಕ್ಷೇತ್ರವು ಸೇರಿದೆ. ಈ ಕ್ಷೇತ್ರಗಳಿಗೆ ಬಿಡುಗಡೆ ಮಾಡಿರುವ ವಿಶೇಷ ಅನುದಾನದಲ್ಲಿ ಬಿಜೆಪಿ ಶಾಸಕರು ಪ್ರತಿನಿಧಿಸುವ ಕ್ಷೇತ್ರಗಳಿಗೆ ತಲಾ ₹ 210 ಕೋಟಿ ಹಂಚಿಕೆ ಮಾಡಿದ್ದರೆ, ದಾಸರಹಳ್ಳಿ ಕ್ಷೇತ್ರಕ್ಕೆ ಕೇವಲ ₹ 25 ಕೋಟಿ ನೀಡಲಾಗಿದೆ. ನನ್ನ ಕ್ಷೇತ್ರದಲ್ಲಿ ಅನೇಕ ಕಡೆ ಕುಡಿಯುವ ನೀರು ಹಾಗೂ ಒಳಚರಂಡಿ ಕೊಳವೆ ಅಳವಡಿಕೆಗೆ ರಸ್ತೆಗಳನ್ನು ಅಗೆಯಲಾಗಿದೆ. ಅವುಗಳ ದುರಸ್ತಿಗೆ ಕನಿಷ್ಠ ₹ 450 ಕೋಟಿ ಅನುದಾನ ಅಗತ್ಯ ಇದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತರೇ ನಗರಾಭಿವೃದ್ಧಿ ಇಲಾಖೆಗೆ ಪತ್ರ ಬರೆದಿದ್ದರು. ಆದರೂ ನನ್ನ ಕ್ಷೇತ್ರಕ್ಕೆ ತಾರತಮ್ಯ ಮಾಡಲಾಗಿದೆ.

ಪ್ರಜಾವಾಣಿ ವಿಶೇಷ

ಬಿಬಿಎಂಪಿ ಅನುದಾನದಲ್ಲೂ ಕೆರೆ, ಉದ್ಯಾನ, ಮುಖ್ಯರಸ್ತೆಗಳ ಅಭಿವೃದ್ಧಿಗೆ ನಯಾಪೈಸೆ ಅನುದಾನವನ್ನೂ ನೀಡಿಲ್ಲ. ಮಳೆಗಾಲದಲ್ಲಿ ಪ್ರವಾಹ ಸೃಷ್ಟಿಯಾಗುವ ಅನೇಕ ಪ್ರದೇಶಗಳು ನಮ್ಮ ಕ್ಷೇತ್ರದಲ್ಲಿವೆ. ಆದರೂ, ಈ ಕ್ಷೇತ್ರದ ರಾಜಕಾಲುವೆಗಳ ಅಭಿವೃದ್ಧಿಗೆ ಅನುದಾನ ನೀಡಿಲ್ಲ. ಈ ಕ್ಷೇತ್ರದ ಚಿಕ್ಕಬಾಣಾವರ ಕೆರೆ, ಗಾಣಿಗರಹಳ್ಳಿ ಕೆರೆ, ಅಬ್ಬಿಗೆರೆ, ದಾಸರಹಳ್ಳಿ ಕೆರೆ ಹಾಗೂ ಶಿವಪುರ ಕೆರೆಗಳು ಹದಗೆಟ್ಟಿವೆ. ಬಿಬಿಎಂಪಿ ವ್ಯಾಪ್ತಿಯ ಕೆರೆಗಳ ಅಭಿವೃದ್ಧಿಗೆ ಸರ್ಕಾರ ₹ 340 ಕೋಟಿ ಅನುದಾನ ನೀಡಿದೆಯಾದರೂ ನಮ್ಮ ಕ್ಷೇತ್ರದ ಒಂದು ಕೆರೆಯನ್ನೂ ಈ ಯೋಜನೆಗೆ ಆಯ್ಕೆ ಮಾಡಿಲ್ಲ. ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಹಂಚಿಕೆ ಮಾಡಲಾಗಿದ್ದ ₹ 650 ಕೋಟಿ ಅನುದಾನವನ್ನು ಈಗಿನ ಬಿಜೆಪಿ ನೇತೃತ್ವದ ಸರ್ಕಾರ ಕಿತ್ತುಕೊಂಡಿದೆ. ಈಗ ಉಸ್ತುವಾರಿ ಸಚಿವರ ವಿವೇಚನಾ ಕೋಟಾದ ಅನುದಾನದಲ್ಲೂ ಕ್ಷೇತ್ರಕ್ಕೆ ಅನ್ಯಾಯ ಮಾಡಲಾಗಿದೆ.

ಆರ್.ಮಂಜುನಾಥ್, ದಾಸರಹಳ್ಳಿ ಕ್ಷೇತ್ರದ ಶಾಸಕ (ಜೆಡಿಎಸ್)

‘ಅನುದಾನದಲ್ಲಿ ತಾರತಮ್ಯ ಬೆಂಗಳೂರಿಗೆ ಮಾಡುವ ಅನ್ಯಾಯ’

ಬಿಜೆಪಿ ನೇತೃತ್ವದ ಸರ್ಕಾರ ಕ್ಷೇತ್ರವಾರು ಅನುದಾನ ಹಂಚಿಕೆಯಲ್ಲಿ ಮಾಡುತ್ತಿರುವ ತಾರತಮ್ಯ ಬೆಂಗಳೂರಿಗೆ ಮಾಡುವ ಅನ್ಯಾಯ. ಈ ಸರ್ಕಾರ ಅಸ್ತಿತ್ವಕ್ಕೆ ಬಂದಾಗಿನಿಂದಲೂ ಇಂತಹ ತಾರತಮ್ಯ ಮಾಮೂಲಿಯಂತಾಗಿದೆ. ಎಲ್ಲ ವಿಚಾರಗಳಲ್ಲೂ ಈಗಿನ ಸರ್ಕಾರ ರಾಜಕೀಯ ಮಾಡುತ್ತಿದೆ. ಇಂತಹ ರಾಜಕೀಯಗಳಿಂದ ಹಾನಿ ಆಗುವುದು ಬೆಂಗಳೂರು ನಗರಕ್ಕೆ. ನಗರದ ಸರ್ವತೋಮುಖ ಅಭಿವೃದ್ಧಿಗೆ ಇದು ತೊಡಕಾಗಿ ಪರಿಣಮಿಸಲಿದೆ. ಈ ರಾಜಕೀಯ ಭಂಡತನವನ್ನು ಖಂಡಿಸುತ್ತೇನೆ.

ನಗರದ ಹೊರವಲಯದಲ್ಲಿರುವ ಬ್ಯಾಟರಾಯನಪುರ ಕ್ಷೇತ್ರ ಈಗಷ್ಟೇ ಮೂಲಸೌಕರ್ಯಗಳನ್ನು ಕಾಣುತ್ತಿದೆ. ಕಾವೇರಿ ನೀರಿನ ಕೊಳವೆ, ಒಳಚರಂಡಿ ಕೊಳವೆ, ವಿದ್ಯುತ್ ಕೇಬಲ್ ಅಳವಡಿಕೆ ಕಾರ್ಯಗಳು ಈಗಷ್ಟೇ ನಡೆಯುತ್ತಿವೆ. ಇಂತಹ ಕ್ಷೇತ್ರಕ್ಕೆ ಸಹಜವಾಗಿಯೇ ಹೆಚ್ಚು ಅನುದಾನದ ಅಗತ್ಯ ಇರುತ್ತದೆ. ಅನುದಾನ ಹಂಚಿಕೆಯಲ್ಲಿ ತಾರತಮ್ಯದ ಕುರಿತು ಮುಖ್ಯಮಂತ್ರಿಯವರ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ. ನಾವು ಪ್ರತಿಭಟನೆ ನಡೆಸಿದರೂ ಸರ್ಕಾರ ಸ್ಪಂದಿಸಿಲ್ಲ. ದ್ವೇಷವನ್ನೇ ತುಂಬಿಕೊಂಡ ಸರ್ಕಾರದಿಂದ ಇನ್ನೇನು ನಿರೀಕ್ಷೆ ಮಾಡಲು ಸಾಧ್ಯ?

ಕೃಷ್ಣ ಬೈರೇಗೌಡ, ಬ್ಯಾಟರಾಯನಪುರ ಕ್ಷೇತ್ರದ ಶಾಸಕ (ಕಾಂಗ್ರೆಸ್)

ಸುದ್ದಿ 2 ನಿಮಿಷ

ಮದರಸಾಗಳಲ್ಲಿ ತಾಲಿಬಾನಿಗಳು ಸೃಷ್ಟಿಯಾಗುತ್ತಾರೆ –ಸಿ.ಟಿ.ರವಿ

ಕಲಬುರ್ಗಿ: ‘ಓಲೈಕೆ ರಾಜಕಾರಣದಿಂದಾಗಿ ದೇಶದ ಮದರಸಾಗಳಲ್ಲಿ ತಾಲಿಬಾನಿಗಳು ಸೃಷ್ಟಿಯಾಗುತ್ತಿದ್ದಾರೆ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಮಂಗಳವಾರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ತಾಲಿಬಾನಿಗಳು ಯಾವ ಗ್ರಂಥವನ್ನು ಓದಿ ಭಯೋತ್ಪಾದಕ ಕೃತ್ಯಕ್ಕಿಳಿದಿದ್ದಾರೆ ಎಂಬುದನ್ನು ನೋಡಿದರೆ ಆ ಗ್ರಂಥದ ದುಷ್ಟ ಪ್ರೇರಣೆ ಏನು ಎಂಬುದು ಅರ್ಥವಾಗುತ್ತದೆ.

ಹಿಂದುತ್ವದ ರಾಜಕಾರಣ ದೇಶದಲ್ಲಿ ಇರುವವರೆಗೂ ಬುದ್ಧ, ಬಸವಣ್ಣನವರ ಚಿಂತನೆಗಳು, ಅಂಬೇಡ್ಕರ್ ಅವರ ವಾರಸುದಾರಿಕೆ ಉಳಿಯುತ್ತದೆ’ ಎಂದರು.

‘ದೇಶದ ಧರ್ಮಗ್ರಂಥಗಳನ್ನು ಓದಿದವರು ಯಾರೂ ತಾಲಿಬಾನಿಗಳಾಗುವುದಿಲ್ಲ. ಬದಲಾಗಿ ದಾರ್ಶನಿಕರಾಗಿದ್ದಾರೆ. ದೇಶಭಕ್ತರಾಗಿದ್ದಾರೆ. ಮೂಲ ನಂಬಿಕೆಯಲ್ಲಿಯೇ ಸಮಭಾವವಿದೆ. ಸಮಭಾವ ಇದ್ದಾಗ ಮಾತ್ರ ಸಮಾನತೆ, ಮಹಿಳಾ ಸ್ವಾತಂತ್ರ್ಯ ಇರುತ್ತದೆ. ಇಲ್ಲದಿದ್ದರೆ ಅಫ್ಗಾನಿಸ್ತಾನದ ಸ್ಥಿತಿ ನಮಗೂ ಬರುತ್ತದೆ’ ಎಂದು ಹೇಳಿದರು.

ವಿದ್ಯುತ್ ವ್ಯತ್ಯಯ ಇಂದಿನಿಂದ

ಬೆಂಗಳೂರು: ಭೂಗತ ಕೇಬಲ್ ಅಳವಡಿಕೆ ಹಾಗೂ ನಿರ್ವಹಣಾ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ನಗರದ ವಿವಿಧ ಪ್ರದೇಶಗಳಲ್ಲಿ ಇದೇ 1 ಮತ್ತು 2ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ಸರ್ ಎಂ.ವಿ. ಬಡಾವಣೆ ಐದನೇ ಹಂತ, ಅಂಬೇಡ್ಕರ್ ನಗರ, ಉಲ್ಲಾಳು ಬಸ್ ನಿಲ್ದಾಣ, ಬಿಡಿಎ ಕಾಲೊನಿ, ಮಾಳಗಾಳ, ರಾಮಕೃಷ್ಣಪ್ಪ ಬಡಾವಣೆ, ಸುವರ್ಣ ನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

2:ಕೆಂಪಾಪುರ, ವಿನಾಯಕ ಬಡಾವಣೆ, ಗಂಗಾನಗರ, ಮುತ್ತಪ್ಪ ಬ್ಲಾಕ್, ಆರ್‌ಬಿಐ ಕಾಲೊನಿ, ಗುಡ್ಡದಹಳ್ಳಿ ಮುಖ್ಯರಸ್ತೆ, ಬಿಎಂಟಿಸಿ ಡಿಪೊ, ಆರ್.ಟಿ. ನಗರ, ಸಿಬಿಐ ಮುಖ್ಯರಸ್ತೆ, ವೈಟ್‌ಹೌಸ್, ದಿನ್ನೂರು, ಚಾಮುಂಡಿನಗರ, ಆನಂದ ನಗರ, ಕೌಸರ್ ನಗರ, ರಾಜೀವ್ ಗಾಂಧಿ ದಂತವೈದ್ಯಕೀಯ ಕಾಲೇಜು, ಸೀತಪ್ಪ ಬಡಾವಣೆ, ಸಿ.ಎನ್. ಹಳ್ಳಿ, ಆಚಾರ್ಯ ಕಾಲೇಜು ರಸ್ತೆ, ಎಸ್‌ಬಿಎಂ ಕಾಲೊನಿ, ಬಳ್ಳಾರಿ ಮುಖ್ಯರಸ್ತೆ, ಎಸ್‌ಎಸ್‌ಎ ರಸ್ತೆ, ಕುಂತಿ ಗ್ರಾಮ, ವಿನಾಯಕ ಬಡಾವಣೆ, ಹೆಬ್ಬಾಳ, ಚೋಳನಗರ, ಗುಂಡಪ್ಪ ರೆಡ್ಡಿ ಬಡಾವಣೆ, ವಿ. ನಾಗೇನಹಳ್ಳಿ, ಕೆಇಬಿ ಬಡಾವಣೆ, ಎಂಎಲ್‌ಎ ಬಡಾವಣೆ, 80 ಅಡಿ ರಸ್ತೆ, ನೃಪತುಂಗ ಬಡಾವಣೆ ಮತ್ತು ಸುತ್ತ–ಮುತ್ತಲಿನ ಪ್ರದೇಶಗಳು.

ಯುವ ಕಥಾ ಸ್ಪರ್ಧೆಗೆ ಕಥೆಗಳ ಆಹ್ವಾನ

ಬೆಂಗಳೂರು: ‘ಅಕ್ಷರ ಸಂಗಾತ’ ತ್ರೈಮಾಸಿಕ ಸಾಹಿತ್ಯ ಪತ್ರಿಕೆಯು ಯುವ ಕಥಾ ಸ್ಪರ್ಧೆಗೆ 35 ವರ್ಷದೊಳಗಿನವರಿಂದ ಕಥೆಗಳನ್ನು ಆಹ್ವಾನಿಸಿದೆ. ಬಹುಮಾನಿತ ಕಥೆಗೆ ₹ 10 ಸಾವಿರ, ಒಪ್ಪಿತ ಎರಡು ಕಥೆಗಳಿಗೆ ತಲಾ ₹ 5 ಸಾವಿರ ನಗದು ಬಹುಮಾನವನ್ನು ಕೊಡಲಾಗುತ್ತದೆ. ಕಥೆಗಳಿಗೆ ಪದಗಳ ಮಿತಿಯಿಲ್ಲ. ಕಥೆಗಳು ಸಾಮಾಜಿಕ ಜಾಲತಾಣ ಸೇರಿದಂತೆ ಯಾವುದೇ ಮಾಧ್ಯಮದಲ್ಲಿ ಪ್ರಕಟವಾಗಿರಬಾರದು. ಕಥೆಗಳು ನುಡಿ ತಂತ್ರಾಂಶದಲ್ಲಿರುವುದು ಕಡ್ಡಾಯ. ಜನ್ಮ ದಿನಾಂಕ ದೃಢೀಕರಣ ಪತ್ರದೊಂದಿಗೆ ಪರಿಚಯ, ಭಾವಚಿತ್ರ, ವಿಳಾಸವನ್ನು ಪ್ರತ್ಯೇಕ ಪುಟದಲ್ಲಿ ಲಗತ್ತಿಸಿರಬೇಕು. ಕಥೆಗಳನ್ನು ಸೆ.30ರೊಳಗೆ sangaata2018@gmail.comಗೆ ಕಳುಹಿಸಿಕೊಡಬೇಕು. ಬಹುಮಾನಿತ ಕಥೆಗಳನ್ನು ‘ಅಕ್ಷರ ಸಂಗಾತ’ ತ್ರೈಮಾಸಿಕ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು ಎಂದು ಪ್ರಕಟಣೆಯಲ್ಲಿ ಸಂಪಾದಕ ಟಿ.ಎಸ್. ಗೊರವರ ತಿಳಿಸಿದ್ದಾರೆ.

ಎನ್‌ಎಸ್‌ಯುಐ ರಾಜ್ಯ ಘಟಕದ ಪದಾಧಿಕಾರಿಗಳ ಪದಗ್ರಹಣ

‘ಸಾವಿರ ಸದಸ್ಯತ್ವ ಮಾಡಿಸಿದರೆ ಹುದ್ದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಕ್ಷಕ್ಕೆ ಸಾವಿರ ಸದಸ್ಯತ್ವ ಮಾಡಿಸಿದರೆ ನಾನು ನಿಮಗೆ ಪದಾಧಿಕಾರಿ ಹುದ್ದೆ ನೀಡುತ್ತೇನೆ. ನನಗೆ ಜಾತಿ ಮೇಲೆ ನಂಬಿಕೆ ಇಲ್ಲ. ವಿದ್ಯಾರ್ಥಿಗಳು ಸಮಸ್ಯೆಯ ಧ್ವನಿ ಆಗಬೇಕು’ ಎಂದು ಪಕ್ಷದ ವಿದ್ಯಾರ್ಥಿ ಸಂಘಟನೆಯಾದ ಎನ್‌ಎಸ್‌ಯುಐ ಕಾರ್ಯಕರ್ತರನ್ನು ಉದ್ದೇಶಿಸಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಮಂಗಳವಾರ ನಡೆದ ಎನ್‌ಎಸ್‌ಯುಐ ರಾಜ್ಯ ಘಟಕದ ಅಧ್ಯಕ್ಷ ಕೀರ್ತಿ ಗಣೇಶ್ ಮತ್ತು ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಕಾಂಗ್ರೆಸ್ ಪಕ್ಷಕ್ಕೆ ನೀವು ಕೊಡುಗೆ ನೀಡಬೇಕೆಂಬ ಇಚ್ಛೆ ಇದ್ದರೆ, ನಾಯಕರಾಗಬೇಕಾದರೆ ಸದಸ್ಯತ್ವ ಮಾಡಿಸಬೇಕು. ಸದಸ್ಯತ್ವ ಮಾಡಿಸಿದರೆ ನಾಯಕರಾಗಿ ಬೆಳೆಯಲು ಸಾಧ್ಯ’ ಎಂದರು.

‘ಎನ್‌ಎಸ್‌ಯುಐ ನಮ್ಮ ಬೇರು. ಮುಂದೆ ಫಲ ಅನುಭವಿಸಬೇಕು ಎಂದರೆ ನಮ್ಮ ಬೇರು ಗಟ್ಟಿಗೊಳಿಸಬೇಕು. ನೀವು ಮೊದಲು ಕನಸು ಕಾಣಬೇಕು. ಆ ಕನಸನ್ನು ಇಷ್ಟಪಡಬೇಕು. ಅದನ್ನು ಸಾಕಾರಗೊಳಿಸಲು ನಿರ್ಧರಿಸಬೇಕು. ಜತೆಗೆ, ಶಿಸ್ತು ಬೆಳೆಸಿಕೊಳ್ಳಬೇಕು’ ಎಂದು ಕಿವಿಮಾತು ಹೇಳಿದರು.

‘ಪಕ್ಷದ ಭಿತ್ತಿಪತ್ರಗಳಲ್ಲಿ ಯಾರ ಫೋಟೊ ಇರಬೇಕು, ಇರಬಾರದು ಎಂಬ ನಿಯಮ ಸಿದ್ಧಪಡಿಸುತ್ತಿದ್ದೇವೆ. ನಿಮ್ಮ ಹೋರಾಟದ ಚಿತ್ರಗಳು ಮಾಧ್ಯಮಗಳಲ್ಲಿ ಪ್ರಕಟವಾಗಿ ಬರಬೇಕು. ಅಂಥ ಹೋರಾಟಗಳನ್ನು ರೂಪಿಸಬೇಕು. ಆಗ ನೀವು ನಾಯಕರಾಗಲು ಸಾಧ್ಯ’ ಎಂದೂ ಕಾರ್ಯಕರ್ತರಿಗೆ ತಿಳಿ ಹೇಳಿದರು.

ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮಾತನಾಡಿ, ‘ವಿದ್ಯಾರ್ಥಿಗಳು ತಮ್ಮ ಭವಿಷ್ಯ ರೂಪಿಸಿಕೊಳ್ಳಬೇಕೆಂದರೆ ಮೊದಲು ಈ ದೇಶ ಮಾರಾಟ ಆಗದಂತೆ ತಡೆಯಬೇಕು’ ಎಂದರು.

ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ವಿದ್ಯಾರ್ಥಿ ಸಮೂಹಕ್ಕೆ ದೇಶದ ಚರಿತ್ರೆಯನ್ನು ಅರ್ಥ ಮಾಡಿಸುತ್ತಲೇ ಸಂವಿಧಾನದ ಮಹತ್ವವನ್ನು ತಿಳಿಸಿ ಶಿಕ್ಷಣ, ಸಂಘಟನೆ, ಹೋರಾಟದ ಮಾರ್ಗದಲ್ಲಿ ಭವಿಷ್ಯ ರೂಪಿಸಿಕೊಳ್ಳಬೇಕು ಎಂದರು.

ಬಸವಣ್ಣನವರ ‘ಇವನಾರವ ಇವನಾರವ’ ವಚನದ ಸಾಲುಗಳನ್ನು ಹೇಳಿದ ಸಿದ್ದರಾಮಯ್ಯ, ಕುವೆಂಪು ಅವರ ವಿಚಾರಶೀಲರಾಗಿ ಎನ್ನುವ ಸಂದೇಶವನ್ನು ವಿದ್ಯಾರ್ಥಿ ಸಮೂಹಕ್ಕೆ ನೀಡುವ ಮೂಲಕ ಜಾಗೃತರಾಗುವಂತೆ ಕರೆ ನೀಡಿದರು.

ಎನ್‌ಎಸ್‌ಯುಐ ರಾಜ್ಯ ಘಟಕದ ಅಧ್ಯಕ್ಷರಾಗಿ ಕೀರ್ತಿ ಗಣೇಶ್ ಅವರು ಮಂಗಳವಾರ ಅಧಿಕಾರ ವಹಿಸಿಕೊಂಡರು. ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಬಿ. ಶ್ರೀನಿವಾಸ್ ಇದ್ದರು– ಪ್ರಜಾವಾಣಿ ಚಿತ್ರ

‘ಡಿಕೆ... ಡಿಕೆ... ಡಿಕೆ...’

ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಎದುರಿನಲ್ಲೇ ಡಿ.ಕೆ. ಶಿವಕುಮಾರ್ ಪರ ಬೆಂಬಲಿಗರು ಘೋಷಣೆ ಕೂಗಿದರು. ಶಿವಕುಮಾರ್ ಅವರ ಭಾವಚಿತ್ರಗಳನ್ನು ಹಿಡಿದು ಡಿಕೆ... ಡಿಕೆ... ಡಿಕೆ... ಎಂದು ಘೋಷಣೆ ಕೂಗಿದರು. ಬೆಂಬಲಿಗರ ವರ್ತನೆಯಿಂದ ಕೋಪಗೊಂಡ ಶಿವಕುಮಾರ್, ‘ನಿಮ್ಮನ್ನೆಲ್ಲ ಪಕ್ಷದಿಂದ ಉಚ್ಚಾಟನೆ ಮಾಡುತ್ತೇವೆ’ ಎಂದು ಗದರಿದರು. ‘ನಿಮಗೆ ಶಿಸ್ತು ಇಲ್ಲ. ನಿಮ್ಮನ್ನೆಲ್ಲ ಪಕ್ಷದಿಂದಲೇ ತೆಗೆಯುತ್ತೇನೆ. ಶಿಸ್ತು ಇರಬೇಕು’ ಎಂದು ಎಚ್ಚರಿಕೆ ನೀಡಿದರು.

ಕಳಪೆ ಗುಣಮಟ್ಟದ ಅಂಕಪಟ್ಟಿ ವಿತರಣೆ ನಿರ್ಧಾರಕ್ಕೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಗದದ ಅಥವಾ ಸುಲಭವಾಗಿ ಹರಿದುಹೋಗಬಹುದಾದ ಅಂಕಪಟ್ಟಿಗಳ ವಿತರಣೆಗೆ ಮುಂದಾಗಿರುವ ಬೆಂಗಳೂರು ವಿಶ್ವವಿದ್ಯಾಲಯದ ನಿರ್ಧಾರಕ್ಕೆ ವಿರೋಧ ವ್ಯಕ್ತವಾಗಿದೆ.

3 ಮತ್ತು 4ನೇ ಸೆಮಿಸ್ಟರ್ ಪರೀಕ್ಷೆ ಬರೆದಿದ್ದ ವಿದ್ಯಾರ್ಥಿಗಳಿಗೆ ಕಾಗದದ ಅಂಕಪಟ್ಟಿ (tearable marks card) ವಿತರಿಸುವ ಚಿಂತನೆ ನಡೆಯುತ್ತಿದೆ. ಈ ವಿದ್ಯಾರ್ಥಿಗಳು ಈಗ 6ನೇ ಸೆಮಿಸ್ಟರ್‌ನಲ್ಲಿ ಓದುತ್ತಿದ್ದಾರೆ.

‘1 ಮತ್ತು 2ನೇ ಸೆಮಿಸ್ಟರ್‌ನಲ್ಲಿ ಒಂದು ರೀತಿಯ ಅಂಕಪಟ್ಟಿಗಳನ್ನು ನೀಡಿದ್ದರು. ಉಳಿದ ಸೆಮಿಸ್ಟರ್‌ಗಳಿಗೆ ಕಳಪೆ ಗುಣಮಟ್ಟದ ಅಂಕಪಟ್ಟಿ ನೀಡಲು ಮುಂದಾಗಿದ್ದಾರೆ. ಭವಿಷ್ಯದಲ್ಲಿ ನಾವು ಕೆಲಸಕ್ಕೆ ಹೋದಾಗ ನಮ್ಮ ಅಂಕಪಟ್ಟಿ ನೋಡಿದವರು ಏನೆಂದುಕೊಳ್ಳುತ್ತಾರೆ?’ ಎಂದು ವಿದ್ಯಾರ್ಥಿಯೊಬ್ಬರು ಪ್ರಶ್ನಿಸಿದರು.

‘ಗುಣಮಟ್ಟದ ಅಂಕಪಟ್ಟಿಗಳ ಖರೀದಿಗೆ ತುಂಬಾ ಹಿಂದೆಯೇ ಟೆಂಡರ್ ಆಹ್ವಾನಿಸಲಾಗಿತ್ತು. ಪರೀಕ್ಷಾ ವಿಭಾಗದ ಅಧಿಕಾರಿಗಳು, ಅತಿ ಕಡಿಮೆ ದರ ನಮೂದಿಸಿದ ಕಂಪನಿಗಳ ವಿವರಗಳೊಂದಿಗೆ ಸಭೆಗೆ ಬಂದಿದ್ದರು. ಆದರೆ, ಕುಲಪತಿಯವರು ಈ ಕುರಿತು ಯಾವುದೇ ನಿರ್ಧಾರ ತೆಗೆದುಕೊಳ್ಳಲಿಲ್ಲ. ಈಗ ವಿದ್ಯಾರ್ಥಿಗಳು ತೊಂದರೆ ಅನುಭವಿಸುವಂತಾಗಿದೆ’ ಸಿಂಡಿಕೇಟ್ ಸದಸ್ಯ ಉದಯ್ ಕುಮಾರ್ ದೂರಿದರು.

‘ವಿ.ವಿ ಅನುದಾನ ಆಯೋಗದ ಮಾರ್ಗಸೂಚಿಯ ಪ್ರಕಾರ, ಗುಣಮಟ್ಟದ ಅಂಕಪಟ್ಟಿಗಳನ್ನೇ ನೀಡುವಂತೆ ಸಿಂಡಿಕೇಟ್ ಸಭೆಯಲ್ಲಿ ಒತ್ತಾಯಿಸಲಾಗಿತ್ತು. ಆದರೂ ಈಗ ಕಳಪೆ ಗುಣಮಟ್ಟದ ಅಂಕಪಟ್ಟಿಗಳ ವಿತರಣೆಗೆ ಮುಂದಾಗುವ ಮೂಲಕ ಕುಲಪತಿಯವರು ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಆಟವಾಡುತ್ತಿದ್ದಾರೆ’ ಸಿಂಡಿಕೇಟ್ ಸದಸ್ಯ ಡಾ. ಸುಧಾಕರ್ ಅಸಮಾಧಾನ ವ್ಯಕ್ತಪಡಿಸಿದರು.

‘ಟೆಂಡರ್ ಪ್ರಕ್ರಿಯೆ ನಿಧಾನವಾಗುತ್ತಿದೆ. ಅದಕ್ಕಾಗಿ ನಾವು, 2.50 ಲಕ್ಷದಷ್ಟು ಕಾಗದದ ಅಂಕಪಟ್ಟಿಗಳನ್ನು ಖರೀದಿಸಿದ್ದೇವೆ. ಈಗಾಗಲೇ ಅಂಕಪಟ್ಟಿ ವಿತರಣೆ ವಿಳಂಬವಾಗಿದೆ. ಇನ್ನೂ ವಿಳಂಬವಾದರೆ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ ಎಂಬ ಕಾರಣದಿಂದ ಈ ಅಂಕಪಟ್ಟಿಗಳ ವಿತರಣೆಗೇ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದೇವೆ’ ಎಂದು ಪರೀಕ್ಷಾ ವಿಭಾಗದ ಅಧಿಕಾರಿಯೊಬ್ಬರು ಹೇಳಿದರು. ಪ್ರತಿ ವಿದ್ಯಾರ್ಥಿಯಿಂದ ಅಂಕಪಟ್ಟಿಗಾಗಿ ₹160 ಪಡೆಯಲಾಗಿದೆ. ಆದರೆ, ಈಗ ವಿತರಿಸಲು ಉದ್ದೇಶಿಸಲಾಗಿರುವ ಪ್ರತಿ ಒಂದು ಅಂಕಪಟ್ಟಿಗೆ ವೆಚ್ಚ ₹2 ಮಾತ್ರ!

‘ಮರು ಟೆಂಡರ್ ಕರೆಯಲಾಗಿದೆ’

‘ಮೊದಲು ಟೆಂಡರ್ ಕರೆದಾಗ, ಅಂಕಪಟ್ಟಿಗಳ ಖರೀದಿ ವೆಚ್ಚದಲ್ಲಿ ₹1.5 ಕೋಟಿಯವರೆಗೆ ವ್ಯತ್ಯಾಸ ಬರುತ್ತಿತ್ತು. ಗುಣಮಟ್ಟದ ಅಂಕಪಟ್ಟಿ ಒಂದಕ್ಕೆ ಕಂಪನಿಯೊಂದು ₹43 ನಮೂದಿಸಿ ಅರ್ಜಿ ಸಲ್ಲಿಸಿತ್ತು. ಆದರೆ, ಇದೇ ಅಂಕಪಟ್ಟಿಗಳನ್ನು ಬೇರೆ ವಿಶ್ವವಿದ್ಯಾಲಯಗಳಿಗೆ ₹36ರಂತೆ ನೀಡಲಾಗಿದೆ. ಪ್ರತಿ ಅಂಕಪಟ್ಟಿಗೆ ₹7 ವ್ಯತ್ಯಾಸವಾದರೆ, 10 ಲಕ್ಷ ಅಂಕಪಟ್ಟಿಗಳಿಗೆ ₹1.5 ಕೋಟಿಗೂ ಹೆಚ್ಚು ನೀಡಬೇಕಾಗುತ್ತಿತ್ತು. ನನ್ನ ವೃತ್ತಿ ಜೀವನದ ಕೊನೆಯ ವರ್ಷದಲ್ಲಿ ಯಾವುದೇ ಹಗರಣದಲ್ಲಿ ಸಿಲುಕಿಕೊಳ್ಳಲು ನನಗೆ ಇಷ್ಟವಿಲ್ಲ. ಅದಕ್ಕೆ ಆ ಟೆಂಡರ್ ರದ್ದು ಮಾಡಿದ್ದೇನೆ’ ಎಂದು ಕುಲಪತಿ ಪ್ರೊ. ಕೆ.ಆರ್. ವೇಣುಗೋಪಾಲ ‘ಪ್ರಜಾವಾಣಿ’ಗೆ ತಿಳಿಸಿದರು.

‘ನಿನ್ನೆಯೇ (ಸೋಮವಾರ) ಮರುಟೆಂಡರ್ ಕರೆಯಲಾಗಿದೆ. 20 ದಿನಗಳಲ್ಲಿ ಎಲ್ಲ ಪ್ರಕ್ರಿಯೆ ಪೂರ್ಣಗೊಳಿಸಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಅಂಕಪಟ್ಟಿಗಳನ್ನು ವಿತರಿಸಲಾಗುವುದು’ ಎಂದೂ ಹೇಳಿದರು.

ಬಿಇಎಲ್‌ನಿಂದ ಡ್ರೋನ್ ನಿಗ್ರಹ ವ್ಯವಸ್ಥೆ ಪೂರೈಕೆ

ನವದೆಹಲಿ: ಭಾರತೀಯ ಸೇನೆ, ನೌಕಾ ಪಡೆ ಹಾಗೂ ವಾಯುಪಡೆಗಾಗಿ ಬೆಂಗಳೂರಿನ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಸ್ವದೇಶಿಯಾಗಿ ಅಭಿವೃದ್ಧಿಪಡಿಸಿರುವ ಡ್ರೋನ್ ನಿಗ್ರಹ ವ್ಯವಸ್ಥೆಯನ್ನು ತಯಾರಿಸಿಕೊಡಲಿದೆ.

ನೌಕಾಪಡೆಯ ಡ್ರೋನ್ ನಿಗ್ರಹ ವ್ಯವಸ್ಥೆಯ (ಎನ್‌ಎಡಿಎಸ್) ಪೂರೈಕೆಗಾಗಿ ನೌಕಾಪಡೆಯು ಮಂಗಳವಾರ ಬಿಇಎಲ್ ಜೊತೆ ಒಪ್ಪಂದಕ್ಕೆ ಸಹಿ ಹಾಕಿದೆ. ಭಾರತೀಯ ಸೇನೆ ಮತ್ತು ವಾಯುಪಡೆ ಕೂಡ ಇದೇ ರೀತಿ ಒಪ್ಪಂದಕ್ಕೆ ಸಹಿಹಾಕಲಿವೆ. ಈ ತಂತ್ರಜ್ಞಾನವನ್ನು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಅಭಿವೃದ್ಧಿಪಡಿಸಿದೆ. ಎನ್‌ಎಡಿಎಸ್ ಲೇಸರ್ ಆಧರಿತ ತಂತ್ರಜ್ಞಾನದ ಮೂಲಕ ಸೂಕ್ಷ್ಮ ಡ್ರೋನ್‌ಗಳನ್ನು ಕೂಡ ಪತ್ತೆ ಹಚ್ಚಿ ನಾಶಪಡಿಸುವ ಸಾಮರ್ಥ್ಯ ಹೊಂದಿದೆ ಎಂದು ರಕ್ಷಣಾ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ. ಈ ವರ್ಷದ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಮೊದಲ ಬಾರಿಗೆ ಈ ತಂತ್ರಜ್ಞಾನವನ್ನು ಬಳಸಿಕೊಳ್ಳಲಾಗಿತ್ತು.

ಕರ್ನಾಟಕ ಸರ್ಕಾರ

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್

ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ, ಬೆಂಗಳೂರು–560009

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ.05/2021–22 ದಿನಾಂಕ: 30.08.2021

ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ನ್ನು ಒಂದನೇ ದರ್ಜೆ ಗುತ್ತಿಗೆದಾರರಿಂದ 2515–00–196–1–22–300 ಅನುದಾನದಡಿ ಅನುಮೋದನೆಯಾದ ಕಾಮಗಾರಿಗಳಿಗೆ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ ಇವರು ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಗೆ ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 01.10.2021 ಸಂಜೆ 4.00 ಗಂಟೆಯವರೆಗೆ** ನಿಗಧಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ವಿವರಗಳನ್ನು **www.eproc.karnataka.gov.in** ವೆಬ್ ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಬೆಂಗಳೂರು ಗ್ರಾಮಾಂತರ, ಬೆಂಗಳೂರು.

ವಾಸಾಸಂಇ/ಉನಿಕ/ಬೆಂಗ್ರಾಜಿ/ಶಿರಡಿ ಸಾಯಿ/191/2021–22

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಥಾ ಸ್ಪರ್ಧೆಗೆ ಪ್ರವೇಶ ಆಹ್ವಾನ

ಬೆಂಗಳೂರು: ಉತ್ಥಾನ ಮಾಸ ಪತ್ರಿಕೆಯು ರಾಜ್ಯಮಟ್ಟದ ವಾರ್ಷಿಕ ಕಥಾ ಸ್ಪರ್ಧೆ ಆಯೋಜಿಸಿದ್ದು, ಇದಕ್ಕಾಗಿ ಕಥೆಗಳನ್ನು ಆಹ್ವಾನಿಸಿದೆ.

‘ಒಬ್ಬರು ಒಂದು ಕಥೆಯನ್ನಷ್ಟೇ ಕಳುಹಿಸಬಹುದು. ಸ್ವರಚಿತವಾದ ಆ ಕಥೆಯು 3,000 ಪದಗಳ ಮಿತಿಯಲ್ಲಿರಬೇಕು. ಅನುವಾದಿತ ಕಥೆಗಳಿಗೆ ಅವಕಾಶವಿಲ್ಲ. ಪರಿಶೀಲನೆಗಾಗಿ ಯಾವುದೇ ಪತ್ರಿಕೆ, ಸಂಸ್ಥೆಗೆ ಅದನ್ನು ಕಳುಹಿಸಿರಬಾರದು. ಸಾಮಾಜಿಕ ಜಾಲತಾಣಗಳಲ್ಲಿಯೂ ಪ್ರಕಟಗೊಂಡಿರಬಾರದು’ ಎಂದು ರಾಷ್ಟ್ರೋತ್ಥಾನ ಪರಿಷತ್‌ನ ಪ್ರಧಾನ ಕಾರ್ಯದರ್ಶಿ ನಾ.ದಿನೇಶ್ ಹೆಗ್ಡೆ ತಿಳಿಸಿದ್ದಾರೆ.

‘ಕಾಗದದ ಒಂದು ಬದಿಯಲ್ಲಿ ಅಂದವಾಗಿ ಹಾಗೂ ಸ್ಪಷ್ಟವಾಗಿ ಕಥೆಯನ್ನು ಬರೆದು ಅದನ್ನು ಅಂಚೆ ಮೂಲಕ ಕಳುಹಿಸಬಹುದು. ನುಡಿ, ಬರಹ, ಯೂನಿಕೋಡ್ ತಂತ್ರಾಂಶಗಳಲ್ಲಿ ಸಿದ್ಧಪಡಿಸುವವರು utthanakathaspardhe@gmail.com ಗೆ ಇ-ಮೇಲ್ ಕೂಡ ಮಾಡಬಹುದು’ ಎಂದಿದ್ದಾರೆ.

ಲೇಖಕರು ತಮ್ಮ ಹೆಸರು, ವಿಳಾಸ ಹಾಗೂ ಇತರ ವಿವರಗಳನ್ನು ಪ್ರತ್ಯೇಕ ಪುಟದಲ್ಲಿ ಬರೆದಿರಬೇಕು. ಅದರ ಜೊತೆಗೆ ಭಾವಚಿತ್ರವೂ ಇರಬೇಕು. ಪ್ರವೇಶ ಕಳುಹಿಸಲು ಅಕ್ಟೋಬರ್ 31 ಕೊನೆಯ ದಿನ.

ಸಂಪಾದಕರು, ಉತ್ಥಾನ ವಾರ್ಷಿಕ ಕಥಾ ಸ್ಪರ್ಧೆ–2021, ಕೇಶವ ಶಿಲ್ಪ, ಕೆಂಪೇಗೌಡನಗರ, ಬೆಂಗಳೂರು–560004 ಈ ವಿಳಾಸಕ್ಕೆ ಅಂಚೆಯ ಮೂಲಕ ಕಥೆಗಳನ್ನು ಕಳುಹಿಸಬಹುದು. ವಿಜೇತರಿಗೆ ₹15 ಸಾವಿರ ಬಹುಮಾನ ಕೊಡಲಾಗುತ್ತದೆ. ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆಯುವವರಿಗೆ ಕ್ರಮವಾಗಿ ₹12 ಸಾವಿರ ಹಾಗೂ ₹10 ಸಾವಿರ ಬಹುಮಾನ ಸಿಗಲಿದೆ. ಐದು ಮಂದಿಗೆ ತಲಾ ₹2 ಸಾವಿರ ವಿಶೇಷ ಬಹುಮಾನ ನೀಡಲಾಗುತ್ತದೆ.

ಸಾರ್ವಜನಿಕ ಸ್ಥಳಗಳಲ್ಲಿ ಜನಸಂದಣಿ: ಕಳವಳ

ಮುಂಬೈ (ಪಿಟಿಐ): ನಗರದ ಸಾರ್ವಜನಿಕ ಸ್ಥಳಗಳಲ್ಲಿ ಜನಸಂದಣಿ ಹೆಚ್ಚುತ್ತಿರುವ ಬಗ್ಗೆ ಬಾಂಬೆ ಹೈಕೋರ್ಟ್ ಮಂಗಳವಾರ ಕಳವಳ ವ್ಯಕ್ತಪಡಿಸಿದೆ.

‘ಸಾರ್ವಜನಿಕ ಸ್ಥಳಗಳಲ್ಲಿ ಜನರು ಸೇರುವುದನ್ನು ನಿಯಂತ್ರಿಸದಿದ್ದರೆ ಇಲ್ಲವೇ ನಿರ್ಬಂಧ ಹೇರದಿದ್ದರೆ, ಕೋವಿಡ್ ಎರಡನೇ ಅಲೆ ವೇಳೆ ವರ್ಷದ ಆರಂಭದಲ್ಲಿ ಕಂಡುಬಂದಂಥ ಪರಿಸ್ಥಿತಿಯನ್ನೇ ನಗರ ಎದುರಿಸಬೇಕಾಗುತ್ತದೆ’ ಎಂದೂ ಹೈಕೋರ್ಟ್ ಎಚ್ಚರಿಸಿದೆ. ಮುಖ್ಯನ್ಯಾಯಮೂರ್ತಿ ದೀಪಂಕರ್ ದತ್ತಾ, ನ್ಯಾಯಮೂರ್ತಿಗಳಾದ ಎ.ಎ.ಸೈಯದ್, ಕೆ.ಕೆ.ತಾತೇಡ್ ಹಾಗೂ ಪಿ.ಬಿ.ವರಾಳೆ ಅವರಿದ್ದ ನ್ಯಾಯಪೀಠ ಈ ಎಚ್ಚರಿಕೆ ನೀಡಿತು. ‘ಹೈಕೋರ್ಟ್‌ನ ಆಡಳಿತಾತ್ಮಕ ಸಮಿತಿ, ವಕೀಲರು, ತಜ್ಞವೈದ್ಯರ ಸಭೆ ಸೋಮವಾರ ನಡೆಯಿತು.

‘ಕಲಾಪದಲ್ಲಿ ಸಚಿವರ ಕಡ್ಡಾಯ ಹಾಜರಾತಿ: ಕಾಗೇರಿ ಪತ್ರ

ಬೆಂಗಳೂರು: ಸೆ.13 ರಿಂದ ನಡೆಯುವ ವಿಧಾನಸಭೆ ಅಧಿವೇಶನದ ಕಲಾಪಗಳಲ್ಲಿ ಎಲ್ಲ ಸಚಿವರೂ ಹಾಜರಿರಬೇಕು ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಮುಖ್ಯಮಂತ್ರಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರಿಗೆ ಪ್ರತ್ಯೇಕ ಪತ್ರ ಬರೆದಿದ್ದಾರೆ.

ಈ ಸಂಬಂಧ ಎಲ್ಲ ಸಚಿವರಿಗೂ ಅಗತ್ಯ ಸೂಚನೆಗಳನ್ನು ನೀಡಬೇಕು. ತಾವು ಪ್ರತಿನಿಧಿಸುವ ವಿಧಾನಸಭಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸಚಿವರು ಕಲಾಪದಲ್ಲಿ ಹಾಜರಾಗುವ ಸಂಬಂಧ ವಿನಾಯಿತಿ ಕೋರುವುದು ಸಾಮಾನ್ಯವಾಗಿದೆ’ ಎಂದು ಬಸವರಾಜ ಬೊಮ್ಮಾಯಿ ಮತ್ತು ಜೆ.ಸಿ.ಮಾಧುಸ್ವಾಮಿ ಅವರಿಗೆ ತಿಳಿಸಿದ್ದಾರೆ.

‘ಸಾರ್ವಜನಿಕ ಮಹತ್ವದ ವಿಚಾರಗಳ ಬಗ್ಗೆ ಸದಸ್ಯರು ಕೇಳುವ ಪ್ರಶ್ನೆಗಳಿಗೆ ಸಂಬಂಧಿತ ಸಚಿವರು ಉತ್ತರ ನೀಡಬೇಕಾಗುತ್ತದೆ. ಹೀಗಾಗಿ ಸಚಿವರು ಚರ್ಚೆಯ ವೇಳೆ ಸದನದಲ್ಲಿ ಗೈರಾಗುವುದು ಸರಿಯಲ್ಲ. ಸಚಿವರ ಅನುಪಸ್ಥಿತಿ, ಆಡಳಿತ ಪಕ್ಷದಿಂದ ಉತ್ತರ ಪಡೆಯುವ ಸದಸ್ಯರ ಅವಕಾಶವನ್ನು ವಂಚಿಸುತ್ತದೆ. ಈ ಹಿನ್ನೆಲೆಯಲ್ಲಿ ಸಚಿವರು ಸದನದಲ್ಲಿ ಹಾಜರಿರುವುದನ್ನು ಖಾತ್ರಿಪಡಿಸಿಕೊಳ್ಳಬೇಕು’ ಎಂದು ಅವರು ಕಾಗೇರಿ ಹೇಳಿದ್ದಾರೆ.

ಇದೇ ಸ್ವರೂಪದ ಪತ್ರವನ್ನು ಎಲ್ಲ ಸಚಿವರಿಗೂ ವ್ಯಕ್ತಿಗತವಾಗಿ ಕಳುಹಿಸಿರುವ ಸಭಾಧ್ಯಕ್ಷರು, ಸದನದ ಕಾರ್ಯಕಲಾಪದಲ್ಲಿ ಪಾಲ್ಗೊಳ್ಳುವಂತೆ ಮತ್ತು ತಮ್ಮ ಕ್ಷೇತ್ರಗಳ ಅಧಿಕೃತ ಕಾರ್ಯಕ್ರಮಗಳನ್ನು ಉಲ್ಲೇಖಿಸಿ ಕಲಾಪದಿಂದ ವಿನಾಯಿತಿ ಕೋರದಂತೆಯೂ ಸೂಚಿಸಿದ್ದಾರೆ.

ಸಂಚಾರ ದಟ್ಟಣೆ: ಕಬ್ಬನ್ ರಸ್ತೆಯಿಂದ ರಾಜಭವನದತ್ತ ಸಾಗುವವರಿಗೆ ತೊಂದರೆ

‘ಮೆಟ್ರೊ ಪ್ರೊಜೆಕ್ಷನ್’: ಸವಾರರಿಗೆ ಸಂಕಟ

• ಜಿ.ಶಿವಕುಮಾರ

ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣದ ಮಿನ್ಸ್ ಸ್ಕ್ವೇರ್ ಬಳಿಯ ಮೆಟ್ರೊ ಪ್ರೊಜೆಕ್ಷನ್ ಪಕ್ಕದ ರಸ್ತೆಯಲ್ಲಿ ವಾಹನಗಳು ಸಾಗುತ್ತಿರುವುದು – ಪ್ರಜಾವಾಣಿ ಚಿತ್ರ

ಬೆಂಗಳೂರು: ಸರಾಗ ವಾಹನ ಸಂಚಾರಕ್ಕೆ ಅನುವಾಗಲಿ ಎಂಬ ಉದ್ದೇಶದಿಂದ ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣದ ಸನಿಹವಿರುವ ‘ಮಿನ್ಸ್ ಸ್ಕ್ವೇರ್’ ವೃತ್ತದ ಬಳಿ ‘ಟ್ರಾಫಿಕ್ ಐಲ್ಯಾಂಡ್’ ನಿರ್ಮಿಸಲಾಗಿದೆ. ಅದಕ್ಕೆ ಹೊಂದಿಕೊಂಡಿರುವ ‘ಮೆಟ್ರೊ ಪ್ರೊಜೆಕ್ಷನ್’ಗಳಿಂದಾಗಿಯೇ ಈಗ ಸಂಚಾರ ದಟ್ಟಣೆ ಉಂಟಾಗುತ್ತಿದೆ. ಇದು ವಾಹನ ಸವಾರರ ಸಂಕಟವನ್ನೂ ಹೆಚ್ಚಿಸಿದೆ.

ಎರಡು ಮೆಟ್ರೊ ‘ಪ್ರೊಜೆಕ್ಷನ್’ಗಳ ಪೈಕಿ ಒಂದು ಪಾದಚಾರಿ ಮಾರ್ಗದಲ್ಲಿದೆ. ಮತ್ತೊಂದು ರಸ್ತೆಯ ಮಧ್ಯಭಾಗಕ್ಕೆ ಚಾಚಿಕೊಂಡಿದೆ. ಇದರಿಂದಾಗಿ ಕಬ್ಬನ್ ರಸ್ತೆಯ ಕಡೆಯಿಂದ ರಾಜಭವನದತ್ತ ಸಾಗುವ ವಾಹನ ಸವಾರರು ಕಿರಿಕಿರಿ ಅನುಭವಿಸುವಂತಾಗಿದೆ. ಕ್ವೀನ್ಸ್ ರಸ್ತೆಯ ಮೂಲಕ ರಾಜಭವನ ತಲುಪುವವರೂ ಇದೇ ಮಾರ್ಗ ಬಳಸುವುದರಿಂದ ಬೆಳಿಗ್ಗೆ ಹಾಗೂ ಸಂಜೆಯ ವೇಳೆ ಸಂಚಾರ ದಟ್ಟಣೆ ಉಂಟಾಗುತ್ತಿದೆ. ಆಗಾಗ ಸಣ್ಣಪುಟ್ಟ ಅಪಘಾತಗಳೂ ಸಂಭವಿಸುತ್ತಿವೆ. ಇದು ಸಾರ್ವಜನಿಕರ ಆಕ್ರೋಶಕ್ಕೂ ಕಾರಣವಾಗಿದೆ.

‘ಸಿಗ್ನಲ್ ಬಿಟ್ಟ ಬಳಿಕ ಕಬ್ಬನ್ ರಸ್ತೆಯಿಂದ ಬರುವ ಕೆಲ ವಾಹನಗಳು ಸರಿಯಾದ ಪಥದಲ್ಲಿ ಸಾಗುತ್ತವೆ. ಆ ವಾಹನಗಳ ಹಿಂದೆ ಬರುವವರು ಬಲಬದಿಯಿಂದ ನುಗ್ಗಲು ಪ್ರಯತ್ನಿಸುತ್ತಾರೆ. ಹಾಗೆ ಹೋದವರಿಗೆ ಮೆಟ್ರೊ ಪ್ರೊಜೆಕ್ಷನ್ ಅಡ್ಡಿಯಾಗುತ್ತದೆ. ಆಗ ಅನಿವಾರ್ಯವಾಗಿ ಅವರು ತಮ್ಮ ಮುಂದಿರುವ ವಾಹನಗಳು ಸಾಗುವವರೆಗೂ ಅಲ್ಲೇ ನಿಲ್ಲಬೇಕು. ಇದರಿಂದ ಆದಾಯ ತೆರಿಗೆ ಇಲಾಖೆ ಕಡೆಯಿಂದ ಬರುವ ವಾಹನಗಳ ಸಂಚಾರಕ್ಕೆ ಅಡ್ಡಿಯಾಗುತ್ತದೆ. ಒಂದಷ್ಟು ವಾಹನಗಳು ಹೋಗುವಷ್ಟರಲ್ಲಿ ಸಿಗ್ನಲ್ ಬೀಳುತ್ತದೆ. ದಟ್ಟಣೆಯ ಕಾರಣ ಕೆಲವರಿಗೆ ಸರಿಯಾದ ಸಮಯಕ್ಕೆ ಆಸ್ಪತ್ರೆ, ಕಚೇರಿಗಳಿಗೆ ಹೋಗಲು ಆಗುತ್ತಿಲ್ಲ’ ಎಂದು ಸಿಟಿಜನ್ಸ್ ಫಾರ್ ಸಿಟಿಜನ್ಸ್ (ಸಿ4ಸಿ) ಸಂಘಟನೆಯ ಸಂಸ್ಥಾಪಕ ರಾಜ್‌ಕುಮಾರ್ ದುಗಾರ್ ತಿಳಿಸಿದರು.

ಪ್ರಜಾವಾಣಿ ವಿಶೇಷ

‘ಈ ಪ್ರೊಜೆಕ್ಷನ್ ತೆರವುಗೊಳಿಸುವಂತೆ ಅನೇಕ ಬಾರಿ ಬೆಂಗಳೂರು ಮೆಟ್ರೊ ರೈಲು ನಿಗಮದ (ಬಿಎಂಆರ್‌ಸಿಎಲ್) ಅಧಿಕಾರಿಗಳಿಗೆ ಮನವಿ ಮಾಡಿದ್ದೇವೆ. ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರು ಈ ವರ್ಷದ ಮಾರ್ಚ್‌ನಲ್ಲಿ ಸಭೆ ಕರೆದಿದ್ದಾಗ ಈ ಸಮಸ್ಯೆ ಬಗ್ಗೆ ಗಮನಸೆಳೆಯಲಾಗಿತ್ತು. ಅವರು ಕೂಡ ಈ ಪ್ರೊಜೆಕ್ಷನ್ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದರು. ಸಂಬಂಧಪಟ್ಟವರ ಜೊತೆ ಮಾತನಾಡಿ ಅದನ್ನು ತೆರವುಗೊಳಿಸುವಂತೆ ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ಅವರಿಗೆ ಸೂಚಿಸಿದ್ದರು. ಈ ಸಂಬಂಧ ಕಬ್ಬನ್ ಪಾರ್ಕ್ ಸಂಚಾರ ಠಾಣೆ ಪೊಲೀಸರು ಬಿಎಂಆರ್‌ಸಿಎಲ್‌ಗೆ ಪತ್ರವನ್ನೂ ಬರೆದಿದ್ದಾರೆ. ಹೀಗಿದ್ದರೂ ಸಮಸ್ಯೆಗೆ ಮುಕ್ತಿ ಸಿಕ್ಕಿಲ್ಲ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ಈ ಪ್ರೊಜೆಕ್ಷನ್‌ನಿಂದ ಸರಾಗ ಸಂಚಾರ ವ್ಯವಸ್ಥೆಯ ಆಶಯವೇ ಮರೆಯಾಗುತ್ತಿದೆ. ಸಾರ್ವಜನಿಕರಿಗೂ ಅನಗತ್ಯ ತೊಂದರೆಯಾಗುತ್ತಿದೆ. ಬಿಎಂಆರ್‌ಸಿಎಲ್ ಇನ್ನಾದರೂ ಎಚ್ಚೆತ್ತುಕೊಂಡು ಈ ಸಮಸ್ಯೆ ಪರಿಹಾರ ಸೂಚಿಸಬೇಕು’ ಎಂದು ಮನವಿ ಮಾಡಿದರು.

‘ತಜ್ಞರ ಸಲಹೆ ಪಡೆದು ಸರಿಪಡಿಸುತ್ತೇವೆ’

‘ನಮ್ಮ ಮೆಟ್ರೊ ಜೊತೆಗೆ ಹೈಸ್ಪೀಡ್ ರೈಲು ಕಾರಿಡಾರ್ ನಿರ್ಮಿಸಬೇಕೆಂಬ ಉದ್ದೇಶದಿಂದ ಪಿಲ್ಲರ್‌ಗಳನ್ನು ಹಾಕಲಾಗಿತ್ತು. ಈ ಪೈಕಿ ಒಂದು ಪಿಲ್ಲರ್ ಈ ಪ್ರೊಜೆಕ್ಷನ್‌ಗಳ ಅಡಿಯಲ್ಲಿದೆ. ಅದರಿಂದ ಯಾರಿಗೂ ತೊಂದರೆಯಾಗಬಾರದು ಎಂಬ ಉದ್ದೇಶದಿಂದ ಅಲ್ಲಿ ಜಂಕ್ಷನ್ ನಿರ್ಮಿಸಲಾಗಿದೆ’ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಮ್ ಪರ್ವೇಜ್ ತಿಳಿಸಿದರು.

‘ಸಾರ್ವಜನಿಕರಿಂದ ದೂರುಗಳು ಬರುತ್ತಿರುವುದರಿಂದ ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ಪತ್ರ ಬರೆದಿದ್ದೇವೆ. ತಜ್ಞರ ಅಭಿಪ್ರಾಯವನ್ನೂ ಕೇಳಿದ್ದೇವೆ. ರಸ್ತೆಗೆ ಸಮನಾಂತರವಾಗಿ ಪ್ರೊಜೆಕ್ಷನ್ ತಗ್ಗಿಸುವುದರಿಂದ ಯಾವುದೇ ತೊಂದರೆ ಇಲ್ಲ ಎಂದು ಅವರು ಸಲಹೆ ನೀಡಿದರೆ ಅದನ್ನು ಸರಿಪಡಿಸುತ್ತೇವೆ’ ಎಂದು ಹೇಳಿದರು.

बिएಂಆರ್‌ಸಿಎಲ್–ಡಬ್ಲ್ಯುಆರ್‌ಐ ಒಪ್ಪಂದ

ಸಂಚಾರ ಆಧಾರಿತ ಅಭಿವೃದ್ಧಿಗೆ ಆದ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮ ಮೆಟ್ರೊ’ ಎರಡನೇ ಹಂತದಲ್ಲಿನ 2ಎ ಮತ್ತು 2ಬಿ ಮಾರ್ಗಗಳ ಸಂಚಾರ ಆಧಾರಿತ ಅಭಿವೃದ್ಧಿ (ಟಿಒಡಿ) ಹಾಗೂ ಬಹು ವಿಧಾನಗಳ ಏಕೀಕರಣ (ಎಂಎಂಐ) ವ್ಯವಸ್ಥೆ ಅನುಷ್ಠಾನಗೊಳಿಸಲು ಭಾರತೀಯ ‘ವಿಶ್ವ ಸಂಪನ್ಮೂಲಗಳ ಸಂಸ್ಥೆ’ಯೊಂದಿಗೆ (ಡಬ್ಲುಆರ್‌ಐ ಇಂಡಿಯಾ)ಯೊಂದಿಗೆ ಬೆಂಗಳೂರು ಮೆಟ್ರೊ ರೈಲು ನಿಗಮ ಕೈಜೋಡಿಸಿದೆ.

ಸಿಲ್ಕ್ ಬೋರ್ಡ್-ಕೆ.ಆರ್. ಪುರ (2ಎ) ಹಾಗೂ ಕೆ.ಆರ್. ಪುರ-ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ (2ಬಿ) ನಡುವೆ ಮೆಟ್ರೊ ಮಾರ್ಗಗಳ ನಿರ್ಮಾಣಕ್ಕೆ ಏಷ್ಯಾ ಅಭಿವೃದ್ಧಿ ಬ್ಯಾಂಕ್ (ಎಡಿಬಿ), ಬಿಎಂಆರ್‌ಸಿಎಲ್‌ಗೆ ಆರ್ಥಿಕ ನೆರವು ನೀಡಲಿದೆ. ಈ ನೆರವು ಪಡೆಯಲು ಡಬ್ಲುಆರ್‌ಐ ಇಂಡಿಯಾ ಜತೆಗೆ ನಿಗಮವು ಉದ್ದೇಶಿತ ಮಾರ್ಗದ ಮೆಟ್ರೊ ಕಾರಿಡಾರ್‌ಗಳ ಎರಡೂ ಬದಿಯಲ್ಲಿ ಎರಡು ಕಿ.ಮೀ. ವ್ಯಾಪ್ತಿಯಲ್ಲಿ ಟಿಒಡಿ ಮತ್ತು ಎಂಎಂಐ ಅನುಷ್ಠಾನಗೊಳಿಸಲಿದೆ.

ಇದೇ 26, 27 ಮತ್ತು 31ರಂದು ನಗರದಲ್ಲಿ ಟಿಒಡಿ ಮತ್ತು ಎಂಎಂಐ ಒದಗಿಸುವ ಸಂಬಂಧ ಉನ್ನತ ಮಟ್ಟದ ಸಭೆ ಹಾಗೂ ವಿಚಾರ ಸಂಕಿರಣ ಆಯೋಜಿಸಲಾಗಿತ್ತು.

ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ಮಾತನಾಡಿ, ‘ಡಬ್ಲುಆರ್‌ಐ ಇಂಡಿಯಾ ಜತೆ 2ಎ ಮತ್ತು 2ಬಿ ಮಾರ್ಗದುದ್ದಕ್ಕೂ ಟಿಒಡಿ ಮತ್ತು ಎಂಎಂಐ ಅನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಲು ನಿಗಮವು ಉತ್ಸುಕವಾಗಿದೆ. ವಿಶ್ವದ ಅತ್ಯುತ್ತಮ ಟಿಒಡಿ ಅನುಷ್ಠಾನಗಳನ್ನು ಮಾದರಿಯಾಗಿ ಇಟ್ಟುಕೊಂಡು ಈ ಯೋಜನೆಯನ್ನು ಬೆಂಗಳೂರಿನಲ್ಲಿ ಜಾರಿಗೊಳಿಸಲಾಗುವುದು’ ಎಂದರು.

ಡಬ್ಲುಆರ್‌ಐ ಇಂಡಿಯಾ ನಿರ್ದೇಶಕ ಜಯ ದಿಂಡಾವ್, ಟಿಒಡಿ ಯಶಸ್ವಿ ಅನುಷ್ಠಾನಕ್ಕೆ ಅದರಲ್ಲೂ ವಿಶೇಷವಾಗಿ ಭೂಮೌಲ್ಯ, ಸಂಚಾರ ಮತ್ತಿತರ ವಿಚಾರಗಳಲ್ಲಿ ಸಂಸ್ಥೆಯು ಅಗತ್ಯ ತಾಂತ್ರಿಕ ಸಲಹೆ ಮತ್ತು ಸಹಕಾರವನ್ನು ನೀಡಲಿದೆ ಎಂದು ಭರವಸೆ ನೀಡಿದರು.

ಸ್ಥಾಪನೆಗೊಳ್ಳದ ಐಸಿಯು: ₹37 ಕೋಟಿ ವೆಚ್ಚ ವ್ಯರ್ಥ!

₹1.32 ಕೋಟಿ ಮೌಲ್ಯದ ಉಪಕರಣ ನಿಷ್ಕ್ರಿಯ • ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯಿಂದ ಮಾಹಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ವಿವಿಧ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ತೀವ್ರ ನಿಗಾ ಘಟಕಗಳ (ಐಸಿಯು) ಸ್ಥಾಪನೆಗೆ ಟೆಂಡರ್ ಕರೆದು ಉಪಕರಣಗಳನ್ನು ಸರಿಯಾಗಿ ಪೂರೈಸದೇ ಮತ್ತು ಐಸಿಯುಗಳನ್ನು ಆರಂಭಿಸದ ಕಾರಣ ಅದಕ್ಕಾಗಿ ಮಾಡಿದ ₹37.46 ಕೋಟಿ ವೆಚ್ಚವು ವ್ಯರ್ಥವಾಗಿದೆ ಎಂದು ವಿಧಾನಮಂಡಲದ ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿ ಹೇಳಿದೆ.

ಸಮಿತಿ ಅಧ್ಯಕ್ಷ ರಾಮಲಿಂಗಾರೆಡ್ಡಿ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಸಭೆಯಲ್ಲಿ 2016 ರಲ್ಲಿ ಉಪಕರಣಗಳ ಖರೀದಿಯ ಬಗ್ಗೆ ಚರ್ಚೆ ನಡೆಯಿತು. ಅಧಿಕಾರಿಗಳಿಂದ ಮಾಹಿತಿ ಪಡೆಯಲಾಯಿತು ಎಂದು ಮೂಲಗಳು ಹೇಳಿವೆ.

ಆರಂಭದಲ್ಲಿ ₹20.78 ಕೋಟಿ ವೆಚ್ಚದಲ್ಲಿ 21 ಜಿಲ್ಲಾ ಮತ್ತು 25 ತಾಲ್ಲೂಕುಗಳ ಆಸ್ಪತ್ರೆಗಳಿಗೆ ಐಸಿಯು ಉಪಕರಣಗಳನ್ನು ಖರೀದಿಸಲು 2016 ರಲ್ಲಿ ಟೆಂಡರ್ ಕರೆಯಲಾಗಿತ್ತು. ಆ ಬಳಿಕ ಟೆಂಡರ್ ಅನ್ನು ತಿದ್ದುಪಡಿ ಮಾಡಿ, ₹37.46 ಕೋಟಿ ಅಂದಾಜು ವೆಚ್ಚದಲ್ಲಿ 21 ಜಿಲ್ಲಾ ಆಸ್ಪತ್ರೆಗಳು ಮತ್ತು 146 ತಾಲ್ಲೂಕು ಆಸ್ಪತ್ರೆಗಳಿಗೆ ಉಪಕರಣ ಖರೀದಿ ಮಾಡಲು ತೀರ್ಮಾನಿಸಲಾಗಿತ್ತು.

ಎಲ್ಲ ತಾಲ್ಲೂಕು ಆಸ್ಪತ್ರೆಗಳಿಗೆ ನಾಲ್ಕು ಐಸಿಯು ಮಂಚಗಳು, ನಾಲ್ಕು ಮಲ್ಟಿಪ್ಯಾರಾ ಮಾನಿಟರ್‌ಗಳು ಮತ್ತು ಎರಡು ವೆಂಟಿಲೇಟರ್‌ಗಳ ಬದಲಿಗೆ ತಲಾ ಮೂರು ಮಂಚಗಳು, ಎರಡು ಮಾನಿಟರ್‌ಗಳು ಮತ್ತು ಒಂದು ವೆಂಟಿಲೇಟರ್‌ಗಳನ್ನು ಖರೀದಿಸಲಾಗಿತ್ತು.

ನಂತರದ ಹಂತದಲ್ಲಿ ಗುರುತಿಸಿದ 121 ಹೆಚ್ಚುವರಿ ತಾಲ್ಲೂಕು ಆಸ್ಪತ್ರೆಗಳಿಗೆ 100 ಎಂ.ಎ ಪೋರ್ಟಬಲ್ ಎಕ್ಸ್‌ರೇ ಯಂತ್ರಗಳು, ಹೈಫ್ಲೋ ನಾಸಲ್ ಕ್ಯಾನುಲಾ (ಸಿ-ಪಾಪ್) ಉಪಕರಣ, ಇನ್‌ಫ್ಯೂಷನ್ ಪಂಪ್ ಮತ್ತು ಎಮರ್ಜೆನ್ಸಿ ಟ್ರಾಲಿಯನ್ನು ಇಂಡಿಯನ್ ಸೊಸೈಟಿ ಆಫ್ ಕ್ರಿಟಿಕಲ್ ಕೇರ್ ಮೆಡಿಸಿನ್‌ನಿಂದ ಹೊರಡಿಸಲಾಗದ ಮಾರ್ಗಸೂಚಿಯಲ್ಲಿ ಕಡ್ಡಾಯಗೊಳಿಸಿದ್ದರೂ ಸರಬರಾಜು ಮಾಡಲಿಲ್ಲ ಎಂದು ಸಭೆಗೆ ಅಧಿಕಾರಿಗಳು ತಿಳಿಸಿದರು.

ಐಸಿಯು ಸ್ಥಾಪನೆಗೆ ಗುರುತಿಸಲಾಗಿದ್ದ ಒಟ್ಟು 21 ಜಿಲ್ಲಾ ಆಸ್ಪತ್ರೆಗಳಲ್ಲಿ ಐಸಿಯು ಮಂಚಗಳು, ಮಲ್ಟಿಪಾರಾ ಮಾನಿಟರ್‌ಗಳು, ವೆಂಟಿಲೇಟರ್‌ಗಳು, ಡಿಫಿಬ್ರಿಲೇಟರ್‌ಗಳು, ಇಸಿಜಿ ಯಂತ್ರ, ಸಕ್ಷನ್ ಆಪರೇಟಸ್ ಮತ್ತು ಕ್ರ್ಯಾಶ್ ಕಾರ್ಟ್ಸ್‌ಗಳನ್ನು ಸರಬರಾಜು ಮಾಡದ ಕಾರಣ ಐಸಿಯುಗಳನ್ನು ಸ್ಥಾಪಿಸಿರಲಿಲ್ಲ ಎಂದು ಸಭೆಗೆ ಮಾಹಿತಿ ನೀಡಲಾಯಿತು.

ಬಂಗಾರಪೇಟೆ, ಚನ್ನರಾಯಪಟ್ಟಣ, ಮುಳಬಾಗಿಲು, ನಂಜನಗೂಡು ಮತ್ತು ಧಾರವಾಡ ಜಿಲ್ಲಾ ಆಸ್ಪತ್ರೆಗಳಲ್ಲಿ ಪರಿಶೀಲನೆ ನಡೆಸಿದಾಗ ಅಲ್ಲಿ ಸ್ಥಾಪಿಸಲಾಗಿದ್ದ ಐಸಿಯುಗಳು ಕಾರ್ಯ ನಿರ್ವಹಿಸುತ್ತಿರಲಿಲ್ಲ. ಇವೆಲ್ಲ ಕಾರಣಗಳಿಂದ ಸರ್ಕಾರ ಭರಿಸಿದ ವೆಚ್ಚವು ವ್ಯರ್ಥವಾಗಿದೆ ಎಂದು ಮಹಾಲೇಖಪಾಲರೂ ಆಕ್ಷೇಪ ವ್ಯಕ್ತಪಡಿಸಿದ್ದನ್ನು ಸಭೆಗೆ ತಿಳಿಸಲಾಯಿತು.

ಆರು ಆಸ್ಪತ್ರೆಗಳಲ್ಲಿ ₹1.32 ಕೋಟಿ ಮೌಲ್ಯದ ರಕ್ತದ ವಿಭಜಕ ಘಟಕ, ಟೆಲಿಮೆಡಿಸಿನ್ ಉಪಕರಣಗಳು, ಅಲ್ಟ್ರಾ ಸೌಂಡ್ ಸ್ಕ್ಯಾನರ್‌ಗಳು ಮುಂತಾದ ಸಾಧನಗಳಿಗೆ ನಿಷ್ಕ್ರಿಯವಾಗಿವೆ ಎಂದು ಸಭೆಯ ಗಮನಕ್ಕೆ ತರಲಾಯಿತು.

ಕೇರಳದಿಂದ ಬರುವವರಿಗೆ ಪರೀಕ್ಷೆ–ಕ್ವಾರಂಟೈನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇರಳದಿಂದ ನಗರಕ್ಕೆ ಬರುವ ವಿದ್ಯಾರ್ಥಿಗಳು ಮತ್ತು ಉದ್ಯೋಗಿಗಳು ಕಡ್ಡಾಯವಾಗಿ ಆರ್‌ಟಿ ಪಿಸಿಆರ್ ನೆಗೆಟಿವ್ ವರದಿ ತಂದಿರಬೇಕು. ಇಲ್ಲದಿದ್ದರೆ, ಸಂಬಂಧಪಟ್ಟ ಕಾಲೇಜು ಅಥವಾ ಕಂಪನಿಗಳು ಅವರನ್ನು 7 ದಿನ ಕ್ವಾರಂಟೈನ್‌ನಲ್ಲಿ ಇರಿಸಿ, ನಂತರ ಕೋವಿಡ್ ಪರೀಕ್ಷೆ ಮಾಡಿಸಬೇಕು ಎಂದು ಬಿಬಿಎಂಪಿ ಸೂಚನೆ ನೀಡಿದೆ.

ಕಾಲೇಜುಗಳು ವಸತಿ ನಿಲಯಗಳಲ್ಲಿ ಪ್ರತ್ಯೇಕ ಪ್ರದೇಶವನ್ನು ಸಾಂಸ್ಥಿಕ ಕ್ವಾರಂಟೈನ್‌ಗೆ ಮೀಸಲಿಡಬೇಕು. ಕ್ವಾರಂಟೈನ್‌ನಲ್ಲಿರುವ ವಿದ್ಯಾರ್ಥಿಗಳ ದೈನಂದಿನ ಅವಶ್ಯಕತೆಗಳ ಪೂರೈಕೆಗೂ ಕಾಲೇಜುಗಳು ವ್ಯವಸ್ಥೆ ಮಾಡಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಸೂಚನೆ ನೀಡಿದ್ದಾರೆ.

‘ಬಿಬಿಎಂಪಿ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಉದ್ಯೋಗಿಗಳು, ಕೇರಳದಿಂದ ಬಂದಿದ್ದಲ್ಲಿ ಅಥವಾ ಕಳೆದ 7 ದಿನಗಳಲ್ಲಿ ಕೇರಳಕ್ಕೆ ಭೇಟಿ ನೀಡಿದ್ದಲ್ಲಿ ಅಂತಹ ಉದ್ಯೋಗಿಗಳನ್ನು ಆಯಾ ಸಂಸ್ಥೆಯ ಆಡಳಿತ ಮಂಡಳಿಯವರು ಕ್ವಾರಂಟೈನ್‌ನಲ್ಲಿ ಇಡುವಂತೆ ವ್ಯವಸ್ಥೆ ಮಾಡಬೇಕು ಮತ್ತು ಮಾಹಿತಿಯನ್ನು ಪಾಲಿಕೆಯ ಸ್ಥಳೀಯ ಆರೋಗ್ಯಾಧಿಕಾರಿಗಳಿಗೆ ನೀಡಬೇಕು ಎಂದು ಸೂಚನೆ ನೀಡಲಾಗಿದೆ.

ಕಾರ್ಯಕ್ರಮಗಳಿಗೆ ಅವಕಾಶ: ‘ಮದುವೆ ಅಥವಾ ಕೌಟುಂಬಿಕ ಕಾರ್ಯಕ್ರಮಗಳಿಗೆ ಒಳಾಂಗಣದ ಶೇ 50ರಷ್ಟು ಸಾಮರ್ಥ್ಯದಿಂದ ಗರಿಷ್ಠ 400 ಅತಿಥಿಗಳ ಸಂಖ್ಯೆಗೆ ಮಿತಿಗೊಳಿಸಿ, ಕೋವಿಡ್ ಮಾರ್ಗಸೂಚಿಗಳನ್ನು ಅನುಸರಿಸುವ ಷರತ್ತಿನೊಂದಿಗೆ ಅನುಮತಿ ನೀಡಬೇಕು’ ಎಂದು ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಬೆಂಗಳೂರುನಗರ ಜಿಲ್ಲಾ – ಕೋವಿಡ್ ಅಂಕಿ–ಅಂಶ

12,37,837 ಒಟ್ಟು ಸೋಂಕಿತರು

7,438 ಸಕ್ರಿಯ ಪ್ರಕರಣ	12,14,405 ಗುಣಮುಖ ಆದವರು	15,993 ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	287
ಗುಣಮುಖ	185
ಸಾವು	07

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್: ಚೇತರಿಸಿಕೊಂಡ 104 ಮಂದಿಗೆ ಕ್ಷಯ ರೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್‌ನಿಂದ ಚೇತರಿಸಿಕೊಂಡವರ ಪೈಕಿ 104 ಮಂದಿಯಲ್ಲಿ ಹಾಗೂ ಸಂಪರ್ಕಿತ 51 ಮಂದಿಯಲ್ಲಿ ಕ್ಷಯ ರೋಗ ಪತ್ತೆಯಾಗಿದೆ.

‘ಕೊರೊನಾ ಸೋಂಕಿತರು ಗುಣಮುಖರಾದ ಬಳಿಕ ಕ್ಷಯ ರೋಗ ಕಾಣಿಸಿಕೊಳ್ಳುತ್ತಿದೆ’ ಎಂಬ ವದಂತಿಗಳು ಹರಿದಾಡಿದ್ದವು. ಹೀಗಾಗಿ, ರಾಜ್ಯದಾದ್ಯಂತ ಆರೋಗ್ಯ ಇಲಾಖೆಯು ಆ.16ರಿಂದ ಆ.31ರವರೆಗೆ ಕ್ಷಯ ರೋಗ ತಪಾಸಣೆ ಅಭಿಯಾನ ಹಮ್ಮಿಕೊಂಡಿತ್ತು. 15 ದಿನಗಳ ಅವಧಿಯಲ್ಲಿ ಕೋವಿಡ್‌ನಿಂದ ಚೇತರಿಸಿಕೊಂಡವರಿಗೆ ತಪಾಸಣೆ ನಡೆಸಿ, ಲಕ್ಷಣಗಳು ಗೋಚರಿಸಿದವರಿಗೆ ಪರೀಕ್ಷೆ ನಡೆಸಲಾಗಿದೆ.

‘ಕೋವಿಡ್ ಮತ್ತು ಕ್ಷಯರೋಗವು ಕೆಮ್ಮು, ಜ್ವರ ಮತ್ತು ಉಸಿರಾಟ ಸಂಬಂಧಿ ಲಕ್ಷಣಗಳುಳ್ಳ, ಶ್ವಾಸಕೋಶಕ್ಕೆ ಸಂಬಂಧಿಸಿದ ಕಾಯಿಲೆಗಳಾಗಿವೆ. ಕ್ಷಯರೋಗವು ಕೋವಿಡ್ ಅಪಾಯವನ್ನು ಹೆಚ್ಚಿಸುತ್ತದೆ ಎಂದು ಅಧ್ಯಯನಗಳು ತಿಳಿಸುತ್ತವೆ. ಕ್ಷಯ ಮತ್ತು ಕೋವಿಡ್ ತ್ವರಿತ ಹಾಗೂ ತೀವ್ರ ರೋಗ ಲಕ್ಷಣಗಳ ಬೆಳವಣಿಗೆಗೆ ಸಂಬಂಧಿಸಿದೆ. ಈ ಎರಡೂ ರೋಗಗಳನ್ನು ಆರಂಭಿಕ ಹಂತದಲ್ಲಿಯೇ ಪತ್ತೆ ಮಾಡಿ, ಚಿಕಿತ್ಸೆ ಒದಗಿಸಬೇಕಾಗುತ್ತದೆ’ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

‘ಅಭಿಯಾನದ ಅವಧಿಯಲ್ಲಿ ಕ್ಷೇತ್ರ ಮಟ್ಟದ ಆರೋಗ್ಯ ಕಾರ್ಯಕರ್ತರು ಕೋವಿಡ್‌ನಿಂದ ಚೇತರಿಕೊಂಡ ವ್ಯಕ್ತಿಗಳ ಮನೆಗಳಿಗೆ ಭೇಟಿ ನೀಡಿ, ಲಕ್ಷಣಗಳ ಆಧಾರದಲ್ಲಿ ಅವರ ಹಾಗೂ ಸಂಪರ್ಕಿತ ಸದಸ್ಯರ ಕಫದ ಮಾದರಿಗಳನ್ನು ಸಂಗ್ರಹಿಸಿದ್ದಾರೆ. ಅದನ್ನು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿನ ಟಿ.ಬಿ.ಪಿ.ಸಿ.ಆರ್ ಪ್ರಯೋಗಾಲಯದಲ್ಲಿ ಪರೀಕ್ಷೆ ಮಾಡಲಾಗಿದೆ’ ಎಂದು ಇಲಾಖೆ ಪ್ರಕಟಣೆಯಲ್ಲಿ ಹೇಳಿದೆ.



‘ಲಸಿಕೆ ಪಡೆದರೂ ಶೇ 25ರಷ್ಟು ಕಾರ್ಯಕರ್ತರಿಗೆ ಸೋಂಕು’

ನವದೆಹಲಿ(ಪಿಟಿಐ): ಲಸಿಕೆ ಹಾಕಿಸಿಕೊಂಡಿದ್ದರೂ ಶೇ 25ಕ್ಕಿಂತಲೂ ಹೆಚ್ಚು ಆರೋಗ್ಯ ಕಾರ್ಯಕರ್ತರು ಕೊರೊನಾ ಸೋಂಕಿಗೆ ತುತ್ತಾಗಿದ್ದು, ಇದಕ್ಕೆ ಡೆಲ್ಟಾ ತಳಿಯೇ ಕಾರಣ ಎನ್ನುವುದನ್ನು ಇತ್ತೀಚಿನ ಅಧ್ಯಯನ ಬಹಿರಂಗಪಡಿಸಿದೆ.

ನವದೆಹಲಿಯಲ್ಲಿ ಡೆಲ್ಟಾ ತಳಿಯ ಕೊರೊನಾ ಸೋಂಕು ತೀವ್ರಗತಿಯಲ್ಲಿ ಏರಿಕೆಯಾದ ಸಂದರ್ಭದಲ್ಲಿ ಇನ್ಸ್ಟಿಟ್ಯೂಟ್ ಆಫ್ ಜೀನೋಮಿಕ್ಸ್ ಅಂಡ್ ಇಂಟಿಗ್ರೇಟಿವ್ ಬಯಾಲಜಿ (ಐಜಿಐಬಿ) ಮತ್ತು ದೆಹಲಿಯ ಮ್ಯಾಕ್ಸ್ ಆಸ್ಪತ್ರೆಗಳು ಜಂಟಿಯಾಗಿ ಈ ಅಧ್ಯಯನ ನಡೆಸಿವೆ.

ಐಜಿಐಬಿಯ ಹಿರಿಯ ವಿಜ್ಞಾನಿ ಮತ್ತು ಅಧ್ಯಯನದ ಪ್ರಮುಖ ಸಂಶೋಧಕರಲ್ಲಿ ಒಬ್ಬರಾದ ಶಾಂತನು ಸೇನ್‌ಗುಪ್ತಾ ಅವರು ‘ಸೋಂಕಿನ ತೀವ್ರತೆಯು ಕಡಿಮೆಯಾಗಿತ್ತು. ಅಲ್ಲದೇ ತೀವ್ರತರದ ಕಾಯಿಲೆಗಳನ್ನು ತಪ್ಪಿಸಲು ಲಸಿಕೆ ನಿರ್ಣಾಯಕ ಎನ್ನುವುದು ಈ ಅಧ್ಯಯನದಲ್ಲಿ ಕಂಡುಬಂದಿದೆ’ ಎಂದಿದ್ದಾರೆ.

ಎರಡು ಡೋಸ್ ಲಸಿಕೆ ತೆಗೆದುಕೊಂಡ 95 ಆರೋಗ್ಯ ಕಾರ್ಯಕರ್ತರನ್ನು ಅಧ್ಯಯನಕ್ಕೆ ಒಳಪಡಿಸಲಾಗಿತ್ತು

ಸೋರುತ್ತಿದೆ ವಲಯ ಆಯುಕ್ತರ ಕಚೇರಿ

ಪ್ರಜಾವಾಣಿ ವಾರ್ತೆ

ಜಂಟಿ ಆಯುಕ್ತರ ಕಚೇರಿಯಲ್ಲಿರುವ ಶೌಚಾಲಯದ ಸ್ಥಿತಿ

ರಾಜರಾಜೇಶ್ವರಿನಗರ: ಗಬ್ಬುವಾಸನೆ, ಗಾಳಿ ಬೀಸಿದಾಗ ವಾಕರಿಕೆ ಬರುವಂತಹ ದುರ್ವಾಸನೆ, ಮೂತ್ರವಿಸರ್ಜನೆ ನಂತರ ನೀರು ಬಿಟ್ಟರೆ ಮೈಮೇಲೆ ನೀರು ಹಾರುವಂತಹ ಶೋಚನೀಯ ಸ್ಥಿತಿ...

ರಾಜರಾಜೇಶ್ವರಿನಗರ ಬಿಬಿಎಂಪಿ ವಲಯದ ಜಂಟಿ ಆಯುಕ್ತರ ಕಚೇರಿಯಲ್ಲಿ ಕಂಡುಬರುವ ದೃಶ್ಯ ಇದು. ಜಂಟಿ ಆಯುಕ್ತರ ಕಚೇರಿ, ಆರೋಗ್ಯ ವೈದ್ಯಾಧಿಕಾರಿಗಳ ಕಚೇರಿ, ಮುಖ್ಯ ಎಂಜಿನಿಯರ್ ಕಚೇರಿ, ನಗರ ಯೋಜನೆ, ಉಪ ಆಯುಕ್ತರು, ಕಂದಾಯ ಅಧಿಕಾರಿ, ಸಹಾಯಕ ಹಣಕಾಸು ನಿಯಂತ್ರಕರ ಕಚೇರಿ... ಹೀಗೆ ಹಲವಾರು ಕಚೇರಿಗಳು ಒಂದೇ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ. ಆದರೆ, ಸಾರ್ವಜನಿಕರ ಸೇವೆ ನಿರ್ವಹಿಸುವ ಕಚೇರಿಯಲ್ಲಿರಬೇಕಾದ ಕನಿಷ್ಠ ವ್ಯವಸ್ಥೆಯೂ ಇಲ್ಲಿ ಇಲ್ಲ.

ಜಂಟಿ ಆಯುಕ್ತರು, ಉಪ ಆಯುಕ್ತರು, ಮುಖ್ಯ ಎಂಜಿನಿಯರ್, ಸಹಾಯಕ ಹಣಕಾಸು ನಿಯಂತ್ರಕರ ಕಚೇರಿಗಳಿಗೆ ಮಾತ್ರ ಪ್ರತ್ಯೇಕವಾದ ಶೌಚಾಲಯದ ವ್ಯವಸ್ಥೆಯಿರುವುದರಿಂದ ಆಪ್ತ ಸಹಾಯಕರ, ಸಿಬ್ಬಂದಿ ಹಾಗೂ ಸಾರ್ವಜನಿಕರಿಗಾಗಿ ನಿರ್ಮಿಸಿರುವ ಶೌಚಾಲಯದ ಈ ದಾರುಣ ಸ್ಥಿತಿ ಅಧಿಕಾರಿಗಳ ಗಮನಕ್ಕೆ ಬಂದಂತಿಲ್ಲ.

ಕಚೇರಿಯಲ್ಲಿರುವ ಕೊಳವೆ ಬಾವಿ ಅಥವಾ ಪಂಪ್‌ಸೆಟ್ ಕೆಟ್ಟು ಹೋದರೆ ವಾರ ಕಳೆದರೂ ದುರಸ್ತಿ ಮಾಡಿಸುವುದಿಲ್ಲ. ನಾಲ್ಕು ದಿನಕ್ಕೊಮ್ಮೆ ನೀರು ಸರಬರಾಜು ಮಾಡುವುದರಿಂದ ಇಷ್ಟು ದೊಡ್ಡದಾದ ವಲಯ ಕಚೇರಿಗೆ ನೀರು ಸಾಕಾಗುವುದಿಲ್ಲ ಎಂದು ಸಿಬ್ಬಂದಿ ದೂರುತ್ತಾರೆ.

ಮಳೆ ಬಂದಾಗ ಕಚೇರಿಯ ಚಾವಣಿಗಳು ಸೋರುತ್ತವೆ. ದಾಖಲೆಗಳನ್ನು ಇಟ್ಟರೆ ಅವೂ ಹಾಳಾಗುತ್ತವೆ ಎನ್ನುವ ಪರಿಜ್ಞಾನವಿದ್ದರೂ ಬಿಬಿಎಂಪಿ ನಗರ ಯೋಜನೆ ವಿಭಾಗದ ಎಲ್ಲ ಕಡತಗಳು ಇದೇ ಕೊಠಡಿಯಲ್ಲಿ ಶೇಖರಣೆಗೊಂಡಿವೆ ಎನ್ನುತ್ತಾರೆ ನಾಗರಿಕರು.

ವಲಯದ ಮುಖ್ಯ ಎಂಜಿನಿಯರ್ ವಿಜಯ್‌ಕುಮಾರ್ ಪ್ರತಿಕ್ರಿಯಿಸಿ, ‘ಕಟ್ಟಡ ದುರಸ್ತಿಗಾಗಿ ಹಾಗೂ ನಿರ್ವಹಣೆಗಾಗಿ ₹44 ಲಕ್ಷದ ಯೋಜನೆ ಸಿದ್ದಪಡಿಸಲಾಗಿದ್ದು ಅನುಮೋದನೆಗಾಗಿ ಮುಖ್ಯ ಆಯುಕ್ತರ ಕಚೇರಿಗೆ ಕಳುಹಿಸಿಕೊಡಲಾಗಿದೆ. ಅನುಮೋದನೆ ದೊರೆತ ಕೂಡಲೇ ದುರಸ್ತಿ ಕಾರ್ಯ ಕೈಗೊಳ್ಳಲಾಗುವುದು’ ಎಂದರು.

ಕೋವಿಡ್ 2ನೇ ಅಲೆ ವೇಳೆ ಇಳಿಕೆ ಕಂಡಿದ್ದ ಸೂಚ್ಯಂಕದಲ್ಲಿ ಏರುಗತಿ

ಗಾಳಿಯ ಗುಣಮಟ್ಟ: ‘ಸಮಾಧಾನಕರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಎರಡನೇ ಅಲೆಯ ಅವಧಿಯಲ್ಲಿ ಇಳಿಕೆ ಕಂಡಿದ್ದ ಗಾಳಿಯ ಗುಣಮಟ್ಟದ ಸೂಚ್ಯಂಕ (ಎಕ್ಯುಐ), ಕಳೆದೊಂದು ತಿಂಗಳಿನಿಂದ ಏರುಗತಿ ಪಡೆದಿದೆ. ಇದರಿಂದಾಗಿ ಎಕ್ಯುಐ ‘ಉತ್ತಮ’ ಹಂತದಿಂದ ‘ಸಮಾಧಾನಕರ’ ಹಂತಕ್ಕೆ ತಲುಪಿದೆ.

ಲಾಕ್‌ಡೌನ್ ಹಾಗೂ ಕೋವಿಡ್ ಪ್ರಕರಣಗಳ ಏರಿಕೆಯಿಂದ ನಗರದಲ್ಲಿ ವಾಹನ ಸಂಚಾರ ವಿರಳವಾಗಿ, ಏಪ್ರಿಲ್‌ನಿಂದ ಜುಲೈವರೆಗೆ ಎಕ್ಯುಐ ಇಳಿಕೆ ಕಂಡಿತ್ತು. ನಗರದಲ್ಲಿನ ಚಟುವಟಿಕೆಗಳು ಕೂಡ ಸಂಪೂರ್ಣ ಸ್ಥಗಿತವಾಗಿದ್ದರಿಂದ ಹೆಬ್ಬಾಳ, ಪೀಣ್ಯ, ಜಯನಗರ ಸೇರಿದಂತೆ ಬಹುತೇಕ ಕಡೆ ಉತ್ತಮ ಹಂತದಲ್ಲಿತ್ತು.

ಲಾಕ್‌ಡೌನ್ ಸಡಿಲಿಕೆ, ಶಾಲಾ–ಕಾಲೇಜುಗಳು ಪ್ರಾರಂಭ ಹಾಗೂ ಕಂಪನಿಗಳು ಬಾಗಿಲು ತೆರೆಯುತ್ತಿರುವುದರಿಂದ ವಾಹನಗಳ ಸಂಚಾರ ಒಮ್ಮೆಲೇ ಹೆಚ್ಚಳವಾಗಿದೆ. ತುಮಕೂರು ರಸ್ತೆ, ಮೈಸೂರು ರಸ್ತೆ ಸೇರಿದಂತೆ ಕೆಲವೆಡೆ ಬೆಳಿಗ್ಗೆ ಮತ್ತು ಸಂಜೆಯ ಅವಧಿ ವಾಹನ ದಟ್ಟಣೆ ಉಂಟಾಗುತ್ತಿದೆ. ಇದರಿಂದಾಗಿ ಉತ್ತಮ ಹಂತಕ್ಕೆ ಇಳಿಕೆಯಾಗಿದ್ದ ಗಾಳಿಯ ಗುಣಮಟ್ಟ ಸೂಚ್ಯಂಕವು ಸಮಾಧಾನಕರ ಮತ್ತು ಮಧ್ಯಮ ಹಂತಕ್ಕೆ ತಲುಪಿದೆ. ಗಾಳಿಯಲ್ಲಿನ ಮಲಿನಕಾರಕ ಕಣಗಳು ಹೆಚ್ಚಳವಾಗಿವೆ.

ಮುಂದಿನ ದಿನಗಳಲ್ಲಿ ಎಕ್ಯುಐ ಇನ್ನಷ್ಟು ವ್ಯತ್ಯಯವಾಗುವ ಬಗ್ಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಕಳವಳ ವ್ಯಕ್ತಪಡಿಸಿದೆ.

‘ಗಾಳಿಯ ಗುಣಮಟ್ಟದ ಸೂಚ್ಯಂಕವು 50ರ ಒಳಗಡೆಯಿದ್ದಲ್ಲಿ ಆರೋಗ್ಯದ ಮೇಲೆ ನಕಾರಾತ್ಮಕ ಪರಿಣಾಮಗಳು ಕಾಣಿಸಿಕೊಳ್ಳುವುದಿಲ್ಲ. ಎಕ್ಯುಐ 51ರಿಂದ 100ರ ಒಳಗಡೆ ಇದ್ದಲ್ಲಿ ಉಸಿರಾಟದ ಸಮಸ್ಯೆಗಳು ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. 101ರಿಂದ 200ರ ಗಡಿಯ ನಡುವೆ ಇದ್ದಲ್ಲಿ ಶ್ವಾಸಕೋಶ, ಹೃದಯ ಕಾಯಿಲೆಗಳು ಕೂಡ ಬರಬಹುದು. ಲಾಕ್‌ಡೌನ್ ಸಡಿಲಿಕೆಯಾಗುತ್ತಿದಂತೆ ಜನರ ಓಡಾಟ ಹೆಚ್ಚಳವಾಗಿದೆ. ವಿವಿಧ ಕಾಮಗಾರಿಗಳಿಗೆ ಈಗ ವೇಗ ನೀಡಲಾಗುತ್ತಿದೆ. ಇದರಿಂದಾಗಿ ಎಕ್ಯುಐ ಹೆಚ್ಚಳವಾಗಿದೆ’ ಎಂದು ಮಂಡಳಿಯ ಹಿರಿಯ ಪರಿಸರ ಅಧಿಕಾರಿಯೊಬ್ಬರು ತಿಳಿಸಿದರು.

ಗಾಳಿಯ ಗುಣಮಟ್ಟದ ಸೂಚ್ಯಂಕ (ಎಕ್ಯುಐ)

00-50	ಉತ್ತಮ
51-100	ಸಮಾಧಾನಕರ
101-200	ಮಧ್ಯಮ
201-300	ಕಳಪೆ
301-400	ತುಂಬಾ ಕಳಪೆ
401 ಮೇಲ್ಪಟ್ಟು	ತೀವ್ರ

ನಗರದಲ್ಲಿನ ಗಾಳಿಯ ಗುಣಮಟ್ಟದ ಸೂಚ್ಯಂಕ (ಆ.31)

ಮಾಪನಾ ಕೇಂದ್ರವಿರುವ ಪ್ರದೇಶ	ಎಕ್ಯುಐ
ಹೆಬ್ಬಾಳ	46
ಜಯನಗರ	51
ಕವಿಕಾ ಲೇಔಟ್	31
ನಿಮ್ಹಾನ್ಸ್	24
ಸೆಂಟ್ರಲ್ ಸಿಲ್ಕ್ ಬೋರ್ಡ್	79
ನಗರದ ರೈಲು ನಿಲ್ದಾಣ	112
ಸಾಣೆಗುರುವನಹಳ್ಳಿ	48
ಕಾಡಬೀಸನಹಳ್ಳಿ	52
ಪೀಣ್ಯ	64
ಬಿಟಿಎಂ ಬಡಾವಣೆ	75

ಸಂಕ್ಷಿಪ್ತ ಸುದ್ದಿ

ಪಾಕ್ ಜೈಲಿನಲ್ಲಿದ್ದ ವ್ಯಕ್ತಿ 23 ವರ್ಷದ ಬಳಿಕ ಭಾರತಕ್ಕೆ

ಭೋಪಾಲ್: 23 ವರ್ಷಗಳ ಹಿಂದೆ ಗಡಿ ದಾಟಿ ಪಾಕಿಸ್ತಾನ ಪ್ರವೇಶಿಸಿ, ಅಲ್ಲಿ ಜೈಲು ಶಿಕ್ಷೆ ಅನುಭವಿಸುತ್ತಿದ್ದ ಮಧ್ಯಪ್ರದೇಶದ ಸಾಗರ್ ಜಿಲ್ಲೆಯ 57 ವರ್ಷದ ವ್ಯಕ್ತಿಯೊಬ್ಬರು ಭಾರತಕ್ಕೆ ಮರಳಿದ್ದಾರೆ ಎಂದು ಪೊಲೀಸ್ ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಸಾಗರ್ ಜಿಲ್ಲೆಯ ಘೋಶಿ ಪಟ್ಟಿ ಗ್ರಾಮದ ಪ್ರಹ್ಲಾದ್ ಸಿಂಗ್ ರಜಪೂತ್ ಅವರನ್ನು ಪಾಕಿಸ್ತಾನದ ಅಧಿಕಾರಿಗಳು ಪಂಜಾಬ್‌ನ ವಾಘಾ ಗಡಿಯ ಮೂಲಕ ಭಾರತದ ಗಡಿ ಭದ್ರತಾ ಪಡೆಗೆ ಹಸ್ತಾಂತರಿಸಿದರು ಎಂದೂ ಹೇಳಿದ್ದಾರೆ.

1998 ರಿಂದ ಪ್ರಹ್ಲಾದ್ ಸಿಂಗ್ ನಾಪತ್ತೆಯಾಗಿದ್ದರು. ಅವರು ಹೇಗೆ ಗಡಿ ದಾಟಿ ಪಾಕಿಸ್ತಾನ ತಲುಪಿದರು ಎಂಬುದು ತಿಳಿದಿಲ್ಲ ಎಂದು ಅವರ ಕುಟುಂಬ ಸದಸ್ಯರು ತಿಳಿಸಿದ್ದಾರೆ.

ಪಶ್ಚಿಮ ಬಂಗಾಳ: ಮತ್ತೆ ಮೂರು ಎಫ್‌ಐಆರ್ ದಾಖಲಿಸಿದ ಸಿಬಿಐ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ನಡೆದ ಚುನಾವಣೋತ್ತರ ಹಿಂಸಾಚಾರ ಕುರಿತು ತನಿಖೆ ಆರಂಭಿಸಿರುವ ಸಿಬಿಐ, ಎರಡು ಸ್ಥಳಗಳಲ್ಲಿ ಹೊಸದಾಗಿ ಮೂರು ಎಫ್‌ಐಆರ್‌ಗಳನ್ನು ದಾಖಲಿಸಿದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಪೂರ್ವಮೇದಿನಿಪುರ ಜಿಲ್ಲೆಯ ನಂದಿಗ್ರಾಮ ಹಾಗೂ ಕೂಚ್‌ಬಿಹಾರ್‌ನ ಸೀತಾಲ್‌ಕುಚಿಯಲ್ಲಿ ನಡೆದ ಘಟನೆಗಳಿಗೆ ಸಂಬಂಧಿಸಿ ಹೊಸದಾಗಿ ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ. ಇದರೊಂದಿಗೆ, ಚುನಾವಣೋತ್ತರ ಹಿಂಸಾಚಾರಕ್ಕೆ ಸಂಬಂಧಿಸಿ ಈ ವರೆಗೆ 31 ಪ್ರಕರಣಗಳನ್ನು ದಾಖಲಿಸಿದಂತಾಗಿದೆ.



ಮಥುರಾದಲ್ಲಿ ಮದ್ಯ, ಮಾಂಸ ಮಾರಾಟ ನಿಷೇಧ

ಪ್ರಜಾವಾಣಿ ವಾರ್ತೆ



ಲಖನೌ: ಮಥುರಾದಲ್ಲಿ ಮದ್ಯ ಮತ್ತು ಮಾಂಸ ಮಾರಾಟ ಮಾಡುವುದಕ್ಕೆ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಸಂಪೂರ್ಣವಾಗಿ ನಿಷೇಧ ಹೇರಿದ್ದಾರೆ.

ಧಾರ್ಮಿಕ ನಗರವಾದ ಮಥುರಾದಲ್ಲಿ ಮದ್ಯ ಮತ್ತು ಮಾಂಸ ಮಾರಾಟಗಾರರು ಹಾಲು ಮಾರಾಟ ಮಾಡುವಂತೆ ಅವರು ಸಲಹೆ ನೀಡಿದ್ದಾರೆ.

ಶ್ರೀಕೃಷ್ಣ ಜನ್ಮಾಷ್ಟಮಿಯ ಅಂಗವಾಗಿ ಮಥುರಾದ ಬಂಕೆ ಬಿಹಾರಿ ದೇಗುಲದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮದ್ಯ ಮತ್ತು ಮಾಂಸ ಮಾರಾಟಗಾರರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸುವ ಯೋಜನೆ ರೂಪಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.'ಮಥುರಾದ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ವೈಭವವನ್ನು ಕಾಪಾಡಲು ಮದ್ಯ ಮತ್ತು ಮಾಂಸ ಮಾರಾಟವನ್ನು ನಿಷೇಧಿಸುವುದು ಅತ್ಯಗತ್ಯ' ಎಂದಿದ್ದಾರೆ.

ಅಯೋಧ್ಯೆ, ಚಿತ್ರಕೂಟ ಮತ್ತು ಇತರ ಧಾರ್ಮಿಕ ನಗರಗಳಲ್ಲೂ ಇದೇ ರೀತಿ ನಿಷೇಧ ಹೇರಲು ರಾಜ್ಯ ಸರ್ಕಾರ ಚಿಂತನೆ ನಡೆಸಿದೆ ಎಂದು ಮೂಲಗಳು ಹೇಳಿವೆ.

'ಜಾತಿ ಗಣತಿ ವರದಿ: ಅಧಿವೇಶನದಲ್ಲಿ ಹೋರಾಟ'

ಬೆಂಗಳೂರು: 'ರಾಜ್ಯದಲ್ಲಿ ನಡೆದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿ ಜನಗಣತಿ) ವರದಿಯ ಅನುಷ್ಠಾನದ ಬಗ್ಗೆ ವಿಧಾನಸಭೆ ಅಧಿವೇಶನದಲ್ಲಿ ಧ್ವನಿ ಎತ್ತಿ, ಹೋರಾಟ ಮಾಡುತ್ತೇವೆ' ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, '90 ವರ್ಷಗಳ ಹಿಂದಿನ ಜಾತಿ ಜನಗಣತಿ ವರದಿ ಇಟ್ಟುಕೊಂಡು ಸಾಮಾಜಿಕ ಮತ್ತು ಆರ್ಥಿಕ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಇದು ಸರಿಯಲ್ಲ' ಎಂದರು.

'10 ವರ್ಷಕ್ಕೊಮ್ಮೆ ಜಾತಿವಾರು ಜನಗಣತಿ ನಡೆಸುವುದರಿಂದ ವೈಜ್ಞಾನಿಕವಾಗಿ ಸಾಮಾಜಿಕ ಮತ್ತು ಆರ್ಥಿಕ ಕಾರ್ಯಕ್ರಮಗಳನ್ನು ರೂಪಿಸಲು, ಅರ್ಹರಿಗೆ ಮೀಸಲಾತಿ ಒದಗಿಸಲು ಸಾಧ್ಯವಾಗಲಿದೆ. ಕಾಂಗ್ರೆಸ್ ಸರ್ಕಾರ ಇದ್ದಾಗ ರಾಜ್ಯದಲ್ಲಿ ₹ 180 ಕೋಟಿ ಖರ್ಚು ಮಾಡಿಸಿ ಜಾತಿ ಜನಗಣತಿ ಮಾಡಿಸಿದ್ದೇನೆ. ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಕೂಡಾ ಪ್ರಧಾನಿ ಮೋದಿ ಬಳಿಗೆ ನಿಯೋಗ ಕರೆದೊಯ್ದು ಜಾತಿ ಜನಗಣತಿ ಬೇಡಿಕೆ ಮುಂದಿಟ್ಟಿದ್ದಾರೆ. ಜನಗಣತಿ ಮಾದರಿಯಲ್ಲಿ ಜಾತಿಗಣತಿ ನಡೆದರೆ ಒಳ್ಳೆಯದು' ಎಂದು ಅಭಿಪ್ರಾಯಪಟ್ಟರು.

ಕೋವಿಡ್ ಮೂರನೇ ಅಲೆ ಆತಂಕದಲ್ಲಿ ಪ್ರಾಥಮಿಕ ಶಾಲೆಗಳನ್ನು ತೆರೆಯಲು ಸರ್ಕಾರ ನಿರ್ಧರಿಸಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಕೋವಿಡ್ ನಿಯಂತ್ರಣದಲ್ಲಿ ಇದ್ದಾಗ ಮುನ್ನೆಚ್ಚರಿಕೆ ಮತ್ತು ಸುರಕ್ಷಾ ಕ್ರಮಗಳನ್ನು ಕೈಗೊಂಡು ಶಾಲೆಗಳನ್ನು ತೆರೆಯುವುದು ಒಳ್ಳೆಯದು' ಎಂದರು.

'ಗಣೇಶ ಹಬ್ಬದಲ್ಲಿ ಕೂಡಾ ಅತಿ ಹೆಚ್ಚು ಜನ ಗುಂಪು ಸೇರದಂತೆ, ಸಾರ್ವಜನಿಕವಾಗಿ ಗುಂಪು ಗುಂಪಾಗಿ ಆಚರಣೆ ಮಾಡದಂತೆ ಸರ್ಕಾರ ಎಚ್ಚರಿಕೆ ವಹಿಸಬೇಕು' ಎಂದರು.

'ಕಾಂಗ್ರೆಸ್ ಫ್ಯೂಸ್ ಹೋಗಿದೆ' ಎನ್ನುವ ಸಚಿವ ಕೆ.ಎಸ್. ಈಶ್ವರಪ್ಪ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, 'ವಿಧಾನಸಭಾ ಚುನಾವಣೆ ಬರಲಿ. ಜನ ಯಾರ ಫ್ಯೂಸ್ ಕಿತ್ತು ಹಾಕುತ್ತಾರೆ ಎನ್ನುವುದು ಗೊತ್ತಾಗುತ್ತದೆ' ಎಂದರು.

ತೂಕ ಕಡಿಮೆಯಾಗಿದೆ: 'ಕೊರೊನಾ ಸೋಂಕಿಗೆ ಒಳಗಾದ ಬಳಿಕ ನನ್ನ ದೇಹದ ತೂಕ 3–4 ಕೆ.ಜಿ. ಹೆಚ್ಚಾಗಿತ್ತು. ಜಿಂದಾಲ್ ಪ್ರಕೃತಿ ಚಿಕಿತ್ಸಾ ಕೇಂದ್ರದಲ್ಲಿ 10 ದಿನಗಳ ಚಿಕಿತ್ಸೆಯ ಬಳಿಕ ಮೂರು ಕೆ.ಜಿ. ಕಡಿಮೆಯಾಗಿದೆ' ಎಂದರು.

ತಮಿಳುನಾಡಿಗೆ ನೀರು ಹರಿಸಲು ಸೂಚನೆ

ಒಂದನೇ ಪುಟದಿಂದ

ಕರ್ನಾಟಕದ ಜಲ ಸಂಪನ್ಮೂಲ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ರಾಕೇಶ್ ಸಿಂಗ್, ತಮಿಳುನಾಡು ಪಿಡಬ್ಲ್ಯುಡಿ ಹೆಚ್ಚುವರಿ ಕಾರ್ಯದರ್ಶಿ ಸಂದೀಪ ಸಕ್ಸೇನಾ ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ಭಾಗವಹಿಸಿದ್ದರು. ಕೇರಳ ಮತ್ತು ಪುದುಚೇರಿಯ ಅಧಿಕಾರಿಗಳು ವಿಡಿಯೊ ಕಾನ್ಫರೆನ್ಸ್ ಮೂಲಕ ಭಾಗಿಯಾಗಿದ್ದರು.

ಮೇಕೆದಾಟು ಅಣೆಕಟ್ಟೆ ಚರ್ಚೆ ಮುಂದೂಡಿಕೆ: ಮೇಕೆದಾಟು ಅಣೆಕಟ್ಟೆ ಯೋಜನೆಗಾಗಿ ಕರ್ನಾಟಕವು ಸಲ್ಲಿಸಿದ ಪ್ರಸ್ತಾವಕ್ಕೆ ತಮಿಳುನಾಡು ಹಾಗೂ ಪುದುಚೇರಿ ಆಕ್ಷೇಪ ವ್ಯಕ್ತಪಡಿಸಿದ್ದು, ಇದಕ್ಕೆ ಸಂಬಂಧಿಸಿದ ಚರ್ಚೆಯನ್ನು ಮುಂದೂಡಿದ್ದಾಗಿ ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷ ಎಸ್. ಕೆ. ಹಾಲ್ದಾರ್ ತಿಳಿಸಿದರು.

ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ತಮಿಳುನಾಡಿನ ಗುಂಡಾರ್ ಯೋಜನೆಗೆ ಕರ್ನಾಟಕವು ಆಕ್ಷೇಪ ವ್ಯಕ್ತಪಡಿಸಿದೆ. ಹೀಗಾಗಿ ಆ ಚರ್ಚೆಯನ್ನೂ ಮುಂದೂಡಲಾಗಿದೆ. ಇತರ ರಾಜ್ಯಗಳ ಅಭಿಪ್ರಾಯವನ್ನೂ ಪಡೆಯಬೇಕಿದ್ದು, ಸೂಕ್ತ ಸಂದರ್ಭದಲ್ಲಿ ಈ ಬಗ್ಗೆ ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಲಾಗುವುದು' ಎಂದು ತಿಳಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

ST SOPHIA'S International School,Nagarabhavi,Mallathahalli,requires Experienced Female VICE PRINCIPAL & English,Maths Science teachers for Primary School (Immediate Appointment) yogeshbk18@gmail.com Contact:9243031872

CAMBRIDGE COLLEGE
KR Puram, Bengaluru - 560 036
REQUIRES

For B.Com/ BBA / BCA
ASSISTANT PROFESSORS:
Commerce, Computer Science, English, Hindi, Kannada
Minimum Qualification:
- Post Graduate in respective subjects from a recognized University with at least 3 years of UG classes teaching experience. NET qualified & candidates with higher qualification preferred.
- **Age:** Below 55 years.
- **Remuneration:** Rs. 35,000/- to Rs. 45,000/- per month

For PUC
LECTURERS:
English, Hindi, Kannada, Physics, Chemistry, Mathematics, Biology, Electronics, Accountancy, Business Studies, Economics, Statistics, Computer Science
Minimum Qualification:
- Post Graduate in respective subjects from a recognized University with at least 3 years of PU teaching experience. Candidates with B.Ed. preferred.
- **Age:** Below 55 years.
- **Remuneration:** Rs. 30,000/- to Rs. 35,000/- per month

For Office Superintendent
Graduate Candidates with at least five years of experience as senior clerical staff with ability to handle PU / Degree College office activities independently with complete knowledge of PU & Bangalore University rules.

For Lab. Attender/Assistant
Physics, Chemistry, Biology, Computer Science
Experience as a Lab. Attender/Assistant in any Institution.

(Salaries for all posts mentioned above are indicative. Salary will commensurate with qualification and quality experience)

WALK-IN INTERVIEW
From 01st Sep 2021 to 07th Sep 2021
(on College working days) between 9AM & 1PM
+91-99020 90303
ccrecruit@cambridge.edu.in
www.cambridge.edu.in

||OM SRI SAI RAM||
Federal Public School
(Affiliated to CISCE, New Delhi)
Thanisandra Road, Bangalore–64.
Requires:
Computer Teacher for High School
(Female candidates only)
Contact Details:
98458 60935
90085 81599
pro@federalschool.org
federalpublicschool@gmail.com

MORNING STAR School, Ramachandra Puram, (Rajajinagar Entrance) Bangalore, Require B.Sc/ M.Sc, B.Ed, (Mathematics) Lady Teachers, Contact: 9845018480

TEACHERS WANTED 1st To 10th Std Teachers, English Medium All Subjects SAGAR-CONVENT Kanakapura Main Road Bangalore-82 Near APS Engineer College, Good Salary & Vehicle Facility:-9342552428

WANTED
Teachers: Science (PCM / CBZ) / Social
Fresher / Experience
BA / B.Com / B.Sc / M.Sc / B.Ed
Salary: 18,000 - 25,000/- PM
WALK IN INTERVIEW
ALL WORKING DAYS
B/w 10.30 AM TO 4.00 PM
MATHA'S INTERNATIONAL SCHOOL (ICSE)
MATHA'S ENGLISH HIGH SCHOOL®
CBSE / State Syllabus
55/2 B, 11th K.M. Hosur Main Road, Garuve Bhavi Palya, Bommanahalli Post, Bengaluru - 560 068
(Google Map Location : Matha's School)
BMTC Bus Facility AVAIL.
Mob: 8971672116 / 8277257669 / 9449814917 / 8277256859

TEACHERS NEEDED for all subjects & English for CLASS 1 to 5 for Chitrakoota CBSE School in Nagarbhavi, Kengeri Ring Road, with high Salary. Immediately or for the next academic year. Call: 7829647333 chitrakootajobs@gmail.com

LOGO DISPLAY AD
Deccan Herald All Karnataka
+
Prajavani Bangalore

Two BHK for rent ground floor at xxxxxxxxxxxx xxxxxxxxxx Bangalore Contact: xxxxxxxxxx xxxxxxxxxxxxxxxxx
3cm (W) x 4cm (H)
@
Just Rs.2000/-* only
For more information contact:
9880856233 / 9731821077
9845114560
9606912256 / 9886213331

REQUIRED PRINCIPAL
A leading educational institution at Mysore requires an experienced and dedicated person for the post of **PRINCIPAL** with post-graduate qualification in Science stream. He should be aged in the range to 40 to 50 years relaxable in deserving cases. Experience in the similar field will be preferred. Salary is not a constraint for deserving candidates.
Interested candidates may send their resume within 10 days to:
mcibangalorechits@yahoo.com
OR
B-104, 1st Floor, 1st Main, Brigade Majestic Building, Gandhinagar Bangalore-560009. Ph: 080-22206089

SAMBHRAM INSTITUTE OF TECHNOLOGY
BENGALURU
SaIT invites applications for faculty positions :
PROFESSOR / ASSOCIATE PROFESSOR / ASSISTANT PROFESSOR
Dept. of CSE, ECE, ME & Civil Engg
FOREMAN | SUPERVISOR | INSTRUCTOR| PROGRAMMER
Dept. of CSE, ECE, ME & Civil Engg
Qualification & Salary : as Per AICTE Norms
Please email your CV to ckgowda@gmail.com
Contact Principal at - 9900001936

SBE & CT
HARWARD Pre-University College
Dasanapura, Tumkur Road, Bangalore North – 562123
www.harwardinstitutions.com
WANTED
▶Computer Science -(MCA) (Min 5 yrs in teaching NCERT Syllabus)
▶Dept of Commerce - (M.Com) (Min 5 yrs in teaching Dept of Commerce)
▶Office Admin-(Post Graduation in any discipline) (School or college 10 yrs experienced candidate with computer knowledge preferably lady)
▶DTP Operator (Graduation) (School or college Accounts experienced candidate with computer knowledge preferably lady)
Eligible candidates may send their CV to infoharwardints@gmail.com
Ph:9880112833/8494915429
9945230286 . 080-29723540

SRIKRISHNA POLYTECHNIC Chikkabanvara Bangalore requires lecturers in Mechanical, Civil, Electrical & Electronics. Contact Principal 6362422750

VLS VIDYASAGARA/ MARUTHI VIDYAMANDIRA ENGLISH MEDIUM-SCHOOL, #58/22, Sharada Colony, Basaveshwaranagar, Bangalore-79. Ph:080-23586050/ ....6366882313..... ....REQUIRED......: LADY-TEACHERS CLASS-I to X STD; ENGLISH/SOCIAL-B.A,M.A, B.Ed,M.Ed, MATHS/SCIENCE-BSc,B.Ed, M.Sc,M.Ed, HINDI-BA,B.Ed

WANTED ENGLISH MEDIUM TRAINED LADY TEACHERS B.A., B.Ed to teach English/ Social for Primary Section, B.Sc Computer Science- Full time/ Part time. Lady Graduates Interested in teaching can also apply. Contact in person (10.00 am-3.00 pm on all working days) - Secretary, Deccan Educational Society, No.95, 3rd Cross, Srirampuram, Bengaluru- 560021 (Near Sampige Theater, Malleswaram).

Accounts & Finance

WANTED ACCOUNTANT for an Export/ Import Company based in South Bangalore. Knowledge of Computers, Tally, GST essential. Send your Resume to indu@aqs.in.net

Graphic Designers

WANTED EXPERIENCED Male/ Female For Kannada DTP Book Work For Publishing Company Contact: 9448467728/ 8073340659

General

URGENTLY REQUIRED
BUSINESS PROMOTION CANDIDATES
to promote newly established water testing laboratory in Mangalore.
B.Sc graduates with Chemistry background and 2-3 years relevant exp., having 2 or 4 wheeler license will be preferred. Candidates should have good communication skills and Fluency in English, Hindi and Kannada.
Kindly apply to:
info@aquamater.co.in

WANTED EXPERIENCED Drivers/ Supervisors for a Travel Agency Situated in Five Star Hotels. Call: 98453-10120

"WANTED OFFICE-EXECUTIVE with-min 2yrs-exp any-degree/ post-graduation with-good communication/computer skills-at Bommanahalli, Bangalore-68. Salary Rs.25000p.m. Send-CV-to: uppbangalore@gmail.com/ Contact: 9449817703"

INDIANOIL & ICICI_associate need COMPUTER OPERATORS for Insurance services at Petrol Pumps in Bangalore. 9742149598.

WANTED FOR Reputed Company, Graduates Age-30-70, Bangalore only, Earn: 30,000- 50,000. Contact: 9008305194/ 9880441530.

Hospital & Medical Jobs

WANTED NURSES for GEF EYE HOSPITAL, Hoskote, Bangalore Rural to work in the OPD /OT & Ward Qualification: Diploma in Nursing /B.Sc. Nursing Remuneration Negotiable. Contact: 08029700230, 9844789046

Engg/ Production Technical

EXPERIENCED ENGINEERS for Production and Quality - B.E./ Diploma (Mechanical). 'VINIMAC' 205A, Peenya 3rd phase, Bangalore-58 Phone: 080-28391959, admin@vinumac.com

Manager

ಬೆಂಗಳೂರಿನ ಗೋದ್ರೆಜ್ ಟೈಸನ್ ಫುಡ್ಸ್ ಲಿ., ನ ಬ್ರಾಯ್ಲರ್ ಮತ್ತು ಬ್ರೀಡರ್ ಫಾರ್ಮ್‌ಗೆ
ವ್ಯವಸ್ಥಾಪಕರು
ಬೇಕಾಗಿದ್ದಾರೆ
ವಿದ್ಯಾರ್ಹತೆ: ಬಿವಿಎಸ್‌ಸಿ/ಎಂವಿಎಸ್‌ಸಿ
ಅನುಭವ : ಕೋಳಿ ಸಾಕಾಣಿಕೆ ಕ್ಷೇತ್ರದಲ್ಲಿ ಕನಿಷ್ಠ 8–9 ವರ್ಷ ಕನ್ನಡ ಮತ್ತು ತಮಿಳು ಭಾಷೆಯ ಜ್ಞಾನವುಳ್ಳವರಿಗೆ ಆದ್ಯತೆ. ಕಾರ್ಯಕ್ಷೇತ್ರ : ಬೆಂಗಳೂರು
ಅಭ್ಯರ್ಥಿಗಳು ತಮ್ಮ ವಿವರಗಳನ್ನು sumathi.r@godrejagrovet.com ಗೆ ಮೇಲ್ ಮಾಡುವುದು.

Marketing & Sales

SALES EXECUTIVES Requried for Innovative Products in all Cities of Karnataka Salary- Rs, 20000+big Incentives. post resume: info@behlinnov.com Call:8884504422/ 8884504141

SALES MANAGER Male, 5 Years Experience in Real-Estate Required for land developer office at Rajajinagar, Salary 25000, Incentive 50,000. 9880865041.

ANAGHA A Company is engaged in promoting SAMSUNG, Canon, BenQ & HP products. Looking for Business Development Manager / Sales/ Presales/ Backoffice Executive, in Bangalore/ Mangalore/ Hubli. Send resumes to sales@anaghaindia.in or contact 9482503282/ 9972971601

WANTED MARKETING Executives For Private Limited Company Bangalore, Age Below 40 with Good Communication Skill fluent In English, Kannada, Hindi Contact: 9108458798/ 23384085

Multiple Vacancy

FRESHERS/ EXPERIENCED B.Sc,M.Sc,BCA, MCA,B.Com., PURCHASE OFFICER, STOREKEEPER, WEB-DESIGNER, GRAPHIC DESIGNER, E-COMMERCE, SALES EXECUTIVE, ACCOUNTANT,HR,ADMIN, DELIVERY BOY.'LABNEEDS,' Basavanagudi, Reddy-9886401900/ 9901660099/ 08026772200.

WANTED EXPERIENCED 1. Advocate with strong knowledge in civil conveyance with legal Opinion, Minimum of 5years of Experience 2. Civil Engineers for Residential Layout projects 3. Accountant Minimum 5year Experience Equinox Global Shelters Office @ Yelahanaka New Town, Attractive salary 8217482988, egsadm159@gmail.com

Part-Time Jobs

JOBS WOMEN@RELIANCE Capital,Malleswaram Age 30yrs above (Degree) Fixed Salary-18k to 23k+PF+ESI: 9343349670

ಕ್ಲಾಸಿಫೈಡ್ಸ್
EDUCATION CORNER

Virtual Course in Counseling and Life Skills and Well-being
BECOME A COUNSELOR
Get empowered Lead Better Quality Life
HURRY... FEW SEATS LEFT
Course Starts in September 2021
6 MONTH PART TIME COURSE
Samadhan
Centre for Counselling and Life Skills
REGISTER FOR FREE WEBINAR
7411265230 | 7795220618
WEEKEND CLASSES
71, 3rd Main road, MLA layout RT Nagar Bangalore-560032.
www.samadhanbangalore.com

ADMISSION 2021-22
RAMAN POLYTECHNIC
12, Magadi Main Rd, Kamakshipalya, (Near Sumanahalli Bus Stop) B'lore-79
Mobile: 80500 66771 / 63609 03500 Web: www.ramaneducation.org
♦ Civil ♦ Mechanical ♦ Electrical ♦ Electronics ♦ Computer Science ♦ Automobile
RAMAN SCHOOL OF NURSING (GNM)
RAMAN I.T.I. COLLEGE
♦ Fitter ♦ Electronic ♦ Mechanic Electrician
CALIFORNIA PUBLIC SCHOOL
ICSE & State Syllabus. Nursery to X std
HOSTEL FACILITIES FOR BOYS & GIRLS
RMN-21201

R.E.S. POLYTECHNIC
Recognised by Govt. of Karnataka & Approved by AICTE
Inst. Code: 450 Estd: 1986
SPOT ADMISSION FOR MANAGEMENT & Merit / Govt. QUOTA STARTED FOR 10th PASS or PUC FAIL / PASS
3 Years Diploma for - 10th Pass
2 Years Diploma for - PUC / 12th / ITI Pass
CS | IS | EC | EE | Civil | Mech | Auto | CP | FT
5, Sunkadakatte, Magadi Main Road, Hegganahalli Cross, B'lore-91 Phone: 080-23484814, 99166 46466, 99166 39466
RES-21203

LIMITED MNC COMPANY Lost Job, Provide Work From Home Earn 30K to35K: 7019215243/ 9886641282

RENTAL PROPERTIES

Accommodation Available

Industrial And Factory

AT TUMKUR, Industrial shed for Rent. 12000 sqft with/without large open area, with power, water, ready to occupy at Antharasanahalli Industrial Area. Contact: 9663374086, 080-28360561 Email: purchase@vetrilindia.in

Villas/Bunglows

SOBHA CITY 5BHK Semi-furnished Row House Villa available for Rent at Sobha City, Tanisandra Main Road. Contact owner: +91 7337676822

REAL ESTATE SELLING

House

Basaveshwaranagar

40X60 CORNER House Sale Basaveshwara Nagar Prime Location University Layout Brokers Excuse. Contact: 9448324477/ 7795163795

For Online Classified Booking
Name Change / Education / Property / Job / Services and many more contact
9880856233
9886213331
dhclassifieds.com

Agricultural Land

Mysore

SALE 4ACRES3GUNTAS, Fenced, Agriculture Land,70Coconut Trees at Nanjanagudu Mysore Distric,7kmFrom Nanjanagudu Temple.Adjacent Bannariyamma Sugar Factory,1.50Crore, Manjunath 7259592104, 9164374021

Flat

Peenya

FOR SALE 2 BHK Flat with super builtup area 1202.4 Sqft, with car parking @ "Limra Residency" near to Peenya metro station, Contact: 9483052236

Sites

Bannerghatta Road

SALE OFF Bhannerghatta Road, Gottigere Doctors Layout 5100. sft. BBMP 'B' Katha East Facing Site. Contact: 9535773366, 9448360286

Hebbal

WANTED/ AVAILABLE Plots/houses Arkavathy Layout, R.T.Nagar, Thanisandra, Hebbal, Jakkur, Yelahanka, HRBR,Hennur. Immediate_settlement. "SPACELINKS" 9845129934.

Kumaraswamy Layout

BDA 30X40 Intermediate Vacant 2nd Stage, Near 15F/G Last Stop, ISKCON South Samaruddi, Genuine Buyers Call 9972095359 Brokers Excuse.

Kanakapura Road

KANAKAPURA ROAD NEAR HAROLLI BUS STAND OLD HOUSE 30x90 GOING CHEAP PHONE 9342410224, 8660514834 DECOR

Sunkadakatte

SUNKADKATTE NEAR Anjali School South Facing 30X50 Available for Sale Rate. 5300/Sqft (Negotiable) Contact: 9880439138

BUSINESS

Business to Business

Finance

COMPREHENSIVE NPA Revival solutions, which Includes Saving of Property, OTS settlement and NPA funding for NPA categorised businesses. Visit and Apply at www.nparevival.com

WE ARRANGE Mortgage, House Purchase, Construction, Site Purchase and Mortgage Loans from Banks. Contact: 9353705002

Business Offers

Finance

NRI'S INVESTMENT And Finance AvailableOn LowInterest AgainstProperties, Land& Building,Sites,Flats, Converted& AgricultureLandsCall: 7411265189

FINANCE AGAINST Land & Building Properties Industries Schools Hospitals Projects & NRI Funds.7358729820

PERSONAL

Change of Name

I, MUNIYAMMA, R/a No. 66, 1st C cross, Shakthivel Nagar, Shanthinagar, Bangalore- 560030, declare that my name is wrongly mentioned in some documents as MUNIYAMMA B. Henceforth I shall be called MUNIYAMMA vide affidavit dated 31.08.2021 before Notary K.V. Mani, Bangalore.

I, MANJIT KAUR KOCHAR have changed my name MANJIT KAUR D/O NARINDER SINGH SUBLOK age-50 No.106-206 BRIGADE PARAMOUNT, NAGAVARAPALYA, CV RAMAN NAGAR, BANGALORE NORTH-560093 vide affidavit dt 31-08-2021 before notary S I Balaguru. Bangalore-84

I, VISHALAKSHI G A, D/o late Anand G.L aged 24 Years R/at 2nd Floor, Amruthabindu Ladies PG, #1039/B, 2nd Main Road,Vijayanagar, Bangalore-58. have changed my name to VIDYA A vide affidavit dated 22.08.2021 before notary Arun R Naik,Bangalore

I, P. Narasimhaiah Residing at No.34, 4th Cross, MHR Layout, Bangalore - 560090. have changed my name to NARASIMHA PANATHULA vide affidavit dated 31.08.2021 before notary B.V. Nagabhushana, Bangalore

I, ANKIT KUMAR ARJUNLAL MODI, residing at Bengaluru-27 have changed my name as ANKIT KUMAR MODI, vide affidavit dated-31/8/2021 before Notary P.C.Ramaiah,Bengaluru

SOKIRAY DEVI M/o 14830912L- HAV/MT- SHIV RAM SAINI, R/a Balaji Nagar, Jatanla, Mawanda kalan, Sikar, Rajasthan, changed name from SOKIRAY DEVI to SHYOKORI DEVI. DOB 01-01-1964. Notary KV Mani, Bangalore.

PUBLIC NOTICE

NOTICE
The National Association for the Blind,
Karnataka Branch, Bangalore - 560075
44th AGM Meeting will be held on Sunday, 26th September, 2021 at 11.00 AM.
(Due to the COVID, AGM will be held online)
All Life Members are requested to contact
outreach@nabkarnataka.org for login details

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

CONNECT

ಅರ್ಧ ಬೆಲೆಗೆ ಮಾರಾಟ
ನಂಬಲಾಗದ ಬೆಲೆಯಲ್ಲಿ
ಹನುಮಂತನಗರ ಮಾರುತಿ ಸರ್ಕಲ್‌ನಲ್ಲಿ
ಇವ್‌ಶ ಇಂಟರ್‌ನ್ಯಾಷನಲ್
(ಓಲ್ಡ್ ರಿತು ರೇಖ)
(OLD RITU REKHA)
ಡೀಲರ್ಸ್ ಇನ್:
ಸ್ಯಾರೀಸ್, ಸಿಲ್ಕ್ ಸ್ಯಾರೀಸ್, ವಿಶಾಲ್ ಸ್ಯಾರೀಸ್, ಲಕ್ಷ್ಮೀಪತಿ ಸ್ಯಾರೀಸ್, ಚಿಫ್ರಾನ್ ಸ್ಯಾರೀಸ್, ಕಾಟನ್ ಸ್ಯಾರೀಸ್, ಫ್ಯಾನ್ಸಿ ಸ್ಯಾರೀಸ್, ಮತ್ತು ವರ್ಕ್ ಸ್ಯಾರೀಸ್, ಲೆಹಂಗಾ, ಕುರ್ತಿ ಟಾಪ್ಸ್, ಲೆಗ್ಗಿಂಗ್ಸ್, ಪ್ಲಾಜೋ, ಲೇಡಿಸ್ ಜೀನ್ಸ್, ಪ್ಯಾಂಟ್, ಲೇಡಿಸ್ ಒಳ ಉಡುಪುಗಳು.
M: 91678 29321 / 97421 30299
ನೊ ಲಂಚ್ ಬ್ರೇಕ್
ಶೋರೂಂ ಸಮಯ: ಬೆಳಿಗ್ಗೆ 11.30 ರಿಂದ ರಾತ್ರಿ 8.30 ಗಂಟೆ
4ನೇ ಕ್ರಾಸ್, ಮಾರುತಿ ಸರ್ಕಲ್ ಹತ್ತಿರ, ಹನುಮಂತನಗರ, ಬೆಂಗಳೂರು–560019

ಹೊರ ವರ್ತುಲ ರಸ್ತೆ: ಟ್ಯಾಕ್ಸಿ, ಆಟೋರಿಕ್ಷಾ ಚಾಲಕರು, ಹೋಟೆಲ್ ಉದ್ಯಮಿಗಳಲ್ಲೂ ತಳಮಳ

ದಟ್ಟಣೆ ಭಯದಲ್ಲಿ ಐ.ಟಿ ಕಂಪನಿಗಳು

• ವಿಜಯಕುಮಾರ್ ಎಸ್.ಕೆ.

ಮಾರತಹಳ್ಳಿ ಬಳಿ ಬ್ಯಾರಿಕೇಡ್ ಅಳವಡಿಸಿರುವುದು —ಪ್ರಜಾವಾಣಿ ಚಿತ್ರ/ಎಂ.ಎಸ್.ಮಂಜುನಾಥ್

ಬೆಂಗಳೂರು: ಹೊರ ವರ್ತುಲ ರಸ್ತೆಯ (ಒಆರ್‌ಆರ್) ಸಂಚಾರ ದಟ್ಟಣೆ ಸೀಳಲು ಮೆಟ್ರೊ ರೈಲು ಮಾರ್ಗ ನಿರ್ಮಾಣ ಕಾಮಗಾರಿ ಆರಂಭವಾಗಿವೆ. ಈ ಕಾಮಗಾರಿ ಮುಗಿಯುವ ತನಕ ಸಂಚಾರ ದಟ್ಟಣೆಯ ನರಕ ನೆನಪಿಸುವ ಆತಂಕ ಹೊರ ವರ್ತುಲ ರಸ್ತೆಯ ಆಜುಬಾಜಿನ ಐ.ಟಿ ಕಂಪನಿಗಳು, ಅವುಗಳನ್ನು ನಂಬಿರುವ ಹೋಟೆಲ್ ಮತ್ತು ಟ್ಯಾಕ್ಸಿ ಉದ್ಯಮವನ್ನು ಕಾಡುತ್ತಿದೆ.

ಹೊರ ವರ್ತುಲ ರಸ್ತೆ ಎಂದ ಕೂಡಲೇ ಸಂಚಾರ ದಟ್ಟಣೆಯೇ ಕಣ್ಮುಂದೆ ಬರುತ್ತದೆ. ಐ.ಟಿ ಕಂಪನಿಗಳು ಈ ರಸ್ತೆಯ ಆಸುಪಾಸಿನಲ್ಲಿ ಕಟ್ಟಡಗಳನ್ನು ನೆಟ್ಟ ಮೇಲಂತೂ ದಟ್ಟಣೆ ಸಮಸ್ಯೆ ಇನ್ನಷ್ಟು ಉಲ್ಬಣಗೊಂಡಿತು. ಅದರಲ್ಲೂ ಸಿಲ್ಕ್ ಬೋರ್ಡ್‌ನಿಂದ ಕೆ.ಆರ್.ಪುರ ತನಕದ ಒಆರ್‌ಆರ್‌ನಲ್ಲಿ ದಟ್ಟಣೆ ಅಕ್ಷರಶಃ ರಕ್ಕಸನಂತೆ ಕಾಡುತ್ತಿದೆ.

ಈ ರಸ್ತೆಯಲ್ಲಿ ಈಗ ಆರಂಭವಾಗಿರುವ ಮೆಟ್ರೊ ಮಾರ್ಗದ ಕಾಮಗಾರಿಯೇ ಸಂಚಾರ ದಟ್ಟಣೆಯನ್ನು ಮತ್ತಷ್ಟು ಬಿಗಡಾಯಿಸುವಂತೆ ಮಾಡುವ ಸಾಧ್ಯತೆ ಇದೆ. ಆರು ಪಥದ ಒಆರ್‌ಆರ್ ರಸ್ತೆಯಲ್ಲಿ ಒಂದು ಕಡೆಗೆ ಸಾಗಲು ಮೂರು ಪಥಗಳಿವೆ. ಅದರಲ್ಲಿ ಎಡಭಾಗದ ಒಂದು ಪಥವನ್ನು ಬಸ್‌ಗಳ ಸಂಚಾರಕ್ಕಷ್ಟೇ ಕಾಯ್ದಿರಿಸಲಾಗಿದೆ. ರಸ್ತೆ ವಿಭಜಕದ ಪಕ್ಕದ ಒಂದು ಪಥಕ್ಕೆ

ವರ್ತುಲ ರಸ್ತೆಯೇ ಚಕ್ರವ್ಯೂಹ 4

ಮೆಟ್ರೊ ಮಾರ್ಗದ ಕಾಮಗಾರಿಗೆ ಬ್ಯಾರಿಕೇಡ್‌ಗಳನ್ನು ಅಳವಡಿಸಲಾಗುತ್ತಿದೆ. ಉಳಿದ ಒಂದು ಪಥವಷ್ಟೇ ಖಾಸಗಿ ಬಸ್‌ಗಳು, ಕಾರುಗಳು, ಲಾರಿಗಳು, ದ್ವಿಚಕ್ರ ವಾಹನಗಳ ಸಂಚಾರಕ್ಕೆ ಮುಕ್ತಗೊಂಡಿದೆ.

ಮೆಟ್ರೊ ಮಾರ್ಗದ ಕಾಮಗಾರಿ ಮುಗಿಯಲು ಕನಿಷ್ಠ ನಾಲ್ಕೈದು ವರ್ಷ ಬೇಕಾಗಲಿದೆ. ಅಲ್ಲಿಯವರೆಗೂ ಖಾಸಗಿ ವಾಹನಗಳ ಸಂಚಾರಕ್ಕೆ ಒಂದೇ ಒಂದು ಪಥ ಮುಕ್ತವಾಗಲಿದೆ. ಸದ್ಯ ಐ.ಟಿ ಕಂಪನಿಗಳ ಉದ್ಯೋಗಿಗಳು ಬಹುತೇಕ ಮನೆಯಿಂದಲೇ ಕೆಲಸ ಮಾಡುತ್ತಿದ್ದಾರೆ. ಕೋವಿಡ್ ಪ್ರಕರಣ ಕಡಿಮೆಯಾದರೆ ಹಿಂದಿನಂತೆ ಉದ್ಯೋಗಿಗಳನ್ನು ಕಚೇರಿಗೆ ಕರೆಸಿಕೊಳ್ಳಲಾಗುತ್ತದೆ. ಆಗ ಸಂಚಾರ ದಟ್ಟಣೆಯನ್ನು ನೆನಪಿಸಿಕೊಂಡರೆ ಭಯವಾಗುತ್ತದೆ ಎನ್ನುತ್ತಾರೆ ಟ್ಯಾಕ್ಸಿ ಚಾಲಕರು.

ಖಾಸಗಿ ವಾಹನಗಳ ಸಂಚಾರಕ್ಕೆ ಒಂದೇ ಒಂದು ಪಥ ತೆರೆದಿಟ್ಟರೆ ಒಂದು ಕಿಲೋ ಮೀಟರ್ ಸಾಗಬೇಕೆಂದರೆ ಕನಿಷ್ಠ 1 ಗಂಟೆಯೇ ಬೇಕಾಗಲಿದೆ. ಕೋವಿಡ್ ಬಳಿಕ ಬಾಡಿಗೆಯೇ ಸಿಗದ ಸ್ಥಿತಿಯಾಗಿದೆ. ಸಂಚಾರ ದಟ್ಟಣೆಯ ಭಯ ಕಾಡಿದರೆ ಜನರು ಟ್ಯಾಕ್ಸಿ ಮತ್ತು ಆಟೋರಿಕ್ಷಾಗಳನ್ನು ಹತ್ತುವುದೇ ಇಲ್ಲ. ನಮ್ಮ ಜೀವನ ಬೀದಿಗೆ ಬೀಳಲಿದೆ ಎಂದು ಟ್ಯಾಕ್ಸಿ ಚಾಲಕ ಕೃಷ್ಣಮೂರ್ತಿ ಹೇಳಿದರು.

‘ದುಬಾರಿ ಬಾಡಿಗೆ ನಿಗದಿ ಮಾಡಿಕೊಂಡು ಹೋಟೆಲ್ ಆರಂಭಿಸಿದ್ದೇವೆ. ಕೋವಿಡ್ ಬಳಿಕ ಜನರಿಲ್ಲದೆ ಕಷ್ಟದಲ್ಲಿ ಉದ್ಯಮ ನಡೆಸುತ್ತಿದ್ದೇವೆ. ಮೆಟ್ರೊ ಬ್ಯಾರಿಕೇಡ್‌ಗಳನ್ನು ನೋಡಿ ಭಯವಾಗುತ್ತಿದೆ ಎಂದು ಹೋಟೆಲ್ ನಡೆಸುತ್ತಿರುವ ಉದ್ಯಮಿಗಳು ಹೇಳುತ್ತಾರೆ. ಇದ್ದ ಜಮೀನು ನಮ್ಮ ಪೂರ್ವಿಕರೇ ಮಾರಾಟ ಮಾಡಿದ್ದಾರೆ. ರಸ್ತೆ ಬದಿಯ ಪೆಟ್ಟಿಗೆ ಅಂಗಡಿಯೇ ಜೀವನಾಧಾರ. ಸದ್ಯ ವ್ಯಾಪಾರವೇ ಇಲ್ಲವಾಗಿದೆ. ಮೆಟ್ರೊ ಕಾಮಗಾರಿ ಮುಗಿಯುವ ತನಕ ನಮ್ಮ ಸ್ಥಿತಿ ಸುಧಾರಿಸುವ ಲಕ್ಷಣಗಳಿಲ್ಲ’ ಎಂದು ಬೆಳ್ಳಂದೂರಿನ ಹನುಮಂತಪ್ಪ ಆತಂಕ ವ್ಯಕ್ತಪಡಿಸಿದರು.

ಐ.ಟಿ ಕಂಪನಿ ಬಸ್‌ಗಳಿಗೂ ಆದ್ಯತೆ ನೀಡಬೇಕು–ಸರ್ಕಾರಕ್ಕೆ ಮನವಿ

12 ಸೀಟ್‌ಗಿಂತ ಹೆಚ್ಚು ಸಾಮರ್ಥ್ಯ ಇರುವ ಐ.ಟಿ ಕಂಪನಿ ಬಸ್‌ಗಳಿಗೂ ಬಸ್ ಆದ್ಯತಾ ಪಥದಲ್ಲಿ ಸಂಚಾರಕ್ಕೆ ಅವಕಾಶ ನೀಡಬೇಕು ಎಂದು ಹೊರ ವರ್ತುಲ ರಸ್ತೆ ಕಂಪನಿಗಳ ಸಂಘ (ಒಆರ್‌ಆರ್‌ಸಿಎ) ಸರ್ಕಾರಕ್ಕೆ ಮನವಿ ಸಲ್ಲಿಸಿದೆ.

ಒಆರ್‌ಆರ್ ಆಸುಪಾಸಿನಲ್ಲಿ 300ಕ್ಕೂ ಹೆಚ್ಚು ಐ.ಟಿ ಕಂಪನಿಗಳಿದ್ದು, ಇಲ್ಲಿಗೆ ಬರುವ ಉದ್ಯೋಗಿಗಳಿಗೆ ಸಂಚಾರ ದಟ್ಟಣೆಯೇ ದೊಡ್ಡ ಸಮಸ್ಯೆಯಾಗಿದೆ. ಬೆಂಗಳೂರಿನ ಐ.ಟಿ ಕಂಪನಿಗಳ ವರಮಾನದಲ್ಲಿ ಶೇ 32ರಷ್ಟು ಈ ಕಂಪನಿಗಳಿಂದಲೇ ಬರುತ್ತಿದೆ. ಹೀಗಾಗಿ ಖಾಸಗಿ ಬಸ್‌ಗಳಿಗೂ ಈ ಪಥದಲ್ಲಿ ಸಂಚರಿಸಲು ಅವಕಾಶ ಬೇಕು ಎಂಬುದು ಅವರ ಮನವಿ.

‘ಬಸ್ ಪಥದಲ್ಲಿ ಕಂಪನಿ ಬಸ್‌ಗಳ ಸಂಚಾರಕ್ಕೆ ಬಿಎಂಟಿಸಿ ಒಪ್ಪಿಕೊಂಡಿದೆ. ಅವಕಾಶ ನೀಡುವುದಾಗಿ ಸರ್ಕಾರವೂ ಭರವಸೆ ನೀಡಿದೆ. ಮೆಟ್ರೊ ಮಾರ್ಗದ ಕಾಮಗಾರಿ ಆರಂಭವಾಗಿ ರಸ್ತೆ ಇನ್ನಷ್ಟು ಕಿರಿದಾಗಿದೆ. ಸರ್ಕಾರ ಕೂಡಲೇ ಒಪ್ಪಿಗೆ ನೀಡಬೇಕು. ಇಲ್ಲದಿದ್ದರೆ ಸಮಸ್ಯೆ ಉಲ್ಬಣಿಸಲಿದೆ’ ಎಂದು ಹೊರ ವರ್ತುಲ ರಸ್ತೆ ಕಂಪನಿಗಳ ಸಂಘದ ನವೀನ್‌ಕುಮಾರ್ ಹೇಳಿದರು.

ಚಿಕ್ಕಬಳ್ಳಾಪುರ ತಾಲ್ಲೂಕಿನ ನಂದಿ ಗಿರಿಧಾಮದಲ್ಲಿ ಭಾರಿ ಮಳೆಯಿಂದಾಗಿ ದಿಬ್ಬ ಕುಸಿದಿರುವ ದೃಶ್ಯ —ಪ್ರಜಾವಾಣಿ ಚಿತ್ರ

ನಂದಿಬೆಟ್ಟ: ದಿಬ್ಬ ಕುಸಿದೆಡೆ ಸ್ಟೀಲ್ ಬ್ರಿಡ್ಜ್

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ತಾಲ್ಲೂಕಿನ ನಂದಿಗಿರಿಧಾಮದಲ್ಲಿ ದಿಬ್ಬ ಕುಸಿದು ಹಾಳಾಗಿರುವ ರಸ್ತೆಯಲ್ಲಿ ಸ್ಟೀಲ್ ಬ್ರಿಡ್ಜ್ ನಿರ್ಮಿಸಲು ಲೋಕೋಪಯೋಗಿ ಇಲಾಖೆ ಮುಂದಾಗಿದೆ.

ಈ ಸಂಬಂಧ ಲೋಕೋಪಯೋಗಿ ಇಲಾಖೆ ತಾಂತ್ರಿಕ ಸಲಹಾ ಸಮಿತಿ ಅಧ್ಯಕ್ಷ ಜಯಪ್ರಸಾದ್ ಮಂಗಳವಾರ ಗುಡ್ಡ ಕುಸಿದು ರಸ್ತೆ ಹಾಳಾಗಿರುವ ಸ್ಥಳವನ್ನು ಪರಿಶೀಲಿಸಿದರು.

ಸುಮಾರು 40 ಮೀಟರ್ ಉದ್ದದ ಸ್ಟೀಲ್ ಬ್ರಿಡ್ಜ್ ನಿರ್ಮಾಣಕ್ಕೆ ಈ ವೇಳೆ ನಿರ್ಧರಿಸಲಾಯಿತು. ಸ್ಟೀಲ್ ಬ್ರಿಡ್ಜ್ ನಿರ್ಮಾಣಕ್ಕೂ ಮುನ್ನ ಪೈಪ್‌ಗಳನ್ನು ಅಳವಡಿಸಿ ತಾತ್ಕಾಲಿಕ ಸೇತುವೆ ಒಳಗೊಂಡ ರಸ್ತೆ ನಿರ್ಮಾಣಕ್ಕೆ ತೀರ್ಮಾನಿಸಲಾಗಿದೆ. ಈ ತಾತ್ಕಾಲಿಕ ರಸ್ತೆ ನಿರ್ಮಿಸಿದರೆ ಗಿರಿಧಾಮಕ್ಕೆ ಯಥಾಪ್ರಕಾರ ಪ್ರವಾಸಿಗರು ಭೇಟಿ ನೀಡಬಹುದು.

‘ಸ್ಟೀಲ್ ಬ್ರಿಡ್ಜ್ ನಿರ್ಮಾಣ ಸಂಬಂಧ ಶೀಘ್ರದಲ್ಲಿಯೇ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಗೊಳ್ಳಲಿದೆ. ಕನಿಷ್ಠ ಒಂದು ತಿಂಗಳ ಒಳಗಾಗಿ ತಾತ್ಕಾಲಿಕ ರಸ್ತೆ ನಿರ್ಮಾಣವಾಗಲಿದೆ. ಸರ್ಕಾರದ ಹಂತದಲ್ಲಿ ಮಾತುಕತೆ ನಡೆಸಿ ಸ್ಟೀಲ್ ಬ್ರಿಡ್ಜ್‌ಗೂ ಬೇಗ ಅನುದಾನ ದೊರಕಿಸಿಕೊಡುವುದಾಗಿ ಮೇಲಧಿಕಾರಿಗಳು ತಿಳಿಸಿದ್ದಾರೆ’ ಎಂದು ಲೋಕೋಪಯೋಗಿ ಇಲಾಖೆ ಕಾರ್ಯನಿರ್ವಾಹಕ ಎಂಜಿನಿಯರ್ ತಿಮ್ಮರಾಯಪ್ಪ ತಿಳಿಸಿದ್ದಾರೆ.

ಡ್ರಗ್ಸ್; ಮಹಿಳಾ ಉದ್ಯಮಿ, ವೈದ್ಯ ಬಂಧನ

ಪ್ರಜಾವಾಣಿ ವಾರ್ತೆ

ಸೋನಿಯಾ ಅಗರವಾಲ್

ಬೆಂಗಳೂರು: ಡ್ರಗ್ಸ್ ಪ್ರಕರಣದಲ್ಲಿ ಭಾಗಿಯಾದ ಆರೋಪದಡಿ ಮಹಿಳಾ ಉದ್ಯಮಿ ಸೋನಿಯಾ ಅಗರವಾಲ್ ಹಾಗೂ ಎಂಬಿಬಿಎಸ್ ವೈದ್ಯ ಡಾ.ದಿಲೀಪ್ ಎಂಬುವವರನ್ನು ಗೋವಿಂದಪುರ ಠಾಣೆ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

‘ಡ್ರಗ್ಸ್ ಮಾರಾಟ ಪ್ರಕರಣದಲ್ಲಿ ನೈಜೀರಿಯಾದ ಥಾಮಸ್ ಕಲ್ಲು ಎಂಬಾತನನ್ನು ಇತ್ತೀಚೆಗಷ್ಟೇ ಬಂಧಿಸಲಾಗಿತ್ತು. ಆತ ಹಾಗೂ ಇತರೆ ಪೆಡ್ಲರ್‌ಗಳ ಬಳಿ ಆರೋಪಿಗಳಾದ ಸೋನಿಯಾ ಮತ್ತು ದಿಲೀಪ್ ಡ್ರಗ್ಸ್ ಖರೀದಿಸಿ ಸೇವಿಸಿದ್ದು ತನಿಖೆಯಿಂದ ಗೊತ್ತಾಗಿದೆ. ಹೀಗಾಗಿ, ಅವರಿಬ್ಬರನ್ನು ಬಂಧಿಸಲಾಗಿದೆ. ನ್ಯಾಯಾಲಯಕ್ಕೆ ಹಾಜರುಪಡಿಸಿ ವಿಚಾರಣೆಗಾಗಿ ಐದು ದಿನ ಕಸ್ಟಡಿಗೆ ಪಡೆಯಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಸೌಂದರ್ಯ ವರ್ಧಕ ಮಾರಾಟ ಕಂಪನಿ ನಡೆಸುತ್ತಿದ್ದ ಸೋನಿಯಾ, ರೂಪದರ್ಶಿಯೂ ಆಗಿದ್ದರು. ಎಂಬಿಬಿಎಸ್ ವೈದ್ಯರಾಗಿದ್ದ ದಿಲೀಪ್, ಕಾಲೇಜೊಂದರಲ್ಲಿ ಎಂ.ಎಸ್ ಮಾಡುತ್ತಿದ್ದರು. ಎರಡೂವರೆ ವರ್ಷಗಳಿಂದ ಅವರಿಬ್ಬರು ಸ್ನೇಹಿತರಾಗಿದ್ದರು. ಒಟ್ಟಿಗೆ ಪಾರ್ಟಿಗಳಿಗೂ ಹೋಗಿ ಬರುತ್ತಿದ್ದರು’ ಎಂದೂ ತಿಳಿಸಿದರು.

ದಾಳಿ ವೇಳೆ ಗಾಂಜಾ ಜಪ್ತಿ: ‘ನೈಜೀರಿಯಾ ಪ್ರಜೆ ನೀಡಿದ್ದ ಮಾಹಿತಿ ಆಧರಿಸಿ ಸೋನಿಯಾ ಅವರ ರಾಜಾಜಿನಗರದಲ್ಲಿರುವ ಮನೆ ಮೇಲೆ ಸೋಮವಾರ ದಾಳಿ ಮಾಡಲಾಗಿತ್ತು. ಅಲ್ಲಿ ಗಾಂಜಾ ಸಿಕ್ಕಿತು. ದಿಲೀಪ್ ಅವರ ಕಾರಿನಲ್ಲಿ ತಪಾಸಣೆ ನಡೆಸಿದಾಗಲೂ ಗಾಂಜಾ ಸಿಕ್ಕಿದೆ’ ಎಂದು ಅಧಿಕಾರಿ ಹೇಳಿದರು.

‘ದಾಳಿ ಸಂದರ್ಭದಲ್ಲೇ ಇಬ್ಬರನ್ನೂ ವಶಕ್ಕೆ ಪಡೆದು, ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಯಿತು. ಇಬ್ಬರೂ ಡ್ರಗ್ಸ್ ಸೇವನೆ ಮಾಡಿರುವುದನ್ನು ಖಚಿತಪಡಿಸಿ ವೈದ್ಯರು ವರದಿ ನೀಡಿದ್ದಾರೆ. ಅದನ್ನು ಆಧರಿಸಿ ಆರೋಪಿಗಳ ವಿರುದ್ಧ ಪ್ರಕರಣವನ್ನೂ ದಾಖಲಿಸಿಕೊಳ್ಳಲಾಗಿದೆ’ ಎಂದೂ ತಿಳಿಸಿದರು.

‘ಬಂಧಿತ ಆರೋಪಿಗಳ ಜೊತೆ ನಾಲ್ವರು ಒಡನಾಟ ಹೊಂದಿರುವ ಮಾಹಿತಿ ಸಿಕ್ಕಿದೆ. ವಿಚಾರಣೆಗಾಗಿ ಠಾಣೆಗೆ ಬರುವಂತೆ ನಾಲ್ವರಿಗೂ ನೋಟಿಸ್ ನೀಡಲಾಗಿದೆ’ ಎಂದು ಅಧಿಕಾರಿ ಮಾಹಿತಿ ನೀಡಿದರು.

ಕದ್ದಾಲಿಕೆ: ಸಿಬಿಐ ವರದಿ ಪ್ರಶ್ನಿಸಿದ ಭಾಸ್ಕರ್ ರಾವ್

ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ಅವಧಿಯ ಪ್ರಕರಣ: ನ್ಯಾಯಾಲಯಕ್ಕೆ ತಕರಾರು ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್– ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ನಡೆದಿದ್ದ ದೂರವಾಣಿ ಕದ್ದಾಲಿಕೆ ಪ್ರಕರಣದ ತನಿಖೆಯನ್ನು ಕೈಬಿಡುವಂತೆ ಸಿಬಿಐ ಸಲ್ಲಿಸಿರುವ ಅಂತಿಮ ವರದಿಯನ್ನು ಪ್ರಶ್ನಿಸಿ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್ ಸಿಬಿಐ ಪ್ರಕರಣಗಳ ವಿಶೇಷ ನ್ಯಾಯಾಲಯಕ್ಕೆ ಮಂಗಳವಾರ ತಕರಾರು ಅರ್ಜಿ ಸಲ್ಲಿಸಿದ್ದಾರೆ.

ದೂರವಾಣಿ ಕದ್ದಾಲಿಕೆ ಪ್ರಕರಣವನ್ನು ಎರಡು ಭಾಗಗಳಾಗಿ ವಿಭಜಿಸಿ ಸಿಬಿಐ ತನಿಖೆ ನಡೆಸಿತ್ತು. ಕದ್ದಾಲಿಕೆ ಕುರಿತು ಪ್ರಾಥಮಿಕ ತನಿಖೆ ನಡೆಸಿದರೆ, ಕದ್ದಾಲಿಸಿ ರೆಕಾರ್ಡಿಂಗ್ ಮಾಡಿದ್ದ ದೂರವಾಣಿ ಸಂಭಾಷಣೆಯ ತುಣುಕುಗಳನ್ನು ಸೋರಿಕೆ ಮಾಡಿದ ಆರೋಪದ ಕುರಿತು ಎಫ್‌ಐಆರ್ ದಾಖಲಿಸಿ ತನಿಖೆ ನಡೆಸಿತ್ತು. ಐಪಿಎಸ್ ಅಧಿಕಾರಿ ಅಲೋಕ್ ಕುಮಾರ್ ಮತ್ತಿತರರ ವಿರುದ್ಧ ಎರಡನೇ ಪ್ರಕರಣದಲ್ಲಿ ತನಿಖೆ ಕೈಬಿಡುವಂತೆ ಶಿಫಾರಸು ಮಾಡಿ ಜೂನ್ 30ರಂದು ತನಿಖಾಧಿಕಾರಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಿದ್ದರು.

‘ಆಗ ಬೆಂಗಳೂರು ನಗರ ಪೊಲೀಸ್ ಕಮಿಷನರ್ ಹುದ್ದೆಯಲ್ಲಿದ್ದ ಭಾಸ್ಕರ್ ರಾವ್ ಮತ್ತು ಫರಾಜ್ ಎಂಬುವವರ ನಡುವಿನ ದೂರವಾಣಿ ಸಂಭಾಷಣೆಯ ಕದ್ದಾಲಿಕೆ ಹಾಗೂ ಸೋರಿಕೆ ಮಾಡಿರುವುದು ದೃಢಪಟ್ಟಿದ್ದರೂ, ಸೋರಿಕೆ ಯಾವ ಮಾರ್ಗವಾಗಿ ನಡೆದಿದೆ ಎಂಬುದಕ್ಕೆ ಸರಿಯಾದ ಸಾಕ್ಷ್ಯ ಲಭಿಸಿಲ್ಲ. ಈ ಕಾರಣದಿಂದ ಪ್ರಕರಣವು ವಿಚಾರಣೆಯ ಹಂತದಲ್ಲಿ ನಿಲ್ಲುವುದು ಕಷ್ಟ’ ಎಂಬ ಅಭಿಪ್ರಾಯದೊಂದಿಗೆ ಸಿಬಿಐ ಎಸ್‌ಪಿ ಕಿರಣ್ ಎಸ್. ನ್ಯಾಯಾಲಯಕ್ಕೆ ಸಲ್ಲಿಸಿದ್ದ ವರದಿಯಲ್ಲಿ ತಿಳಿಸಿದ್ದರು.

‘ಭಾಸ್ಕರ್ ರಾವ್ ಮತ್ತು ಫರಾಜ್ ನಡುವಿನ ಸಂಭಾಷಣೆಯನ್ನು ‘ಆಡಿಯೊ ಬಾಂಬ್ ಮಹಾ ಎಕ್ಸ್‌ಕ್ಲೂಸಿವ್’ ಶೀರ್ಷಿಕೆಯಡಿ ನ್ಯೂಸ್–18 ಕನ್ನಡ ಸುದ್ದಿ ವಾಹಿನಿಯಲ್ಲಿ ಪ್ರಕಟಿಸಲಾಗಿತ್ತು. ಬೆಂಗಳೂರು ನಗರ ಪೊಲೀಸ್ ಕಮಿಷನರೇಟ್‌ನ ತಾಂತ್ರಿಕ ಸೇವಾ ಘಟಕದಲ್ಲಿ (ಟಿಎಸ್‌ಸಿ) ಕದ್ದಾಲಿಕೆ ಮಾಡಲಾಗಿತ್ತು. ರೆಕಾರ್ಡ್ ಮಾಡಿದ್ದ ಆಡಿಯೊ ತುಣುಕುಗಳನ್ನು ಆಗಿನ ಪೊಲೀಸ್ ಕಮಿಷನರ್ ಅಲೋಕ್ ಕುಮಾರ್ ತರಿಸಿಕೊಂಡಿದ್ದರು. ಆ ಬಳಿಕ ನ್ಯೂಸ್–18 ಕನ್ನಡ ಸುದ್ದಿ ವಾಹಿನಿಯ ಪತ್ರಕರ್ತೆ ಕುಶಲ ಅವರಿಗೆ ತಲುಪಿಸಲಾಗಿತ್ತು. ಆದರೆ, ಆಡಿಯೊ ತುಣುಕು ರವಾನಿಸಿದ ಬಳಿಕ ಅಲೋಕ್ ಕುಮಾರ್ ಮತ್ತು ಇನ್‌ಸ್ಪೆಕ್ಟರ್ ಮಿರ್ಜಾ ಅಲಿ ರಾಜಾ ತಮ್ಮ ಮೊಬೈಲ್‌ಗಳನ್ನು ಫಾರ್ಮ್ಯಾಟ್ ಮಾಡಿರುವುದರಿಂದ ಸಾಕ್ಷ್ಯ ಪತ್ತೆ ಮಾಡಲು ಸಾಧ್ಯವಾಗಿಲ್ಲ’ ಎಂದು ಸಿಬಿಐ ಸಲ್ಲಿಸಿರುವ ವರದಿಯನ್ನು ಭಾಸ್ಕರ್ ರಾವ್ ಪ್ರಶ್ನಿಸಿದ್ದಾರೆ.

ತಾವು ದೂರವಾಣಿ ಕದ್ದಾಲಿಕೆ ಪ್ರಕರಣದ ಸಂತ್ರಸ್ತ. ಆರೋಪಿಗಳ ವಿರುದ್ಧ ಸಾಕ್ಷ್ಯಗಳು ಲಭ್ಯವಿದ್ದರೂ, ಪ್ರಕರಣ ಮುಕ್ತಾಯಕ್ಕೆ ವರದಿ ಸಲ್ಲಿಸಲಾಗಿದೆ. ಮೊಬೈಲ್‌ಗಳನ್ನು ಫಾರ್ಮ್ಯಾಟ್ ಮಾಡಿ, ಸಾಕ್ಷ್ಯ ನಾಶ ಮಾಡಿರುವ ಕಾರಣಕ್ಕಾಗಿಯೇ ಅಲೋಕ್ ಕುಮಾರ್ ವಿರುದ್ಧ ಕ್ರಮ ಜರುಗಿಸಲು ಅವಕಾಶವಿದೆ. ಸಿಬಿಐ ವರದಿಯನ್ನು ತಿರಸ್ಕರಿಸಿ ಹೆಚ್ಚಿನ ತನಿಖೆಗೆ ನಿರ್ದೇಶನ ನೀಡಬೇಕು ಅಥವಾ ನೇರವಾಗಿ ವಿಚಾರಣೆ ಆರಂಭಿಸಬೇಕು ಎಂದು ಮನವಿ ಮಾಡಿದ್ದಾರೆ.

ಪ್ರಾಥಮಿಕ ತನಿಖೆ ಏನಾಗಿದೆ?

ಭಾಸ್ಕರ್ ರಾವ್

‘ದೂರವಾಣಿ ಕದ್ದಾಲಿಕೆ ಕುರಿತು ಪ್ರಾಥಮಿಕ ತನಿಖೆ ನಡೆಸಿರುವುದನ್ನು ಸಿಬಿಐ ತನ್ನ ಅಂತಿಮ ವರದಿಯಲ್ಲಿ ಉಲ್ಲೇಖಿಸಿದೆ. ಆದರೆ, ಪ್ರಾಥಮಿಕ ತನಿಖೆಯ ವರದಿಯನ್ನು ಲಗತ್ತಿಸಿಲ್ಲ ಮತ್ತು ಅಲ್ಲಿ ಕಂಡುಬಂದ ಅಂಶಗಳೇನು ಎಂಬುದನ್ನೂ ಹೇಳಿಲ್ಲ’ ಎಂದು ಭಾಸ್ಕರ್ ರಾವ್ ತಕರಾರು ಅರ್ಜಿಯಲ್ಲಿ ಆಕ್ಷೇಪಿಸಿದ್ದಾರೆ.

ಪ್ರಕರಣದ ತನಿಖೆ ಕೈಬಿಡಬೇಕೆಂಬ ಸಿಬಿಐ ಅಧಿಕಾರಿಗಳ ಅಂತಿಮ ಅಭಿಪ್ರಾಯ ಮತ್ತು ಪ್ರಕರಣದಲ್ಲಿ ಪತ್ತೆಮಾಡಿರುವ ಸಾಕ್ಷ್ಯಗಳ ನಡುವೆ ಹೊಂದಾಣಿಕೆ ಇಲ್ಲ. ತಾನೇ ತನಿಖೆ ಆರಂಭಿಸಿದ್ದ ತನಿಖೆಯನ್ನು ಅಂತ್ಯಗೊಳಿಸಲು ಸಿಬಿಐ ಅತ್ಯುತ್ಸಾಹ ಪ್ರದರ್ಶಿಸುತ್ತಿರುವುದು ಕಂಡುಬಂದಿದೆ ಎಂದು ಅರ್ಜಿಯಲ್ಲಿ ಉಲ್ಲೇಖಿಸಿದ್ದಾರೆ.

ವಾಹನ ದಟ್ಟಣೆ ನಗರದ ಗೂಡ್‌ಶೆಡ್ ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಕೈಗೊಂಡಿರುವುದರಿಂದ ಎಸ್.ಜೆ.ಪಿ ರಸ್ತೆಯಲ್ಲಿ ಮಂಗಳವಾರ ವಾಹನ ದಟ್ಟಣೆ ಉಂಟಾಗಿತ್ತು —ಪ್ರಜಾವಾಣಿ ಚಿತ್ರ

ಶ್ರೀರಾಮುಲು ಹೆಸರಿನಲ್ಲಿ ವಂಚನೆ: ‘ಮಧ್ಯವರ್ತಿ’ ಬಂಧನ

ಬೆಂಗಳೂರು: ಸರ್ಕಾರಿ ಕೆಲಸ ಕೊಡಿಸುವುದಾಗಿ ಆಮಿಷವೊಡ್ಡಿ ವ್ಯಕ್ತಿಯೊಬ್ಬರಿಂದ ₹ 5 ಲಕ್ಷ ಪಡೆದು ವಂಚಿಸಿದ ಆರೋಪದಡಿ ಧರ್ಮತೇಜ್ ಎಂಬಾತನನ್ನು ಕೊಡಿಗೇಹಳ್ಳಿ ಪೊಲೀಸರು ಬಂಧಿಸಿದ್ದಾರೆ.

‘ಸ್ಥಳೀಯ ನಿವಾಸಿ ಧರ್ಮತೇಜ್, ರಿಯಲ್ ಎಸ್ಟೇಟ್ ಮಧ್ಯವರ್ತಿ. ಸಾರಿಗೆ ಸಚಿವ ಶ್ರೀರಾಮುಲು ಅವರ ಸಂಬಂಧಿ ಎಂದು ಹೇಳಿಕೊಂಡು ವಂಚಿಸುತ್ತಿದ್ದ. ಪ್ರದೀಪ್ ಎಂಬುವವರು ನೀಡಿದ್ದ ದೂರು ಆಧರಿಸಿ ಆತನನ್ನು ಬಂಧಿಸಲಾಗಿದೆ. ನ್ಯಾಯಾಲಯಕ್ಕೆ ಹಾಜರುಪಡಿಸಿ, ಹೆಚ್ಚಿನ ವಿಚಾರಣೆಗಾಗಿ 3 ದಿನ ಕಸ್ಟಡಿಗೆ ಪಡೆಯಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಶ್ರೀರಾಮಲು ಅವರ ಆಪ್ತ ಸಹಾಯಕನೆಂದೂ ಹೇಳಿಕೊಳ್ಳುತ್ತಿದ್ದ ಧರ್ಮತೇಜ್, ದೂರುದಾರ ಪ್ರದೀಪ್ ಅವರನ್ನು ಕಳೆದ ವರ್ಷ ಪರಿಚಯ ಮಾಡಿಕೊಂಡಿದ್ದ. ‘ವಿಧಾನಸೌಧದಲ್ಲಿ ಸರ್ಕಾರಿ ಕೆಲಸ ಖಾಲಿ ಇದೆ. ಹಣ ಕೊಟ್ಟರೆ ನಿನಗೆ ಕೊಡಿಸುತ್ತೇನೆ’ ಎಂಬುದಾಗಿ ಧರ್ಮತೇಜ್ ಹೇಳಿದ್ದ. ಅದನ್ನು ನಂಬಿದ್ದ ದೂರುದಾರ, ಆರೋಪಿಗೆ ₹5 ಲಕ್ಷ ಕೊಟ್ಟಿದ್ದರು. ಈ ಸಂಗತಿ ದೂರಿನಲ್ಲಿತ್ತು.’

‘ಹಣ ಪಡೆದು ಹಲವು ತಿಂಗಳಾದರೂ ಕೆಲಸ ಕೊಡಿಸಿರಲಿಲ್ಲ. ದೂರುದಾರ, ಹಣ ವಾಪಸು ನೀಡುವಂತೆ ಒತ್ತಾಯಿಸಿದ್ದರು. ಕೋಪಗೊಂಡಿದ್ದ ಆರೋಪಿ, ಹಣ ನೀಡುವುದಿಲ್ಲವೆಂದು ಬೆದರಿಕೆ ಹಾಕಿದ್ದ’ ಎಂದೂ ಮೂಲಗಳು ಹೇಳಿವೆ.

ಭಕ್ತರ ಚಿನ್ನಾಭರಣ ಕದಿಯುತ್ತಿದ್ದ ಮಹಿಳೆ ಬಂಧನ: ₹ 20 ಲಕ್ಷ ಮೌಲ್ಯದ ಒಡವೆ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವರ ದರ್ಶನಕ್ಕೆಂದು ಕುಕ್ಕೆ ಸುಬ್ರಹ್ಮಣ್ಯಕ್ಕೆ ಹೋಗಿ ಅಲ್ಲಿನ ಭಕ್ತರ ಚಿನ್ನಾಭರಣಗಳನ್ನು ಕದ್ದು ನಗರಕ್ಕೆ ಬಂದು ನೆಲೆಸಿದ್ದ ಮಹಿಳೆಯನ್ನು ಯಶವಂತಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮಮತಾ ಬಂಧಿತ ಮಹಿಳೆ. ಆಕೆಯಿಂದ ₹20.2 ಲಕ್ಷ ಮೌಲ್ಯದ ಒಟ್ಟು 439.32 ಗ್ರಾಂ ಚಿನ್ನಾಭರಣ ವಶಪಡಿಸಿಕೊಳ್ಳಲಾಗಿದೆ.

‘ಯಶವಂತಪುರ 1ನೇ ಮುಖ್ಯ ರಸ್ತೆಯಲ್ಲಿರುವ ಎಸ್.ಕೆ.ಜ್ಯುವೆಲ್ಲರಿ ಸಮೀಪ ಆಗಸ್ಟ್ 25ರ ರಾತ್ರಿ 10.20ರ ಸುಮಾರಿಗೆ ಮಹಿಳೆ ಹಾಗೂ ಪುರುಷನೊಬ್ಬ ಅನುಮಾನಾಸ್ಪದವಾಗಿ ತಿರುಗಾಡುತ್ತಿರುವ ಬಗ್ಗೆ ಖಚಿತ ಮಾಹಿತಿ ಲಭ್ಯವಾಗಿತ್ತು. ಗಸ್ತಿನಲ್ಲಿದ್ದ ಸಿಬ್ಬಂದಿ ಸ್ಥಳಕ್ಕೆ ಹೋದ ಕೂಡಲೇ ಅವರಿಬ್ಬರು ಪರಾರಿಯಾಗಲು ಪ್ರಯತ್ನಿಸಿದರು. ಇದರಿಂದ ಅನುಮಾನಗೊಂಡ ಸಿಬ್ಬಂದಿ ಮಹಿಳೆಯನ್ನು ಬೆನ್ನಟ್ಟಿ ಹಿಡಿದಿದ್ದಾರೆ. ಆಕೆಯ ಜೊತೆಗಿದ್ದ ವ್ಯಕ್ತಿ ತಪ್ಪಿಸಿಕೊಂಡಿದ್ದಾನೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ತಾನು ಆಂಧ್ರಪ್ರದೇಶದವಳು ಎಂಬುದನ್ನು ಮಹಿಳೆ ಒಪ್ಪಿಕೊಂಡಿದ್ದಾಳೆ. ಕದ್ದ ಆಭರಣಗಳನ್ನು ಬೆಂಗಳೂರಿನ ವಿವಿಧ ಅಂಗಡಿಗಳಲ್ಲಿ ಗಿರವಿ ಇಟ್ಟಿರುವ ಮಾಹಿತಿಯನ್ನು ವಿಚಾರಣೆ ವೇಳೆ ಬಹಿರಂಗಪಡಿಸಿದ್ದಾಳೆ. ಗಿರವಿ ಇಟ್ಟಿರುವ ಕುರಿತ 10 ರಸೀದಿಗಳು ಆಕೆಯ ಬಳಿ ಸಿಕ್ಕಿವೆ. 4 ಗ್ರಾಂ ತೂಕದ ಎರಡು ಚಿನ್ನದ ಉಂಗುರಗಳು ಹಾಗೂ ಸರದಲ್ಲಿ ಪೋಣಿಸುವ ಚಿನ್ನದ ಚಿಕ್ಕ ಗುಂಡುಗಳನ್ನೂ ವಶಕ್ಕೆ ಪಡೆಯಲಾಗಿದೆ’ ಎಂದಿದ್ದಾರೆ.

‘ಎರಡು ವರ್ಷಗಳ ಹಿಂದೆ ಗಂಡನನ್ನು ಕಳೆದುಕೊಂಡಿದ್ದ ಮಹಿಳೆ, ಪರಿಚಿತ ವ್ಯಕ್ತಿಯೊಂದಿಗೆ ಇತ್ತೀಚೆಗೆ ವಿವಾಹವಾಗಿದ್ದಳು. ಆಗಸ್ಟ್ 19ರಂದು ಇಬ್ಬರೂ ಧರ್ಮಸ್ಥಳಕ್ಕೆ ಹೋಗಿ ದೇವರ ದರ್ಶನ ಪಡೆದಿದ್ದರು. ಮರುದಿನ ಕುಕ್ಕೆ ಸುಬ್ರಹ್ಮಣ್ಯಕ್ಕೆ ಹೋಗಿದ್ದರು. ಉಪಹಾರ ಸೇವಿಸಲು ಹೋಟೆಲ್‌ವೊಂದಕ್ಕೆ ತೆರಳಿದ್ದ ಈ ದಂಪತಿ, ಪಕ್ಕದ ಟೇಬಲ್ ಬಳಿ ಇಟ್ಟಿದ್ದ ನೀಲಿ ಬಣ್ಣದ ಬ್ಯಾಗ್ ಕದ್ದಿದ್ದರು. ಅದರಲ್ಲಿದ್ದ ಗಂಟಿನಲ್ಲಿ ಲಕ್ಷಾಂತರ ಮೌಲ್ಯದ ಚಿನ್ನಾಭರಣಗಳಿದ್ದವು. ಅಲ್ಲಿಂದ ಬೆಂಗಳೂರಿಗೆ ಬಂದಿದ್ದ ಇಬ್ಬರೂ ಲಗ್ಗೆರೆಯ ಮಾರಮ್ಮ ದೇವಸ್ಥಾನದ ಸಮೀಪ ಕೊಠಡಿಯೊಂದನ್ನು ಬಾಡಿಗೆಗೆ ಪಡೆದು ವಾಸಿಸುತ್ತಿದ್ದರು’ ಎಂದು ಹೇಳಿದ್ದಾರೆ.

‘ತಲೆಮರೆಸಿಕೊಂಡಿರುವ ಮತ್ತೊಬ್ಬ ಆರೋಪಿ ಮಹಾದೇವ್ ಎಂಬಾತನ ಪತ್ತೆ ಕಾರ್ಯ ಪ್ರಗತಿಯಲ್ಲಿದೆ. ಕುಕ್ಕೆ ಸುಬ್ರಹ್ಮಣ್ಯ ಪೊಲೀಸರಿಗೂ ಮಾಹಿತಿ ರವಾನಿಸಲಾಗಿದೆ’ ಎಂದಿದ್ದಾರೆ.

ಕೆ.ಜಿ. ಹಳ್ಳಿಯಲ್ಲಿ ಹಾಲು ವ್ಯಾಪಾರಿ ಕೊಲೆ

ಕಾಡುಗೊಂಡನಹಳ್ಳಿ (ಕೆ.ಜಿ. ಹಳ್ಳಿ) ಠಾಣೆ ವ್ಯಾಪ್ತಿಯಲ್ಲಿ ರವಿ ಎಂಬುವವರನ್ನು ಸೋಮವಾರ ಮಧ್ಯಾಹ್ನ ಕೊಲೆ ಮಾಡಲಾಗಿದ್ದು, ಪರಿಚಯಸ್ಥರೇ ಕೃತ್ಯ ಎಸಗಿರುವ ಅನುಮಾನ ವ್ಯಕ್ತವಾಗಿದೆ.

‘ಬಾಣಸವಾಡಿ ನಿವಾಸಿ ರವಿ, ಕೆ.ಜಿ. ಹಳ್ಳಿ ಮಾರುಕಟ್ಟೆಯಲ್ಲಿ ಹಾಲು ವ್ಯಾಪಾರ ಮಾಡುತ್ತಿದ್ದರು. ಮಧ್ಯಾಹ್ನ 12 ಗಂಟೆ ಸುಮಾರಿಗೆ ಅವರಿಗೆ ಕರೆ ಮಾಡಿದ್ದ ದುಷ್ಕರ್ಮಿಗಳು, ನಿರ್ಜನ ಪ್ರದೇಶಕ್ಕೆ ಕರೆದಿದ್ದರು. ಅಲ್ಲಿಯೇ ಅವರ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿ ದುಷ್ಕರ್ಮಿಗಳು ಪರಾರಿಯಾಗಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ತೀವ್ರ ಗಾಯಗೊಂಡು ನರಳುತ್ತಿದ್ದ ರವಿ ಅವರನ್ನು ಸ್ಥಳೀಯರೇ ಸಮೀಪದ ಆಸ್ಪತ್ರೆಗೆ ಕರೆದೊಯ್ದಿದ್ದರು. ಅಲ್ಲಿ ಚಿಕಿತ್ಸೆಗೆ ಸ್ಪಂದಿಸದೇ ರವಿ ಅಸುನೀಗಿದ್ದಾರೆ. ಕೊಲೆ ಬಗ್ಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಲಾಗಿದೆ’ ಎಂದೂ ತಿಳಿಸಿದರು.

ಸಾಂತ್ವನ ಕೇಂದ್ರ ಸ್ಥಗಿತ: ಸೆ. 6ಕ್ಕೆ ಪ್ರತಿಭಟನೆ

ಬೆಂಗಳೂರು: ರಾಜ್ಯದಾದ್ಯಂತ ಸಾಂತ್ವನ ಕೇಂದ್ರಗಳನ್ನು ಪುನರಾರಂಭ ಮಾಡುವಂತೆ ಆಗ್ರಹಿಸಿ, ಈ ಕೇಂದ್ರಗಳ ನೌಕರರು ಸೆ. 6ರಂದು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಲಿದ್ದಾರೆ.

ಸಾಂತ್ವನ ಕೇಂದ್ರಗಳ ನೌಕರರ ಸಂಘಟನೆಯ ಪ್ರಮುಖರಾದ ಡಾ. ಇಸಬೆಲ್ಲಾ ಕ್ಸೇವಿಯರ್, ಎನ್.ಎಂ. ಮೇಟಿ, ಜಗದೀಶ್ ನಾವಳ್ಳಿ ಮತ್ತು ಭೀಮಯ್ಯ ನೇತೃತ್ವದಲ್ಲಿ ಸೋಮವಾರ ನಡೆದ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಪ್ರತಿ ಜಿಲ್ಲೆಯಿಂದ ತಲಾ 15 ಜನರು ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ನಿರ್ಧರಿಸಲಾಗಿದೆ.

‘ನೊಂದ ಮಹಿಳೆಯರಿಗೆ ಸಾಂತ್ವನ ಹೇಳುವುದಕ್ಕಾಗಿ ರಾಜ್ಯದ ವಿವಿಧೆಡೆ 187 ಸಾಂತ್ವನ ಕೇಂದ್ರಗಳನ್ನು 2001 ರಲ್ಲಿ ಆರಂಭಿಸಲಾಗಿತ್ತು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು, ಅನುದಾನದ ಕೊರತೆ ಕಾರಣ ನೀಡಿ ಈ ಕೇಂದ್ರಗಳ ಬಾಗಿಲು ಮುಚ್ಚಿದೆ. ಇದರಿಂದ ಉದ್ಯೋಗ ಕಳೆದುಕೊಂಡಿರುವ ನೌಕರರು ಪ್ರತಿಭಟನೆಗೆ ಮುಂದಾಗಿದ್ದಾರೆ. ಪ್ರತಿಭಟನೆಗೆ ಬೆಂಗಳೂರು ನಗರ ಪೊಲೀಸ್ ಕಮಿಷನರ್ ಅವರಿಂದ ಅನುಮತಿಯನ್ನೂ ಪಡೆಯಲಾಗಿದೆ’ ಎಂದು ಹೋರಾಟ ಸಮಿತಿಯ ಸಂಚಾಲಕಿ ಇಸಬೆಲ್ಲಾ ಕ್ಸೇವಿಯರ್ ತಿಳಿಸಿದ್ದಾರೆ.

ಅಸಾರಾಂಗೆ ಜಾಮೀನು ನಿರಾಕರಣೆ

ನವದೆಹಲಿ (ಪಿಟಿಐ): ಅಪ್ರಾಪ್ತ ಬಾಲಕಿಯ ಮೇಲೆ ಅತ್ಯಾಚಾರ ನಡೆಸಿದ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಸ್ವಯಂಘೋಷಿತ ದೇವಮಾನವ ಅಸಾರಾಂ ಅವರು ಆಯುರ್ವೇದ ಚಿಕಿತ್ಸೆಗಾಗಿ ಕೋರಿ ಸಲ್ಲಿಸಿದ್ದ ಮಧ್ಯಂತರ ಜಾಮೀನು ಅರ್ಜಿಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ವಜಾ ಗೊಳಿಸಿದೆ.

ನ್ಯಾಯಮೂರ್ತಿಗಳಾದ ಇಂದಿರಾ ಬ್ಯಾನರ್ಜಿ ಅವರ ನೇತೃತ್ವದ ತ್ರಿಸದಸ್ಯ ಪೀಠವು, ‘ಅರ್ಜಿದಾರರು ಸಾಮಾನ್ಯ ಅಪರಾಧವನ್ನು ಮಾಡಿಲ್ಲ. ಅವರು ತಮ್ಮ ಆಯುರ್ವೇದ ಚಿಕಿತ್ಸೆಗಳನ್ನು ಜೈಲಿನಲ್ಲಿಯೇ ಪಡೆಯುತ್ತಾರೆ’ ಎಂದು ಹೇಳಿದೆ.

ಎಫ್‌ಡಿಎ ಮೃತದೇಹ ಪತ್ತೆ: ಆತ್ಮಹತ್ಯೆ ಶಂಕೆ



ಪ್ರಕಾಶ್ ಬಾಬು

ಬೆಂಗಳೂರು: ಉಪ್ಪಾರಪೇಟೆ ಠಾಣೆ ವ್ಯಾಪ್ತಿಯ ವಸತಿಗೃಹವೊಂದರ ಕೊಠಡಿಯಲ್ಲಿ ಪ್ರಕಾಶ್ ಬಾಬು (42) ಎಂಬುವವರ ಮೃತದೇಹ ಮಂಗಳವಾರ ಪತ್ತೆಯಾಗಿದ್ದು, ಆತ್ಮಹತ್ಯೆ ಶಂಕೆ ವ್ಯಕ್ತವಾಗಿದೆ.

‘ಮೃತ ಪ್ರಕಾಶ್ ಬಾಬು, ರಾಯಚೂರು ಉಪ ವಿಭಾಗಾಧಿಕಾರಿ ಕಚೇರಿಯಲ್ಲಿ ಪ್ರಥಮದರ್ಜೆ ಸಹಾಯಕರಾಗಿ (ಎಫ್‌ಡಿಎ) ಕೆಲಸ ಮಾಡುತ್ತಿದ್ದರು. ನೇಣು ಬಿಗಿದ ಸ್ಥಿತಿಯಲ್ಲಿ ಅವರ ಮೃತದೇಹ ಸಿಕ್ಕಿದೆ. ವಸತಿಗೃಹದ ವ್ಯವಸ್ಥಾಪಕ ನೀಡಿದ್ದ ಮಾಹಿತಿಯಂತೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಉಪ ವಿಭಾಗಾಧಿಕಾರಿ ಕಚೇರಿಯಲ್ಲಿ ಇತ್ತೀಚೆಗೆ ಲೆಕ್ಕ ಪರಿಶೋಧನೆ ನಡೆದಿತ್ತು. ಪ್ರಕಾಶ್ ಬಾಬು ಅವರು ಅವ್ಯವಹಾರ ಮಾಡಿರುವ ಆರೋಪ ಕೇಳಿಬಂದಿತ್ತು. ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಸೂಚಿಸಿದ್ದರೆಂಬ ಮಾಹಿತಿ ಇದೆ. ಇದೇ ಕಾರಣಕ್ಕೆ ಪ್ರಕಾಶ್ ಬಾಬು, ಯಾರಿಗೂ ಹೇಳದೇ ರಾಯಚೂರು ತೊರೆದಿದ್ದರು. ಅವರು ನಾಪತ್ತೆಯಾದ ಬಗ್ಗೆ ಕುಟುಂಬ ಸ್ಥರು ಸ್ಥಳೀಯ ಪೊಲೀಸರಿಗೆ ದೂರು ನೀಡಿದ್ದರು.’

‘ಆಗಸ್ಟ್ 27ರಂದು ಬೆಂಗಳೂರಿಗೆ ಬಂದು ವಸತಿಗೃಹದ ಕೊಠಡಿಯಲ್ಲಿ ಅವರು ಉಳಿದುಕೊಂಡಿದ್ದರು. ಮಂಗಳವಾರ ಬೆಳಿಗ್ಗೆ ಕೊಠಡಿ ಯಿಂದ ಹೊರಗೆ ಬಂದಿರಲಿಲ್ಲ. ಅನುಮಾನಗೊಂಡ ಸಿಬ್ಬಂದಿ, ಬಾಗಿಲು ತೆರೆದು ನೋಡಿದಾಗ ಮೃತದೇಹ ಕಂಡಿದೆ. ಇದು ಆತ್ಮಹತ್ಯೆ ಎಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ’ ಎಂದೂ ಪೊಲೀಸರು ಹೇಳಿದರು.

‘ಪರಭಾಷಿಕರಿಗೂ ಕನ್ನಡ ಕಲಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡ ಸಂಘಟನೆಗಳು ಪರಭಾಷಿಕರಿಗೂ ಕನ್ನಡ ಕಲಿಸಲು ಮುಂದಾಗಬೇಕು. ರಾಜ್ಯದಲ್ಲಿ ಕನ್ನಡದ ಬಳಕೆ ವ್ಯಾಪಕಗೊಳಿಸಬೇಕು. ಹಾಗಾದಾಗ ಮಾತ್ರ ಭಾಷೆಯನ್ನು ಉಳಿಸಲು ಸಾಧ್ಯ’ ಎಂದು ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ತಿಳಿಸಿದರು.

ಅಖಿಲ ಕರ್ನಾಟಕ ಕ್ಯಾಥೋಲಿಕ್ ಕ್ರೈಸ್ತರ ಕನ್ನಡ ಸಂಘ ಆಯೋಜಿಸಿದ್ದ ಫಾದರ್ ಸ್ಟ್ಯಾನಿ ಬ್ಯಾಪ್ಟಿಸ್ಟ್ ಸ್ಮರಣಾರ್ಥ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

‘ಇಂಗ್ಲಿಷ್ ಕೇಂದ್ರಿತ ಶಿಕ್ಷಣ ವ್ಯವಸ್ಥೆಯಿಂದ ಅಪಾಯ ಹೆಚ್ಚು. ನಮ್ಮ ಮಕ್ಕಳು ಇಂಗ್ಲಿಷ್ ವ್ಯಾಮೋಹಕ್ಕೆ ಒಳಗಾಗುತ್ತಿದ್ದು, ಕನ್ನಡದ ಬದಲಿಗೆ ಇಂಗ್ಲಿಷ್ ಯಜಮಾನಿಕೆ ಬರುತ್ತಿದೆ. ಇದು ಅಪಾಯಕಾರಿ ಬೆಳವಣಿಗೆ’ ಎಂದರು.

ವೂಡೇ ಪಿ.ಕೃಷ್ಣ, ‘ಮಕ್ಕಳು ಮಾತೃಭಾಷೆಯ ಬದಲು ಇಂಗ್ಲಿಷ್ ಮಾಧ್ಯಮದಲ್ಲಿ ಕಲಿತರೆ ಅನುವಾದಕರಾಗಿ ರೂಪುಗೊಳ್ಳುತ್ತಾರಷ್ಟೆ. ಹೃದಯಕ್ಕೆ ಆಪ್ತವಾದ ಭಾಷೆಯಲ್ಲಿ ಕಲಿತಾಗ ಮಾತ್ರ ಸ್ವಂತಿಕೆ ಸಿದ್ಧಿಸುತ್ತದೆ’ ಎಂದು ತಿಳಿಸಿದರು.

‘ಕರ್ನಾಟಕದಲ್ಲಿ ಸೃಷ್ಟಿಯಾಗುವ ಕೆಲಸಗಳನ್ನು ಕನ್ನಡಿಗರಿಗೇ ಮೀಸಲಿಡಬೇಕು. ಇದಕ್ಕಾಗಿ ಕನ್ನಡ ಕಾಯಕ ವರ್ಷದಲ್ಲಿ ವಿನೂತನ ಕಾರ್ಯಕ್ರಮ ರೂಪಿಸಬೇಕು’ ಎಂದು ಕನ್ನಡ ಚಿಂತಕ ರಾ.ನಂ.ಚಂದ್ರಶೇಖರ್ ಸಲಹೆ ನೀಡಿದರು.

ವೂಡೇ ಪಿ.ಕೃಷ್ಣ ಅವರು ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಹಾಗೂ ರಾ.ನಂ. ಚಂದ್ರಶೇಖರ್ ಅವರನ್ನು ಸನ್ಮಾನಿಸಿದರು. ಕನ್ನಡ ಸಾಹಿತ್ಯ ಪರಿಷತ್‌ನ ನಿಕಟಪೂರ್ವ ಗೌರವ ಕಾರ್ಯದರ್ಶಿ ವ.ಚ.ಚನ್ನೇಗೌಡ, ಫಾದರ್ ಸೈಮನ್ ಬರ್ತಲೋಮಿಯೋ, ಫಾದರ್ ಎಲ್‌.ಅರುಳಪ್ಪ, ಅಖಿಲ ಕರ್ನಾಟಕ ಕ್ಯಾಥೋಲಿಕ್ ಕ್ರೈಸ್ತರ ಕನ್ನಡ ಸಂಘದ ಅಧ್ಯಕ್ಷ ರಫಾಯಲ್ ರಾಜ್ ಇದ್ದರು.

ಕಲ್ಯಾಣ ಮಂಟಪಗಳಿಗೆ ಮತ್ತೆ ಕಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಾಹ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವವರ ಸಂಖ್ಯೆಯನ್ನು 400ಕ್ಕೆ ಏರಿಸಿರುವುದು ಮತ್ತು ಪುನರಾರಂಭಕ್ಕೆ ಸರ್ಕಾರದಿಂದ ಸ್ಪಷ್ಟ ನಿರ್ದೇಶನ ಹೊರಬಿದ್ದಿರುವುದರಿಂದ ಕಲ್ಯಾಣಮಂಟಪಗಳು ಮತ್ತೆ ಕಳೆಗಟ್ಟ ತೊಡಗಿವೆ. ವಿವಾಹ ಕಾರ್ಯಕ್ರಮಗಳನ್ನು ಅವಲಂಬಿಸಿರುವ ಸುಮಾರು ಲಕ್ಷಾಂತರ ಜನರ ಮೊಗದಲ್ಲಿಯೂ ಮಂದಹಾಸ ಕಾಣಿಸಲಿದೆ.

ಕೋವಿಡ್ ಬಿಕ್ಕಟ್ಟಿನ ಕಾರಣ, ಒಂದು ಮದುವೆಯಲ್ಲಿ ಪಾಲ್ಗೊಳ್ಳುವವರ ಸಂಖ್ಯೆ ಮೊದಲು 50ಕ್ಕೆ, ನಂತರ 100ಕ್ಕೆ ಮಿತಿಗೊಳಿಸಲಾಗಿತ್ತು. ಈಗ 400 ಜನ ಅಥವಾ ಸಭಾಂಗಣ ಸಾಮರ್ಥ್ಯದ ಶೇ 50ರಷ್ಟು ಜನರ ಪಾಲ್ಗೊಳ್ಳುವಿಕೆಗೆ ಅವಕಾಶ ನೀಡಲಾಗಿದೆ.

ಪರೋಕ್ಷವಾಗಿ ರೈತರು ಅಂದರೆ, ಹೂವು-ದಿನಸಿ-ತರಕಾರಿ ಮಾರುವವರು ವ್ಯಾಪಾರ ಚುರುಕುಗೊಳ್ಳುವ ನಿರೀಕ್ಷೆಯಲ್ಲಿದ್ದಾರೆ. ಜೊತೆಗೆ, ಪುರೋಹಿತರು, ಕಾರ್ಯಕ್ರಮ ಆಯೋಜಕರು, ಪೀಠೋಪಕರಣ ಸರಬರಾಜುದಾರರು, ಕಲ್ಯಾಣ ಮಂಟಪ ಅಲಂಕಾರ ಮಾಡುವವರು ಹಾಗೂ ಪಾರ್ಟಿ ಹಾಲ್‌ಗಳ ಮಾಲೀಕರ ನಿರೀಕ್ಷೆಯೂ ಗರಿಗೆದರಿದೆ.

ನಿಯಮ ಪಾಲನೆ: 'ಕೋವಿಡ್ ಮಾರ್ಗಸೂಚಿಗಳ ಕಟ್ಟುನಿಟ್ಟಿನ ಪಾಲನೆ, ಮದುವೆಗೆ ಬರುವವರು ಕಡ್ಡಾಯವಾಗಿ ಮಾಸ್ಕ್ ಧರಿಸಿರುವಂತೆ ನೋಡಿಕೊಳ್ಳಬೇಕು ಎಂದು ವಧು-ವರರ ಕುಟುಂಬದವರಿಗೆ ಹೇಳುತ್ತಿದ್ದೇವೆ. ಎಲ್ಲ ಕಡೆ ಸ್ಯಾನಿಟೈಸ್ ವ್ಯವಸ್ಥೆ ಮಾಡಲಿದ್ದೇವೆ' ಎಂದು ಕಲ್ಯಾಣ ಮಂಟಪಗಳ ಮಾಲೀಕರು ಹೇಳಿದರು.

2020ರ ಮಾರ್ಚ್-ಏಪ್ರಿಲ್‌ನಿಂದಲೂ ಕಲ್ಯಾಣ ಮಂಟಪಗಳಲ್ಲಿ ಹೆಚ್ಚು ಮದುವೆ ಸಮಾರಂಭಗಳು ನಡೆದಿಲ್ಲ. ಅಕ್ಟೋಬರ್‌ನಲ್ಲಿ ಕೆಲವು ದಿನಗಳವರೆಗೆ ಅವಕಾಶ ನೀಡಲಾಗಿದ್ದರೂ, ಮತ್ತೆ ಹಲವು ನಿರ್ಬಂಧಗಳನ್ನು ಹೇರಲಾಗಿತ್ತು. ಆಗ, ಮದುವೆ ದಿನಾಂಕ ಮುಂದೂಡಿದ್ದವರು ಈಗ ಮತ್ತೆ ಕಲ್ಯಾಣ ಮಂಟಪಗಳತ್ತ ಹೆಜ್ಜೆ ಹಾಕುತ್ತಿದ್ದಾರೆ.

ಕಾಲಾವಕಾಶ: ಮುಂದಿನ ವರ್ಷ ನೋಡಿದರಾಯಿತು, ಮೂರನೇ ಅಲೆ ಮುಗಿದ ನಂತರ ಬರುತ್ತೇವೆ ಎಂದು ಹೋಗಿದ್ದವರು ಈಗ ಕಲ್ಯಾಣಮಂಟಪಗಳಿಗೆ ಕರೆ ಮಾಡುತ್ತಿದ್ದಾರೆ.

'ಕಲ್ಯಾಣಮಂಟಪ ಕಾಯ್ದಿರಿಸಿ, ನಂತರ ಮುಂದೂಡಿದ್ದರೆ ಮತ್ತೆ ವಿವಾಹ ಕಾರ್ಯಕ್ರಮ ನಿಗದಿ ಮಾಡುತ್ತಿದ್ದವರಿಗೆ ಮೊದಲು ಮೂರು ತಿಂಗಳವರೆಗೆ ಅವಕಾಶ ಇರುತ್ತಿತ್ತು. ಈಗ ಈ ಅವಧಿಯನ್ನು ಒಂದು ವರ್ಷಕ್ಕೆ ವಿಸ್ತರಿಸಿದ್ದೇವೆ. ಕಲ್ಯಾಣ ಮಂಟಪ ಕಾಯ್ದಿರಿಸಿ, ಕೋವಿಡ್ ನಿರ್ಬಂಧದ ಕಾರಣ ಮದುವೆಯಾಗದವರಿಗೆ ಅವಕಾಶ ನೀಡುತ್ತಿದ್ದೇವೆ. ನಾಲ್ಕೈದು ದಿನಾಂಕಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಲು ಹೇಳುತ್ತಿದ್ದೇವೆ' ಎಂದು ಯಲಹಂಕದ ಕಲ್ಯಾಣಮಂಟಪವೊಂದರ ಮಾಲೀಕ ಸುಮತೀಂದ್ರ ಹೇಳಿದರು.

ಆರತಕ್ಷತೆಗೆ ಕಡಿಮೆ ಬಾಡಿಗೆ: ಈ ಹಿಂದೆ ಮದುವೆ ನಿಶ್ಚಯ ಮಾಡಿಕೊಂಡಿದ್ದ ಅನೇಕರು ಕಲ್ಯಾಣಮಂಟಪಗಳನ್ನು ಕಾಯ್ದಿರಿಸಿದ್ದರು. ಆದರೆ, ಇವರಲ್ಲಿ ಬಹುತೇಕರು ದೇವಸ್ಥಾನದಲ್ಲಿ ಅಥವಾ ಮನೆಗಳಲ್ಲಿಯೇ ದಂಪತಿಗಳಾಗಿದ್ದಾರೆ. ಈಗ ಪಾರ್ಟಿಹಾಲ್ ಅಥವಾ ಕಲ್ಯಾಣಮಂಟಪದಲ್ಲಿಯೇ ಆರತಕ್ಷತೆ ಮಾಡಿಕೊಳ್ಳಲು ಯೋಚಿಸುತ್ತಿದ್ದಾರೆ.

'ಕಲ್ಯಾಣ ಮಂಟಪ ಕಾಯ್ದಿರಿಸಿ, ಬೇರೆ ಕಡೆಗೆ ಮದುವೆ ಮಾಡಿಕೊಂಡಿರುವ ಜೋಡಿಗಳಿಗೆ, ಆರತಕ್ಷತೆಗಾಗಿ ಅರ್ಧ ಶುಲ್ಕ ತೆಗೆದುಕೊಂಡು ಕಲ್ಯಾಣ ಮಂಟಪವನ್ನು ಬಾಡಿಗೆಗೆ ನೀಡುತ್ತಿದ್ದೇವೆ' ಎಂದು ಕರ್ನಾಟಕ ಮ್ಯಾರೇಜ್ ಹಾಲ್ಸ್ ಅಸೋಸಿಯೇಷನ್‌ನ ಅಧ್ಯಕ್ಷ ರಮೇಶ್ ರೆಡ್ಡಿ ಹೇಳಿದರು.

ಒಂದೊಂದು ಕಲ್ಯಾಣಮಂಟಪಗಳಿಗೆ ದಿನದ ಬಾಡಿಗೆ ₹1 ಲಕ್ಷದಿಂದ ₹7 ಲಕ್ಷದವರೆಗೆ ಇರುತ್ತದೆ. ಈಗ ಈ ಬಾಡಿಗೆಯಲ್ಲಿ ಶೇ 30ರಿಂದ ಶೇ 40ರಷ್ಟು ಕಡಿಮೆ ತೆಗೆದುಕೊಳ್ಳಲಾಗುತ್ತಿದೆ ಎಂದು ಹೇಳಿದರು.

ಬೆಂಗಳೂರಿನ ಸ್ವಾತಂತ್ರ್ಯಯೋಧರ ನಗರದಲ್ಲಿರುವ ಮಂಜುಶ್ರೀ ಕಲ್ಯಾಣಮಂಟಪವು ಮದುವೆ ಸಮಾರಂಭಕ್ಕೆ ಸಿದ್ಧವಾಗಿರುವುದು – ಪ್ರಜಾವಾಣಿ ಚಿತ್ರ

ಕಲ್ಯಾಣ ಮಂಟಪಗಳೂ ಸಣ್ಣ, ಅತಿ ಸಣ್ಣ ಮತ್ತು ಮಧ್ಯಮ ಕೈಗಾರಿಕಾ ವಲಯದಡಿ ನೋಂದಣಿಯಾಗಿವೆ. ಆದರೆ, ಆ ಉದ್ಯಮಗಳಿಗೆ ಸಿಗುತ್ತಿರುವ ಸೌಲಭ್ಯಗಳು ಸಿಗುತ್ತಿಲ್ಲ

ರಮೇಶ್ ರೆಡ್ಡಿ, ಕರ್ನಾಟಕ ಮ್ಯಾರೇಜ್ ಹಾಲ್ಸ್ ಅಸೋಸಿಯೇಷನ್‌ನ ಅಧ್ಯಕ್ಷ

6–8ನೇ ತರಗತಿ: ವೇಳಾಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸರ್ಕಾರಿ, ಅನುದಾನಿತ, ಅನುದಾನರಹಿತ ಶಾಲೆಗಳಲ್ಲಿ 6ರಿಂದ 8ನೇ ತರಗತಿಗಳನ್ನು ಆರಂಭಿಸಲು ಸಂಬಂಧಿಸಿದ ವೇಳಾಪಟ್ಟಿ ಸಹಿತ ಸಾರ್ವಜನಿಕ ಶಿಕ್ಷಣ ಇಲಾಖೆ ಮಂಗಳವಾರ ಸುತ್ತೋಲೆ ಹೊರಡಿಸಿದೆ.

Br. HSR Layout: 19, 15th Cross, 15th Main, HSR Layout Sector-4, Bangalore-560102, Ph: 080-25724492:- 17696100168687,17696100184908, 17696100191960,17696400007775,17696100210554,17696100200019,17696100169560,17696100187844,17696100192240,17696400007783,17696100210588,17696100200050,17696100177654, 17696100188321,17696100192893,17696400008559,17696100210604,17696100200100,17696100179759,17696100188867,17696100193156,17696400008724,17696100210612,17696100200142, 17696100179882,17696100189436,17696100193271,17696400008740,17696100210679,17696100200282,17696100182142,17696100190327,17696100193297,17696400008989,17696100210828, 17696100200688,17696100182159,17696100190350,17696100194063,17696400009250,17696100210869,17696100200761,17696100183520,17696100190376,17696100194105,17696400009268, 17696100210901,17696100200811,17696100183645,17696100190731,17696100194113,17696400009409,17696100210943,17696100200860,17696100183652,17696100191309,17696100194121, 17696400009771,17696100211024,17696100200977,17696100183694,17696100191440,17696100194139,17696400009888,17696100211032,17696100201033,17696100183728,17696100191887, 17696100194147,17696600000059,17696100211115,17696100201108,17696100210158,17696100198007,17696100194154,17696600000091,17696100211198,17696100201249,17696100210174, 17696100198015,17696100194162,17696600000109,17696100211388,17696100201504,17696100210208,17696100198130,17696100194600,17696600000117,17696100211479,17696100201686, 17696100210216,17696100198247,17696100195110,17696600000141,17696100211495,17696100201827,17696100210240,17696100198411,17696100195136,17696100202866,17696100211552, [illegible] 17696100202981,17696100211644,17696100202023,17696100210422,17696100199534,17696100196852,17696100203120,17696100211693,17696100202072,17696100210430,17696100199591, 17696100197165,17696100203153,17696100216155,17696100202403,17696100210489,17696100199609,17696100197538,17696100203161,17696100216163,17696100202411,17696100210497, 17696100199823,17696100197728,17696100203260,17696100216213,17696100202585,17696100210513,17696100199880,17696100197900,17696100203336,17696100222666,17696100202767, 17696100203609,17696100204771,17696100205349,17696100203567,17696200009856,17696100202817,17696100203872,17696100204789,17696100205364,17696100206107,17696100206479, 17696100206909,17696100204060,17696100204797,17696100205380,17696100206115,17696100206586,17696100206933,17696100204441,17696100204896,17696100205778,17696100206149, 17696100206602,17696100206958,17696100204482,17696100205042,17696100205893,17696100206156,17696100206651,17696100206974,17696100204490,17696100205075,17696100205935, 17696100206206,17696100206750,17696100207014,17696100204599,17696100205083,17696100205984,17696100206263,17696100206768,17696100207071,17696100204649,17696100205182, 17696100206032,17696100206297,17696100206776,17696100207451,17696100204763,17696100205257,17696100206073,17696100206461,17696100206883,17696100207717,17696100207733, 17696100208509,17696100209580,17696100208749,17696100207832,17696100209168,17696100207758,17696100208517,17696100209622,17696100208863,17696100207899,17696100209382, 17696100207766,17696100208558,17696100209796,17696100208871,17696100207980,17696100209416,17696100207774,17696100208582,17696100210000,17696100208970,17696100208004, 17696100209424,17696100207782,17696100208624,17696100210083,17696100209127,17696100208046,17696100209564,17696100207808,17696100208715,17696100210125,17696100209135, 17696100208137,17696100208285,17696100208335,17696100208343,17696100208400,17696100208459.

Br. Bangalore/J P Nagar: UDN ALTIUS, No 13,15th Cross,100 Ft Ring Road, 6th Phase, JP Nagar, Bangalore- 560078, Ph No: 080- 26549292 :- 18276400049900,18276400047052, 18276100235825,18276100237722,18276400049892,18276600000315,18276100235718,18276100237714,18276400049942,18276600000331,18276100236096,18276100237656,18276400050023, 18276600000125,18276100236070,18276100237631,18276400050031,18276600000281,18276100235957,18276100237482,18276400050171,18276200014278,18276100235940,18276100237474, 18276400050163,18276100234281,18276100235932,18276100237938,18276400050155,18276100234265,18276100236278,18276100238142,18276400050239,18276100234224,18276100236153, 18276100238118,18276400050361,18276100234174,18276100236179,18276100238100,18276400048829,18276100234166,18276100236138,18276100238050,18276400048811,18276100234240, 18276100236120,18276100217252,18276400048803,18276100234414,18276100236500,18276100238357,18276400044133,18276100234372,18276100236492,18276100203443,18276400044141, 18276100234356,18276100236435,18276100238472,18276400038341,18276100234604,18276100236427,18276100238464,18276400038358,18276100234588,18276100236419,18276100238431, 18276400038366,18276100234562,18276100236385,18276100238399,18276400038382,18276100234646,18276100236310,18276100238837,18276400038390,18276100234919,18276100236625, 18276100238738,18276400038408,18276100235197,18276100236526,18276100239074,18276400038846,18276100235130,18276100236799,18276100239058,18276400038853,18276100235098, 18276100236781,18276100239017,18276400038861,18276100235080,18276100236716,18276100238910,18276400041667,18276100235023,18276100236906,18276100238902,18276400039323, 18276100235320,18276100218342,18276100238878,18276400046492,18276100235312,18276100237268,18276100239322,18276400042384,18276100217070,18276100237193,18276100239280, 18276400046765,18276100193453,18276100237185,18276100239272,18276400046914,18276100235494,18276100237086,18276100239215,18276400047029,18276100235486,18276400049660, 18276100239173,18276400047177,18276100235361,18276100212758,18276100239686,18276400047359,18276100235353,18276100200019,18276100239678,18276400044067,18276100235403, [illegible] 18276100245923,18276100241070,18276100243399,18276100244819,18276100245881,18276100241039,18276100243290,18276100245212,18276100245873,18276100241260,18276100243357, 18276100245238,18276400049314,18276100241401,18276100243340,18276400049488,18276100245840,18276100241864,18276100243332,18276100245188,18276100246137,18276100246111, 18276100233291,18276100246129,18276100220561,18276100246053,18276100233283,18276100246723,18276100220553,18276100246012,18276100233275,18276100246699,18276100214929, 18276100227020,18276100232384,18276100246665,18276100214861,18276100227012,18276100232319,18276100246616,18276100255294,18276100226980,18276100231873,18276100246608, 18276100255286,18276100226972,18276100231733,18276400042871,18276100216460,18276100226402,18276100231709,18276400043044,18276100160502,18276100226030,18276100231535, 18276400043069,18276100168091,18276100226097,18276100227830,18276400043028,18276100213905,18276100225586,18276100227368,18276400043051,18276100216957,18276100225321, 18276100227418,18276400046526,18276100217500,18276100222716,18276100225057,18276400044489,18276100228754,18276100222443,18276100224670,18276400044497,18276100181805, 18276100222260,18276100224613,18276400044505,18276100219449,18276100222112,18276100224308,18276400044539,18276100219522,18276100221999,18276100224217,18276400044513, 18276100219514,18276100222005,18276100224084,18276400044521,18276100220140,18276100221965,18276100223961,18276400044653,18276100263579,18276100221577,18276100223631, 18276400044661,18276100222369,18276100221569,18276100223375,18276400045429,18276100222336,18276100208129,18276100216122,18276400045536,18276100222344,18276100206537, 18276100211834,18276400045924,18276100222328,18276100201439,18276100211719,18276400046039,18276100222310,18276100199666,18276100210323,18276400046740,18276100212345, 18276100198551,18276100196043,18276400047201,18276100179650,18276100193354,18276100246434,18276400047250,18276100179643,18276100188503,18276100246426,18276200013684, 18276100165352,18276100241534,18276100246392,18276200014617,18276100202650,18276100241054,18276100246384,18276200014724,18276100222351,18276100239629,18276100246376, 18276200014013,18276100222393,18276100239520,18276100246350,18276200014120,18276100222385,18276100239512,18276100246251,18276200014104,18276100222419,18276100238241, 18276100246236,18276200014138,18276100222427,18276100238068,18276100246541,18276200014179,18276100225529,18276100236302,18276100246533,18276200014252,18276400049116, 18276100236237,18276100246525,18276200014609,18276400049272,18276100234638,18276100246509,18276200014070,18276400049264,18276100234620,18276100246467,18276200014021, 18276400049504,18276100234232,18276100246459,18276200013833,18276400049496,18276400049850.

Br. Bannergatta: Limra Towers, Kemnaikana Halli, Bannerghatta, Bangalore-560083, Ph:-080 28283224 :- 15716100152176,15716400074781,15716100152267,15716100152259,15716400074609, 15716400085845,15716400084210,15716100152242,15716400084871,15716400086546,15716100152317,15716400075408,15716400085308,15716400075481,15716400088146,15716400040022, 15716400080028,15716100152382,15716400030981,15716400068957,15716400067173,15716400046961,15716400071902,15716400074039,15716400066985,15716400080242,15716400073023, 15716400074013,15716400078550,15716400081307,15716100152002,15716400075671,15716400074906,15716400064493,15716400084186,15716400075663,15716400075705,15716400085795, 15716400075150,15716400075655,15716400071712,15716400075465,15716400075143,15716400034603,15716100152010,15716400083808,15716400080986,15716400081729,15716100152028, 15716400087122,15716400084533,15716400071340,15716400060269,15716400087817,15716400072165,15716400070250,15716100152150,15716400075614,15716400075572,15716400081356, 15716100152143,15716400075606,15716400044883,15716400071811,15716400046359,15716400074161,15716400074625,15716400081349,15716100151996,15716400072991,15716400076075, 15716400073700,15716400074526,15716100152325,15716400072728,15716100152036,15716400073643,15716400074690,15716400072736,15716100152044,15716100151871,15716400084483, 15716400040097,15716100152051,15716400086736,15716100152069,15716400074658,15716400071845,15716400077057,15716400059071,15716400087650,15716400039842,15716400079681, 15716400071076,15716400086843,15716100152465,15716400085654,15716400088211,15716400086835,15716100152390,15716400085647,15716400088203,15716400086850,15716100152473, 15716400085811,15716400087098,15716400087411,15716100152440,15716400075424,15716400070037,15716400045955,15716100152424,15716100152499,15716400073759,15716400072603, 15716100152432,15716400085498,15716400083659,15716400046540,15716100152457,15716400081091,15716400083840,15716400070920,15716100152408,15716400087585,15716100152374, 15716400083501,15716100152416,15716100152093,15716100152333,15716400073858,15716400069740,15716100152192,15716100152366,15716400073866,15716400086710,15716400065409, 15716100152341,15716400082529,15716400084327,15716400065417,15716400080762,15716400072371,15716400077917,15716400036848,15716100152119,15716400074260,15716400070425, 15716400035691,15716400085928,15716400072314,15716400085878,15716100152523,15716400078352.

Bangalore 28-08-2021 Vice President & Zonal Head

ಅತಿವೇಗದ ಚಾಲನೆ; ಗೋಡೆಗೆ ಗುದ್ದಿದ 'ಔಡಿ ಕ್ಯೂ3' ಕಾರು ನಜ್ಜುಗುಜ್ಜು

ಶಾಸಕನ ಮಗ ಸೇರಿ ಏಳು ಯುವಕರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿಯ ಕೋರಮಂಗಲದಲ್ಲಿ ಮಂಗಳವಾರ ನಸುಕಿನಲ್ಲಿ ಅಪಘಾತ ಸಂಭವಿಸಿದ್ದು, ಶಾಸಕರೊಬ್ಬರ ಮಗ ಸೇರಿ ಏಳು ಮಂದಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಹೊಸೂರು ಕ್ಷೇತ್ರದ ಡಿಎಂಕೆ ಶಾಸಕ ವೈ.ಪ್ರಕಾಶ್ ಅವರ ಮಗ ಕರುಣಾಸಾಗರ್ (25), ಅವರ ಸಂಬಂಧಿ ಬಿಂದು (28), ಸ್ನೇಹಿತರಾದ ಮಹಾರಾಷ್ಟ್ರದ ಇಷಿತಾ ಬಿಸ್ವಾಸ್ (21), ಕೇರಳದ ಎಂ.ಧನುಷಾ (29), ಅಕ್ಷಯ್ ಗೋಯಲ್ (25), ಹರಿಯಾಣದ ಉತ್ಸವ್ (25) ಹಾಗೂ ಹುಬ್ಬಳ್ಳಿ ನವನಗರದ ರೋಹಿತ್ (23) ಮೃತರು.

'ಏಳು ಮಂದಿಯೂ ಕೋರಮಂಗಲದ 80 ಅಡಿ ರಸ್ತೆಯ ಎನ್.ಜಿ.ವಿ ಜಂಕ್ಷನ್‌ನಿಂದ ಫೋರಂ ಮಾಲ್ ಜಂಕ್ಷನ್ ಕಡೆಗೆ 'ಔಡಿ ಕ್ಯೂ3' ಐಷಾರಾಮಿ ಕಾರಿನಲ್ಲಿ ರಾತ್ರಿ 2 ಗಂಟೆಯ ಸುಮಾರಿಗೆ ಹೊರಟಿದ್ದರು. ಕರುಣಾಸಾಗರ್ ಕಾರು ಚಲಾಯಿಸುತ್ತಿದ್ದರು. ಮಂಗಳ ಕಲ್ಯಾಣ ಮಂಟಪದ ಸಮೀಪ ನಿಯಂತ್ರಣ ತಪ್ಪಿದ ಕಾರು, ಪಾದಚಾರಿ ಮಾರ್ಗಕ್ಕೆ ವೇಗವಾಗಿ ನುಗ್ಗಿ ಪಂಜಾಬ್ ನ್ಯಾಷನಲ್ ಬ್ಯಾಂಕ್ ಶಾಖೆ ಗೋಡೆಗೆ ಗುದ್ದಿದ್ದರಿಂದ ಅವಘಡ ಸಂಭವಿಸಿದೆ' ಎಂದು ಸಂಚಾರ ಪೊಲೀಸ್ ವಿಭಾಗದ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

'ಗುದ್ದಿದ್ದ ರಭಸಕ್ಕೆ ಕಾರು ನಜ್ಜುಗುಜ್ಜಾಗಿದೆ. ಕಾರಿನಲ್ಲಿದ್ದ ಏಳು ಮಂದಿಯೂ ತೀವ್ರವಾಗಿ ಗಾಯಗೊಂಡು ಪ್ರಜ್ಞೆ ಕಳೆದುಕೊಂಡಿದ್ದರು. ಸಹಾಯಕ್ಕೆ ಬಂದ ಸ್ಥಳೀಯರು, ಕಾರಿನಿಂದ ಎಲ್ಲರನ್ನೂ ಹೊರತೆಗೆದು ಹತ್ತಿರದ ಸೇಂಟ್ ಜಾನ್ಸ್ ಆಸ್ಪತ್ರೆಗೆ ಕರೆದೊಯ್ದಿದ್ದರು. ವೈದ್ಯರು, ಏಳು ಮಂದಿಯೂ ಮೃತಪಟ್ಟಿರುವುದಾಗಿ ತಿಳಿಸಿದರು' ಎಂದೂ ಅವರು ವಿವರಿಸಿದರು.

'ಸಂಜೀವಿನಿ ಬ್ಲೂ ಮೆಟಲ್ ಕಂಪನಿ ಹೆಸರಿನಲ್ಲಿ ಔಡಿ ಕಾರು (ಕೆಎ 03 ಎಂವೈ 6666) ನೋಂದಣಿಯಾಗಿದೆ. ಹೊಸೂರಿನಿಂದ ಬೆಂಗಳೂರಿಗೆ ಸೋಮವಾರ ಬೆಳಿಗ್ಗೆ ಬಂದಿದ್ದ ಕರುಣಾ ಸಾಗರ್, ಸಂಬಂಧಿ ಬಿಂದು ಅವರನ್ನು ಮಾತನಾಡಿಸಲು ಸಂಜೆ ಕೋರಮಂಗಲಕ್ಕೆ ಬಂದಿದ್ದರು. ಸಂಬಂಧಿ ಹಾಗೂ ಸ್ನೇಹಿತರ ಜೊತೆಗೂಡಿ ಹಲವೆಡೆ ಸುತ್ತಾಡಿದ್ದರು. 5 ಆಸನ ಸಾಮರ್ಥ್ಯದ ಕಾರಿನಲ್ಲಿ ಏಳು ಮಂದಿ ಕುಳಿತಿದ್ದರು' ಎಂದೂ ಹೇಳಿದರು.

ಚಾಲಕನ ವಿರುದ್ಧ ಎಫ್‌ಐಆರ್: 'ಅತಿವೇಗ, ಅಜಾಗರೂಕತೆ ಚಾಲನೆಯೇ ಅಪಘಾತಕ್ಕೆ ಕಾರಣ ಎಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ. ಜೀವನಕ್ಕೆ ಕುತ್ತು ತಂದ (ಐಪಿಸಿ 279) ಹಾಗೂ ನಿರ್ಲಕ್ಷ್ಯದಿಂದ ಸಾವನ್ನುಂಟು ಮಾಡಿದ (ಐಪಿಸಿ 304ಎ) ಆರೋಪದಡಿ ಚಾಲಕನ ವಿರುದ್ಧ ಆಡುಗೋಡಿ ಸಂಚಾರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಆಗ್ನೇಯ ವಿಭಾಗದ (ಸಂಚಾರ) ಎಸಿಪಿ ನೇತೃತ್ವದಲ್ಲಿ ತನಿಖೆ ನಡೆಯುತ್ತಿದೆ' ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್.ರವಿಕಾಂತೇಗೌಡ ತಿಳಿಸಿದರು.

'ಕಾರಿನಲ್ಲಿದ್ದ ಒಬ್ಬರೂ ಬದುಕಿಲ್ಲ. ಹೀಗಾಗಿ, ಘಟನೆ ಹೇಗಾಯಿತು? ಎಂಬ ಬಗ್ಗೆ ಸ್ಪಷ್ಟತೆ ಇಲ್ಲ. ರಕ್ಷಣೆಗೆ ಹೋಗಿದ್ದ ಸ್ಥಳೀಯರು ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಲಾಗಿದೆ. ಚಾಲಕ ಮದ್ಯಸೇವಿಸಿದ್ದರಾ? ತಡರಾತ್ರಿ ಎಲ್ಲಿಗೆ ಹೊರಟಿದ್ದರು? ಎಂಬ ಪ್ರಶ್ನೆಗಳಿವೆ. ಮರಣೋತ್ತರ ಪರೀಕ್ಷೆ ನಂತರ ಶವವನ್ನು ಸಂಬಂಧಿಕರಿಗೆ ಹಸ್ತಾಂತರಿಸಲಾಗಿದೆ' ಎಂದರು.

'ಮದುವೆಗೆ ಆಕ್ಷೇಪ'

'ಕರುಣಾಸಾಗರ್ ಅವರು ಸಂಬಂಧಿ ಬಿಂದು ಅವರನ್ನು ಇಷ್ಟಪಡುತ್ತಿದ್ದು, ಮದುವೆಯಾಗಲು ತೀರ್ಮಾನಿಸಿದ್ದರು. ಆದರೆ, ವಯಸ್ಸಿನ ಅಂತರದಿಂದಾಗಿ ಮದುವೆಗೆ ಹಿರಿಯರು ಒಪ್ಪಿರಲಿಲ್ಲ. ಪರಸ್ಪರ ಮಾತನಾಡದಂತೆ ಎಚ್ಚರಿಕೆ ನೀಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಚೆನ್ನೈನ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಬಿಂದು, ರಾಜೀನಾಮೆ ನೀಡಿ ಬೆಂಗಳೂರಿಗೆ ಬಂದಿದ್ದರು. ಇಲ್ಲಿಯೇ ಕಂಪನಿಯೊಂದರಲ್ಲಿ ಕೆಲಸಕ್ಕೆ ಸೇರಿ, ಪೇಯಿಂಗ್ ಗೆಸ್ಟ್ ಕಟ್ಟಡದಲ್ಲಿ ಉಳಿದುಕೊಂಡಿದ್ದರು. ಅವರನ್ನು ಮಾತನಾಡಿಸಲು ಕರುಣಾಸಾಗರ್, ಆಗಾಗ ನಗರಕ್ಕೆ ಬರುತ್ತಿದ್ದರು. ಸೋಮವಾರವೂ ಚೆನ್ನೈಗೆ ಹೋಗುವುದಾಗಿ ಮನೆಯಲ್ಲಿ ಹೇಳಿ ಬೆಂಗಳೂರಿಗೆ ಬಂದಿದ್ದರೆಂಬ ಮಾಹಿತಿ ಇದೆ' ಎಂದೂ ತಿಳಿಸಿವೆ.

ಅಪಘಾತದಿಂದಾಗಿ ನಜ್ಜುಗುಜ್ಜಾದ 'ಔಡಿ ಕ್ಯೂ3' ಕಾರು

'ಪೇಯಿಂಗ್ ಗೆಸ್ಟ್‌ನಲ್ಲಿದ್ದರು'

'ಮೃತ ಬಿಂದು, ಇಷಿತಾ ಬಿಸ್ವಾಸ್, ಅಕ್ಷಯ್ ಗೋಯೆಲ್ ಹಾಗೂ ರೋಹಿತ್ ಅವರು ಖಾಸಗಿ ಕಂಪನಿ ಉದ್ಯೋಗಿಗಳು. ಎಂ.ಧನುಷಾ, ದಂತ ವೈದ್ಯೆ ಆಗಿದ್ದರು' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ಇವರೆಲ್ಲರೂ ಕೋರಮಂಗಲದ ಪಿ.ಜಿಯಲ್ಲಿದ್ದರು. ಕರುಣಾಸಾಗರ್, ಬಿಂದು ಅವರನ್ನು ಮಾತನಾಡಿಸಲು ಬಂದಾಗ ಇತರರನ್ನೂ ಭೇಟಿಯಾಗಿದ್ದರು. ಪಾರ್ಟಿ ಮಾಡಲೆಂದು ಎಲ್ಲರೂ ಹೊರಗೆ ಬಂದಿದ್ದರು' ಎಂದೂ ತಿಳಿಸಿದರು.

ಕರುಣಾಸಾಗರ್

ಬಿಂದು

ರೋಹಿತ್



ಇಷಿತಾ

ಅತಿವೇಗಕ್ಕೆ ಎಚ್ಚರಿಕೆ ನೀಡಿದ್ದ ಕಾನ್‌ಸ್ಟೆಬಲ್

ಹೊಸೂರು ರಸ್ತೆಯಲ್ಲಿ ರಾತ್ರಿ 10.30ರ ಸುಮಾರಿಗೆ ಕರುಣಾಸಾಗರ್, ಅತಿವೇಗವಾಗಿ ಕಾರು ಚಲಾಯಿಸಿದ್ದರು. ಕಾರು ತಡೆದಿದ್ದ ಆಡುಗೋಡಿ ಠಾಣೆ ಪೊಲೀಸರು, ಎಚ್ಚರಿಕೆ ನೀಡಿದ್ದರು. 'ನಾನು ಶಾಸಕನ ಮಗ' ಎಂದು ಹೇಳಿದ್ದ ಕರುಣಾಸಾಗರ್, ಕಾರು ಬಿಡಿಸಿಕೊಂಡು ಹೋಗಿದ್ದರು.

'ಕಾರಿನ ಸನ್ ರೂಫ್ ತೆರೆದು ಇಬ್ಬರು ಯುವತಿಯರು ರೂಫ್‌ನಲ್ಲಿ ನಿಂತು ಕೂಗಾಡುತ್ತಿದ್ದರು. ಚಾಲಕ ಕರುಣಾಸಾಗರ್, ವೇಗವಾಗಿ ಕಾರು ಚಲಾಯಿಸಿಕೊಂಡು ಬಂದಿದ್ದರು. ಚೆಕ್‌ಪೋಸ್ಟ್‌ನಲ್ಲಿದ್ದ ಕಾನ್‌ಸ್ಟೆಬಲ್ ಪ್ರಶಾಂತ್, ಕಾರು ತಡೆದು ವಿಚಾರಣೆ ನಡೆಸಿದ್ದರು' ಎಂದು ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ನಾನು ಆನೇಕಲ್ ಶಾಸಕನ ಮಗ. ಇವರೆಲ್ಲ ನನ್ನ ಕುಟುಂಬದವರು. ಊಟಕ್ಕೆ ಬಂದಿದ್ದೇವೆ' ಎಂದಿದ್ದ ಕರುಣಾಸಾಗರ್, ಕಾರು ಬಿಡಲು ಹೇಳಿದ್ದರು. ಎಚ್ಚರಿಕೆ ನೀಡಿದ್ದ ಕಾನ್‌ಸ್ಟೆಬಲ್, 'ಇದು ನಗರ ವಲಯ. ರಾತ್ರಿ ಕರ್ಫ್ಯೂ ಬೇರೆ ಇದೆ. ನಿಧಾನವಾಗಿ ಹೋಗಿ' ಎಂದಿದ್ದರು. 'ಆಯ್ತು ಮನೆಗೆ ಹೋಗುತ್ತೇವೆ' ಎಂದು ಅಲ್ಲಿಂದ ಹೊರಟಿದ್ದರು. ತಡರಾತ್ರಿ ಅಪಘಾತದ ಸುದ್ದಿ ಬಂದಿತು' ಎಂದೂ ಹೇಳಿದರು.

'ಜೋರು ಸದ್ದು, ಕಾರಿನಿಂದ ಹೊಗೆ'

'ರಸ್ತೆಯಲ್ಲಿ ತಡರಾತ್ರಿ ವಾಹನಗಳ ಓಡಾಟ ತೀರಾ ಕಡಿಮೆ ಇತ್ತು. ಕಾರು ಗೋಡೆಗೆ ಗುದ್ದಿದ್ದರಿಂದ ಜೋರು ಸದ್ದು ಕೇಳಿಸಿತ್ತು. ಸ್ಥಳಕ್ಕೆ ಹೋಗಿ ನೋಡಿದಾಗ, ಕಾರಿನೊಳಗಿನಿಂದ ಹೊಗೆ ಬರುತ್ತಿತ್ತು' ಎಂದು ಪ್ರತ್ಯಕ್ಷದರ್ಶಿ ಕ್ಯಾಬ್ ಚಾಲಕ ಸತೀಶ್ ಹೇಳಿದರು.

'ರಸ್ತೆ ಪಕ್ಕದಲ್ಲಿ ಕಾರು ನಿಲ್ಲಿಸಿ ಮಲಗಿದ್ದೆ. ಜೋರು ಶಬ್ದ ಕೇಳಿ ಸ್ಥಳಕ್ಕೆ ಓಡಿದ್ದೆ. ಕಾರಿನಿಂದ ಹೊಗೆ ಬರುತ್ತಿದ್ದರಿಂದ ಸ್ಫೋಟವಾಗುವ ಭಯ ಉಂಟಾಯಿತು. ರಸ್ತೆಯಲ್ಲಿ ಹೊರಟಿದ್ದ ಜನರನ್ನು ಕೂಗಿ ಕರೆದು, ಕಾರಿನಲ್ಲಿದ್ದವರನ್ನು ರಕ್ಷಿಸಲು ಮುಂದಾದೆ. ಗಾಯಾಳುಗಳು ಪ್ರಜ್ಞೆ ತಪ್ಪಿದ್ದರು. ಎಲ್ಲರನ್ನೂ ಹೊರಗೆ ತೆಗೆದು ಆಸ್ಪತ್ರೆಗೆ ಕಳುಹಿಸಿದ್ದೆವು. ಪೊಲೀಸರಿಗೂ ಮಾಹಿತಿ ನೀಡಿದ್ದೆವು' ಎಂದೂ ತಿಳಿಸಿದರು.

ಮಿತ ವೇಗ, ಸೀಟ್‌ಬೆಲ್ಟ್ ಧರಿಸಿದ್ದರಷ್ಟೇ ಸುರಕ್ಷತೆ

ಭಾರತದಲ್ಲಿ ಈಗ ಮಾರಾಟವಾಗುತ್ತಿರುವ ಔಡಿ ಕ್ಯೂ3 ಎಸ್‌ಯುವಿಯು 2018ರಲ್ಲಿ ಬಿಡುಗಡೆ ಮಾಡಲಾದ ಕ್ಯೂ3ರ ಎರಡನೇ ತಲೆಮಾರಿನ ವಾಹನ. ಈ ಮಾದರಿಯು 'ಯೂರೋ ಎನ್‌ಸಿಎಪಿ'ಯ ಕ್ರ್ಯಾಶ್ ಟೆಸ್ಟ್‌ನಲ್ಲಿ, 5 ಸ್ಟಾರ್‌ಗಳ ರೇಟಿಂಗ್ ಪಡೆದಿತ್ತು.

ಎಲ್ಲಾ ಸ್ವರೂಪದ ಅಪಘಾತದ ಸಂದರ್ಭದಲ್ಲಿ ಈ ಎಸ್‌ಯುವಿಯನ್ನು ಚಾಲನೆ ಮಾಡುವವರು ಮತ್ತು ಪ್ರಯಾಣಿಸುತ್ತಿರುವವರು ಹೆಚ್ಚಿನ ಗಾಯಗಳಿಲ್ಲದೆ ಬದುಕುಳಿಯುವ ಸಾಧ್ಯತೆ ಪ್ರಮಾಣ ಶೇ 95ರಷ್ಟು. ಈ ಎಸ್‌ಯುವಿಯಲ್ಲಿ ಪ್ರಯಾಣಿಸುತ್ತಿದ್ದ ಮಕ್ಕಳು ಎಂಥಹದ್ದೇ ಅಪಘಾತದಲ್ಲೂ ಗಂಭೀರ ಗಾಯಗಳಿಲ್ಲದೆ ಬದುಕುಳಿಯುವ ಪ್ರಮಾಣ ಶೇ 86ರಷ್ಟು ಎಂದು ಯೂರೋ ಎನ್‌ಸಿಎಪಿ ತನ್ನ ಕ್ರ್ಯಾಶ್‌ಟೆಸ್ಟ್ ವರದಿಯಲ್ಲಿ ಹೇಳಿದೆ.

ಬೆಂಗಳೂರಿನ ಕೋರಮಂಗಲದಲ್ಲಿ ಅಪಘಾತಕ್ಕೆ ಈಡಾದ ಕ್ಯೂ3 ಎಸ್‌ಯುವಿ ಸಹ ಇದೇ ಮಾದರಿಯದ್ದು. ಈ ಮಾದರಿಯಲ್ಲಿ ಒಟ್ಟು 9 ಏರ್‌ಬ್ಯಾಗ್‌ಗಳಿವೆ. ಕೋರಮಂಗಲದಲ್ಲಿ ಅಪಘಾತಕ್ಕೆ ಈಡಾದ ಕ್ಯೂ3ಯಲ್ಲಿನ ಒಂದೂ ಏರ್‌ಬ್ಯಾಗ್, ಅಪಘಾತದ ಸಂದರ್ಭದಲ್ಲಿ ತೆರೆದುಕೊಂಡಿಲ್ಲ.

ಯಾವುದೇ ವಾಹನದಲ್ಲಿ ಸೀಟ್‌ಬೆಲ್ಟ್ ಪ್ರಾಥಮಿಕ ಸುರಕ್ಷಾ ಪರಿಕರವಾಗಿರುತ್ತದೆ. ಏರ್‌ಬ್ಯಾಗ್ ಎರಡನೇ ಹಂತದ ಸುರಕ್ಷಾ ಪರಿಕರ. ಏರ್‌ಬ್ಯಾಗ್‌ಗಳು ಕಿರುಬಾಂಬ್‌ನಂತೆ ಕೆಲಸ ಮಾಡುವ ಕಾರಣ, ಚಾಲಕ ಮತ್ತು ಪ್ರಯಾಣಿಕನ ಮುಖಕ್ಕೆ ಅಪ್ಪಳಿಸಿದರೆ ಮಾರಣಾಂತಿಕ ಗಾಯಗಳಾಗುತ್ತವೆ. ಸೀಟ್ ಬೆಲ್ಟ್ ಧರಿಸಿದ್ದರೆ, ಏರ್‌ಬ್ಯಾಗ್‌ಗೆ ಅಪ್ಪಳಿಸುವುದನ್ನು ತಡೆಯುತ್ತದೆ. ಸೀಟ್‌ಬೆಲ್ಟ್ ಧರಿಸದೇ ಇದ್ದರೆ ಅಪಘಾತದ ಸಂದರ್ಭದಲ್ಲಿ ಚಾಲಕ-ಪ್ರಯಾಣಿಕರು ಏರ್‌ಬ್ಯಾಗ್‌ಗೆ ಅಪ್ಪಳಿಸುವ ಅಪಾಯವಿರುತ್ತದೆ.

ಹೀಗಾಗಿ ಸೀಟ್‌ಬೆಲ್ಟ್ ಧರಿಸದೇ ಇದ್ದರೆ, ಏರ್‌ಬ್ಯಾಗ್ ನಿಷ್ಕ್ರಿಯವಾಗುವ ತಂತ್ರಜ್ಞಾನ ಅಳವಡಿಸಲಾಗುತ್ತದೆ. ಸೀಟ್ ಬೆಲ್ಟ್ ಧರಿಸದೇ ಇದ್ದರೆ ಅಪಘಾತದ ಸಂದರ್ಭದಲ್ಲಿ ಏರ್‌ಬ್ಯಾಗ್ ತೆರೆದುಕೊಳ್ಳುವುದಿಲ್ಲ. ಕೋರಮಂಗಲ ಅಪಘಾತದಲ್ಲೂ ಹೀಗೆಯೇ ಆಗಿದೆ. ಸೀಟ್‌ಬೆಲ್ಟ್ ಧರಿಸದಿರುವ ಕಾರಣ ಒಂದೂ ಏರ್‌ಬ್ಯಾಗ್ ತೆರೆದುಕೊಂಡಿಲ್ಲ.

ಯೂರೋ ಎನ್‌ಸಿಎಪಿ, ಗ್ಲೋಬಲ್ ಎನ್‌ಸಿಎಪಿ ಮತ್ತು ಆಸಿಯಾನ್ ಎನ್‌ಸಿಎಪಿಗಳು ನೀಡುವ ಕ್ರ್ಯಾಶ್‌ಟೆಸ್ಟ್ ವರದಿಗಳು ಮತ್ತು ಸುರಕ್ಷಾ ರೇಟಿಂಗ್ ಗರಿಷ್ಠ 64 ಕಿ.ಮೀ.ನಷ್ಟು ವೇಗಕ್ಕಷ್ಟೇ ಅನ್ವಯವಾಗುತ್ತದೆ. ಅದಕ್ಕಿಂತ ಹೆಚ್ಚಿನ ವೇಗದಲ್ಲಿ ಈ ಸುರಕ್ಷಾ ರೇಟಿಂಗ್‌ಗಳು ಉಪಯೋಗಕ್ಕೆ ಬರುವುದಿಲ್ಲ.

ಕ್ಯೂ3 ಐದು ಸೀಟಿನ ವಾಹನವಾಗಿದ್ದು, ಕೋರಮಂಗಲದ ಪ್ರಕರಣದಲ್ಲಿ ವಾಹನದಲ್ಲಿ ಏಳು ಮಂದಿ ಕೂತಿದ್ದರು. ಸಾಮರ್ಥ್ಯಕ್ಕಿಂತ ಹೆಚ್ಚು ಜನರು ಕೂತಿದ್ದೂ ಸಹ, ಅವರೆಲ್ಲರೂ ಮೃತಪಡಲು ಕಾರಣ ಎಂದು ವಿಶ್ಲೇಷಿಸಲಾಗಿದೆ.

ಆಧಾರ: ಯೂರೋ ಎನ್‌ಸಿಎಪಿ

'ಸದಾಶಿವ ವರದಿ ಜಾರಿಗೆ ಬಿಡುವುದಿಲ್ಲ'

ಕೊಪ್ಪಳ: ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿ ಜಾರಿಗೆ ನಮ್ಮ ವಿರೋಧವಿದೆ ಎಂದು ಪಶುಸಂಗೋಪನೆ ಸಚಿವ ಪ್ರಭು ಚವಾಣ್ ಹೇಳಿದರು.

ಮಂಗಳವಾರ ಇಲ್ಲಿ ಪತ್ರಕರ್ತರೊಂದಿಗೆ ಮಾತನಾಡಿ, 'ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಬಂಜಾರ, ಕೊರಚ, ಕೊರಮರನ್ನು ಸೇರಿಸಲಾಗಿದೆ. ಒಳಮೀಸಲಾತಿ ಜಾರಿ ಮಾಡಿದರೆ ನಮಗೆ ಅನ್ಯಾಯವಾಗುತ್ತದೆ. ಹೀಗಾಗಿ ಈ ವರದಿ ಜಾರಿ ಮಾಡಲು ನಾವು ಬಿಡುವುದಿಲ್ಲ' ಎಂದರು.

ಪರಸ್ಪರ ಅಂತರ ಮರೆತ ಜನ

ಯಾದಗಿರಿ ಜಿಲ್ಲೆ ಸುರಪುರದ ವೇಣುಗೋಪಾಲಸ್ವಾಮಿ ಜಾತ್ರೆ (ಹಾಲೋಕಳಿ) ಪ್ರಯುಕ್ತ ಮಂಗಳವಾರ ಸಂಜೆ ನಡೆದ ದೇವರ ಕಂಬಾರೋಹಣ ವೀಕ್ಷಣೆಗೆ ಸಹಸ್ರಾರು ಜನ ಸೇರಿದ್ದರು. ಈ ವೇಳೆ ಕೋವಿಡ್ ನಿಯಮ ಪಾಲನೆಯಾಗಲಿಲ್ಲ

'ಜೆಡಿಎಸ್ ಜೊತೆ ಮೈತ್ರಿ ಇಲ್ಲ'

ಮೈಸೂರು: 'ಜೆಡಿಎಸ್ ಜತೆ ಬಿಜೆಪಿ ಮೈತ್ರಿ ಮಾಡಿಕೊಳ್ಳುವುದಿಲ್ಲ. ನೇರವಾಗಿ ಅಥವಾ ಪರೋಕ್ಷವಾಗಿ ಯಾವ ಪಕ್ಷದೊಂದಿಗೂ ಹೊಂದಾಣಿಕೆ ಇಲ್ಲ' ಎಂದು ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಸ್ಪಷ್ಟಪಡಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಅವರು, 'ಜೆಡಿಎಸ್ ಮುಳುಗುತ್ತಿರುವ ಹಡಗು. ರಾಜ್ಯದ ಜನ ಜೆಡಿಎಸ್, ಕಾಂಗ್ರೆಸ್ ಸರ್ಕಾರಗಳ ಆಡಳಿತ ನೋಡಿದ್ದಾರೆ. ಬಿಜೆಪಿ ಸರ್ಕಾರ ಬಂದ ಬಳಿಕ ಅಭಿವೃದ್ಧಿಯ ವೇಗ ಹೆಚ್ಚಿದ್ದು, ಮುಂದಿನ ಚುನಾವಣೆಯಲ್ಲಿ ಸ್ಪಷ್ಟ ಬಹುಮತದೊಂದಿಗೆ ಮತ್ತೆ ಅಧಿಕಾರ ಹಿಡಿಯುತ್ತೇವೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಹಳೇ ಮೈಸೂರು ಭಾಗದಲ್ಲಿ ಪಕ್ಷದ ಬಲಹೆಚ್ಚುತ್ತಿದೆ. ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಮಂಡ್ಯ, ಹಾಸನದಲ್ಲಿ ಪಕ್ಷ ಬೆಂಬಲಿತ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಗೆದ್ದಿದ್ದಾರೆ. ವಿಧಾನಸಭೆ ಚುನಾವಣೆಯಲ್ಲೂ ಈ ಭಾಗದಲ್ಲಿ ಅತಿ ಹೆಚ್ಚು ಸ್ಥಾನ ಗೆಲ್ಲುತ್ತೇವೆ' ಎಂದರು.

'ಪಕ್ಷ ಸಂಘಟನೆಯಲ್ಲಿ ಅನುಭವವುಳ್ಳ ಬಿ.ಎಸ್. ಯಡಿಯೂರಪ್ಪ ಅವರು ರಾಜ್ಯ ಪ್ರವಾಸ ಕೈಗೊಳ್ಳುವುದರಿಂದ ಪಕ್ಷಕ್ಕೆ ಹೆಚ್ಚಿನ ಲಾಭವಿದೆ. ಪ್ರವಾಸ ಮಾಡಲು ಅವರು ಹೈಕಮಾಂಡ್‌ನ ಅನುಮತಿ ಪಡೆಯಬೇಕಾಗಿಲ್ಲ' ಎಂದು ಪ್ರತಿಪಾದಿಸಿದರು.

'ಮೇಕೆದಾಟು: ರಾಜ್ಯಕ್ಕೆ ಧಕ್ಕೆ ಆಗದು' 'ಮೇಕೆದಾಟು, ಮಹದಾಯಿ ಯೋಜನೆಗೆ ಸಂಬಂಧಿಸಿ ಕರ್ನಾಟಕದ ಹಿತಾಸಕ್ತಿ ಕಾಪಾಡಲಾಗುವುದು' ಎಂದು ಭರವಸೆ ನೀಡಿದರು.

ಕೆಡಿಪಿ ಪ್ರಗತಿ ಪರಿಶೀಲನೆ ಸಭೆಯಲ್ಲಿ ಸಿ.ಎಂ ತಾಕೀತು • ಕಾಲಮಿತಿಯಲ್ಲಿ ಯೋಜನೆಗಳ ಜಾರಿಗೆ ಸೂಚನೆ

ಅಧಿಕಾರಿಗಳೇ ಹಳ್ಳಿಗೆ ನಡೆಯಿರಿ: ಬಸವರಾಜ ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಲಾಖಾ ಕಾರ್ಯದರ್ಶಿ ಮಟ್ಟದ ಅಧಿಕಾರಿಗಳು ಜಿಲ್ಲೆ, ತಾಲ್ಲೂಕು ಮತ್ತು ಹಳ್ಳಿಗಳಿಗೆ ಭೇಟಿ ನೀಡಿ ತಮ್ಮ ಇಲಾಖೆಯ ಕಾರ್ಯಕ್ರಮಗಳ ಅನುಷ್ಠಾನದ ಕುರಿತು ಪರಿಶೀಲನೆ ನಡೆಸಬೇಕು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಐಎಎಸ್ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (ಕೆಡಿಪಿ) ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮಂಗಳವಾರ ಪ್ರಗತಿ ಪರಿಶೀಲಿಸಿದ ಅವರು, 'ಜನರ ಬಳಿಗೇ ಅಭಿವೃದ್ಧಿಯನ್ನು ಒಯ್ಯುವುದು ಸರ್ಕಾರದ ನಿಲುವು. ಅದಕ್ಕೆ ಪೂರಕವಾಗಿ ಹಳ್ಳಿಗಳಿಗೆ ಭೇಟಿ ನೀಡಬೇಕು. ಈ ಕ್ರಮದಿಂದ ಹಳ್ಳಿಗಳಲ್ಲಿ ಅಭಿವೃದ್ಧಿ ಯೋಜನೆಗಳ ಅನುಷ್ಠಾನ ಚುರುಕಾಗುತ್ತದೆ' ಎಂದರು.

'ಅಧೀನ ಕಾರ್ಯದರ್ಶಿಗಳು, ಉಪ ಕಾರ್ಯದರ್ಶಿಗಳು ಮಂಡಿಸಿದ ಕಡತಗಳಿಗೆ ಕಣ್ಣುಮುಚ್ಚಿ ಸಹಿ ಹಾಕುವುದನ್ನು ನಿಲ್ಲಿಸಿ. ಪ್ರತಿ ಕಡತವನ್ನೂ ಪರಿಶೀಲಿಸಿ, ವಿವೇಚನೆ ಬಳಸಿ ನಿರ್ಧರಿಸಬೇಕು. ಯೋಜನೆಗಳನ್ನೂ ಕಾಲಮಿತಿಯಲ್ಲಿ ಅನುಷ್ಠಾನಕ್ಕೆ ತರಬೇಕು. ಸಣ್ಣಪುಟ್ಟ ತಾಂತ್ರಿಕ ಅಡಚಣೆಗಳ ನೆಪ ಹೇಳಿ ತಡೆಹಿಡಿಯಬಾರದು' ಎಂದು ಸೂಚಿಸಿದರು.



ಬಸವರಾಜ ಬೊಮ್ಮಾಯಿ

ಆದೇಶ ಹೊರಡಿಸಲು ಸೂಚನೆ: ಮುಂದುವರಿದ ಯೋಜನೆಗಳು, ಬಜೆಟ್‌ನಲ್ಲಿನ ಹೊಸ ಯೋಜನೆಗಳು ಹಾಗೂ ನಂತರದ ದಿನಗಳಲ್ಲಿ ಘೋಷಿಸಿದ ಯೋಜನೆಗಳು ಸೇರಿದಂತೆ 306 ಕಾರ್ಯಕ್ರಮಗಳ ಅನುಷ್ಠಾನವಾಗಬೇಕಿದೆ. ಈ ಪೈಕಿ 155 ಕಾರ್ಯಕ್ರಮಗಳ ಅನುಷ್ಠಾನಕ್ಕೆ ಮಾತ್ರ ಆದೇಶ ಹೊರಡಿಸಲಾಗಿದೆ. 151 ಆದೇಶ ಪ್ರಕಟಿಸುವುದು ಬಾಕಿ ಇದೆ. ಇದಕ್ಕೆ ಅಸಮಾಧಾನ ವ್ಯಕ್ತಪಡಿಸಿರುವ ಮುಖ್ಯಮಂತ್ರಿ, ಮುಂದಿನ ತ್ರೈಮಾಸಿಕ ಸಭೆಯೊಳಗೆ ಎಲ್ಲ ಕಾರ್ಯಕ್ರಮಗಳ ಅನುಷ್ಠಾನ ಆರಂಭವಾಗಬೇಕು ಎಂಬ ಗಡುವು ನೀಡಿದ್ದಾರೆ.

ಅನುದಾನ ಬಳಕೆ ವಿಳಂಬ: ಪ್ರಾರಂಭಿಕ ಶಿಲ್ಕು ಮತ್ತು ಪ್ರಸಕ್ತ ಸಾಲಿನ ಬಜೆಟ್ ಗಾತ್ರ ಸೇರಿದಂತೆ 2021–22ನೇ ಸಾಲಿನಲ್ಲಿ ₹ 2.18 ಲಕ್ಷ ಕೋಟಿ ಅನುದಾನ ಬಳಕೆಗೆ ಲಭ್ಯವಿದೆ. ಜುಲೈ ಅಂತ್ಯದವರೆಗೆ ₹ 62,556 ಕೋಟಿ ಬಿಡುಗಡೆಯಾಗಿದ್ದು, ₹ 49,610 ಕೋಟಿ ಬಳಕೆಯಾಗಿದೆ ಎಂಬ ಮಾಹಿತಿಯನ್ನು ಅಧಿಕಾರಿಗಳು ಸಭೆಯಲ್ಲಿ ಮಂಡಿಸಿದರು.

ಆಯಾ ಇಲಾಖೆಗಳಲ್ಲಿ ಬಾಕಿ ಇರುವ ಕಾರ್ಯಕ್ರಮಗಳನ್ನು ತ್ವರಿತವಾಗಿ ಅನುಷ್ಠಾನಕ್ಕೆ ತರಬೇಕು. ಬಿಡುಗಡೆಯಾಗಿರುವ ಅನುದಾನ ಪೂರ್ಣ ಪ್ರಮಾಣದಲ್ಲಿ ಬಳಕೆಯಾಗುತ್ತಿದ್ದಂತೆ ಹೆಚ್ಚಿನ ಅನುದಾನಕ್ಕೆ ಬೇಡಿಕೆ ಸಲ್ಲಿಸಬೇಕು ಎಂದು ಬೊಮ್ಮಾಯಿ ಸೂಚಿಸಿದ್ದಾರೆ.

ಬದಲಾವಣೆ ಗೋಚರಿಸಲಿ: 'ಕಣ್ಣಿಗೆ ಗೋಚರವಾಗುವಂತಹ ಬದಲಾವಣೆಗಳನ್ನು ಆಡಳಿತದಲ್ಲಿ ತರಬೇಕು. ಚುರುಕಿನ ಮತ್ತು ಜನಪರ ಆಡಳಿತ ನೀಡುವ ವಿಚಾರದಲ್ಲಿ ನಾನು ಸದಾ ನಿಮ್ಮ ಜತೆಗಿರುವೆ' ಎಂದು ಅಧಿಕಾರಿಗಳಿಗೆ ಭರವಸೆ ನೀಡಿದ್ದಾರೆ.

'ಆಡಳಿತದಲ್ಲಿ ಯಾವ ಅಧಿಕಾರಿಯೂ ಉದಾಸೀನ ಮತ್ತು ನಿರ್ಲಕ್ಷ್ಯದ ಧೋರಣೆ ತಾಳುವುದನ್ನು ಸಹಿಸುವುದಿಲ್ಲ. ಪ್ರತಿಯೊಂದು ಇಲಾಖೆಯ ಕಾರ್ಯವೈಖರಿಯನ್ನೂ ನಾನು ಗಮನಿಸುತ್ತಿದ್ದೇನೆ. ಈವರೆಗೆ ಮೌನದಿಂದ ಎಲ್ಲವನ್ನೂ ನೋಡುತ್ತಿದ್ದೇನೆ ಎಂಬ ಕಾರಣಕ್ಕಾಗಿ ನನಗೆ ಏನೂ ಗೊತ್ತಾಗದು ಎಂಬ ಭಾವನೆ ಬೇಡ' ಎಂಬ ಎಚ್ಚರಿಕೆಯ ಸಂದೇಶವನ್ನೂ ಸಭೆಯಲ್ಲಿ ರವಾನಿಸಿದ್ದಾರೆ.

ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ವಿವಿಧ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿ ಹಂತದ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

'ಅಪೌಷ್ಟಿಕತೆ ನಿವಾರಣೆಗೆ ವಿಶೇಷ ಯೋಜನೆ'

ಬೆಂಗಳೂರು: ರಾಯಚೂರು, ಯಾದಗಿರಿ ಮತ್ತು ಕಲಬುರ್ಗಿ ಜಿಲ್ಲೆಗಳಲ್ಲಿ ಮಕ್ಕಳು ಹಾಗೂ ಮಹಿಳೆಯರಲ್ಲಿನ ಅಪೌಷ್ಟಿಕತೆ ನಿವಾರಿಸಲು ವಿಶೇಷ ಯೋಜನೆ ರೂಪಿಸಲಾಗುವುದು ಎಂದು ಮುಖ್ಯಮಂತ್ರಿ ಬೊಮ್ಮಾಯಿ ಪ್ರಕಟಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಮೂರು ಜಿಲ್ಲೆಗಳಲ್ಲಿ ಮಕ್ಕಳು ಮತ್ತು ಮಹಿಳೆಯರಲ್ಲಿ ಅಪೌಷ್ಟಿಕತೆ ಹೆಚ್ಚಾಗಿರುವುದು ಕಂಡುಬಂದಿದೆ. ಇದನ್ನು ನಿವಾರಿಸಲು ವಿಶೇಷ ಯೋಜನೆಯೊಂದನ್ನು ರೂಪಿಸಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ' ಎಂದರು.

ಯಾದಗಿರಿ ಜಿಲ್ಲೆಯಲ್ಲಿ 1.26 ಲಕ್ಷ ಮತ್ತು ರಾಯಚೂರು ಜಿಲ್ಲೆಯಲ್ಲಿ 80,000 ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ ಎಂಬ ವರದಿಯನ್ನು ಅಧಿಕಾರಿಗಳು ಸಭೆಯಲ್ಲಿ ಮಂಡಿಸಿದ್ದರು.

'ಅನುದಾನದ ಬಳಕೆಗೆ ನಿರಾಸಕ್ತಿ'

ಕೇಂದ್ರ ಪುರಸ್ಕೃತ ಯೋಜನೆಗಳೂ ಸೇರಿದಂತೆ ಹಲವು ಯೋಜನೆಗಳಲ್ಲಿ ಬಳಕೆಯಾಗಿರುವ ಅನುದಾನವನ್ನು ಬಳಸಿಕೊಳ್ಳಲು ನಿರಾಸಕ್ತಿ ತೋರಿರುವುದಕ್ಕೆ ಕೆಡಿಪಿ ಸಭೆಯಲ್ಲಿ ಮುಖ್ಯಮಂತ್ರಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಬಜೆಟ್‌ನಲ್ಲಿ ಘೋಷಿಸಿದ್ದ ಕೆಲವು ಯೋಜನೆಗಳಲ್ಲಿ ಹಣ ಬಿಡುಗಡೆ ವಿಳಂಬವಾಗಿರುವುದು ಮತ್ತು ಕೆಲವು ಯೋಜನೆಗಳಲ್ಲಿ ಬಿಡುಗಡೆಯಾದ ಅನುದಾನವನ್ನು ಬಳಕೆ ಮಾಡದೇ ಇರುವುದನ್ನು ಗಮನಿಸಿದ ಬೊಮ್ಮಾಯಿ, ಅಂತಹ ಯೋಜನೆಗಳ ಪ್ರಗತಿ ಪರಿಶೀಲನೆ ನಡೆಸುವಂತೆ ಹಿರಿಯ ಅಧಿಕಾರಿಗಳಿಗೆ ಸೂಚಿಸಿದರು.

'ನ.1ರಿಂದ ಆಡಳಿತ ಸುಧಾರಣೆ ಜಾರಿ'

ಬೆಂಗಳೂರು: ಟಿ.ಎಂ. ವಿಜಯ ಭಾಸ್ಕರ್ ನೇತೃತ್ವದ ಆಡಳಿತ ಸುಧಾರಣಾ ಆಯೋಗದ ಮೊದಲ ವರದಿಯಲ್ಲಿನ ಶಿಫಾರಸುಗಳನ್ನು ನವೆಂಬರ್ 1ರಿಂದ ಅನುಷ್ಠಾನಕ್ಕೆ ತರಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿ, 'ಆಡಳಿತ ಸುಧಾರಣಾ ಆಯೋಗದ ಶಿಫಾರಸುಗಳ ಅನುಷ್ಠಾನಕ್ಕಾಗಿ ಸಲಹಾ ಸಮಿತಿ ರಚಿಸಲಾಗುವುದು. ಸಮಿತಿಯ ಸಲಹೆಗಳ ಆಧಾರದಲ್ಲಿ ನ.1ರಿಂದಲೇ ಅನುಷ್ಠಾನಕ್ಕೆ ಚಾಲನೆ ನೀಡಲಾಗುವುದು' ಎಂದರು. ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಇತ್ಯರ್ಥಕ್ಕೆ ಹಿರಿಯ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಲು ಸೂಚಿಸಲಾಗಿದೆ ಎಂದರು.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು 'Deccan Herald-Prajavani Relief Trust' ಹೆಸರಿಗೆ ಕಳುಹಿಸಬಹುದು.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

'Deccan Herald-Prajavani Relief Trust'
Canara Bank, Cantonment Branch
A/c no. - **0404101200385**
IFSC code - **CNRB0000404**
MICR Code - **560015009**

ಸೂಚನೆ
ದೇಣಿಗೆ ನೀಡುವವರು ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಕೊಡುಗೆ' ಎಂದು ನಮೂದಿಸಲು ಮನವಿ.

ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2021ರ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಅರ್ಜಿ' ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ವಿದ್ಯಾರ್ಥಿಗಳ ಅನಿಸಿಕೆ

ಸಂಕಷ್ಟ ಕಾಲದಲ್ಲಿ ನೆರವಾಯಿತು

'ಪ್ರಜಾವಾಣಿ' ನೀಡಿದ ಸ್ಕಾಲರ್‌ಶಿಪ್‌ನಿಂದ ಪುಸ್ತಕಗಳನ್ನು ಖರೀದಿಸಿದೆ. ನಮ್ಮ ತಂದೆ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದು, ಲಾಕ್‌ಡೌನ್ ಸಮಯದಲ್ಲಿ ಅಂಗಡಿ ಮುಚ್ಚಿದ್ದರಿಂದ ತುಂಬಾ ಕಷ್ಟವಾಯಿತು. ಅಂತಹ ಸಮಯದಲ್ಲಿ 'ಪ್ರಜಾವಾಣಿ' ನೆರವಿಗೆ ಬಂದಿತು.

ಸ್ಫೂರ್ತಿ ಜೆ., ದೇವರಾಜ ಅರಸು ಬಡಾವಣೆ, ದಾವಣಗೆರೆ

ಬಸ್ ಪಾಸ್‌ಗೆ ಅನುಕೂಲ

'ಪ್ರಜಾವಾಣಿ' ನೀಡಿದ ವಿದ್ಯಾರ್ಥಿ ವೇತನದಿಂದ ಬಸ್ ಪಾಸ್ ಮಾಡಿಸಿಕೊಂಡೆ. ಕಾಲೇಜು ಪ್ರವೇಶ ಶುಲ್ಕ ಪಾವತಿಸಿದೆ. ನೋಟ್ ಪುಸ್ತಕಗಳನ್ನು ಖರೀದಿಸಿದೆ. ಶಿಕ್ಷಣಕ್ಕೆ ನೆರವು ನೀಡಿದ ಪತ್ರಿಕೆಗೆ ಧನ್ಯವಾದಗಳು. ವಿಜ್ಞಾನ ವಿಷಯ ಆಯ್ಕೆ ಮಾಡಿಕೊಂಡು ಓದುತ್ತಿದ್ದೇನೆ.

ಹಬೀಬಾ, ಜೆ.ಸಿ.ಪುರ, ಅರಸೀಕೆರೆ, ಹಾಸನ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	117.32	5,700	9,675
ಹಾರಂಗಿ	2,859	2,858	3,320	1,600
ಕಬಿನಿ	2284.00	2,281.9	5,600	5,000
ಹೇಮಾವತಿ	2,922	2,916.97	2,642	5,160
ಲಿಂಗನಮಕ್ಕಿ	1,819	1,812.70	6,724	-
ಸೂಪಾ (ಮೀ)	564	554.76	2,562	1,701
ಮಾಣಿ	594	585.86	425	-
ತುಂಗಭದ್ರಾ	1,633	1,632.57	18,757	10,451
ಮಲಪ್ರಭಾ	2079.5	2,078.55	3,278	894
ಘಟಪ್ರಭಾ	2175	2,175.00	1,184	1,184
ಭದ್ರಾ	186	185.40	5,677	3,246
ಆಲಮಟ್ಟಿ (ಮೀ)	519.6	519.60	6,140	6,140
ನಾರಾಯಣಪುರ (ಮೀ)	492.25	491.96	4,950	4,825

* ನೆಲಮಟ್ಟದಿಂದ

ಶಾಲೆಗೆ ಹೋಗಲು ನಿತ್ಯ 10 ಕಿ.ಮೀ. ನಡಿಗೆ: ಬಸ್ ಸಂಚಾರಕ್ಕೆ ಆಗ್ರಹ

ಮುಂಡರಗಿ ತಾಲ್ಲೂಕಿನ ವಿವಿಧ ಗ್ರಾಮಗಳಿಂದ ಎಕ್ಲಾಸಪುರ ಗ್ರಾಮದ ಶಾಲೆಗೆ ನಡೆದುಕೊಂಡು ಬರುತ್ತಿರುವ ವಿದ್ಯಾರ್ಥಿಗಳು

ಮುಂಡರಗಿ (ಗದಗ ಜಿಲ್ಲೆ): ಗದಗದಿಂದ ಡಂಬಳ, ಮೇವುಂಡಿ ಮಾರ್ಗವಾಗಿ ತಾಲ್ಲೂಕಿನ ಎಕ್ಲಾಸಪುರ ಗ್ರಾಮಕ್ಕೆ ಬರುತ್ತಿದ್ದ ಬಸ್ ಸಂಚಾರವನ್ನು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಸ್ಥಗಿತಗೊಳಿಸಿರುವುದರಿಂದ ಎಕ್ಲಾಸಪುರ ಗ್ರಾಮದ ಸುತ್ತಮುತ್ತಲಿನ ಹಲವಾರು ವಿದ್ಯಾರ್ಥಿಗಳು ನಿತ್ಯ 10 ಕಿ.ಮೀ. ನಡೆದುಕೊಂಡೇ ಶಾಲೆಗೆ ಹೋಗಬೇಕಾಗಿದೆ.

ಲಾಕ್‌ಡೌನ್ ಸಮಯದಲ್ಲಿ ಗದುಗಿನಿಂದ ಎಕ್ಲಾಸಪುರ ಗ್ರಾಮಕ್ಕೆ ಬರುತ್ತಿದ್ದ ಬಸ್ ಸಂಚಾರವನ್ನು ಸ್ಥಗಿತಗೊಳಿಸಲಾಯಿತು. ಈಗ ಬಸ್ ಸಂಚಾರವನ್ನು ಮರಳಿ ಪ್ರಾರಂಭಿಸಿಲ್ಲ. ಎಕ್ಲಾಪುರ ಗ್ರಾಮದಲ್ಲಿ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಅಕ್ಕಪಕ್ಕದ ಹೈತಾಪುರ, ವೆಂಕಟಾಪುರ ಹಾಗೂ ಮತ್ತಿತರ ಗ್ರಾಮಗಳ ವಿದ್ಯಾರ್ಥಿಗಳು ಎಕ್ಲಾಸಪುರ ಶಾಲೆಗೆ ಬರುತ್ತಿದ್ದಾರೆ.

ಸರ್ಕಾರ ಇದೀಗ 9ನೇ ತರಗತಿಯಿಂದ ಶಾಲೆಗಳನ್ನು ಪ್ರಾರಂಭಿಸಿದ್ದು, ತರಗತಿಗಳು ಪ್ರಾರಂಭವಾಗಿವೆ. ಗದುಗಿನಿಂದ ಬಸ್ ಬಾರದೆ ಇರುವುದರಿಂದ ಅವರೆಲ್ಲ ಸುಮಾರು 10 ಕಿ.ಮೀ. ನಡೆದುಕೊಂಡು ಶಾಲೆಗೆ ಬರಬೇಕಾಗಿದೆ. ಮುಂಡರಗಿಯಿಂದ ಹಲವು ಬಸ್ಸುಗಳು ಬರುತ್ತಿವೆ. ಆದರೆ ಅವು ಶಾಲಾ ಸಮಯಕ್ಕೆ ಬರುವುದಿಲ್ಲ.

'ಸಮಯಕ್ಕೆ ಸರಿಯಾಗಿ ಬಸ್ ಸಂಚಾರವಿಲ್ಲದ್ದರಿಂದ ಕೆಲವು ಗ್ರಾಮಗಳ ವಿದ್ಯಾರ್ಥಿಗಳಿಗೆ ತೀವ್ರ ತೊಂದರೆಯಾಗಿದೆ. ತಕ್ಷಣ ಗದುಗಿನಿಂದ ಎಕ್ಲಾಸಪುರ ಗ್ರಾಮಕ್ಕೆ ಮೊದಲಿನಂತೆ ಬಸ್ ಸಂಚಾರವನ್ನು ಪ್ರಾರಂಭಿಸಬೇಕು' ಎನ್ನುತ್ತಾರೆ ಆ ಗ್ರಾಮದ ಯುವ ಮುಖಂಡ ಮಹಾಂತೇಶ ಮುಗುಳಿ.

ನಿಗದಿಯಂತೆ ಎಕ್ಲಾಸಪುರ ಗ್ರಾಮಕ್ಕೆ ಮುಂಜಾನೆ ಎರಡು ಬಸ್ಸುಗಳನ್ನು ಬಿಡಲಾಗುತ್ತದೆ. ಮೇಲಧಿಕಾರಿಗಳೊಂದಿಗೆ ಚರ್ಚಿಸಿ ಹೆಚ್ಚುವರಿ ಬಸ್ ಓಡಿಸಲು ಕ್ರಮ ಕೈಗೊಳ್ಳಲಾಗುವುದು

ಎಸ್.ಡಿ.ಬಳೂಟಗಿ, ಘಟಕ ವ್ಯವಸ್ಥಾಪಕ, ಮುಂಡರಗಿ

ವೈದ್ಯಲೋಕದಲ್ಲೂ ಆ್ಯಪ್‌ಗಳು

ಡಾ. ಕಿರಣ್ ವಿ. ಎಸ್.

> ವೃತ್ತಿಜೀವನದಲ್ಲಿ ಬಿಡುವನ್ನು ಕಂಡುಕೊಳ್ಳಲು ಹೆಣಗಾಡುವ ವೈದ್ಯರಿಗೆ ತಮ್ಮ ಕ್ಷೇತ್ರದ ಬೆಳವಣಿಗೆಗಳನ್ನು, ರೋಗಗಳ ನಿರ್ವಹಣೆಯ ಆಧುನಿಕ ಮಾರ್ಗಸೂಚಿಗಳನ್ನು ನಿಖರವಾಗಿ, ಸ್ಪಷ್ಟವಾಗಿ, ಚುಟುಕಾಗಿ ಹೇಳುವಂತಹ ಸ್ರೋತಗಳು ದೊರೆತರೆ, ಅದಕ್ಕಿಂತ ಒಳಿತು ಬೇರೊಂದಿಲ್ಲ.

ನಮ್ಮ ಜೀವನಕಾಲದ ಇದುವರೆಗಿನ ಅತ್ಯಂತ ಉಪಯುಕ್ತ ಮತ್ತು ರೋಚಕ ಆವಿಷ್ಕಾರ ಎಂದರೆ ಸ್ಮಾರ್ಟ್-ಫೋನು. 'ಜಗತ್ತು ನಮ್ಮ ಅಂಗೈನಲ್ಲಿದೆ' ಎಂಬ ಭಾವನೆ ಮೂಡಿಸುವ ಸ್ಮಾರ್ಟ್-ಫೋನುಗಳು ತಮ್ಮ ವಿಧವಿಧವಾದ 'ಆ್ಯಪ್' (app) ಎಂಬ ಕಿರುತಂತ್ರಾಂಶಗಳ ಮೂಲಕ ನಮ್ಮ ಜೀವನಕ್ರಮವನ್ನೇ ಬದಲಿಸಿವೆ. ಗ್ರಾಹಕರ ಬಳಕೆಯ ಲೆಕ್ಕಾಚಾರದಲ್ಲಿ ಆರೋಗ್ಯಕ್ಕೆ ಸಂಬಂಧಿಸಿದ ಆ್ಯಪ್‌ಗಳು ಮನೋರಂಜನೆಯ ಆ್ಯಪ್‌ಗಳ ನಂತರದ ಸ್ಥಾನದಲ್ಲಿವೆ. ಆರೋಗ್ಯಾಸಕ್ತರು ವ್ಯಾಯಾಮಕ್ಕೆ ಸಂಬಂಧಿಸಿದ, ಸೇವಿಸುವ ಕ್ಯಾಲರಿಗಳಿಗೆ ಲೆಕ್ಕ ಇಡುವಂತಹ ಆ್ಯಪ್‌ಗಳನ್ನು ಬಳಸುತ್ತಾರೆ. ರೋಗಿಗಳು ತಾವು ಸೇವಿಸಬೇಕಾದ ಔಷಧಗಳ ಅನುಸರಣೆಗೆ, ವೈದ್ಯರನ್ನು ಕಾಣಬೇಕಾದ ಅಗತ್ಯಗಳಿಗೆ ಆ್ಯಪ್‌ಗಳ ಮೊರೆ ಹೋಗುತ್ತಿದ್ದಾರೆ. ವೈದ್ಯರ ಜೊತೆಗೆ ವಿಡಿಯೊ ಸಮಾಲೋಚನೆ ಮಾಡಿಸುವ ಆ್ಯಪ್‌ಗಳು ಜನಪ್ರಿಯವಾಗುತ್ತಿವೆ. ಖಾಸಗಿ ವಲಯದ ಬೃಹತ್ ಆಸ್ಪತ್ರೆಗಳು ತಮ್ಮ ರೋಗಿಗಳಿಗಾಗಿ ತಮ್ಮದೇ ಆದ ಆ್ಯಪ್‌ಗಳನ್ನು ಅಭಿವೃದ್ಧಿಪಡಿಸಿವೆ. ಇವುಗಳ ಮೂಲಕ ರೋಗಿಗಳು ಖಾಸಗಿಯಾಗಿ ವೈದ್ಯರ ಸಲಹೆ ಪಡೆಯುವುದು, ತಮ್ಮ ಪರೀಕ್ಷೆಗಳ ಫಲಿತಾಂಶವನ್ನು ಹಂಚಿಕೊಳ್ಳುವುದು ಮುಂತಾದ ಸೌಲಭ್ಯಗಳಿವೆ. ಮಕ್ಕಳ ಆರೋಗ್ಯ, ಲಸಿಕೆಗಳು, ವೃದ್ಧರ ಆರೈಕೆ, ಸಾಕುಪ್ರಾಣಿಗಳ ಪೋಷಣೆ – ಹೀಗೆ ಪ್ರತಿಯೊಂದು ಆರೋಗ್ಯದ ಅಗತ್ಯಗಳನ್ನೂ ಈ ಕಿರುತಂತ್ರಾಂಶಗಳು ಪೋಷಿಸುತ್ತಿವೆ.

ಎಲ್ಲರಿಗೂ ಅವಶ್ಯಕ ಎನಿಸಿರುವ ಆ್ಯಪ್‌ಗಳ ಜೊತೆಗೆ ಇನ್ನೂ ಕೆಲವು ವಿಶೇಷ ಆ್ಯಪ್‌ಗಳು ವೈದ್ಯರಿಗೂ ಬೇಕಾಗುತ್ತವೆ. ಇವುಗಳಲ್ಲಿ ಬಹುತೇಕವು ಹಣ ನೀಡಿ ಪಡೆಯುವಂತಹವು. ಇವನ್ನು ಕಾಲಕಾಲಕ್ಕೆ ನವೀಕರಿಸಬೇಕು. ವೈದ್ಯಕೀಯದಂತಹ ಕಠಿಣ ವೃತ್ತಿಯಲ್ಲಿ ಈ ರೀತಿಯ ಆ್ಯಪ್‌ಗಳು ಬಹಳ ಸಹಕಾರಿ. ವೈದ್ಯರು ಬಳಸುವ ಕೆಲವು ವಿಶಿಷ್ಟ ಆ್ಯಪ್‌ಗಳ ಪರಿಚಯ ಇಲ್ಲಿದೆ:

ಕುಟುಂಬವೈದ್ಯರಾಗಲೀ ಅಥವಾ ತಜ್ಞವೈದ್ಯರಾಗಲೀ, ತಂತಮ್ಮ ವಿಷಯಜ್ಞಾನವನ್ನು ಕಾಲಕಾಲಕ್ಕೆ ಹರಿತಗೊಳಿಸುತ್ತಲೇ ಇರಬೇಕು. ಜಗತ್ತಿನಲ್ಲಿ ನಡೆಯುತ್ತಿರುವ ವೈದ್ಯಕೀಯ ಸಂಶೋಧನೆಗಳ ವಿವರಗಳನ್ನು ಒಂದೇ ಸಮನೆ ಗಮನಿಸುವುದು ಯಾರೊಬ್ಬರಿಗೂ ಆಗದ ಕೆಲಸ. ಅದರಲ್ಲೂ ತಮ್ಮ ವೃತ್ತಿಜೀವನದಲ್ಲಿ ಬಿಡುವನ್ನು ಕಂಡುಕೊಳ್ಳಲು ಹೆಣಗಾಡುವ ವೈದ್ಯರಿಗೆ ತಮ್ಮ ಕ್ಷೇತ್ರದ ಬೆಳವಣಿಗೆಗಳನ್ನು, ರೋಗಗಳ ನಿರ್ವಹಣೆಯ ಆಧುನಿಕ ಮಾರ್ಗಸೂಚಿಗಳನ್ನು ನಿಖರವಾಗಿ, ಸ್ಪಷ್ಟವಾಗಿ, ಚುಟುಕಾಗಿ ಹೇಳುವಂತಹ ಸ್ರೋತಗಳು ದೊರೆತರೆ, ಅದಕ್ಕಿಂತ ಒಳಿತು ಬೇರೊಂದಿಲ್ಲ. ಇಂತಹ ಮಾಹಿತಿಗಳನ್ನು ಒದಗಿಸುವ ಮೆಡ್‌ಸ್ಕೇಪ್, ಅಪ್-ಟು-ಡೇಟ್, ಸ್ಕೈಸ್ಕೇಪ್, ಒನಿಯೊ, ಡೈನಮೆಡ್ ಮುಂತಾದ ಆ್ಯಪ್‌ಗಳ ಬಳಕೆ ವೈದ್ಯಕೀಯ ರಂಗದಲ್ಲಿ ದಿನದಿನಕ್ಕೂ ಜನಪ್ರಿಯವಾಗುತ್ತಿವೆ.



ವೈದ್ಯಕೀಯ ಪಠ್ಯಪುಸ್ತಕಗಳು ಕುಟುಂಬವೈದ್ಯರಿಗೂ, ತಜ್ಞವೈದ್ಯರಿಗೂ ಬೇಕಾದ ಸಂಗಾತಿ. ಕೆಲವು ಅಪರೂಪದ ಕಾಯಿಲೆಗಳನ್ನು ಪತ್ತೆಹಚ್ಚಲು ಆಗಾಗ ಪಠ್ಯಗಳನ್ನು ನೋಡುತ್ತಲೇ ಇರಬೇಕಾಗುತ್ತದೆ. ಎಷ್ಟೋ ಕಾಯಿಲೆಗಳನ್ನು ನುರಿತ ವೈದ್ಯರೂ ಮೊದಲ ಬಾರಿಗೆ ನೋಡುತ್ತಾರೆ. ಪಠ್ಯಗಳಲ್ಲಿ ಅದನ್ನು ಓದಿದ ಅನುಭವ ಇದ್ದರೂ, ಅಪರೂಪದ ಕಾಯಿಲೆಗಳನ್ನು ಯಥಾವತ್ತಾಗಿ ಪತ್ತೆ ಮಾಡುವುದು ಕಷ್ಟದ ವಿಷಯ. ಈ ನಿಟ್ಟಿನಲ್ಲಿ ಆ್ಯಪ್‌ಗಳು ವೈದ್ಯರ ನೆರವಿಗೆ ಬಂದಿವೆ.

ವೈದ್ಯರು ಮತ್ತು ರೋಗಿಗಳ ನಡುವಿನ ಅತ್ಯಂತ ಮುಖ್ಯ ಸಂವಹನ ಔಷಧಗಳು. ವೈದ್ಯರ ಕೆಟ್ಟ ಬರವಣಿಗೆ ಟೀಕೆಗೆ ಒಳಗಾಗುವುದು 'ಅವರು ಬರೆದುಕೊಡುವ ಔಷಧಗಳನ್ನು ಓದಲಾಗದು' ಎಂಬ ಕಾರಣಕ್ಕಾಗಿಯೇ. ಈ ಗುರುತರ ಸಮಸ್ಯೆಯ ಪರಿಹಾರಕ್ಕಾಗಿ ವೈದ್ಯಕೀಯ ಮಂಡಲಿಗಳು ವೈದ್ಯರು ಬರೆಯುವ ಔಷಧಗಳ ಹೆಸರನ್ನು CAPITAL LETTERS ಬಳಸಿ ಬರೆಯಬೇಕೆಂದು ಕಡ್ಡಾಯ ಮಾಡಿದೆ. ಔಷಧಗಳ ಹೆಸರು, ಪರಿಮಾಣ, ತೆಗೆದುಕೊಳ್ಳುವ ಸಮಯ, ಅಡ್ಡಪರಿಣಾಮಗಳು, ಇತರ ಔಷಧಗಳ ಜೊತೆ ಅವು ಮಾಡಬಹುದಾದ ಒಟ್ಟಾರೆ ಪ್ರತಿಕೂಲ ಪ್ರತಿಕ್ರಿಯೆಗಳು – ಇವೆಲ್ಲವನ್ನೂ ವೈದ್ಯರು ಸಮಂಜಸವಾಗಿ ವಿವೇಚಿಸಿ, ವಿಶ್ಲೇಷಿಸಿ, ನಿರ್ಧರಿಸಿ, ರೋಗಿಗಳಿಗೆ ವಿವರಿಸಬೇಕು. ವೈದ್ಯಕೀಯ ಸಮಾಲೋಚನೆಯಲ್ಲಿ ಇದು ಅತ್ಯಂತ ಪ್ರಮುಖ ಘಟ್ಟ. ತಪ್ಪುಗಳಾಗುವ ಸಾಧ್ಯತೆ, ತಪ್ಪುಗಳಿಂದಾಗುವ ದುಷ್ಪರಿಣಾಮಗಳೂ ಈ ಹಂತದಲ್ಲೇ ಅಧಿಕ. ಹೀಗಾಗಿ, ಔಷಧಗಳನ್ನು ಸೂಚಿಸುವ ಪ್ರಕ್ರಿಯೆಯನ್ನು ಸರಾಗ ಮಾಡುವ ಆ್ಯಪ್‌ಗಳಿಗೆ ಬಹಳ ಬೇಡಿಕೆಯಿದೆ. ಎಪೊಕ್ರೇಟಸ್, ಲೆಕ್ಸಿಕಂಪ್, ಐಪ್ರೆಸ್ಕ್ರೈಬ್ ಮುಂತಾದ ಆ್ಯಪ್‌ಗಳು ಔಷಧವಿವರಗಳ ಸಂವಹನವನ್ನು ಅತ್ಯಂತ ವಸ್ತುನಿಷ್ಠಗೊಳಿಸಿವೆ.

ವೈದ್ಯಕೀಯ ಪಠ್ಯಪುಸ್ತಕಗಳು ಕುಟುಂಬವೈದ್ಯರಿಗೂ, ತಜ್ಞವೈದ್ಯರಿಗೂ ಬೇಕಾದ ಸಂಗಾತಿ. ಕೆಲವು ಅಪರೂಪದ ಕಾಯಿಲೆಗಳನ್ನು ಪತ್ತೆಹಚ್ಚಲು ಆಗಾಗ ಪಠ್ಯಗಳನ್ನು ನೋಡುತ್ತಲೇ ಇರಬೇಕಾಗುತ್ತದೆ. ಎಷ್ಟೋ ಕಾಯಿಲೆಗಳನ್ನು ನುರಿತ ವೈದ್ಯರೂ ಮೊದಲ ಬಾರಿಗೆ ನೋಡುತ್ತಾರೆ. ಪಠ್ಯಗಳಲ್ಲಿ ಅದನ್ನು ಓದಿದ ಅನುಭವ ಇದ್ದರೂ, ಅಪರೂಪದ ಕಾಯಿಲೆಗಳನ್ನು ಯಥಾವತ್ತಾಗಿ ಪತ್ತೆ ಮಾಡುವುದು ಕಷ್ಟದ ವಿಷಯ. ಈ ನಿಟ್ಟಿನಲ್ಲಿ ಆ್ಯಪ್‌ಗಳು ವೈದ್ಯರ ನೆರವಿಗೆ ಬಂದಿವೆ. ರೋಗಿಯ ಬಾಹ್ಯ-ರೋಗಚಿಹ್ನೆಯ ಚಿತ್ರವನ್ನು ಸ್ಮಾರ್ಟ್-ಫೋನ್ ಬಳಸಿ ತೆಗೆದು, ಅದನ್ನು ವಿಶುಯಲ್-ಡಿಎಕ್ಸ್ ನಂತಹ ಆ್ಯಪ್'ಗಳಲ್ಲಿ ಏರಿಸಿದರೆ, ಅದು ತನ್ನಲ್ಲಿರುವ ಲಕ್ಷಾಂತರ ಚಿತ್ರಗಳ ಜೊತೆಯಲ್ಲಿ ಈ ಚಿತ್ರವನ್ನು ಹೋಲಿಸಿ, ಅದಕ್ಕೆ ಹೊಂದುವ ಕಾಯಿಲೆಗಳನ್ನು ಸೂಚಿಸುತ್ತದೆ. ಅಲ್ಲದೇ, ಕಾಯಿಲೆ ಸದ್ಯಕ್ಕೆ ಯಾವ ಹಂತದಲ್ಲಿದೆ, ಇದು ಮುಂದೆ ಬೆಳೆದರೆ ಯಾವ ರೀತಿ ಇರುತ್ತದೆ ಎಂಬ ವಿವರಗಳನ್ನೂ ನೀಡುತ್ತದೆ. ಬಹುತೇಕ ಬಾಹ್ಯ-ರೋಗಲಕ್ಷಣಗಳ ಆಧಾರದಲ್ಲಿ ಚಿಕಿತ್ಸೆ ನೀಡುವ ಚರ್ಮರೋಗದಂತಹ ವಿಷಯದಲ್ಲಿ ಈ ರೀತಿಯ ಆ್ಯಪ್‌ಗಳು ವೈದ್ಯರ ಕಲಿಕೆಗೆ, ಚಿಕಿತ್ಸೆಯ ನಿರ್ಧಾರಕ್ಕೆ, ರೋಗಗಳ ನಿರ್ವಹಣೆಗೆ ಬಹಳ ಪ್ರಯೋಜನಕಾರಿ.

ಇದು ಕಾನೂನು ಕಟ್ಟಳೆಯ ಯುಗ. ವೈದ್ಯರ ಮತ್ತು ರೋಗಿಗಳ ಸಂಬಂಧದ ನಡುವೆ ಈಗ ಕಾನೂನು ಬಂದಿದೆ. ಕಾನೂನಿಗೆ ಒಪ್ಪಿತವಾಗುವಂತೆ ರೋಗಿಯ ಮತ್ತು ರೋಗದ ಎಲ್ಲಾ ವಿವರಗಳನ್ನೂ ಸ್ಪಷ್ಟವಾಗಿ ದಾಖಲಿಸುವುದು ಪ್ರತಿಯೊಬ್ಬ ವೈದ್ಯರ ಕರ್ತವ್ಯ. ಮೊದಲು ಬರವಣಿಗೆಯ ಮೂಲಕ ಆಗುತ್ತಿದ್ದ ಈ ಪ್ರಕ್ರಿಯೆ. ಅನಂತರ ವೈದ್ಯರು ಹೇಳುವುದನ್ನು ರೆಕಾರ್ಡ್ ಮಾಡಿಕೊಂಡು, ಅದನ್ನು ನಂತರ ಕಂಪ್ಯೂಟರ್‌ನಲ್ಲಿ ದಾಖಲಿಸುವ ಮೆಡಿಕಲ್ ಟ್ರಾನ್ಸಿಕ್ರಪ್ಷನ್ ರೂಪಕ್ಕೆ ಬಂದಿತ್ತು. ಈಗ ವಿದ್ಯುನ್ಮಾನ ವೈದ್ಯಕೀಯ ದಾಖಲೆಗಳನ್ನು ಸರಾಗವಾಗಿ ನಿರ್ವಹಿಸುವ ನೂರಾರು ಆ್ಯಪ್‌ಗಳು ಲಭ್ಯವಿವೆ. ಬಹುತೇಕ ಆಸ್ಪತ್ರೆಗಳು ಇಂತಹ ಯಾವುದೋ ಒಂದು ಆ್ಯಪ್ ಅನ್ನು ತಮ್ಮ ಎಲ್ಲಾ ವೈದ್ಯಕೀಯ ದಾಖಲೆಗಳ ನಿರ್ವಹಣೆಗೆ ಬಳಸುತ್ತವೆ.

ಇದು ವೈದ್ಯರು ಬಳಸುವ ಆ್ಯಪ್‌ಗಳು ಆರಂಭದ ಕಾಲ! ಭವಿಷ್ಯದಲ್ಲಿ ರೋಗಗಳ, ರೋಗಿಗಳ ನಿರ್ವಹಣೆಯನ್ನು ಇನ್ನೂ ಉತ್ತಮವಾಗಿ ಮಾಡಲು ತಂತ್ರಜ್ಞಾನ ಮತ್ತಷ್ಟು ಸಹಕಾರ ನೀಡುತ್ತದೆಂಬುದು ಖಚಿತ.

ಆಕರ್ಷಕ ಚಾರ್ಜಿಂಗ್ ಕೇಸ್ ಜೊತೆಗೆ ಮೈಕ್ರೋಮ್ಯಾಕ್ಸ್ ಏರ್ ಫಂಕ್ 1 ಪ್ರೊ ಇಯರ್‌ಬಡ್ಸ್

ಮೈಕ್ರೋಮ್ಯಾಕ್ಸ್ ಇಯರ್‌ಬಡ್ಸ್

ಅವಿನಾಶ್ ಬಿ.

ಈಗಾಗಲೇ ಚೀನಾದ ಸ್ಮಾರ್ಟ್‌ಫೋನ್‌ಗಳಿಗೆ ಸೆಡ್ಡು ಹೊಡೆಯಲು ಮರಳಿ ಹೊಸ ಅವತಾರದೊಂದಿಗೆ ಬಂದಿರುವ ದೇಶೀಯ ಗ್ಯಾಜೆಟ್ ಉತ್ಪಾದನಾ ಕಂಪನಿ ಮೈಕ್ರೋಮ್ಯಾಕ್ಸ್, ಜನಪ್ರಿಯವಾಗುತ್ತಿರುವ ಇಯರ್‌ಬಡ್ಸ್ (ಕಿವಿಯೊಳಗೆ ಇರಿಸಬಹುದಾದ ಇಯರ್ ಫೋನ್‌ಗಳು) ಕ್ಷೇತ್ರಕ್ಕೂ ಕಾಲಿಟ್ಟಿದೆ. ಜುಲೈ ತಿಂಗಳಾಂತ್ಯದಲ್ಲಿ ಬಿಡುಗಡೆಯಾದ ಏರ್ ಫಂಕ್ 1 'ಪ್ರೊ' ಇಯರ್‌ಬಡ್ಸ್ ಹೇಗೆ ಕೆಲಸ ಮಾಡುತ್ತದೆ? ಇಲ್ಲಿದೆ ಮಾಹಿತಿ.

ಆ್ಯಪಲ್‌ನ ಏರ್ ಪಾಡ್ಸ್‌ನಂತೆಯೇ ಆಕರ್ಷಕವಾಗಿದೆಯಾದರೂ, ಹತ್ತುಪಟ್ಟು ಅಗ್ಗದ ದರದಿಂದಾಗಿ ಗಮನ ಸೆಳೆಯುತ್ತಿದೆ. ಗುಣಮಟ್ಟದ ಮೇಲ್ಮೈ, ಆಕರ್ಷಕ ಚಾರ್ಜಿಂಗ್ ಕೇಸ್, ಟೈಪ್ ಸಿ ಚಾರ್ಜಿಂಗ್ ಪೋರ್ಟ್ ಇದೆ. ಚಾರ್ಜಿಂಗ್ ಕೇಸ್‌ನೊಳಗಿನ ಕುಳಿಗಳಲ್ಲಿ ಇಯರ್ ಬಡ್‌ಗಳನ್ನು ಇರಿಸಿದರೆ ಚಾರ್ಜ್ ಆಗುತ್ತದೆ ಮತ್ತು ಚಾರ್ಜಿಂಗ್ ಮುಕ್ತಾಯವಾದಾಗ ನಸುನೀಲಿ ಎಲ್‌ಇಡಿ ಬೆಳಕು ಆಫ್ ಆಗುತ್ತದೆ.

ಚಾರ್ಜಿಂಗ್ ಕೇಸ್ ಪೂರ್ತಿ ಚಾರ್ಜ್ ಆದರೆ ಎರಡು-ಮೂರು ಬಾರಿ ಚಾರ್ಜ್ ಮಾಡಬಹುದು. ಕೇವಲ 4 ಗ್ರಾಂ ತೂಕವಿರುವ 'ಏರ್ ಫಂಕ್ 1 ಪ್ರೊ ಇಯರ್‌ಬಡ್ಸ್' ಅನ್ನು ಚಾರ್ಜಿಂಗ್ ಕೇಸ್‌ನಿಂದ ಹೊರತೆಗೆದಾಕ್ಷಣ ಆನ್ ಆಗಿ, ಪರಸ್ಪರ ಬೆಸೆದುಕೊಳ್ಳುತ್ತವೆ (Pair). ಇಯರ್‌ಬಡ್‌ಗಳು ಗೂಗಲ್ ಅಸಿಸ್ಟೆಂಟ್ ಹಾಗೂ ಸಿರಿ – ಎರಡನ್ನೂ ಬೆಂಬಲಿಸುತ್ತವೆ.

> ಮೈಕ್ರೋಮ್ಯಾಕ್ಸ್ ಏರ್ ಫಂಕ್ 1 ಪ್ರೋ ಇಯರ್ ಬಡ್ಸ್‌ನಲ್ಲಿ ಹಾಡು ಕೇಳುವಾಗ ತುಂಬ ಸ್ಪಷ್ಟತೆ ಇರುತ್ತದೆ. ಎರಡು ಇಯರ್‌ಬಡ್‌ಗಳನ್ನು ಎರಡೂ ಕಿವಿಗಳಿಗೆ ಇರಿಸಿಕೊಂಡರೆ ಸ್ಟೀರಿಯೋ ಧ್ವನಿಯೊಂದಿಗೆ ಸಂಗೀತ ಆಲಿಸಬಹುದು.

ಮೃದುವಾದ ತಟ್ಟುವಿಕೆ

ಇಯರ್‌ಬಡ್ಸ್ ಹಿಂಭಾಗದಲ್ಲಿರುವ ಸ್ಪರ್ಶ ಸಂವೇದೀ ಪ್ರದೇಶದಲ್ಲಿ ಸತತ ಎರಡು ಬಾರಿ ಬೆರಳಿನಿಂದ ಮೃದುವಾಗಿ ತಟ್ಟಿದರೆ ಪೇರ್ ಆಗಿರುವ ಫೋನ್‌ನಲ್ಲಿರುವ ಹಾಡು ಪ್ಲೇ ಆಗುತ್ತದೆ. ನಿಲ್ಲಿಸುವುದಕ್ಕೂ ಸತತ ಎರಡು ಬಾರಿ ತಟ್ಟಿದರಾಯಿತು. ಎಡಕಿವಿಯ ಇಯರ್‌ಬಡ್ ಮೇಲೆ ಸತತ ಮೂರು ಬಾರಿ ತಟ್ಟಿದರೆ ಹಿಂದಿನ ಹಾಡು, ಬಲಕಿವಿಯ ಇಯರ್‌ಬಡ್ ಮೇಲೆ ಸತತ ಮೂರು ಬಾರಿ ತಟ್ಟಿದರೆ ಮುಂದಿನ ಹಾಡು ಪ್ಲೇ ಆಗುತ್ತದೆ. ವಾಲ್ಯೂಮ್ ಕಡಿಮೆ ಮಾಡಲು ಎಡ ಇಯರ್‌ಬಡ್ ಮೇಲೆ ಒಂದೊಂದು ಬಾರಿ ನಿಧಾನವಾಗಿ ತಟ್ಟುತ್ತಾ ಹೋಗಬೇಕು. ಹೆಚ್ಚಿಸಲು ಬಲ ಇಯರ್‌ಬಡ್‌ನಲ್ಲಿ ಹೀಗೆಯೇ ಮಾಡಬೇಕು. ಅದೇ ರೀತಿ, ಕರೆ ಬಂದಾಗ ಸ್ವೀಕರಿಸಬೇಕಿದ್ದರೆ ಒಮ್ಮೆ ತಟ್ಟಿದರೆ ಸಾಕು. ಎರಡು ಬಾರಿ ತಟ್ಟಿ ಕರೆ ಮುಕ್ತಾಯಗೊಳಿಸಬಹುದು. ಕರೆಯನ್ನು ನಿರಾಕರಿಸಬೇಕಿದ್ದರೆ, ಯಾವುದಾದರೂ ಒಂದು ಇಯರ್‌ಬಡ್‌ನ ಹಿಂಭಾಗವನ್ನು 2 ಸೆಕೆಂಡ್ ಒತ್ತಿಹಿಡಿದರಾಯಿತು.

ಹಾಡು ಕೇಳುವಾಗ ತುಂಬ ಸ್ಪಷ್ಟತೆ ಇದೆ. ಸಂಗೀತದಲ್ಲಿ ಬೇಸ್ ಧ್ವನಿಯೂ ಉತ್ತಮವಾಗಿ ಕೇಳಿಸುತ್ತದೆ. ಎರಡನ್ನೂ ಬಳಸಿದರೆ ಸ್ಟೀರಿಯೊ, ಒಂದು ಕಿವಿಗೆ ಮಾತ್ರ ಬಳಸಿದರೆ ಮೋನೋ ಧ್ವನಿವ್ಯವಸ್ಥೆ ಇದೆ. ದ್ವಿಚಕ್ರದಲ್ಲಿ ಹೆಲ್ಮೆಟ್ ಧರಿಸಬೇಕಾಗಿರುವುದರಿಂದ, ಕಿವಿಯೊಳಗೆ ಕೂರುವ ಇಯರ್‌ಬಡ್ಸ್ ಮೂಲಕ ಕರೆ ಸ್ವೀಕರಿಸಲು ಬಟನ್ ಅದುಮುವುದು ಕಷ್ಟ. ಚತುಶ್ಚಕ್ರ ವಾಹನಗಳಲ್ಲಾದರೆ ಈ ಸಮಸ್ಯೆ ಇರುವುದಿಲ್ಲ.

ಬೆಲೆ

ಮೈಕ್ರೋಮ್ಯಾಕ್ಸ್ ಏರ್ ಫಂಕ್ 1 'ಪ್ರೊ' ಮಾದರಿಯ ಬೆಲೆ: ₹2499. ಇದರ ಸಾಮಾನ್ಯ ಆವೃತ್ತಿ (ಏರ್ ಫಂಕ್ 1) ಬೆಲೆ: ₹1299.

ಕೃತಕ ಮಾತಿನಲ್ಲೂ ಇದೆ ಸಹಜತೆ!

ಕೃಷ್ಣ ಭಟ್

> ಎಪಿಐಗಳನ್ನು ಬಳಸಿಕೊಂಡು ಸಾಮಾಜಿಕ ಮಾಧ್ಯಮದಲ್ಲಿ ದುರುದ್ದೇಶ ಪೂರಿತವಾದ ಪ್ರಚಾರವನ್ನೂ ಮಾಡಬಹುದು. ಸುಳ್ಳು ಸಂಗತಿಗಳನ್ನು ಅಪಾರ ಪ್ರಮಾಣದಲ್ಲಿ ಹರಿಬಿಡಬಹುದು. ಅಸಲಿ ವ್ಯಕ್ತಿಯನ್ನೇ ನಕಲಿಸುವ ಕೆಲಸವನ್ನೂ ಮಾಡಬಹುದು.

ಮುಂದಿನ ಕೆಲವು ವರ್ಷಗಳಲ್ಲಿ ಕೌನ್ ಬನೇಗಾ ಕರೋಡ್‌ಪತಿಯಂತಹ ಕಾರ್ಯಕ್ರಮದಲ್ಲಿ ಒಂದು ರೋಬೋವನ್ನು ತೆಗೆದುಕೊಂಡು ಹೋಗಿ ಕೂರಿಸಿದರೆ, ಅಲ್ಲಿ ಕೇಳುವ ಎಲ್ಲ ಪ್ರಶ್ನೆಗಳಿಗೂ ಯಾವುದೇ ಲೈಫ್‌ಲೈನ್ ಬಳಸದೇ ಕೆಲವೇ ಸೆಕೆಂಡುಗಳಲ್ಲಿ ಉತ್ತರ ಹೇಳಿ ಕಾರ್ಯಕ್ರಮದ ಅಷ್ಟೂ ಬಹುಮಾನಗಳನ್ನು ಗೆದ್ದು ಬೀಗಿದರೆ ಯಾರಿಗೂ ಅಚ್ಚರಿಯೇ ಆಗದಿರಬಹುದು!

ಹೈಸ್ಕೂಲಿನಲ್ಲಿ ಇಂಗ್ಲಿಷ್ ಶಿಕ್ಷಕರ ಬದಲಿಗೆ ಒಂದು ಪುಟ್ಟ ಸ್ಮಾರ್ಟ್ ಸ್ಪೀಕರ್ ಇಟ್ಟರೆ, ಇಂಗ್ಲಿಷ್ ಶಿಕ್ಷಕರಿಗಿಂತ ಅತ್ಯದ್ಭುತವಾದ ಇಂಗ್ಲಿಷ್ ಪಾಠವನ್ನೂ ಮಕ್ಕಳಿಗೆ ಹೇಳುವುದಲ್ಲದೆ, ಇಂಗ್ಲಿಷ್ ಬಗ್ಗೆ ಇರುವ ಎಲ್ಲ ಅನುಮಾನಗಳನ್ನೂ ಕ್ಷಣಾರ್ಧದಲ್ಲಿ ಪರಿಹರಿಸಿದರೆ ಅದರಲ್ಲಿ ಯಾವ ಆಶ್ಚರ್ಯವೂ ಇಲ್ಲ!

ಇದೆಲ್ಲ ಸಾಧ್ಯವಾಗುವುದು ನ್ಯಾಚುರಲ್ ಲ್ಯಾಂಗ್ವೇಜ್ ಪ್ರೊಸೆಸಿಂಗ್‌ನಿಂದ. ಕಳೆದ ಹಲವು ದಶಕಗಳಿಂದ ನ್ಯಾಚುರಲ್ ಲ್ಯಾಂಗ್ವೇಜ್ ಪ್ರೊಸೆಸಿಂಗ್ ಅಥವಾ ಎನ್‌ಎಲ್‌ಪಿ ಎಂಬುದು ಎಲ್ಲ ಸ್ಮಾರ್ಟ್ ಸ್ಪೀಕರ್‌ಗಳು, ಆರ್ಟಿಫಿಶಿಯಲ್ ಇಂಟಲಿಜೆನ್ಸ್‌ಗೆ ಪೂರಕವಾಗಿ ಕೆಲಸ ಮಾಡುತ್ತಿದೆ. ಆದರೆ, ಟೆಸ್ಲಾ ಕಂಪನಿಯ ಮಾಲೀಕ ಎಲಾನ್ ಮಸ್ಕ್ ಸ್ಥಾಪಿಸಿದ ಓಪನ್ ಎಐ ಎಂಬ ಸಂಸ್ಥೆ ಕಳೆದ ವರ್ಷ 'ಜಿಪಿಟಿ 3' ಎಂಬ ನ್ಯಾಚುರಲ್ ಲ್ಯಾಂಗ್ವೇಜ್ ಪ್ರೊಸೆಸಿಂಗ್ ಪ್ರೋಗ್ರಾಮ್ ಅನ್ನು ಬಿಡುಗಡೆ ಮಾಡುವುದಾಗಿ ಘೋಷಿಸಿದಾಗ ಇದರ ಸಂಪೂರ್ಣ ಸಾಮರ್ಥ್ಯದ ಅರಿವು ಜಗತ್ತಿಗೆ ಆಗಲು ಶುರುವಾಯಿತು.

ಇದಕ್ಕೆ ಈಗ ಪ್ರತಿಸ್ಪರ್ಧಿಯಾಗಿ ಇಸ್ರೇಲ್‌ನ ಎಐ21 ಲ್ಯಾಬ್ಸ್ ಎಂಬ ಸಂಸ್ಥೆ 'ಜುರಾಸಿಕ್-1' ಎಂಬ ಪ್ರೋಗ್ರಾಮ್ ಅನ್ನು ಮುಂದಿನ ಕೆಲವು ದಿನಗಳಲ್ಲಿ ಬಿಡುಗಡೆ ಮಾಡಲಿದ್ದೇವೆ ಎಂದು ಹೇಳಿಕೊಂಡಿದೆ.



ಏನಿದು ನ್ಯಾಚುರಲ್ ಲ್ಯಾಂಗ್ವೇಜ್ ಪ್ರೊಸೆಸಿಂಗ್?

ಸರಳವಾಗಿ ಹೇಳುವುದಾದರೆ, ಮನುಷ್ಯ ಮಾತನಾಡುವ ಮತ್ತು ಮಾತನ್ನು ಅರ್ಥ ಮಾಡಿಕೊಳ್ಳುವ ವಿಧಾನವನ್ನು ಕಂಪ್ಯೂಟರ್‌ಗಳಿಗೆ ಕಲಿಸುವುದು. ಇದರಲ್ಲಿ, ಹೀಗೆ ಕಲಿಸುವ ಕಂಪನಿ ಎಷ್ಟು ಹೆಚ್ಚು ಡೇಟಾವನ್ನು ಬಳಸಲು ಸಾಧ್ಯವಾಗುತ್ತದೆ ಎಂಬುದರ ಮೇಲೆ ಅದರ ದಕ್ಷತೆಯೂ ಅಂದಾಜಾಗುತ್ತದೆ. ಉದಾಹರಣೆಗೆ, ಎಐ21 ತನ್ನ 'ಜುರಾಸಿಕ್-1'ಕ್ಕೆ ತರಬೇತಿ ನೀಡಲು 2.50 ಲಕ್ಷ ಪದಗುಚ್ಛಗಳನ್ನು ಬಳಸಿಕೊಂಡಿದೆಯಂತೆ! ಇನ್ನು ಓಪನ್‌ಎಐ 50 ಸಾವಿರ ಪದಗುಚ್ಛಗಳನ್ನು ಬಳಸಿಕೊಂಡು 'ಜಿಪಿಟಿ 3'ಗೆ ತರಬೇತಿ ನೀಡಿದೆ. ಪ್ರತಿ ಪದ ಹಾಗೂ ಪದರಚನೆ, ವಾಕ್ಯಗಳಲ್ಲಿ ಅವುಗಳನ್ನು ಬಳಸುವ ಬಗೆಯೆಲ್ಲವನ್ನೂ ಎನ್‌ಎಲ್‌ಪಿಗೆ ಕಲಿಸಲಾಗುತ್ತದೆ. ಹೆಚ್ಚು ಹೆಚ್ಚು ಕಲಿಸಿದಷ್ಟೂ ಇದು ಹೆಚ್ಚು ಹೆಚ್ಚು ನಿಖರವಾಗಿ ಸಂವಹನ ನಡೆಸಲು ಶಕ್ತವಾಗುತ್ತದೆ. ಹೀಗೆ ಕಲಿಸುವಾಗ, ಈಗಾಗಲೇ ಅಂತರ್ಜಾಲದಲ್ಲಿ ಮುಕ್ತವಾಗಿ ಲಭ್ಯವಿರುವ ಮಾಹಿತಿಯನ್ನೇ ಬಳಸಲಾಗುತ್ತದೆ. ಉದಾಹರಣೆಗೆ, ವಿಕಿಪೀಡಿಯಾದಲ್ಲಿರುವ ಮಾಹಿತಿಯನ್ನು ಇವು ಬಳಸುವುದರಿಂದ ಅದರಲ್ಲಿರುವ ಎಲ್ಲ ಮಾಹಿತಿ ಸಹಜವಾಗಿಯೇ ಇವುಗಳಿಗೆ ಡೇಟಾ ಆಗಿ ಲಭ್ಯವಾಗಿರುತ್ತವೆ.

ಈ ಪದಗುಚ್ಛಗಳನ್ನು ಬಳಸಿ ಎಷ್ಟು ವಿಧದಲ್ಲಿ ತರಬೇತಿ ನೀಡಲಾಗುತ್ತದೆ ಎಂಬುದರ ಮೇಲೆ ಎನ್‌ಎಲ್‌ಪಿಯ ನಿಖರತೆ ತಿಳಿಯುತ್ತದೆ. ಈಗಾಗಲೇ ಪ್ರಾಯೋಗಿಕವಾಗಿ ಕೆಲವರಿಗಷ್ಟೇ ಲಭ್ಯವಿರುವ 'ಜಿಪಿಟಿ 3'ನ್ನು ಬಳಸಿಕೊಂಡು ಮಾಡಿದ ಪ್ರಯೋಗಗಳಲ್ಲಿ ಒಬ್ಬ ಸಾಮಾನ್ಯ ಇಂಗ್ಲಿಷ್ ಶಿಕ್ಷಕರಿಗಿಂತ ಈ ಮಾದರಿಗಳು ಹೆಚ್ಚು ಉತ್ತಮ ಭಾಷಾಜ್ಞಾನವನ್ನು ಹೊಂದಿವೆ ಎಂಬುದು ತಿಳಿದುಬಂದಿದೆ.

ಎನ್‌ಎಲ್‌ಪಿ ಬಳಸಿ ಏನು ಮಾಡಬಹುದು?

ಕಳೆದ ಕೆಲವು ದಿನಗಳ ಹಿಂದೆ ತನ್ನ ಗರ್ಲ್‌ಫ್ರೆಂಡ್ ಕಳೆದುಕೊಂಡ ಅಮೆರಿಕದ ಯುವಕನೊಬ್ಬ, ಆಕೆಯ ಜೊತೆ ನಡೆಸಿದ ಚಾಟ್‌ಗಳು, ವಾಯ್ಸ್ ನೋಟ್‌ಗಳು, ವಿಡಿಯೊಗಳ ಧ್ವನಿಗಳನ್ನೆಲ್ಲ 'ಜಿಪಿಟಿ 3'ಗೆ ಕೊಟ್ಟು, ಒಂದು ಅಪ್ಲಿಕೇಶನ್ ತಯಾರಿಸಿದ. ಅದರಲ್ಲಿ, ಅವನ ಗೆಳತಿ ಮಾತನಾಡಿದ ಧ್ವನಿ, ಶೈಲಿಯಲ್ಲೇ ತನ್ನ ಜೊತೆ ಮಾತನಾಡುವ ಹಾಗೆ ಒಂದು ಅಪ್ಲಿಕೇಶನ್ ತಯಾರಿಸಿದ.

ಇನ್ನೊಂದು ಉದಾಹರಣೆಯಲ್ಲಿ, ಬ್ರಿಟನ್‌ನ ಒಬ್ಬ ಯೂಟ್ಯೂಬರ್ ತನ್ನ ಯೂಟ್ಯೂಬ್ ವಿಡಿಯೋಗೆ ಹೊಸ ಹೊಸ ಐಡಿಯಾ ಹುಡುಕುತ್ತಿದ್ದಾಗ ಹೊಸದೇನೂ ಹೊಳೆಯದೇ, 'ಜಿಪಿಟಿ 3' ಬಳಿ ತನ್ನೆಲ್ಲ ಹಳೆಯ ಯೂಟ್ಯೂಬ್ ವೀಡಿಯೋಗಳನ್ನು ಗಮನಿಸಿ ಹೊಸ ಯೂಟ್ಯೂಬ್ ವಿಡಿಯೋಗೆ ಐಡಿಯಾ ಕೊಡುವಂತೆ ಕೇಳಿದ. ಮೊದಲ ಒಂದೆರಡು ಆಸಕ್ತಿಕರವಲ್ಲದ ಐಡಿಯಾಗಳನ್ನು ಕೊಟ್ಟ ನಂತರ, 'ಜಿಪಿಟಿ 3' ಅಪ್ಲಿಕೇಶನ್ ಕೊಟ್ಟ ಐಡಿಯಾ ಅದ್ಭುತವಾಗಿತ್ತಂತೆ!

ದುರ್ಬಳಕೆ ಆಗದೇ?

ಇದು ಈಗಿರುವ ಅತ್ಯಂತ ದೊಡ್ಡ ಭೀತಿ! ಇದೇ ಕಾರಣಕ್ಕೆ, ಇನ್ನೂ 'ಜಿಪಿಟಿ 3' ಎಪಿಐಗಳು ಮುಕ್ತವಾಗಿ ಎಲ್ಲರಿಗೂ ಲಭ್ಯವಿಲ್ಲ. ವಿದ್ಯಾರ್ಥಿಗಳು ಮತ್ತು ಪ್ರಾಯೋಗಿಕವಾಗಿ ಬಳಸುವವರಿಗೆ ಮಾತ್ರ ಇದನ್ನು ಓಪನ್‌ಎಐ ಲಭ್ಯವಾಗಿಸುತ್ತಿದೆ. ಇನ್ನು, ಇಸ್ರೇಲ್‌ನ ಸಂಸ್ಥೆ ಕೂಡ ತನ್ನ ಜುರಾಸಿಕ್ ಬಳಕೆಯ ಮೇಲೆ ನಿಯಂತ್ರಣವನ್ನು ಹೇರುವ ಬಗ್ಗೆ ಚಿಂತನೆ ನಡೆಸಿದೆ.

ಈ ಎಪಿಐಗಳನ್ನು ಬಳಸಿಕೊಂಡು ಸಾಮಾಜಿಕ ಮಾಧ್ಯಮದಲ್ಲಿ ದುರುದ್ದೇಶಪೂರಿತವಾದ ಪ್ರಚಾರವನ್ನೂ ಮಾಡಬಹುದು. ಸುಳ್ಳು ಸಂಗತಿಗಳನ್ನು ಅಪಾರ ಪ್ರಮಾಣದಲ್ಲಿ ಹರಿಬಿಡಬಹುದು. ಅಸಲಿ ವ್ಯಕ್ತಿಯನ್ನೇ ನಕಲಿಸುವ ಕೆಲಸವನ್ನೂ ಮಾಡಬಹುದು.

ಇದರ ಅನುಕೂಲ ಎಷ್ಟಿದೆಯೋ ಅದನ್ನು ದುರ್ಬಳಕೆ ಮಾಡಿಕೊಳ್ಳುವ ಅಪಾಯವೂ ಅಷ್ಟೇ ಇದೆ. ಇದೇ ಕಾರಣಕ್ಕೆ ಇದರ ಬಳಕೆಯ ಮೇಲೆ ನಿಯಂತ್ರಣವೂ ಅಷ್ಟೇ ಮುಖ್ಯ. ಆದರೆ, ಅದು ಸುಲಭವಲ್ಲ ಎಂಬುದು ಎನ್‌ಎಲ್‌ಪಿ ಕುರಿತ ಪ್ರಯೋಗ ನಡೆಸುತ್ತಿರುವವರಿಗೂ ತಿಳಿದಿದೆ. ಎನ್‌ಎಲ್‌ಪಿ ವ್ಯಾಪಕವಾಗಿ ಮತ್ತು ಹೆಚ್ಚು ನಿಖರವಾಗಿ ಬೆಳೆಯುತ್ತಿರುವುದು ಆರ್ಟಿಫಿಶಿಯಲ್ ಇಂಟಲಿಜೆನ್ಸ್‌ಗೆ ಇನ್ನಷ್ಟು ಪೂರಕವಾಗಿದೆ. ಎನ್‌ಎಲ್‌ಪಿ ಎಂಬುದು ಆರ್ಟಿಫಿಶಿಯಲ್ ಇಂಟಲಿಜೆನ್ಸ್‌ನ ಮುಖ್ಯ ಅಂಗವಾಗಿ ಕೆಲಸ ಮಾಡುತ್ತದೆ.

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 51

691) ಭಾರತವು
ಎ) ಸಂಯುಕ್ತ ರಾಜ್ಯಗಳ ಒಕ್ಕೂಟ
ಬಿ) ರಾಜ್ಯಗಳ ಒಕ್ಕೂಟ
ಸಿ) ರಾಜ್ಯಗಳ ಸಂಯುಕ್ತ ಒಕ್ಕೂಟ
ಡಿ) ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಒಕ್ಕೂಟ

692) ತೆರಿಗೆ ಹಾಗೂ ಇತರೆ ರಸೀದಿಗಳ ಮೂಲಕ ಭಾರತ ಸರ್ಕಾರಕ್ಕೆ ಬರುವ ಎಲ್ಲಾ ಆದಾಯಗಳನ್ನು ಈ ಕೆಳಗಿನ ಯಾವ ನಿಧಿಗೆ ಜಮಾ ಮಾಡಲಾಗುತ್ತದೆ?
ಎ) ಭಾರತದ ಸಾದಿಲ್ವಾರ ನಿಧಿ
ಬಿ) ಭಾರತದ ಸಂಚಿತ ನಿಧಿ
ಸಿ) ಪ್ರಧಾನ ಮಂತ್ರಿ ಪರಿಹಾರ ನಿಧಿ
ಡಿ) ಸಾರ್ವಜನಿಕ ಖಾತೆ

693) ಭಾರತದಲ್ಲಿ ಚುನಾವಣೆಗಳಲ್ಲಿ ಅನುಸರಿಸುವ ಮತದಾರ ವ್ಯವಸ್ಥೆಗಳೆಂದರೆ
1. ಬಿಡಿಯಾದ ವರ್ಗಾಯಿಸಲಾದ ಮತದ ಮಾರ್ಗದ ಮೂಲಕ ಸೂಕ್ತ ಪ್ರಮಾಣಬದ್ಧ ಪ್ರಾತಿನಿಧ್ಯ
2. ಸಾರ್ವತ್ರಿಕ ವಯಸ್ಕ ಮತದಾನ ಹಕ್ಕು ಆಧಾರಿತ ನೇರ ಚುನಾವಣೆಗಳು
3. ಪ್ರಮಾಣಬದ್ಧ ಪ್ರಾತಿನಿಧ್ಯದ ಪಟ್ಟಿ ವ್ಯವಸ್ಥೆ
4. ಅಪರೋಕ್ಷ ಚುನಾವಣೆಯ ಒಟ್ಟಾರೆ ವ್ಯವಸ್ಥೆ
ಎ) 1 ಮತ್ತು 2 ಬಿ) 2 ಮತ್ತು 3
ಸಿ) 1 ಮತ್ತು 3 ಡಿ) 1, 2, 3 ಮತ್ತು 4

694) ಅನುಚ್ಛೇದ 14ರಲ್ಲಿ ಹೇಳಿರುವ 'ಯಾವುದೇ ವ್ಯಕ್ತಿಗೆ ಸಮಾನತೆ ಹಾಗೂ ಸಮಾನ ಕಾನೂನು ರಕ್ಷಣೆಗೆ ರಾಜ್ಯ ಬದ್ಧವಾಗಿದೆ' ಎಂಬಲ್ಲಿ ಯಾವುದೇ ವ್ಯಕ್ತಿ ಎಂದರೆ
ಎ) ಭಾರತದಲ್ಲಿ ನೆಲೆಸಿರುವ ನಾಗರಿಕರು ಹಾಗೂ ಅನಿವಾಸಿ ನಾಗರಿಕರು
ಬಿ) ಪ್ರಪಂಚದಾದ್ಯಂತ ನೆಲೆಸಿರುವ ಭಾರತೀಯರು
ಸಿ) ನೈಸರ್ಗಿಕ ವ್ಯಕ್ತಿಗಳು, ಅಸ್ವಾಭಾವಿಕ ವ್ಯಕ್ತಿಗಳಲ್ಲ
ಡಿ) ನೈಸರ್ಗಿಕ ವ್ಯಕ್ತಿಗಳು ಮಾತ್ರ

695) ಈ ಕೆಳಗಿನವುಗಳಲ್ಲಿ ಯಾವ ಲಕ್ಷಣಗಳನ್ನು ಭಾರತೀಯ ಸಂಯುಕ್ತ ತತ್ವದಲ್ಲಿ ತಪ್ಪಾಗಿ ಪಟ್ಟಿ ಮಾಡಲಾಗಿದೆ?
ಎ) ಇದು ಕೇಂದ್ರ ಮತ್ತು ರಾಜ್ಯಗಳ ನಡುವೆ ಅಧಿಕಾರಗಳನ್ನು ವಿಭಾಗಿಸುತ್ತದೆ
ಬಿ) ಇದು ಸ್ವತಂತ್ರ ನ್ಯಾಯಾಂಗ ವ್ಯವಸ್ಥೆಯನ್ನು ಒದಗಿಸುವುದು
ಸಿ) ಇದು ಲಿಖಿತ ಸಂವಿಧಾನ ಹೊಂದಿದೆ
ಡಿ) ರಾಜ್ಯಸಭೆಯಲ್ಲಿ ರಾಜ್ಯಗಳಿಗೆ ಸಮಾನ ಪ್ರಾತಿನಿಧ್ಯವನ್ನು ನೀಡುತ್ತದೆ

696) 'ಗರೀಬಿ ಹಟಾವೊ' ಕಾರ್ಯಕ್ರವನ್ನು ಪ್ರಾರಂಭಿಸಿದ ಯೋಜನೆ
ಎ) ಮೂರನೆಯ ಪಂಚವಾರ್ಷಿಕ ಯೋಜನೆ
ಬಿ) ನಾಲ್ಕನೆಯ ಪಂಚವಾರ್ಷಿಕ ಯೋಜನೆ
ಸಿ) ಐದನೆಯ ಪಂಚವಾರ್ಷಿಕ ಯೋಜನೆ
ಡಿ) ಆರನೆಯ ಪಂಚವಾರ್ಷಿಕ ಯೋಜನೆ

697) ಕೆಳಗಿನವುಗಳಲ್ಲಿ ಯಾವುವು 'ಸ್ಟ್ಯಾಗ್‌ಫ್ಲೇಷನ್' ಆರ್ಥಿಕತೆಯ ಲಕ್ಷಣಗಳಲ್ಲ
1.ಉದ್ಯೋಗವಕಾಶಗಳ ಅಭಿವೃದ್ಧಿ
2.ಉತ್ಪಾದನೆಯಲ್ಲಿ ಹೆಚ್ಚಳ
3. ಕೈಗಾರಿಕಾ ಹೂಡಿಕೆಯಲ್ಲಿ ಹೆಚ್ಚಳವಿಲ್ಲ
4. ಬೆಲೆಗಳಲ್ಲಿ ಹೆಚ್ಚಳ
ಎ) 1 ಮತ್ತು 2 ಬಿ) 2 ಮತ್ತು 3
ಸಿ) 3 ಮತ್ತು 4 ಡಿ) 1 ಮತ್ತು 4

698) ಭಾರತವು ಒಂದು ಸಮ್ಮಿಶ್ರ ಅರ್ಥವ್ಯವಸ್ಥೆಯನ್ನು ಹೊಂದಿದೆ, ಏಕೆಂದರೆ
ಎ) ಕಳೆದ ಸುಮಾರು ನಾಲ್ಕು ದಶಕಗಳಲ್ಲಿ ಕೃಷಿ ಮತ್ತು ಕೈಗಾರಿಕೆಗಳೆರಡೂ ಅಭಿವೃದ್ಧಿಯಾಗಿವೆ
ಬಿ) ಇಲ್ಲಿ ಉತ್ಪಾದನೆಗೆ, ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದದ ತಂತ್ರಜ್ಞಾನಗಳೆರಡೂ ಬಳಕೆಯಲ್ಲಿವೆ
ಸಿ) ಉತ್ಪಾದನಾ ವಿಧಾನದ ಮೇಲೆ ಸಾರ್ವಜನಿಕ ಒಡೆತನದ ಜೊತೆಗೆ ಖಾಸಗಿ ಒಡೆತನವೂ ಕೂಡ ಅಸ್ತಿತ್ವದಲ್ಲಿದೆ
ಡಿ) ಮೇಲಿನ ಎಲ್ಲವೂ

699) 'ಆಹಾರ ಭದ್ರತೆ' ಎಂಬ ಪದವು ಯಾವ ಅರ್ಥವನ್ನು ಧ್ವನಿಸುತ್ತದೆ?
ಎ) ಸಾಕಷ್ಟು ಪ್ರಮಾಣದ ಆಹಾರ ಸಾಮಗ್ರಿಗಳ ಒದಗಿಸುವಿಕೆಯನ್ನು ಖಚಿತಪಡಿಸುವುದು
ಬಿ) ಬಡವರು ಕೊಳ್ಳಬಹುದಾದ ಬೆಲೆಗಳಲ್ಲಿ ಆಹಾರ ಪದಾರ್ಥಗಳು ಸರಬರಾಜು ಆಗುವುದನ್ನು ಖಚಿತ ಪಡಿಸುವುದು
ಸಿ) ಉತ್ತಮ ಹಾಗೂ ಪೌಷ್ಟಿಕ ಗುಣಮಟ್ಟದ ಆಹಾರ ಪದಾರ್ಥಗಳು ಸರಬರಾಜಾಗುವುದನ್ನು ಖಚಿತ ಪಡಿಸುವುದು
ಡಿ) (ಎ) ಮತ್ತು (ಬಿ)

700) ಭಾರತದಲ್ಲಿ ವ್ಯಾಪಾರ, ಕೈಗಾರಿಕೆ, ಆರ್ಥಿಕ ಮತ್ತು ಹಣಕಾಸು ವಲಯಗಳಲ್ಲಿ ಪ್ರಮುಖ ಆರ್ಥಿಕ ಸುಧಾರಣೆಗಳನ್ನು ಜಾರಿಗೆ ತಂದ ವರ್ಷ
ಎ) 1991 ಬಿ) 1996
ಸಿ) 1998 ಡಿ) 2001

701) ಸಬ್ಸಿಡಿಯು
ಎ) ಬಂಡವಾಳ ವೆಚ್ಚದ ಒಂದು ಭಾಗ
ಬಿ) ಕಂದಾಯ ವೆಚ್ಚದ ಒಂದು ಭಾಗ
ಸಿ) ದೀರ್ಘಾವಧಿ ವೆಚ್ಚದ ಒಂದು ಭಾಗ
ಡಿ) ಅಭಿವೃದ್ಧಿಯ ವೆಚ್ಚದ ಒಂದು ಭಾಗ

702) ಭಾರತದಲ್ಲಿ ವಿದೇಶಿ ನೇರ ಹೂಡಿಕೆ ಕುರಿತು ಈ ಕೆಳಗಿನ ಯಾವ ಹೇಳಿಕೆ ಸರಿಯಾಗಿರುವುದಿಲ್ಲ?
ಎ) ತಯಾರಿಕಾ ಚಟುವಟಿಕೆಗಳಲ್ಲಿ ಮಾಡಲಾದ ವಿದೇಶಿ ಹೂಡಿಕೆ
ಬಿ) ಕಂಪನಿಗಳ ಶೇರುಗಳಲ್ಲಿ ಮಾಡಲಾದ ವಿದೇಶಿ ಹೂಡಿಕೆ
ಸಿ) ಬ್ಯಾಂಕುಗಳು ಮತ್ತು ಸಮಾಲೋಚನೆ ಉದ್ದಿಮೆಗಳಲ್ಲಿ ಮಾಡಲಾದ ವಿದೇಶಿ ಹೂಡಿಕೆ
ಡಿ) ವಿದೇಶಿ ಕಂಪನಿಗಳ ಮರು-ಹೂಡಿಕೆಯ ಗಳಿಕೆಗಳು

703) ಭಾರತದಲ್ಲಿ ಪ್ರಚಲಿತವಿಲ್ಲದ ಬೆಲೆಸೂಚಿ ಸಂಖ್ಯೆ ಯಾವುದು?
ಎ) ಕೃಷಿ ಕಾರ್ಮಿಕರಿಗಾಗಿ ಗ್ರಾಹಕ ಬೆಲೆ ಸೂಚಿ ಸಂಖ್ಯೆಗಳು
ಬಿ) ನಗರ ಪ್ರದೇಶದ ಶ್ರಮಜೀವಿಗಳಲ್ಲದ ಉದ್ಯೋಗಿಗಳಿಗೆ ಗ್ರಾಹಕ ಬೆಲೆ ಸೂಚಿ ಸಂಖ್ಯೆಗಳು
ಸಿ) ಕೈಗಾರಿಕಾ ಕಾರ್ಮಿಕರಿಗಾಗಿ ಗ್ರಾಹಕ ಬೆಲೆ ಸೂಚಿ ಸಂಖ್ಯೆಗಳು
ಡಿ) ಗ್ರಾಮೀಣ ಕೃಷಿಯೇತರ ಕಾರ್ಮಿಕರಿಗಾಗಿ ಗ್ರಾಹಕ ಬೆಲೆ ಸೂಚಿ ಸಂಖ್ಯೆಗಳು

704) ಭಾರತದ ವಿದೇಶಿ ವಿನಿಮಯ ಮೀಸಲುಗಳಲ್ಲಿ ಇದು ಬಳಸಲ್ಪಡುವುದಿಲ್ಲ.
ಎ) ವಿದೇಶಿ ಕರೆನ್ಸಿಗಳು
ಬಿ) ಚಿನ್ನ
ಸಿ) ಬೆಳ್ಳಿ
ಡಿ) ವಿಶೇಷ ಡ್ರಾಯಿಂಗ್ ಹಕ್ಕುಗಳು

705) ಈ ಕೆಳಗಿನ ಯಾವ ಕಾರ್ಯಕ್ರಮದಡಿ ಹಸಿರು ಕ್ರಾಂತಿಯನ್ನು ಸಾಧಿಸಲಾಯಿತು?
ಎ) ತೀವ್ರ ಕೃಷಿ ಅಭಿವೃದ್ಧಿ ಕಾರ್ಯಕ್ರಮ
ಬಿ) ತೀವ್ರ ಭೂ ಬಳಕೆ ಕಾರ್ಯಕ್ರಮ
ಸಿ) ತೀವ್ರ ನೀರಾವರಿ ಕಾರ್ಯಕ್ರಮ
ಡಿ) ಅಧಿಕ ಇಳುವರಿಯ ವಿವಿಧ ಬೀಜಗಳ ಕಾರ್ಯಕ್ರಮ

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 50ರ ಉತ್ತರಗಳು: 676. ಡಿ, 677. ಎ, 678. ಎ, 679. ಎ, 680. ಎ, 681. ಡಿ, 682. ಬಿ, 683. ಎ, 684. ಎ, 685. ಸಿ, 686. ಬಿ, 687. ಡಿ, 688. ಎ, 689. ಬಿ, 690. ಸಿ

❦ ಸುಭಾಷಿತ ❦

ಅತ್ಯಂತ ಕೆಟ್ಟದಾದ ಅಸ್ವಾಸ್ಥ್ಯವೆಂದರೆ, ಎಷ್ಟೋ ಜನ ಪ್ರೀತಿಯನ್ನೇ ಕಾಣದೆ ಬಳಲುವುದು.

–ರಾಜಕುಮಾರಿ ಡಯಾನಾ

ನಂದಿ ಬೆಟ್ಟದಲ್ಲಿ ಭೂಕುಸಿತ ಅಪಾಯದ ಎಚ್ಚರಿಕೆ ಗಂಟೆ

ಬೆಂಗಳೂರು ಸಮೀಪದ ಪ್ರಮುಖ ಪ್ರವಾಸಿ ತಾಣವಾದ ನಂದಿ ಬೆಟ್ಟದಲ್ಲಿ ಇತ್ತೀಚೆಗೆ ಸಂಭವಿಸಿದ ಭೂಕುಸಿತವು ಅಪಾಯದ ಎಚ್ಚರಿಕೆ ಗಂಟೆ. ಏಕೆಂದರೆ, ಪರಿಸರವಾದಿಗಳ ತೀವ್ರ ವಿರೋಧದ ನಡುವೆಯೂ ನಂದಿ ಬೆಟ್ಟದ ಸರಹದ್ದಿನಲ್ಲಿ ಕಲ್ಲು ಗಣಿಗಾರಿಕೆಗೆ ಸರ್ಕಾರವೇ ಅನುಮತಿ ನೀಡಿತ್ತು. ಆರು ಗಂಟೆಗಳವರೆಗೆ ಬಿಟ್ಟೂಬಿಡದೆ ಸುರಿದ ಮಳೆಯೇ ಭೂಕುಸಿತಕ್ಕೆ ಕಾರಣ ಎನ್ನುವುದು ಅಧಿಕಾರಿಗಳು ಕೊಡುವ ವಿವರಣೆ. ಆದರೆ, ಈ ಸಬೂಬನ್ನು ಒಪ್ಪದ ಪರಿಸರಪ್ರಿಯರು, ಮಿತಿಮೀರಿದ ಕಲ್ಲು ಗಣಿಗಾರಿಕೆ, ನಿರಂತರವಾಗಿ ನಡೆದ ಮರಗಳ ಹನನ ಹಾಗೂ ಅಭಿವೃದ್ಧಿಯ ಕುರುಡು ಓಟದಿಂದಾಗಿ ಸಡಿಲಗೊಂಡ ಮಣ್ಣಿನಿಂದ ಭೂಕುಸಿತ ಉಂಟಾಗಿದೆ ಎಂದು ಪ್ರಬಲವಾಗಿ ಪ್ರತಿಪಾದಿಸಿದ್ದಾರೆ. ಪರಿಸರ ಸೂಕ್ಷ್ಮ ಪ್ರದೇಶಗಳಲ್ಲಿ ಕಲ್ಲು ಗಣಿಗಾರಿಕೆ, ವಿವೇಚನಾರಹಿತ ಅಭಿವೃದ್ಧಿ ಚಟುವಟಿಕೆಗಳಂತಹ ಮಾನವ ಹಸ್ತಕ್ಷೇಪ ನಿಲ್ಲದಿದ್ದರೆ ಇಂತಹ ಘಟನೆಗಳು ಮತ್ತೆ ಮತ್ತೆ ಸಂಭವಿಸುತ್ತಲೇ ಇರುತ್ತವೆ ಎಂಬುದಕ್ಕೆ ರಾಜ್ಯದಲ್ಲಿ ಇತ್ತೀಚಿನ ವರ್ಷಗಳಲ್ಲಿ ಘಟಿಸಿದ ದುರಂತಗಳೇ ಸಾಕ್ಷಿ. ಮೂರು-ನಾಲ್ಕು ವರ್ಷಗಳಿಂದ ಕೊಡಗು ಮತ್ತು ಚಿಕ್ಕಮಗಳೂರಿನ ಕೆಲ ಭಾಗಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಭೂಕುಸಿತಗಳು ಸಂಭವಿಸುತ್ತಲೇ ಇವೆ. ಈ ವರ್ಷ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ಭಾಗದಲ್ಲೂ ಇಂತಹ ಕುಸಿತಗಳು ಆಗಿವೆ. ಕೊಡಗಿನಲ್ಲಿ ಸಂಭವಿಸಿದ ಭೂಕುಸಿತದಲ್ಲಿ ಗುಡ್ಡದ ಮೇಲಿನ ವಾಸದ ಮನೆಗಳು, ರಸ್ತೆಗಳು ಸಹ ಮಾಯವಾಗಿದ್ದವು. ನೂರಾರು ಎಕರೆ ಪ್ರದೇಶದಲ್ಲಿ ಹರಡಿದ್ದ ಕಾಫಿ ತೋಟಗಳು ಗುಡ್ಡದಿಂದ ಜಾರಿದ ಮಣ್ಣಿನ ಅಡಿಯಲ್ಲಿ ಸಮಾಧಿಯಾಗಿದ್ದವು. ಇಂತಹ ಕಹಿ ನೆನಪುಗಳು ಉಡಿಯಲ್ಲಿನ ಉರಿಯಂತೆ ಸುಡುತ್ತಿದ್ದರೂ ಭೂಕುಸಿತ ತಡೆಗೆ ತಕ್ಕ ಮಾರ್ಗೋಪಾಯ ಕಂಡುಕೊಳ್ಳುವಲ್ಲಿ ಸರ್ಕಾರ ನಿರಾಸಕ್ತಿ ತಾಳಿದೆ ಎನ್ನದೆ ವಿಧಿಯಿಲ್ಲ.

ನಂದಿ ಬೆಟ್ಟವೂ ಸೇರಿದಂತೆ ರಾಜ್ಯದ ಎಲ್ಲ ಘಟ್ಟ ಪ್ರದೇಶಗಳನ್ನು ಸಂರಕ್ಷಿಸಲು ಸರ್ಕಾರ ಮುಂದಾಗಬೇಕು

ಭೂಕುಸಿತದಂತಹ ಅವಘಡಗಳಿಗೆ ನಿಖರ ಕಾರಣಗಳನ್ನು ಪತ್ತೆಹಚ್ಚುವ ಜತೆಗೆ ವಿಕೋಪಗಳನ್ನು ಪ್ರತಿಬಂಧಿಸುವ ಕ್ರಮಗಳನ್ನೂ ಸೂಚಿಸಲು ಸರ್ಕಾರ ಈ ಹಿಂದೆ ತಜ್ಞರ ಸಮಿತಿಯೊಂದನ್ನು ನೇಮಕ ಮಾಡಿತ್ತು. ಪ್ರಕೃತಿಯ ಮಡಿಲಲ್ಲಿ ಮನುಷ್ಯನ ಹಸ್ತಕ್ಷೇಪಗಳಿಂದಾದ ತಪ್ಪುಗಳೇ (ಮುಖ್ಯವಾಗಿ ಎಂಜಿನಿಯರಿಂಗ್ ದೋಷಗಳೇ) ಬಹುತೇಕ ಎಲ್ಲ ಭೂಕುಸಿತಗಳಿಗೆ ಕಾರಣ ಎಂದು ತಜ್ಞರ ಸಮಿತಿಯು ತನ್ನ ವರದಿಯಲ್ಲಿ ತಿಳಿಸಿತ್ತು. ಭೂಕುಸಿತವನ್ನೂ ನೈಸರ್ಗಿಕ ವಿಕೋಪಗಳ ವ್ಯಾಖ್ಯೆಯಡಿ ತರಬೇಕೆಂದು ಶಿಫಾರಸು ಮಾಡಿತ್ತು. ಪರಿಸರ ಸೂಕ್ಷ್ಮ ಪ್ರದೇಶಗಳ ವ್ಯಾಪ್ತಿಯಲ್ಲಿ ಮುಂದೆ ಯಾವುದೇ ಕಾಮಗಾರಿಗಳನ್ನು ಕೈಗೊಳ್ಳುವ ಮುನ್ನ ರಾಜ್ಯ ವಿಕೋಪ ನಿಯಂತ್ರಣ ಪ್ರಾಧಿಕಾರದ ಅನುಮತಿ ಪಡೆಯಬೇಕೆಂಬ ಸೂಚನೆಯನ್ನು ಸಹ ನೀಡಿತ್ತು. ತಜ್ಞರ ಈ ವರದಿ ಶೈತ್ಯಾಗಾರ ಸೇರಿದಂತಿದೆ. ಇಲ್ಲದಿದ್ದರೆ ಪರಿಸರ ಸೂಕ್ಷ್ಮ ಪ್ರದೇಶಗಳಲ್ಲಿ ಈ ರೀತಿ ಬೇಕಾಬಿಟ್ಟಿ ಗಣಿಗಾರಿಕೆಗೆ, ಅಭಿವೃದ್ಧಿ ಚಟುವಟಿಕೆಗಳಿಗೆ ಸರ್ಕಾರ ಅವಕಾಶವನ್ನೇ ನೀಡುತ್ತಿರಲಿಲ್ಲ.

ನಂದಿಬೆಟ್ಟವು ಅರ್ಕಾವತಿ ಸೇರಿದಂತೆ ಆರು ನದಿಗಳ ಉಗಮಸ್ಥಾನ ಎಂಬ ಖ್ಯಾತಿಯನ್ನೂ ಹೊಂದಿದೆ. ಪ್ರಾಕೃತಿಕವಾಗಿ ಮಾತ್ರವಲ್ಲದೆ ಐತಿಹಾಸಿಕವಾಗಿಯೂ ನಂದಿಬೆಟ್ಟ ಮಹತ್ವದ ತಾಣ. ಗಂಗರ ಕಾಲದಲ್ಲಿ ಕಟ್ಟಲಾದ, ಟಿಪ್ಪು ಸುಲ್ತಾನ್ ಆಡಳಿತಾವಧಿಯಲ್ಲಿ ಮತ್ತಷ್ಟು ಗಟ್ಟಿಗೊಂಡಿದ್ದ ಕೋಟೆಯೂ ಇಲ್ಲಿದೆ. 1986ರಲ್ಲಿ ನಡೆದ ಸಾರ್ಕ್ ಸಮ್ಮೇಳನಕ್ಕೆ ಆತಿಥ್ಯ ವಹಿಸಿದ ಸ್ಥಳವೂ ಇದಾಗಿದೆ. ಬೆಂಗಳೂರಿನಂತಹ ಮಹಾನಗರದ ಆಸುಪಾಸಿನಲ್ಲೇ ಇರುವುದು ಈ ಬೆಟ್ಟದ ಪಾಲಿಗೆ ಒಂದು ರೀತಿಯಲ್ಲಿ ಶಾಪವಾಗಿ ಪರಿಣಮಿಸಿದಂತಿದೆ. ಈ ಬೆಟ್ಟದ ಪರಿಸರವು ಜನಬಾಹುಳ್ಯದ ಒತ್ತಡಕ್ಕೆ ಸಿಲುಕಿ ನಲುಗಿದೆ. ವಾರಾಂತ್ಯದ ದಿನಗಳಲ್ಲಿ ಸಾವಿರ ಸಾವಿರ ಸಂಖ್ಯೆಯಲ್ಲಿ ಪ್ರವಾಸಿಗರು ನಂದಿಬೆಟ್ಟಕ್ಕೆ ಬರುತ್ತಾರೆ. ಅವರು ತಿಂದು-ಕುಡಿದು ಎಸೆದುಹೋದ ಪ್ಲಾಸ್ಟಿಕ್ ತ್ಯಾಜ್ಯವೇ ವಾರ್ಷಿಕ 30 ಟನ್‌ಗಳಷ್ಟು ಬೃಹತ್ ಪ್ರಮಾಣದಲ್ಲಿ ಇರುತ್ತದೆ ಎಂದು ಲೆಕ್ಕ ಹಾಕಲಾಗಿದೆ. ಬೆಟ್ಟದಲ್ಲಿ ಪ್ರವಾಸೋದ್ಯಮ ಚಟುವಟಿಕೆಗಳು ಮಿತಿಮೀರಿವೆ ಎಂಬ ದೂರಿದೆ. ಅದರ ಸರಹದ್ದಿನಲ್ಲಿ ಅನುಷ್ಠಾನಕ್ಕೆ ತರಲಾಗುತ್ತಿರುವ ಅಭಿವೃದ್ಧಿ ಯೋಜನೆಗಳ ಕುರಿತೂ ಆಕ್ಷೇಪಗಳಿವೆ. ಇಂತಹ ಚಟುವಟಿಕೆಗಳಿಗೆ ಲಗಾಮು ಹಾಕದಿದ್ದರೆ ಪರಿಸ್ಥಿತಿ ಮತ್ತಷ್ಟು ವಿಕೋಪಕ್ಕೆ ಹೋಗಲಿದೆ ಎಂಬ ತಜ್ಞರ ಹಿತವಚನವನ್ನು ಅಧಿಕಾರಿಗಳು ಕೇಳಿಸಿಕೊಳ್ಳಬೇಕು. ನಂದಿ ಬೆಟ್ಟವೂ ಸೇರಿದಂತೆ ರಾಜ್ಯದ ಎಲ್ಲ ಘಟ್ಟ ಪ್ರದೇಶಗಳನ್ನು ಸಂರಕ್ಷಿಸಲು ಸರ್ಕಾರ ಮುಂದಾಗಬೇಕು. ಅವುಗಳ ಪರಿಸರದಲ್ಲಿ ಭೂಕೊರೆತ, ಕಲ್ಲು ಗಣಿಗಾರಿಕೆ, ಅರಣ್ಯನಾಶದಂತಹ ಚಟುವಟಿಕೆಗಳು ನಡೆಯದಂತೆ ನೋಡಿಕೊಳ್ಳಬೇಕು. ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು.

ದಿನದ ಟ್ವೀಟ್

ಯಾರೂ ಹೊರತಲ್ಲ

‘ಮುಂದಿನ ವರ್ಷ ನಾವು ಯಾವಾಗ ಬೇಕಾದರೂ ಹಬ್ಬಗಳನ್ನು ಆಚರಿಸಬಹುದು. ಆದರೆ ಇದೀಗ ಜೀವನಾಚರಣೆಯ ಸಮಯ. ಗಣೇಶ ನಮ್ಮ ಹೃದಯಗಳಲ್ಲಿ ನೆಲೆಸಿರುತ್ತಾನೆ...’ ಕೋವಿಡ್ ಮೂರನೇ ಅಲೆಯ ನಿಯಂತ್ರಣಕ್ಕೆ ಮುಂದಿನ ಎರಡು ‘ಹಬ್ಬದ’ ತಿಂಗಳುಗಳು ಯಾಕೆ ನಿರ್ಣಾಯಕ ಎಂಬ ಕುರಿತು ಉನ್ನತ ವೈದ್ಯರು ಮತ್ತು ಸಾಂಕ್ರಾಮಿಕ ರೋಗಶಾಸ್ತ್ರಜ್ಞರು ಚರ್ಚೆ ನಡೆಸಿದ್ದಾರೆ. ಎಲ್ಲ ಧರ್ಮಗಳಿಗೂ ಇದು ಅನ್ವಯಿಸುತ್ತದೆ!

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

ಕಿಡಿನುಡಿ

ಕೋವಿಡ್ ತೃತೀಯ ಅಲೆ ಭೀತಿಯ ನಡುವೆಯೂ ನಡೆಯುತ್ತಿರುವ ಜನಾಶೀರ್ವಾದ ಯಾತ್ರೆಯ ರ‍್ಯಾಲಿಗಳು ಜನರನ್ನು ಪ್ರಾಣಾಪಾಯಕ್ಕೆ ದೂಡುತ್ತಿವೆ. ಕೇಂದ್ರ ಸಂಪುಟಕ್ಕೆ ಹೊಸದಾಗಿ ಸೇರಿರುವ ಬಿಜೆಪಿಯ ಸಚಿವರು ಈ ಯಾತ್ರೆ ಆಯೋಜಿಸುತ್ತಿದ್ದಾರೆ. ಇವರು ಜನರಿಂದ ಆಶೀರ್ವಾದ ಪಡೆಯುತ್ತಿಲ್ಲ, ಬದಲಿಗೆ ಅವರನ್ನೇ ಕಷ್ಟಕ್ಕೆ ದೂಡುತ್ತಿದ್ದಾರೆ.

ಉದ್ಧವ್ ಠಾಕ್ರೆ, ಮಹಾರಾಷ್ಟ್ರ ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಭಾನುವಾರ, 1-9-1996

• ರಾಯಚೂರು 5, 6ನೇ ಥರ್ಮಲ್ ಘಟಕ ನಾಳೆಯಿಂದ ವಿಸ್ತರಣೆ

ಬೆಂಗಳೂರು, ಆ. 31– ಭಾರತೀಯ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಒಟ್ಟು 14 ಹಣಕಾಸು ಸಂಸ್ಥೆಗಳು ಒಂದಾಗಿ ನೆರವು ನೀಡಲಿರುವ ₹ 1,545 ಕೋಟಿ ವೆಚ್ಚದ ರಾಯಚೂರು ಥರ್ಮಲ್ ಸ್ಥಾವರದ ಐದು ಮತ್ತು ಆರನೇ ಘಟಕಗಳ ಸಿವಿಲ್ ಕಾಮಗಾರಿ ಸೆಪ್ಟೆಂಬರ್ 2ರಂದು ವಿಧ್ಯುಕ್ತವಾಗಿ ಆರಂಭಗೊಳ್ಳಲಿದೆ.

ಕಾಮಗಾರಿ ಆರಂಭವಾದ ಮುಂದಿನ ಮೂರೂವರೆ ವರ್ಷದಲ್ಲಿ ಎರಡೂ ಘಟಕಗಳು ವಿದ್ಯುತ್ ಉತ್ಪಾದನೆಯನ್ನು ಆರಂಭಿಸಲಿವೆ.

ಈ ಘಟಕಗಳಲ್ಲಿ ಉತ್ಪಾದನೆ ಆರಂಭಗೊಳ್ಳುವುದರೊಂದಿಗೆ ಕರ್ನಾಟಕದ ಪ್ರಥಮ ಸೂಪರ್ ಥರ್ಮಲ್ ಸ್ಥಾವರವಾಗಿ ರಾಯಚೂರು ವಿಕಾಸಗೊಳ್ಳಲಿದೆ ಎಂದು ಕರ್ನಾಟಕ ವಿದ್ಯುತ್ ನಿಗಮದ (ಕೆಪಿಸಿ) ಕಾರ್ಯನಿರ್ವಾಹಕ ನಿರ್ದೇಶಕ ಕೆ.ಜೈರಾಜ್ ಇಂದು ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

• ಹೆಗಡೆ ಉಚ್ಚಾಟನೆಗೆ ದಳ ಕಾರ್ಯಕಾರಿಣಿ ಅಸ್ತು

ನವದೆಹಲಿ, ಆ. 31– ರಾಮಕೃಷ್ಣ ಹೆಗಡೆ ಅವರ ದಿಢೀರ್ ಉಚ್ಚಾಟನೆಯ ಕ್ರಮವನ್ನು ದೃಢೀಕರಿಸಿದ ಇಂದಿನ ಜನತಾದಳದ ರಾಷ್ಟ್ರೀಯ ಕಾರ್ಯಕಾರಿ ಸಭೆಯು ಕರ್ನಾಟಕದ ಏಳು ಮಂದಿ ವಿಧಾನ ಪರಿಷತ್ ಸದಸ್ಯರು ಪಕ್ಷ ತ್ಯಜಿಸಿ ರಾಷ್ಟ್ರೀಯ ನವ ನಿರ್ಮಾಣ ವೇದಿಕೆ ಸೇರಿದ ಪ್ರಕರಣವನ್ನು ಪ್ರಸ್ತಾಪಿಸುವ ಗೋಜಿಗೂ ಹೋಗದೆ ಅದನ್ನು ನಿರ್ಲಕ್ಷ್ಯ ಮಾಡಿತು.

50 ವರ್ಷಗಳ ಹಿಂದೆ

ಬುಧವಾರ, 1-9-1971

• ಇನ್ನೂ ಬರಬೇಕಾದ ನೆರವಿಗಾಗಿ ಕೇಂದ್ರಕ್ಕೆ ರಾಜ್ಯದ ಒತ್ತಾಯ

ಬೆಂಗಳೂರು, ಆ. 31– ಭರವಸೆ ನೀಡಲಾಗಿರುವ ಆರ್ಥಿಕ ನೆರವಿನಲ್ಲಿನ ನೀಡದಿರುವ ಭಾಗವನ್ನು ವಿಳಂಬ ಮಾಡದೇ ತಕ್ಷಣ ಬಿಡುಗಡೆ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ತುರ್ತು ಮನವಿ ಮಾಡಿಕೊಂಡಿದೆ.

ಹಣವನ್ನು ಒದಗಿಸುವುದರಲ್ಲಿ ವಿಳಂಬವಾದರೆ ಈಗಾಗಲೇ ಉದ್ದೇಶಿತ ಕಾರ್ಯಗಳ ವೆಚ್ಚವನ್ನು ಪೂರೈಸಲು ಕಷ್ಟವಾಗಿ ರಾಜ್ಯದಲ್ಲಿ ತೀವ್ರ ತೊಂದರೆ ಒದಗುವ ಸಂಭವವಿದೆ ಎಂಬುದನ್ನು ಕೇಂದ್ರಕ್ಕೆ ತಿಳಿಸಲಾಗಿದೆ ಎಂದು ಇಲ್ಲಿ ತಿಳಿದು ಬಂದಿದೆ.

• ಸಜ್ಜಾಗಿರಲು ಸೇನೆಗೆ ಸೂಚನೆ

ನವದೆಹಲಿ, ಆ. 31– ಸಜ್ಜಾಗಿರುವಂತೆ ರಾಷ್ಟ್ರದ ಭೂ, ವಾಯು ಮತ್ತು ನೌಕಾ ಪಡೆಗಳಿಗೆ ಸೂಚಿಸಲಾಗಿದೆ.

ಪಾಕಿಸ್ತಾನ ಯುದ್ಧದ ಬೆದರಿಕೆ ಹಾಕುತ್ತಿರುವುದರಿಂದ ಈ ಕ್ರಮ ಮುಂಜಾಗ್ರತಾ ಸ್ವರೂಪದ್ದೆಂದೂ ಬಲ್ಲ ವೃತ್ತಗಳು ತಿಳಿಸಿವೆ.

ಪೂರ್ವದ ಗಡಿಯಲ್ಲಿ ಪಾಕಿಸ್ತಾನದ ಸೈನಿಕ ಚಟುವಟಿಕೆಗಳು ಹೆಚ್ಚಿರುವುದೂ ಹಾಗೂ ಪಾಕಿಸ್ತಾನದೊಡನೆಯ ಗಡಿ ಬಳಿ ವಿಧ್ವಂಸಕ ಕೃತ್ಯಗಳು ಮತ್ತು ಬುಡಮೇಲು ಚಟುವಟಿಕೆಗಳು ಹೆಚ್ಚುತ್ತಿರುವುದೂ ಈ ಕ್ರಮಕ್ಕೆ ಕಾರಣವೆಂದೂ ಆ ವೃತ್ತಗಳು ತಿಳಿಸಿರುವುದಾಗಿ ‘ಪೇಟ್ರಿಯಾಟ್’ ಪತ್ರಿಕೆ ವರದಿ ಮಾಡಿದೆ.

ಅಫ್ಗನ್ ವಿಷಯದಲ್ಲಿ ಅಮೆರಿಕ ಅಪಾಯಕಾರಿ ಸಾಹಸಕ್ಕೆ ಕೈ ಹಾಕಿದಂತೆ ಕಾಣುತ್ತಿದೆ

ಅಪಾಯಕಾರಿ ದ್ಯೂತ, ಜಾಗೃತ ಭಾರತ

ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಅಫ್ಗಾನಿಸ್ತಾನದ ವಿಷಯದಲ್ಲಿ ಅಮೆರಿಕ ಎಲ್ಲಿಂದ ಹೊರಟಿತ್ತೋ ಇಪ್ಪತ್ತು ವರ್ಷಗಳ ಬಳಿಕ ಅದೇ ಜಾಗಕ್ಕೆ ಬಂದು ನಿಂತಿದೆ. 9/11 ಘಟನೆ ನಡೆದಾಗ ಅಮೆರಿಕದ ಅಂದಿನ ಅಧ್ಯಕ್ಷ ಬುಷ್ ಜೂನಿಯರ್ ‘ಇದಕ್ಕೆ ಕಾರಣರಾದವರು ಎಲ್ಲಿದ್ದರೂ ಬಿಡುವುದಿಲ್ಲ’ ಎಂದು ಆರ್ಭಟಿಸಿದ್ದರು. ‘ಭಯೋತ್ಪಾದನೆಯ ವಿರುದ್ಧ ಸಮರ’ ಸಾರಿ ಸೇನೆಯನ್ನು ಅಫ್ಗಾನಿಸ್ತಾನಕ್ಕೆ ನುಗ್ಗಿಸಿದ್ದರು.

ಇದೀಗ ಅಫ್ಗಾನಿಸ್ತಾನದ ಸಹವಾಸ ಸಾಕು ಎಂದು ಅಲ್ಲಿಂದ ಕಾಲ್ತೆಗೆಯುವಾಗಲೂ ಅಮೆರಿಕದ ಯೋಧರ ಮೇಲೆ ದಾಳಿಯಾಯಿತು. ಅಧ್ಯಕ್ಷ ಜೋ ಬೈಡನ್ ‘ಇದಕ್ಕೆ ಕಾರಣರಾದವರು ಎಲ್ಲಿದ್ದರೂ ಬಿಡುವುದಿಲ್ಲ’ ಎಂಬ ಅದೇ ಮಾತನ್ನು ಆಡಿದರು. ಮರುದಿನ ಪ್ರತಿದಾಳಿ ನಡೆಯಿತು. ಆದರೆ ಅಂದಿಗೂ ಇಂದಿಗೂ ಇರುವ ವ್ಯತ್ಯಾಸವೆಂದರೆ, ಇದೀಗ ಹಿರಿಯಣ್ಣನ ಮೀಸೆಗೆ ಮಣ್ಣು ಮೆತ್ತಿದೆ. ಮುಯ್ಯಿ ತೀರಿಸಿಕೊಳ್ಳಲು ಸಮರ ಸಾರಿದ್ದ ಅಮೆರಿಕ, ಹತಾಶೆ ನುಂಗಿಕೊಂಡು ವಾಪಸ್ ನಡೆದಿದೆ.

ತಾಲಿಬಾನೀಯರು ಕಾಬೂಲ್ ವಶಪಡಿಸಿಕೊಂಡಾಗ ‘ಇದೆಲ್ಲವೂ ಇಷ್ಟು ತ್ವರಿತವಾಗಿ ಆಗುತ್ತವೆ ಎಂಬ ನಿರೀಕ್ಷೆ ಇರಲಿಲ್ಲ’ ಎಂದು ಅಮೆರಿಕ ಪ್ರತಿಕ್ರಿಯಿಸಿತ್ತು. ಇಪ್ಪತ್ತು ವರ್ಷಗಳ ಕಾಲ ಅಫ್ಗಾನಿಸ್ತಾನದಲ್ಲಿದ್ದು, ತಾಲಿಬಾನ್ ಮುರುಟಿ ಅರಳಿದ್ದನ್ನು ಹತ್ತಿರದಿಂದ ಕಂಡಿದ್ದ, ಸಶಕ್ತ ಗುಪ್ತಚರ ಜಾಲ ಹೊಂದಿರುವ ಅಮೆರಿಕ, ‘ಇದು ಅನಿರೀಕ್ಷಿತ’ ಎಂದರೆ ನಂಬಬಹುದೇ? ಜಗತ್ತನ್ನು ನಂಬಿಸಲು ಅದು ಬೇಕಾದ್ದು ಹೇಳಬಹುದು, ಆಘಾತವಾದಂತೆ ನಟಿಸಬಹುದು, ಆದರೆ ಈ ಇಪ್ಪತ್ತು ವರ್ಷಗಳಲ್ಲಿ ಅಮೆರಿಕ ನಡೆದುಕೊಂಡ ರೀತಿಯನ್ನು ಒಟ್ಟಾರೆಯಾಗಿ ಗಮನಿಸಿದರೆ, ಅಮೆರಿಕದ ಸ್ವಯಂಕೃತ ಅಪರಾಧ ಎದ್ದು ತೋರುತ್ತದೆ.

ಹಾಗಾದರೆ, ಅಮೆರಿಕ ಎಡವಿದ್ದೆಲ್ಲಿ? ಸೋವಿಯತ್ ವಿರುದ್ಧದ ಶೀತಲ ಸಮರದಲ್ಲಿ ಪಾಕಿಸ್ತಾನಕ್ಕೆ ಆತುಕೊಂಡಿದ್ದ ಅಮೆರಿಕ, ‘ಭಯೋತ್ಪಾದನೆಯ ನಿಗ್ರಹಕ್ಕೂ’ ಪಾಕಿಸ್ತಾನವನ್ನೇ ನೆಚ್ಚಿಕೊಂಡಿತು. ಅಫ್ಗಾನಿಸ್ತಾನವೆಂಬ ಹಿತ್ತಲಿನಲ್ಲಿ ಭಯೋತ್ಪಾದಕರನ್ನಷ್ಟೇ ಬೆಳೆಯುತ್ತಿದ್ದ ಪಾಕಿಸ್ತಾನ, ಅಮೆರಿಕದ ಬಗಲಿಗೆ ನಿಂತು ಆರ್ಥಿಕವಾಗಿ ಪುಷ್ಟಿ ಹೊಂದಿತು. 90ರ ದಶಕದಲ್ಲಿ ತಾಲಿಬಾನ್ ಜನ್ಮತಳೆದಾಗ ನೀರೆರೆದು ಗೊಬ್ಬರ ಉಣಿಸಿತು. ಷರಿಯಾ ಕಾನೂನಿನ ಹೆಸರಿನಲ್ಲಿ ತಾಲಿಬಾನ್ ಮನಬಂದಂತೆ ವರ್ತಿಸಿದಾಗ, ಪ್ರಜಾಪ್ರಭುತ್ವದ ಮೌಲ್ಯಗಳು, ಮಾನವ ಹಕ್ಕುಗಳು ಎಂದು ಭಾಷಣ ಮಾಡುವ ಅಮೆರಿಕ ತುಟಿ ಬಿಚ್ಚಿರಲಿಲ್ಲ. ಅಮೆರಿಕಕ್ಕೆ ಎಚ್ಚರವಾದದ್ದು ತನ್ನ ಮೇಲೆ 9/11 ದಾಳಿಯಾದಾಗಲೇ!

ಅಫ್ಗಾನಿಸ್ತಾನ ಅಸ್ಥಿರವಾಗಿದ್ದಷ್ಟು ದಿನ ಡಾಲರ್ ಹರಿವು ನಿಲ್ಲುವುದಿಲ್ಲ ಎಂದು ಅರಿತಿದ್ದ ಪಾಕಿಸ್ತಾನ, ತಾಲಿಬಾನಿಗೆ ಶಕ್ತಿ ತುಂಬುವ ಕೆಲಸ ಮಾಡಿತು. ಅಮೆರಿಕದ ಮುಖಭಂಗ ಅಪೇಕ್ಷಿಸುತ್ತಿದ್ದ ರಷ್ಯಾ ಮತ್ತು ಚೀನಾ ಪಾಕಿಸ್ತಾನದ ಭುಜ ತಟ್ಟಿದವು.

ಇಪ್ಪತ್ತು ವರ್ಷಗಳ ಅವಧಿಯಲ್ಲಿ ಅಮೆರಿಕವು ಅಫ್ಗನ್ ರಾಷ್ಟ್ರೀಯ ಸೇನೆಯನ್ನು ಕಟ್ಟಿತಾದರೂ, ಹೋರಾಟದ ಮನೋಭಾವ ಆ ಸೇನೆಯಲ್ಲಿ ಮೊಳೆಯಲಿಲ್ಲ. ಯುದ್ಧದಲ್ಲಿ ಸೋಲು ಗೆಲುವಿನ ಲೆಕ್ಕಾಚಾರ, ಎಷ್ಟು ಬಂದೂಕುಗಳು ಬಳಕೆಯಾಗಿವೆ ಎಂಬುದರಿಂದ ನಿರ್ಧಾರವಾಗುವುದಿಲ್ಲ. ಬಂದೂಕು ಹಿಡಿದ ವ್ಯಕ್ತಿ, ಆತನ ಆಂತರ್ಯ ಮತ್ತು ಆತ್ಮಸ್ಥೈರ್ಯ ಮುಖ್ಯವಾಗುತ್ತವೆ. ಆಧುನಿಕ ಶಸ್ತ್ರಾಸ್ತ್ರ ಮತ್ತು ತರಬೇತಿ ಇದ್ದರೂ ಅಫ್ಗನ್ ರಕ್ಷಣಾ ಪಡೆ ಕಾದಾಡುವ ಇಂಗಿತವನ್ನೇ ತೋರಲಿಲ್ಲ. ತಾಲಿಬಾನೀಯರಲ್ಲಿ ಮತೀಯ ನಂಬಿಕೆಗಳು ಗಟ್ಟಿಯಾಗಿದ್ದವು, ಅಫ್ಗನ್ ರಕ್ಷಣಾ ಪಡೆ ಕೇವಲ ಹಣಕ್ಕೆ ಬಂದೂಕು ಹಿಡಿದಿತ್ತು.

ಇನ್ನು, ಕಾಬೂಲ್ ತಾಲಿಬಾನ್‌ನ ವಶವಾಗುತ್ತಲೇ ಬಂದ ಪ್ರತಿಕ್ರಿಯೆಗಳನ್ನೇ ನೋಡಿ. ಪಾಕಿಸ್ತಾನದ ಪ್ರಧಾನಿ ಇಮ್ರಾನ್ ಖಾನ್ ‘ಅಫ್ಗಾನಿಸ್ತಾನ ದಾಸ್ಯದಿಂದ ಮುಕ್ತವಾಗಿದೆ’ ಎಂದು ಪ್ರತಿಕ್ರಿಯಿಸಿದರೆ, ‘ತಾಲಿಬಾನ್ ಕೈಗಳಲ್ಲಿ ಅಫ್ಗಾನಿಸ್ತಾನ ಸುರಕ್ಷಿತವಾಗಿದೆ’ ಎಂದು ರಷ್ಯಾ ಹೇಳಿತು. ಮೂರು ತಿಂಗಳ ಮೊದಲೇ ತಾಲಿಬಾನ್ ಜೊತೆ ಚೀನಾ ಮಾತುಕತೆಗೆ ಕುಳಿತಿತ್ತು. ತಾಲಿಬಾನೀಯರನ್ನು ಕೈಗೊಂಬೆಯಾಗಿಯೇ ಇರಿಸಿಕೊಳ್ಳುವುದು ಪಾಕಿಸ್ತಾನದ ತುಡಿತವಾದರೆ, ಯುರೇಷಿಯಾದಲ್ಲಿ ಪ್ರಾಬಲ್ಯ ಕಾಯ್ದುಕೊಳ್ಳುವುದು ರಷ್ಯಾದ ಹವಣಿಕೆ. ವಾಣಿಜ್ಯಿಕವಾಗಿ ಇರಾನ್‌ವರೆಗೆ ಬಾಹು ಚಾಚುವುದು ಚೀನಾದ ವಾಂಛೆ.

ಹಾಗಂತ, ಇದಾವುದೂ ಅಮೆರಿಕಕ್ಕೆ ತಿಳಿದಿರಲಿಲ್ಲವೇ? ಸ್ವಹಿತಾಸಕ್ತಿ ಇಲ್ಲದಿದ್ದರೆ ಅಮೆರಿಕ ಒಂದು ಹುಲ್ಲುಕಡ್ಡಿಯನ್ನೂ ಆಚೀಚೆ ಸರಿಸುವುದಿಲ್ಲ. ಅದು ಈ 20 ವರ್ಷಗಳಲ್ಲಿ ಕಂಡುಕೊಂಡ ಸತ್ಯ ಎಂದರೆ, ಅಫ್ಗನ್ ವಿಷಯದಲ್ಲಿ ಸೇನೆಯ ಮೂಲಕ ಪರಿಹಾರ ಸಾಧ್ಯವಿಲ್ಲ ಎಂಬುದು. ಹಾಗಾಗಿಯೇ ಇದೀಗ ಅಪಾಯಕಾರಿ ಸಾಹಸಕ್ಕೆ ಕೈ ಹಾಕಿದಂತೆ ಕಾಣುತ್ತಿದೆ. ಅಫ್ಗನ್‌ನಲ್ಲಿ ನೆಲೆ ಹೊಂದಿರುವ ಸ್ಥಾಪಿತ ಉಗ್ರ ಸಂಘಟನೆಗಳಿಗಿಂತ ತಾಲಿಬಾನ್ ಕಡಿಮೆ ಅಪಾಯಕಾರಿ ಎಂದು ಭಾವಿಸಿದೆ. ಪಾಕಿಸ್ತಾನವನ್ನು ಸಾಕುವ ಬದಲು ತಾಲಿಬಾನೀಯರನ್ನು ಬಳಸಿ ವೈರಿಗಳನ್ನು ಸದೆಬಡಿಯುವ ಉಪಾಯ ಹೂಡಿದೆ. ಆದ್ದರಿಂದಲೇ ಅಫ್ಗನ್ ಸರ್ಕಾರ ಮತ್ತು ರಕ್ಷಣಾ ಪಡೆಯ ಮೇಲೆ ನಂಬಿಕೆ ಕಳೆದುಕೊಂಡಿದ್ದ ಅಮೆರಿಕವು ತಾಲಿಬಾನ್ ಜೊತೆ ಒಪ್ಪಂದಕ್ಕೆ ಮುಂದಾಯಿತು. ದೋಹಾದಲ್ಲಿ ಒಪ್ಪಂದವಾದಂತೆ, ಅಮೆರಿಕ–ತಾಲಿಬಾನ್ ಸಂಬಂಧದ ಮೂಲಧಾತು ‘ಅಮೆರಿಕ ವಿರುದ್ಧದ’ ಭಯೋತ್ಪಾದನಾ ನಿಗ್ರಹದ ವಿಷಯವೇ ಆಗಲಿದೆ. ಮಿಲಿಟರಿಗೆ ಸಂಬಂಧಿಸಿದ ಮೂಲ ಸೌಕರ್ಯ, ಆಧುನಿಕ ಶಸ್ತ್ರಾಸ್ತ್ರಗಳನ್ನು ತಾಲಿಬಾನ್ ಬತ್ತಳಿಕೆಗೆ ತುಂಬಿದೆ.



ಹಾಗಾದರೆ ತಾಲಿಬಾನ್ ಆಡಳಿತವನ್ನು ಅಮೆರಿಕ ಅನುಮೋದಿಸುತ್ತದೆಯೇ? ‘ತಾಲಿಬಾನ್ ವರ್ತನೆಯನ್ನು ಕಾದು ನೋಡುತ್ತೇವೆ’ ಎಂದು ಅಮೆರಿಕ ಹೇಳುತ್ತಿದೆಯಾದರೂ, ಅಫ್ಗಾನಿಸ್ತಾನದ ವಿಷಯ ನಿರ್ವಹಿಸಲು ದೋಹಾದಲ್ಲಿ ದೂತಾವಾಸ ಕಚೇರಿ ತೆರೆದಿದೆ. ಸಿಐಎ ಮತ್ತು ತಾಲಿಬಾನ್ ನಡುವೆ ಸಂಪರ್ಕ ಬೆಳೆದಿದೆ. ಉಗ್ರ ಚಟುವಟಿಕೆಗಳ ಕುರಿತು ಗುಪ್ತಚರ ಮಾಹಿತಿ ವಿನಿಮಯ ಆರಂಭವಾಗಿದೆ. ಹಖಾನಿ ಜಾಲದ ನಾಯಕರು ತಾಲಿಬಾನ್ ಸರ್ಕಾರದಲ್ಲಿ ಮುಖ್ಯ ಪಾತ್ರ ವಹಿಸಲಿದ್ದಾರೆ ಎಂಬುದು ತಿಳಿದೂ ತಾಲಿಬಾನ್ ಮತ್ತು ಹಖಾನಿ ಜಾಲ ಬೇರೆ ಬೇರೆ ಎಂದು ಅಮೆರಿಕ ಮಾತು ಬದಲಿಸಿದೆ.

ತಾಲಿಬಾನ್ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ, ಕಾಬೂಲ್ ದಾಳಿಯನ್ನೇ ನೆಪವಾಗಿಸಿಕೊಂಡು, ‘ಭಯೋತ್ಪಾದನೆಯ ವಿರುದ್ಧ ಸಮರ ನಿರಂತರ’ ಎಂದು ಅಮೆರಿಕವು ಅಫ್ಗಾನಿಸ್ತಾನದಲ್ಲಿ ರಾಯಭಾರ ಕಚೇರಿ ತೆರೆದರೆ ಅಚ್ಚರಿಯೇನಲ್ಲ. ಜಾಗತಿಕ ಮಾನ್ಯತೆ, ಹಣಕಾಸಿನ ನೆರವು ಅಗತ್ಯವಿರುವುದರಿಂದ ತಾಲಿಬಾನ್ ಕೂಡ ಅಮೆರಿಕದ ವಿರೋಧವನ್ನು ಸದ್ಯಕ್ಕೆ ಕಟ್ಟಿಕೊಳ್ಳಲಾರದು. ಸಮಸ್ಯೆಯೆಂದರೆ, ಅಫ್ಗಾನಿಸ್ತಾನವನ್ನು ಸಂಪೂರ್ಣವಾಗಿ ನಿರ್ವಹಿಸುವುದು ತಾಲಿಬಾನೀಯರಿಗೆ ಸುಲಭವಲ್ಲ. ಅಫ್ಗಾನಿಸ್ತಾನ ಎಂದರೆ ಕೇವಲ ತಾಲಿಬಾನ್ ಅಲ್ಲ ಎಂಬುದು ಕಾಬೂಲ್ ಸ್ಫೋಟದಿಂದ ಜಾಹೀರಾಗಿದೆ. ಇತರರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ತಾಲಿಬಾನ್ ಅಧಿಕಾರ ಹಂಚಿಕೆಯ ಮಾರ್ಗ ಹಿಡಿಯಬಹುದು. ಅದಾಗದಿದ್ದರೆ ಅಫ್ಗನ್ ಅಂತರ್ಯುದ್ಧದ ಅಂಗಳವಾಗುತ್ತದೆ. ಅಲ್ಲಿನ ಅಸ್ಥಿರತೆ, ಐಎಸ್ ಉಗ್ರರಿಗೆ ಜಾಗ ಒದಗಿಸುತ್ತದೆ. ಆ ಪರಿಸ್ಥಿತಿಯಲ್ಲಿ ಅಮೆರಿಕ ಅತ್ತ ಮುಖ ಹಾಕುವುದಿಲ್ಲ. ರಷ್ಯಾ ಮತ್ತು ಚೀನಾಕ್ಕೂ ಅಲ್ಲಿ ಅಸ್ಥಿರತೆ ಬೇಕಿಲ್ಲ. ಹಾಗಾಗಿ ತಾಲಿಬಾನ್ ವಿರೋಧಿಗಳಿಗೆ ಹೆಚ್ಚಿನ ಬಾಹ್ಯ ಪ್ರಚೋದನೆ ಸಿಗಲಾರದು.

ಈ ಎಲ್ಲಾ ಅಂಶಗಳನ್ನು ಗಮನಿಸಿ ಭಾರತ ತನ್ನ ಕಾಯಿಯನ್ನು ನಡೆಸುವುದು, ತಾಲಿಬಾನ್ ಜೊತೆ ಮಾತುಕತೆಗೆ ತೆರೆದುಕೊಳ್ಳುವುದು ಅನಿವಾರ್ಯ. ನಮ್ಮ ಹೂಡಿಕೆಗಳು ಒತ್ತಟ್ಟಿಗಿರಲಿ, ತಾಲಿಬಾನ್ ಸಂಪೂರ್ಣವಾಗಿ ಚೀನಾ ಮತ್ತು ಪಾಕಿಸ್ತಾನದ ಕೈಗೊಂಬೆಯಾಗುವುದನ್ನಾದರೂ ತಡೆಯಬೇಕಿದೆ.

ಒಟ್ಟಿನಲ್ಲಿ, ಚೀನಾದಿಂದ ಪಸರಿಸಿದ ಕೊರೊನಾ ವೈರಾಣುವಿನಂತೆ, ಭಯೋತ್ಪಾದನೆ ಎಂಬ ಸೋಂಕು ಪಾಕಿಸ್ತಾನದಲ್ಲಿ ಮೊಳೆತು ಜಗತ್ತನ್ನು ಆವರಿಸಿದೆ. ಕೊರೊನಾದ ರೂಪಾಂತರಿ ತಳಿಗಳಂತೆಯೇ ಅಲ್‌ಕೈದಾ, ಎಲ್‌ಇಟಿ, ಜೆಇಎಂ, ತಾಲಿಬಾನ್, ಐಎಸ್‌ನಂತಹ ಹತ್ತಾರು ತಳಿಗಳು ಹುಟ್ಟಿಕೊಂಡಿವೆ. ಕೊರೊನಾ ಸೋಂಕಿಗೆ ಪ್ರತಿಯಾಗಿ ಜಗತ್ತು ಲಸಿಕೆ ಕಂಡುಕೊಂಡಿದೆ, ಕಾಲ ಸರಿದಂತೆ ಸಮುದಾಯ ಪ್ರತಿರೋಧ ಬರಲಿದೆ, ವೈರಾಣು ನಿಸ್ತೇಜವಾಗಲಿದೆ ಎಂಬ ಆಶಾಭಾವವಿದೆ. ಆದರೆ ಜಿಹಾದಿ ಮನಃಸ್ಥಿತಿಗೆ ಮದ್ದು ಮರೀಚಿಕೆಯಾಗಿದೆ. ಕುಶಲ ರಾಜತಾಂತ್ರಿಕತೆಯಿಂದಷ್ಟೇ ಅಪಾಯವನ್ನು ದೂರ ಇಡಬಹುದು.

ಅಫ್ಗಾನಿಸ್ತಾನದಲ್ಲಿ ಆಗುತ್ತಿರುವ ಸದ್ಯದ ಬೆಳವಣಿಗೆಗಳು ಅಪಾಯಕಾರಿ ದ್ಯೂತದಂತೆ ಕಾಣುತ್ತಿವೆ. ಅಮೆರಿಕದ ಲೆಕ್ಕಾಚಾರ ಕೊಂಚ ಆಯತಪ್ಪಿದರೂ 9/11ಗಿಂತ ದೊಡ್ಡ ಮಟ್ಟದ ಅವಘಡಕ್ಕೆ ಜಗತ್ತು ಸಾಕ್ಷಿಯಾಗಬಹುದು. ಆ ಎಚ್ಚರ ನಮ್ಮನ್ನು ಜಾಗೃತವಾಗಿ ಇಡಬೇಕು.

ಚುರುಮುರಿ

ತೆರೆದ ಬಾಗಿಲು

• ಮಣ್ಣೆ ರಾಜು

‘**ಅಂತೂ** ಮಕ್ಕಳು ಮರಳಿ ಶಾಲೆಗೆ ಹೋಗುವಂತೆ ಆಯ್ತಲ್ಲಾ...’ ಶಂಕ್ರಿಗೆ ಸಮಾಧಾನ.

‘ಆದರೇನು, ಕಲಿಯಲು ಪಠ್ಯಪುಸ್ತಕ ಇಲ್ಲ, ನಲಿಯಲು ಗ್ರೂಪ್ ಗೇಮ್ಸ್ ಇಲ್ಲ, ಟೀಚರ್‌ಗಳು ಮಕ್ಕಳಿಗೆ ಅದೇನು ಹೇಳಿಕೊಡ್ತಾರೋ...’ ಸುಮಿಗೆ ಸಮಾಧಾನವಿಲ್ಲ.

‘ಪಠ್ಯಪುಸ್ತಕ ಬರುವವರೆಗೂ ಮಕ್ಕಳಿಗೆ ಕೊರೊನಾ ಪಾಠ ಹೇಳಿ ಅಂತ ಸರ್ಕಾರ ಸಿಲೆಬಸ್ ಕೊಟ್ಟಿರಬಹುದು. ಮಾಸ್ಕ್, ಅಂತರ ಕಾಯ್ದುಕೊಳ್ಳುವ ಬಗ್ಗೆ ಅರಿವು ಮೂಡಿಸೋದು, ಕೊರೊನಾದಿಂದ ಆಗಿರುವ ಪರಿಣಾಮದ ಬಗ್ಗೆ ಮಕ್ಕಳಿಗೆ ಬೋಧನೆ ಮಾಡಬಹುದು’.

‘ಹಾಜರಾತಿ ಕಡ್ಡಾಯವಿಲ್ಲವಂತೆ, ಮಕ್ಕಳು ಸ್ಕೂಲಿಗೆ ಬಾರದಿದ್ದರೂ ಕೇಳಬಾರದಂತೆ. ಯಾವಾಗ ಬೇಕಾದ್ರೂ ಬರಬಹುದು, ಹೋಗಬಹುದಂತೆ. ಜೆಡಿಎಸ್ ಪಕ್ಷದ ರೀತಿ ಶಾಲೆಯ ಪರಿಸ್ಥಿತಿ ತೆರೆದ ಬಾಗಿಲು ಆಗಿದೆ ಕಣ್ರೀ...’

‘ಜೆಡಿಎಸ್ ಪಕ್ಷವು ನಾಯಕರನ್ನು ಸಿದ್ಧಪಡಿಸುವ ತರಬೇತಿ ಶಾಲೆ ಇದ್ದಂಗೆ. ಇಲ್ಲಿ ಕಲಿತು ಬಲಿತ ನಾಯಕರು ಉನ್ನತ ಕಲಿಕೆ, ಪದವಿ ಪಡೆಯಲು ಬೇರೆ ಪಕ್ಷಗಳಿಗೆ ಹೊರಟರೆ, ಟಿ.ಸಿ. ಕೊಟ್ಟು ಬೀಳ್ಕೊಡುತ್ತೇವೆ ಅಂತ ಕುಮಾರಣ್ಣ ಹೇಳಿದ್ದಾರೆ’.

‘ಇಂಥಾ ಪ್ರತಿಭಾ ಪಲಾಯನದಿಂದ ಪಕ್ಷಕ್ಕೆ ನಷ್ಟ ಆಗೋದಿಲ್ವೇನ್ರೀ?’

‘ಆಗೋಲ್ಲವಂತೆ, ಜೆಡಿಎಸ್ ತನ್ನ ಕಾರ್ಯಕರ್ತರನ್ನು ನಂಬಿದೆಯಂತೆ, ನಾಯಕರನ್ನು ನೆಚ್ಚಿಕೊಂಡಿಲ್ಲವಂತೆ. ಬೇರೆ ಪಕ್ಷಗಳಿಗೆ ಇನ್ನಷ್ಟು ನಾಯಕರನ್ನು ತಯಾರಿಸಿ ಕಳಿಸುವ ಸಾಮರ್ಥ್ಯ ಇದೆಯಂತೆ’.

‘ಹೇಗೋ, ರಾಜಕೀಯ ಪಕ್ಷಗಳಲ್ಲಿ ಹೀಗೆ ‘ಕೊಟ್ಟು-ತಗೊಳ್ಳೋ’ ಸೌಹಾರ್ದ ಸಂಬಂಧವಿದ್ದರೆ, ಬಹುಮತ ಸಿಗದ ಸಂದರ್ಭದಲ್ಲಿ ಒಬ್ಬರಿಗೊಬ್ಬರು ಒಂದಾಗಿ ಆಡಳಿತ ಮಾಡಲು ಅನುಕೂಲವಾಗುತ್ತದೆ’.

‘ಹೌದು, ರಾಜಕೀಯ ಪಕ್ಷಗಳು ಕಿತ್ತಾಟ ಬಿಟ್ಟು ಹೀಗೆ ಅನ್ಯೋನ್ಯವಾಗಿ ಇರಲಿಬಿಡು’.

‘ಆದರೆ, ಕಾಲೆಳೆಯುವ, ಕೈ ಕೊಡುವ ಒಳಶತ್ರುಗಳ ಬಾಧೆಯಿಂದ ಪಕ್ಷದ ನಾಯಕರು ನರಳುತ್ತಿದ್ದಾರಂತೆ. ಹೈಕಮಾಂಡ್ ಮುಂದೆ, ವೇದಿಕೆ ಮೇಲೆ ಆತ್ಮೀಯತೆ ಪ್ರದರ್ಶಿಸುವ ‘ಫೋಟೊ ಫ್ರೆಂಡ್ಸ್’ ಎಲ್ಲ ಪಕ್ಷಗಳಲ್ಲೂ ಹೆಚ್ಚಾಗಿದ್ದಾರಂತೆ...’ ಎಂದಳು ಸುಮಿ.

ಸಂಗತ

ಬರುತ್ತಿದೆ... ಮರುಬಳಕೆಯ ಕಾಲ

ಶರೀರದಿಂದ ಹೊರಬೀಳುವ ತ್ಯಾಜ್ಯವೇ ಅನಿಲವಾಗಿ, ಕಾಗದವಾಗಿ, ಪಾನೀಯವಾಗಿ ಪರಿವರ್ತಿತವಾಗುವ ವ್ಯಾಪಕ ಸಾಧ್ಯತೆಯನ್ನು ವೈಜ್ಞಾನಿಕ ಜಗತ್ತು ನಮ್ಮ ಮುಂದಿಟ್ಟಿದೆ!

• ಪ.ರಾಮಕೃಷ್ಣ ಶಾಸ್ತ್ರಿ

ಜನಸಂಖ್ಯೆ ಹೆಚ್ಚುತ್ತಾ ಹೋದಂತೆ ನೈಸರ್ಗಿಕ ಸಂಪನ್ಮೂಲಗಳು ಬತ್ತಿ ಬರಡಾಗುತ್ತಿವೆ. ಹೆಚ್ಚಿನ ಸಂಖ್ಯೆಯಲ್ಲಿ ಬೀದಿಗಿಳಿಯುತ್ತಿರುವ ವಾಹನಗಳು ಭೂಮಿಯೊಳಗಿನ ತೈಲ ಕಣಜವನ್ನು ಬಹುಬೇಗ ಖಾಲಿ ಮಾಡಿದರೆ ಆಶ್ಚರ್ಯವಿಲ್ಲ. ಪ್ಲಾಸ್ಟಿಕ್ ಬಳಕೆಗೆ ಪರ್ಯಾಯ ಮಾರ್ಗವನ್ನು ಇನ್ನೂ ಹುಡುಕಿಲ್ಲ. ಪೆಟ್ರೋಲ್ ಬತ್ತಿದರೆ ಪ್ಲಾಸ್ಟಿಕ್ ತಯಾರಿಸಲು ಅನ್ಯ ಕಚ್ಚಾವಸ್ತು ಏನೆಂಬುದು ಗೊತ್ತಾಗಿಲ್ಲ. ಆದರೆ ಇಂದು ಬಳಸುತ್ತಿರುವ ಎಲ್ಲ ಇಂಧನದ ಬಾವಿಗಳು ಬರಿದಾದಾಗ ಕೈಕಟ್ಟಿ ಕೂಡಬಾರದೆಂಬ ದಿಸೆಯಲ್ಲಿ ವಿಜ್ಞಾನ ಜಗತ್ತು ಹೊಸ ಆವಿಷ್ಕಾರಗಳನ್ನು ಮಾಡುತ್ತ ಹೋಗುತ್ತಿದೆ. ಅದು ಪ್ರಮುಖವಾಗಿ ವಸ್ತುಗಳ ಮರುಬಳಕೆ. ಈ ದಿಸೆಯಲ್ಲಿ ಮನುಷ್ಯನ ಶೌಚವೂ ಪ್ರಾಮುಖ್ಯ ಪಡೆಯುತ್ತಿದೆ!

ದಕ್ಷಿಣ ಕೊರಿಯಾದ ಉಲ್ಸಾನ್ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಆ್ಯಂಡ್ ಟೆಕ್ನಾಲಜಿಯ ಹಾಸ್ಟೆಲ್ ನಿವಾಸಿ ವಿದ್ಯಾರ್ಥಿಗಳು ವಿಸರ್ಜಿಸಿದ ಶೌಚಕ್ಕೂ ತಿಂಗಳಿನ ಕೊನೆಗೆ ಗಮನಾರ್ಹ ಮೊತ್ತದ ಸಂಭಾವನೆ ಪಡೆಯುತ್ತಿದ್ದಾರೆ. ಹಾಗೆಯೇ ಮನೆಗಳಲ್ಲಿ ಶೌಚವು ಒಳಚರಂಡಿ ಕೊಳವೆಗಳ ಮೂಲಕ ಹರಿಯುವುದನ್ನು ತಪ್ಪಿಸಿ ಪ್ರತ್ಯೇಕವಾಗಿ ಇಲ್ಲಿಗೇ ಹರಿದುಬರುವ ವ್ಯವಸ್ಥೆ ಮಾಡಲಾಗಿದೆ.

ಅಲ್ಲಿ ವಿಜ್ಞಾನ ಕಟ್ಟಡದಲ್ಲಿ ತಂತ್ರಜ್ಞ ಜೇವಿನ್ ಚೋ ನೇತೃತ್ವದಲ್ಲಿ ಮನುಷ್ಯನ ಶೌಚದಿಂದ ಅಡುಗೆಗೆ ಮತ್ತು ವಾಹನ ಸಂಚಾರಕ್ಕೆ ಬಳಸುವ ಅನಿಲ ಉತ್ಪಾದನೆಯಾಗುತ್ತದೆ. ಕಡಿಮೆ ಬಂಡವಾಳದ ಸರಳ ತಂತ್ರಜ್ಞಾನದ ಮೂಲಕ ಹೊರಬರುವ ಅನಿಲ ಸಂಚರಿಸಲು ಇಡೀ ಕಟ್ಟಡದಲ್ಲಿ ಕೊಳವೆಗಳಿವೆ. ನೂರಾರು ವಿದ್ಯಾರ್ಥಿಗಳ ಅಡುಗೆಗೆ ಹಾಗೂ ದೀಪಗಳಿಗೆ ಇಲ್ಲಿ ಬಳಕೆಯಾಗುವುದು ಇದೇ ಅನಿಲ. ಫಿಲ್ಟರ್‌ನಲ್ಲಿ ಶುದ್ಧೀಕರಣಗೊಂಡು ಬರುವ ಕಾರಣ ಅನಿಲವು ಯಾವುದೇ ದುರ್ಗಂಧವನ್ನೂ ಸೂಸುವುದಿಲ್ಲ. ಪೆಟ್ರೋಲಿಯಂ ಅನಿಲದ ಹಾಗೆ ಅನಾಹುತದ ಸಂಭವವೂ ತೀರಾ ವಿರಳವಾಗಿದೆ.

ಶೌಚವು ಪ್ರತ್ಯೇಕಗೊಳ್ಳುವ ಕಾರಣ, ನಗರದಲ್ಲಿ ಹರಿಯುವ ಒಳಚರಂಡಿ ನೀರಿಗೂ ವಾಸನೆ ಇರುವುದಿಲ್ಲ. ಇದರಿಂದಾಗಿ ಅಡುಗೆ ಅನಿಲಕ್ಕೆ ತೆರುವ ಹಣದಲ್ಲಿ ಒಂದಂಶವನ್ನು ವಿಶ್ವವಿದ್ಯಾಲಯದ ಆಡಳಿತ ವರ್ಗ ಪ್ರತೀ ತಿಂಗಳೂ ವಿದ್ಯಾರ್ಥಿಗಳಿಗೆ ನೀಡುತ್ತಿದೆ.

ನಮ್ಮಲ್ಲಿ ಜಾನುವಾರುಗಳ ಸೆಗಣಿಯಿಂದ ಅಡುಗೆ ಅನಿಲ ಉತ್ಪಾದಿಸುತ್ತಿದ್ದೇವೆ. ಅದರ ಪ್ರಮಾಣ ಏರಿಕೆಯಲ್ಲಿ ರೈತರೂ ಆಸಕ್ತಿ ವಹಿಸದೆ ಮನೆ ಬಳಕೆಗೆ ಅನಿಲವನ್ನು ಹಣ ಕೊಟ್ಟು ತರುವುದುಂಟು. ದಕ್ಷಿಣ ಜರ್ಮನಿಯ ವರ್ಣಚಿತ್ರ ಕಲಾವಿದ ವರ್ನರ್ ಹರ್ಟ್ಸ್ ಹಸಿ ಸೆಗಣಿಯನ್ನು ಬಣ್ಣಗಳ ಬದಲಿಗೆ ಬಳಸಿ ಸುಂದರವಾದ ವರ್ಣಚಿತ್ರಗಳನ್ನು ರೂಪಿಸಬಹುದೆಂದು ತೋರಿಸಿಕೊಟ್ಟರು. ಅದಾದ ಬಳಿಕ ಭಾರತದಲ್ಲಿ ಕೂಡ ಸೆಗಣಿಯಿಂದ ಗೋಡೆಗಳಿಗೆ ಬಳಿಯುವ ಬಣ್ಣಗಳನ್ನು ತಯಾರಿಸುವ ಕಾರ್ಖಾನೆ ಆರಂಭಗೊಂಡಿದೆ. ಮಾಮೂಲಿ ಬಣ್ಣಗಳಲ್ಲಿ ಆರೋಗ್ಯಕ್ಕೆ ಹಾನಿಕರವಾದ ಸೀಸ ಬೆರೆತಿರುತ್ತದೆ. ಸೆಗಣಿಯ ಬಣ್ಣ ಅನಾರೋಗ್ಯಕರವಲ್ಲ ಎನ್ನುತ್ತಾರೆ ತಜ್ಞರು.

ದೇಶದ ಹಲವೆಡೆಗಳಲ್ಲಿ ಆನೆಗಳ ಅಭಯಾರಣ್ಯಗಳಿವೆ. ಸಸ್ಯಗಳನ್ನು ತಿಂದು ಆನೆ ವಿಸರ್ಜಿಸುವ ಅಗಾಧ ಪ್ರಮಾಣದ ಲದ್ದಿಯನ್ನು ಕೆಲವೆಡೆ ರೈತರು ಗೊಬ್ಬರವಾಗಿ ಕೃಷಿಗೆ ಬಳಸಲು ತೆಗೆದುಕೊಂಡು ಹೋಗುವುದು ಬಿಟ್ಟರೆ ಆರ್ಥಿಕವಾಗಿ ಸದ್ಬಳಕೆ ಮಾಡಿ ಕೊಳ್ಳುವ ಪ್ರಯತ್ನಗಳು ನಡೆದಂತೆ ಕಾಣುವುದಿಲ್ಲ. ಆದರೆ ವ್ಯರ್ಥವಾಗಿ ಹೋಗುವ ಲದ್ದಿಯನ್ನು ಮರು ಬಳಕೆ ಮಾಡಿ, ಬರೆಯುವ ಕಾಗದ ತಯಾರಿಸುವ ಶೋಧನೆ ಥಾಯ್ಲೆಂಡ್‌ನಲ್ಲಿ ನಡೆಯಿತು. ಈ ಮೂಲಕ ಅಲ್ಲೀಗ, ಗಮನಾರ್ಹ ಪ್ರಮಾಣದಲ್ಲಿ ಕಾಗದಕ್ಕಾಗಿ ಧರೆಗುರುಳುವ ಮರಗಳ ಸಂರಕ್ಷಣೆ ಸಾಧ್ಯವಾಗಿದೆ. ಇದರಿಂದ ಪ್ರೇರಿತವಾಗಿ ಸಿಂಹಳವೂ ಲದ್ದಿಯಿಂದ ಕಾಗದ ತಯಾರಿಸತೊಡಗಿದೆ. ಅದು ಪೂರ್ಣವಾಗಿ ಮನುಷ್ಯರ ಕೈಗಳಿಂದಲೇ ಸಿದ್ಧವಾಗುತ್ತಿದ್ದು ಹಲವರಿಗೆ ಉದ್ಯೋಗ ನೀಡಿದೆ.

ದಕ್ಷಿಣ ಆಫ್ರಿಕಾದ ಪೌಲಾ ವೆಸ್ಲೆ ದಂಪತಿ ಇನ್ನೊಂದು ಹೆಜ್ಜೆ ಮುಂದಿಟ್ಟಿದ್ದಾರೆ. ಅವರು ಆನೆ ಲದ್ದಿಯಿಂದ ಭಟ್ಟಿಯಿಳಿಸುತ್ತಿರುವ ಜಿನ್, ಬೆಲ್ಜಿಯಂ ಸೇರಿ ಜರ್ಮನಿಯಾದ್ಯಂತ ಪಾನಪ್ರಿಯರ ಮನಸೂರೆಗೊಂಡಿದೆ. ದಂಪತಿ ಶರೀರಶಾಸ್ತ್ರ ಮತ್ತು ಇಮ್ಯುನಾಲಜಿ ಪ್ರಾಧ್ಯಾಪಕರು. ತಮ್ಮ ನೂತನ ಶೋಧವು ಲದ್ದಿಯಿಂದ ತಯಾರಾಗಿದೆ ಎಂಬುದನ್ನು ಅವರು ರಹಸ್ಯವಾಗಿಟ್ಟಿಲ್ಲ. ಆದರೂ ಜಿನ್ ಬಹು ಬೇಡಿಕೆ ಪಡೆದಿದೆ. ಇನ್ನು ಬಾವಲಿಗಳು ತಂಗುವ ಗುಹೆಗಳಿಂದ ಸಂಗ್ರಹವಾಗುವ ಅಪಾರ ಪ್ರಮಾಣದ ಹಿಕ್ಕೆಗಳ ಪದರವು ಯೂರಿಯಾ ಗೊಬ್ಬರಕ್ಕಿಂತಲೂ ಅಧಿಕ ಅಮೋನಿಯಾ ಸತ್ವ ಪಡೆದಿರುವ ಗೊಬ್ಬರ ಎಂಬುದನ್ನು ವಿಜ್ಞಾನಿಗಳು ಪ್ರಮಾಣೀಕರಿಸಿದ್ದಾರೆ.

ಶತಕೋಟಿ ವರ್ಷಗಳಿಂದ ಭೂಮಿ ತನ್ನೊಡಲಿನಲ್ಲಿ ಸಂಗ್ರಹಿಸಿಟ್ಟಿದ್ದ ಖನಿಜಗಳು, ಅನಿಲಗಳು ಕೆಲವು ದಶಕಗಳ ಅವಧಿಯಲ್ಲಿ ಬಟ್ಟ ಬಯಲಾಗಿವೆ. ಪಟ್ಟಣಗಳ ವಿಸ್ತರಣೆಯು ನಿಸರ್ಗದತ್ತ ಮಳೆಕಾಡುಗಳನ್ನು ಮುಗಿಸಿದೆ. ಆರೋಗ್ಯಕ್ಕೆ ಮಾರಕವಾಗುವ ಪೆಟ್ರೋಲಿಯಂ ಬಳಕೆಗೆ ಅಂಟಿಕೊಂಡಿರುವ ದೈನಂದಿನ ಬದುಕು ಒಂದು ದಿನ ಆ ಸೌಲಭ್ಯ ಇಲ್ಲವೇ ಇಲ್ಲ ಎಂದಾದಾಗ ಏನು ಮಾಡಬಹುದೆಂಬುದು ಊಹೆಗೇ ಅತೀತವಾಗಿದೆ. ಇಂಥ ಸಂದರ್ಭ ಬಂದಾಗ, ಶರೀರದಿಂದ ಹೊರ ಬೀಳುವ ತ್ಯಾಜ್ಯವೇ ಅನಿಲ ಮೊದಲಾಗಿ ಪರಿವರ್ತಿತವಾಗಿ ಬದುಕನ್ನು ಮುನ್ನಡೆಸಲಿರುವ ವ್ಯಾಪಕ ಸಾಧ್ಯತೆಯನ್ನು ವೈಜ್ಞಾನಿಕ ಜಗತ್ತು ನಮ್ಮ ಮುಂದಿಟ್ಟಿದೆ. ಎಲ್ಲ ಹೇಸಿಗೆ, ಜುಗುಪ್ಸೆಗಳನ್ನೂ ಬದಿಗೊತ್ತಿ ಅದನ್ನು ಸ್ವಾಗತಿಸಲು ನಾವು ಸಿದ್ಧರಾಗಲೇಬೇಕಾಗಿದೆ.

ವಾಚಕರ ವಾಣಿ

ರೈತರಿಗೆ ನೆರವಾದ ಮಹಾನುಭಾವ

ಪಿ.ಎಂ.ಬಾಂಗಿಯವರ ಜನಪರ ಕಾಳಜಿ ಕುರಿತಾದ ಮಲ್ಲಿಕಾರ್ಜುನ ಹೆಗ್ಗಳಗಿ ಅವರ ಲೇಖನ ‘ಸರಳ ನಡೆಯ ಸೊಬಗು’ (ಸಂಗತ, ಆ. 30) ಓದಿದ ನನಗೆ, ಬಾಂಗಿಯವರ ಕಾರ್ಯವೊಂದು ನೆನಪಿಗೆ ಬಂತು. ಬಾಂಗಿಯವರು 1972ರಲ್ಲಿ ಜಮಖಂಡಿ ಭಾಗದ ಶಾಸಕರಾಗಿದ್ದರು. ಆಗ ದೇವರಾಜ ಅರಸು ಮುಖ್ಯಮಂತ್ರಿಯಾಗಿದ್ದರು. ಆ ವರ್ಷ ಈ ಪ್ರದೇಶ ಭೀಕರ ಬರಗಾಲಕ್ಕೆ ತುತ್ತಾಯಿತು. ಸಾಮಾನ್ಯವಾಗಿ ಬನಹಟ್ಟಿ, ರಬಕವಿ, ಹೊಸೂರ, ಚಿಮ್ಮಡ, ಜಗದಾಳ ಮತ್ತು ನಾವಲಗಿ ಊರುಗಳಲ್ಲಿನ ಬಾವಿಗಳೆಲ್ಲ ಡಿಸೆಂಬರ್ ತಿಂಗಳಲ್ಲೇ ಬತ್ತಿ ಹೋಗಿರುತ್ತಿದ್ದವು. ರೈತರ ಸ್ಥಿತಿ ಚಿಂತಾಜನಕವಾಗಿರುತ್ತಿತ್ತು. ಇದನ್ನು ಮನಗಂಡಿದ್ದ ಬಾಂಗಿಯವರು ಈ ಊರುಗಳ ಮಧ್ಯದಲ್ಲಿ ಕೆರೆ ನಿರ್ಮಾಣಕ್ಕೆ ಒಂದು ಪ್ರಶಸ್ತವಾದ ಸ್ಥಳ ಗುರುತಿಸಿ, ಮುಖ್ಯಮಂತ್ರಿಯವರ ಒಪ್ಪಿಗೆ ಪಡೆದುಕೊಂಡು ಕಾರ್ಯೋನ್ಮುಖರಾದರು.

ಕೆರೆ ನಿರ್ಮಾಣದ ಜವಾಬ್ದಾರಿಯನ್ನು ನಿರುದ್ಯೋಗಿ ತರುಣ ಎಂಜಿನಿಯರ್ ಒಬ್ಬರಿಗೆ ವಹಿಸಿಕೊಟ್ಟರು. ಕೆಲಸ ಪ್ರಾಮಾಣಿಕ ರೀತಿಯಲ್ಲಿ ನಡೆದು ₹ 6 ಲಕ್ಷ ವೆಚ್ಚದಲ್ಲಿ, ವರ್ಷೋಪ್ಪತ್ತಿನಲ್ಲಿ ಕೆರೆ ನಿರ್ಮಾಣಗೊಂಡಿತು. ಮುಂಬರುವ ದಿನಗಳಲ್ಲಿ ಸುಮಾರು ನಾಲ್ಕುನೂರು ಬಾವಿಗಳಲ್ಲಿ ಮೇ ಮಾಸದವರೆಗೂ ನೀರು ತುಂಬಿಕೊಂಡಿರಲಾರಂಭಿಸಿತು. ಇದರಿಂದಾಗಿ ಸಾವಿರಾರು ರೈತರು ಇಂದಿಗೂ ಸಂತೃಪ್ತಿಯ ಜೀವನ ನಡೆಸುತ್ತಿದ್ದಾರೆ. ಈ ಕೃತಜ್ಞ ಕೃಷಿಕರು ಈ ಕೆರೆಗೆ ‘ಪಿ.ಎಂ.ಬಾಂಗಿ ಸರೋವರ’ ಎಂದು ನಾಮಕರಣ ಮಾಡಲು ಯೋಜನೆ ಹಾಕಿಕೊಂಡಿದ್ದಾರೆ.

ಜಯವಂತ ಕಾಡದೇವರ, ಬನಹಟ್ಟಿ

ದಿಶಾ ಕಾಯ್ದೆ ಮಾದರಿಯಾಗಲಿ

ಮೈಸೂರಿನಲ್ಲಿ ಇತ್ತೀಚೆಗೆ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣವು ನಾಗರಿಕ ಸಮಾಜ ತಲೆತಗ್ಗಿಸುವಂತೆ ಮಾಡಿದೆ. ದೇಶದಲ್ಲಿ ಅತ್ಯಾಚಾರ ಪ್ರಕರಣಗಳು ಮೇಲಿಂದ ಮೇಲೆ ನಡೆಯುತ್ತಲೇ ಇವೆ. ಇಂತಹ ಘಟನೆಗಳು ಸಂಭವಿಸಿದಾಗ ವಿಚಾರಣೆ ನಡೆದು ಆರೋಪಿಗಳಿಗೆ ಶಿಕ್ಷೆ ಪ್ರಕಟವಾಗಲು ಸುಮಾರು ವರ್ಷಗಳು ತೆಗೆದುಕೊಳ್ಳುತ್ತಿರುವುದು ವಿಪರ್ಯಾಸ.

ನಮ್ಮ ನೆರೆಯ ರಾಜ್ಯ ಆಂಧ್ರಪ್ರದೇಶದ ಸರ್ಕಾರವು ಹೈದರಾಬಾದ್‌ನಲ್ಲಿ 2019ರಲ್ಲಿ ವೈದ್ಯಕೀಯ ವಿದ್ಯಾರ್ಥಿನಿಯೊಬ್ಬಳ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ಇಂತಹ ಘಟನೆಗಳು ಮರುಕಳಿಸದಂತೆ ತಡೆಯಲು ರಾಜ್ಯದಲ್ಲಿ ದಿಶಾ ಕಾಯ್ದೆ– 2019 ಅನ್ನು ಜಾರಿ ಗೊಳಿಸಿದೆ. ಈ ಮೂಲಕ ಅಂತಹ ಅಪರಾಧಗಳ ತ್ವರಿತ ವಿಚಾರಣೆಗೆ ಅವಕಾಶ ಕಲ್ಪಿಸಿದೆ. ತನಿಖೆ, ಆರೋಪಪಟ್ಟಿ ಸಲ್ಲಿಕೆ, ಸಾಕ್ಷ್ಯಾಧಾರ ಸಂಗ್ರಹವೂ ಒಳಗೊಂಡಂತೆ 21 ದಿನಗಳ ಕಾಲಾವಧಿಯಲ್ಲಿ ತೀರ್ಪು ಹೊರಬರಲು ಅನುವಾಗಿಸುವುದು ಈ ಕಾಯ್ದೆಯ ಉದ್ದೇಶವಾಗಿದೆ. ತ್ವರಿತಗತಿಯಲ್ಲಿ ವಿಚಾರಣೆ ಪೂರ್ಣಗೊಂಡು ಆರೋಪಿಗಳನ್ನು ಕಠಿಣ ಶಿಕ್ಷೆಗೆ ಗುರಿಪಡಿಸುವ ಮೂಲಕ ಸಮಾಜದಲ್ಲಿ ಮತ್ತೆ ಇಂತಹ ಅಮಾನವೀಯ ಘಟನೆಗಳು ನಡೆಯದಂತೆ ಹಾಗೂ ಅಂಥ ಕಾಮುಕರಿಗೆ ಎಚ್ಚರಿಕೆ ಗಂಟೆಯಂತೆ ಇರುವ ಈ ಕಾಯ್ದೆಯನ್ನು ಕರ್ನಾಟಕವೂ ಸೇರಿದಂತೆ ದೇಶದ ಇತರ ರಾಜ್ಯಗಳು ಮಾದರಿಯಾಗಿ ಸ್ವೀಕರಿಸಿ ಅನುಷ್ಠಾನಗೊಳಿಸಬೇಕು.

ಚನ್ನಕೇಶವ ಜಿ.ಕೆ., ತರೀಕೆರೆ

ಅರ್ಜಿಯಿಲ್ಲದೇ ಪ್ರಶಸ್ತಿ: ಸ್ವಾಗತಾರ್ಹ ನಿರ್ಧಾರ

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಈ ವರ್ಷ ಅರ್ಜಿ ಹಾಕದಿದ್ದರೂ ಅರ್ಹ ಸಾಧಕರನ್ನು ಗುರುತಿಸಿ ಪ್ರಶಸ್ತಿ ನೀಡಲು ನಿರ್ಧರಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಸುನಿಲ್ ಕುಮಾರ್ ಅವರು ಹೇಳಿರುವುದು ಸ್ವಾಗತಾರ್ಹ. ನಿಜವಾದ ಸಾಧಕರು ಪ್ರಶಸ್ತಿಗಾಗಿ ಅರ್ಜಿ ಹಾಕಲು ಮುಜುಗರದಿಂದ ಹಿಂದೇಟು ಹಾಕುತ್ತಾರೆ. ಕೆಲವರು ಅರ್ಜಿ ಹಾಕಿ, ಲಾಬಿ ಮಾಡಿ ಪ್ರಶಸ್ತಿ ಗಿಟ್ಟಿಸಿಕೊಳ್ಳುತ್ತಾರೆ. ಹಾಗಾಗಿ ಎಷ್ಟೋ ಜನ ಅರ್ಹರು ಈ ಪ್ರಶಸ್ತಿಯಿಂದ ವಂಚಿತರಾಗಿದ್ದಾರೆ. ಈ ವರ್ಷವಾದರೂ ಸಚಿವರ ಈ ನಿರ್ಧಾರ ಕಟ್ಟುನಿಟ್ಟಾಗಿ ಜಾರಿಗೆ ಬಂದು ಅರ್ಹರು ಪ್ರಶಸ್ತಿ ಪಡೆಯುವಂತಾಗಲಿ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು, ಕೊಪ್ಪ

ಹೆಚ್ಚು ದಂಡ ವಿಧಿಸುವ ಅಧಿಕಾರ ಅಗತ್ಯ

ಕೆಲವು ಐಎಎಸ್ ಅಧಿಕಾರಿಗಳು, ಇಲಾಖಾ ಕಾರ್ಯದರ್ಶಿಗಳು, ನಿಗಮಗಳ ನಿರ್ದೇಶಕರು ಸೇರಿ ಉನ್ನತ ಹುದ್ದೆಯಲ್ಲಿರುವ ಅನೇಕರು ಅದೇಕೋ ಕನ್ನಡವೆಂದರೆ ಮುಖ ಕಿವುಚುತ್ತಾರೆ. ಅಧಿಕಾರ ಸ್ವೀಕರಿಸಿದ ಆರು ತಿಂಗಳೊಳಗೆ ಕನ್ನಡ ಕಲಿಯಬೇಕೆಂಬ ಸರ್ಕಾರಿ ಆದೇಶಕ್ಕೆ ಇವರಲ್ಲಿ ಬೆಲೆಯೇ ಇಲ್ಲದಂತಾಗಿದೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ ಅವರು ಸುಮಾರು 75ಕ್ಕೂ ಹೆಚ್ಚು ಅಧಿಕಾರಿಗಳಿಗೆ ನೆನಪೋಲೆ ಕಳಿಸಿದ್ದು, ಯಾರೊಬ್ಬರೂ ಉತ್ತರಿದೆ ಕಸದ ಬುಟ್ಟಿಗೆ ಹಾಕಿದ್ದಾರಂತೆ. ಅವರ ಮೇಲಧಿಕಾರಿಗಳಿಗೆ ಹೇಳಿದರೆ ಅವರೂ ಕಿವಿಗೆ ಹಾಕಿಕೊಂಡಿಲ್ಲವಂತೆ. ಇದಕ್ಕೂ ಮೀರಿ ಹೆಚ್ಚಿನ ಅಧಿಕಾರವಿಲ್ಲದ ಪ್ರಾಧಿಕಾರ ಅಸಹಾಯಕವಾಗಿದೆ. ಸರ್ಕಾರವು ಸುಗ್ರೀವಾಜ್ಞೆಯ ಮೂಲಕ, ಪ್ರಾಧಿಕಾರಕ್ಕೆ ಲಕ್ಷಗಟ್ಟಲೆ ದಂಡ ವಿಧಿಸುವ ಅಧಿಕಾರ ನೀಡಿ ಕನ್ನಡದ ಅಸ್ಮಿತೆಯನ್ನು ಉಳಿಸಬೇಕು.

ಕೆ.ಶ್ರೀನಿವಾಸ ರಾವ್, ಹರಪನಹಳ್ಳಿ

ನೆರವು ನೀಡಿ

ನನ್ನ ತಮ್ಮ ಸುನೀಲ್ ವಿ. (24) ಎಂ.ಎಸ್.ಡಬ್ಲ್ಯು. ಸ್ನಾತಕೋತ್ತರ ಪದವೀಧರನಾಗಿದ್ದು, ಮೂರು ತಿಂಗಳಿನಿಂದ ಖಾಸಗಿ ಕಂಪನಿಯೊಂದರಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದಾನೆ. ಹೃದಯ ಸಂಬಂಧಿ ಕಾಯಿಲೆಯಿಂದ ನರಳುತ್ತಿರುವ ಅವನು ನಾರಾಯಣ ಹೃದಯಾಲಯದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಅದಕ್ಕಾಗಿ ಈಗಾಗಲೇ ₹ 7 ಲಕ್ಷ ವ್ಯಯವಾಗಿದೆ. ಇನ್ನೂ ಹೆಚ್ಚಿನ ಚಿಕಿತ್ಸೆಗೆ ₹ 6.28 ಲಕ್ಷದ ಅಗತ್ಯವಿದೆ ಎಂದು ವೈದ್ಯರು ತಿಳಿಸಿದ್ದಾರೆ.

ಆರ್ಥಿಕ ಸಂಕಷ್ಟದಲ್ಲಿರುವ ನಮಗೆ ದಾನಿಗಳು ಧನಸಹಾಯ ನೀಡಿ ಸಹಕರಿಸಬೇಕು. ಬ್ಯಾಂಕ್ ಖಾತೆ ವಿವರ: ಸುಷ್ಮಿತಾ ವಿ., ಕೆನರಾ ಬ್ಯಾಂಕ್, ಖಾತೆ ಸಂಖ್ಯೆ– 04342210011291, IFSC- CNRB0002885, ಗೂಗಲ್ ಪೇ/ ಫೋನ್ ಪೇ– 9844859033

ಸುಷ್ಮಿತಾ ವಿ., ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಖರೀದಿ ಶಕ್ತಿಗೆ ಆರ್ಥಿಕ ಸಾಮರ್ಥ್ಯವೇ ಮಾನದಂಡವಲ್ಲ

ಬಂಡವಾಳದ ಜಾಗತಿಕ ಚಲನೆಗೆ ಮುಕ್ತ ಅವಕಾಶ ನೀಡುವ ಮತ್ತು ಖಾಸಗಿ ಬಂಡವಾಳದ ನಿಯಂತ್ರಣಗಳನ್ನು ಸಡಿಲಗೊಳಿಸುವ ಆರ್ಥಿಕ ನೀತಿಗಳನ್ನು ಉದಾರೀಕರಣ ನೀತಿಗಳೆಂದು ವ್ಯಾಖ್ಯಾನಿಸಲಾಗಿದೆ. ಭಾರತದಲ್ಲಿ ಉದಾರೀಕರಣ ಪ್ರಕ್ರಿಯೆ ಆರಂಭವಾಗಿ 30 ವರ್ಷಗಳಾದವು. ಇವು ನಮ್ಮ ಸಮಾಜದ ಮೇಲೆ ಸಕಾರಾತ್ಮಕಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ನಕಾರಾತ್ಮಕ ಪರಿಣಾಮಗಳನ್ನು ಬೀರಿರಬಹುದು. ಉದಾರೀಕರಣದ ಪರಿಣಾಮಗಳನ್ನು ವಿಮರ್ಶಿಸಲು ಇದು ಸಕಾಲ. ಹಾಗೆಂದು ಈ ಲೇಖನದ ಉದ್ದೇಶ ಉದಾರೀಕರಣದ ಪರಿಣಾಮಗಳನ್ನು ವಿಮರ್ಶಿಸುವುದಲ್ಲ. ಅದರ ಬದಲು ಉದಾರೀಕರಣ ಪ್ರಕ್ರಿಯೆಯ ಪರಿಣಾಮಗಳನ್ನು ವಿಶ್ಲೇಷಿಸುವಾಗ ಪರಿಗಣಿಸಬಹುದಾದ ಕೆಲವೊಂದು ಅಂಶಗಳನ್ನು ಗುರುತಿಸುವುದು ಮಾತ್ರ.

• ಎಂ.ಚಂದ್ರ ಪೂಜಾರಿ

1. ಉದಾರವಾದಿ ಚಿಂತನೆಗಳು: ಮುಕ್ತ ಮಾರುಕಟ್ಟೆ ಕಲ್ಪನೆ ಪಶ್ಚಿಮದ ಕೊಡುಗೆ. ಪಶ್ಚಿಮದಲ್ಲಿ ಮಾರುಕಟ್ಟೆ ಆರ್ಥಿಕ ವ್ಯವಸ್ಥೆ ಕೇವಲ ಆರ್ಥಿಕ ಪರಿವರ್ತನೆಯಾಗಿರಲಿಲ್ಲ. ನಿರ್ದಿಷ್ಟ ಚಾರಿತ್ರಿಕ ಸಂದರ್ಭದಲ್ಲಿ ನಡೆದ ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ ಪರಿವರ್ತನೆಗಳು ಮುಕ್ತ ಮಾರುಕಟ್ಟೆ ಕಲ್ಪನೆಯನ್ನು ಬಲಗೊಳಿಸಿವೆ. ಜ್ಞಾನ ಉತ್ಪಾದನೆಯಲ್ಲಿ ಚರ್ಚ್‌ಗಿದ್ದ ಏಕಸ್ವಾಮ್ಯವನ್ನು ಜ್ಞಾನೋದಯ ಚಳವಳಿ ಅಲ್ಲಗಳೆದು ವಿಜ್ಞಾನವನ್ನು ಮಾನ್ಯ ಮಾಡಿತು. ಚರ್ಚ್‌ನ ಕಪಿಮುಷ್ಟಿಯಿಂದ ವ್ಯಕ್ತಿಯನ್ನು ಬಿಡುಗಡೆಗೊಳಿಸಿತು. ಫ್ರೆಂಚ್ ಕ್ರಾಂತಿ ಬೌದ್ಧಿಕ ಹಿನ್ನೆಲೆ ಒದಗಿಸಿತು. ಫ್ರೆಂಚ್ ಕ್ರಾಂತಿ ಜನಸಾಮಾನ್ಯರ ಹಕ್ಕಿನ ಕಲ್ಪನೆಯನ್ನು ಮುಂಚೂಣಿಗೆ ತಂದಿತು. ವಿಜ್ಞಾನ ಮತ್ತು ಧರ್ಮಗಳ ಸಂಘರ್ಷಗಳ ಜೊತೆಗೆ ವ್ಯಕ್ತಿ ಸ್ವಾತಂತ್ರ್ಯಕ್ಕೆ ಮಹತ್ವ ನೀಡುವ ಉದಾರವಾದಿ ರಾಜಕೀಯ ಚಿಂತನೆಗಳು ಮುಂಚೂಣಿಗೆ ಬಂದವು. ವ್ಯಕ್ತಿಯು ಸಮಾಜದ ಕೇಂದ್ರ ಮತ್ತು ವ್ಯಕ್ತಿ ಸ್ವಾತಂತ್ರ್ಯ ಮತ್ತು ಸ್ವಾಯತ್ತೆಯ ಬುನಾದಿ ಮೇಲೆ ಕಟ್ಟಲ್ಪಡುವ ಸಮಾಜ ಉತ್ತಮ ಸಮಾಜವೆಂದು ಉದಾರವಾದ ಹೇಳುತ್ತದೆ. ಈ ಎಲ್ಲ ಸಾಮಾಜಿಕ, ಸಾಂಸ್ಕೃತಿಕ ಬದಲಾವಣೆಗಳು ಮಾರುಕಟ್ಟೆ ನಿರ್ದೇಶಿತ ಅಭಿವೃದ್ಧಿಗೆ ಹಿನ್ನೆಲೆಯಾಗಿ ಕೆಲಸ ಮಾಡಿವೆ.

2. ಪಾಶ್ಚಿಮಾತ್ಯ ಪರಂಪರೆ: ಪಶ್ಚಿಮದ ಇಂತಹ ಪರಂಪರೆಯೂ ಭಾರತದಲ್ಲಿ ಮುಕ್ತ ಮಾರುಕಟ್ಟೆ ಆರ್ಥಿಕ ನೀತಿಗಳು ಜಾರಿಗೆ ಬಂದ ಸಂದರ್ಭದ ಸಾಮಾಜಿಕ, ಸಾಂಸ್ಕೃತಿಕ ಪರಿಸರಕ್ಕೂ ಏನಾದರೂ ಸಂಬಂಧ ಇದೆಯೇ? ಭಾರತದಲ್ಲಿ ಎಲ್ಲ ಹಿನ್ನೆಲೆಯ ಆರ್ಥಿಕ ನೀತಿಗಳನ್ನು ಸಮರ್ಥಿಸುವುದರ ಮೇಲಿದೆ. ಆರ್ಥಿಕ ಉದಾರೀಕರಣವು ಬಯಸುವ ವ್ಯಕ್ತಿ ಸ್ವಾತಂತ್ರ್ಯಕ್ಕೆ ಸಂಪೂರ್ಣ ವಿರುದ್ಧವಾದ ಸಾಮಾಜಿಕ, ಸಾಂಸ್ಕೃತಿಕ ಪರಿಸರ ನಮ್ಮಲ್ಲಿದೆ. ಹದಿನಾರನೇ ಶತಮಾನದಲ್ಲಿ ಪಶ್ಚಿಮ ಯುರೋಪಿನಲ್ಲಿದ್ದಂತೆ ನಮ್ಮಲ್ಲೂ ಬಹುತೇಕ ಮಠಮಂದಿರಗಳು (ಮಸೀದಿ, ಚರ್ಚ್‌ಗಳನ್ನು ಸೇರಿಸಿಕೊಂಡು) ಬಲಾಢ್ಯರ ಪರವೇ ಇವೆ. ನಮ್ಮಲ್ಲಿ ಒಂದೊಂದು ಜಾತಿ, ಧರ್ಮಕ್ಕೂ ಪ್ರತ್ಯೇಕ ಮಠಮಂದಿರಗಳಿವೆ ಮತ್ತು ಪ್ರತಿ ಜಾತಿ, ಧರ್ಮದ ಮಠಮಂದಿರಗಳು ಆಯಾಯ ಜಾತಿ, ಧರ್ಮದ ಬಲಾಢ್ಯರಪರ ಇವೆ. ಇವುಗಳ ಬಲಾಢ್ಯಪರತೆ ಬಿಡಿಬಿಡಿಯಾಗಿರುವುದರಿಂದ ಇಡಿಯಾದ ಬಲಾಢ್ಯಪರತೆ ಗೋಚರಿಸುತ್ತಿಲ್ಲ. ಈ ಮಠಮಂದಿರಗಳು ಸಾಂಸ್ಕೃತಿಕ ಸ್ವಾಯತ್ತೆಯ ಹೆಸರಲ್ಲಿ ವ್ಯಕ್ತಿ ಸ್ವಾತಂತ್ರ್ಯವನ್ನು ಸದಾ ನಿರಾಕರಿಸುತ್ತಿವೆ.

ಪಶ್ಚಿಮದಲ್ಲಿ ವಿಜ್ಞಾನ ಮುಂಚೂಣಿಗೆ ಬರುವುದರೊಂದಿಗೆ ಧರ್ಮದ ಪ್ರಾಬಲ್ಯವನ್ನು ಪ್ರಶ್ನಿಸುವ ಪ್ರವೃತ್ತಿ ಬೆಳೆಯಿತು. ನಮ್ಮಲ್ಲೂ ದೊಡ್ಡ ಸಂಖ್ಯೆಯಲ್ಲಿ ವಿಜ್ಞಾನಿಗಳಿದ್ದಾರೆ ಮತ್ತು ವಿಜ್ಞಾನವೂ ಇದೆ. ಆದರೆ, ಮಠಮಂದಿರಗಳ ಬಲಾಢ್ಯಪರ ಧೋರಣೆಯನ್ನು ಪ್ರಶ್ನಿಸುವ ಮನೋಧರ್ಮ ಬೆಳೆಯಲೇ ಇಲ್ಲ. ಅದರ ಬದಲು ಆಧುನಿಕ ಸರಕುಸೇವೆಗಳ ಅನುಭೋಗ ಮತ್ತು ಪಾಳೇಗಾರಿಕೆ ಮನೋಧರ್ಮ ಕಾಯುವುದು ಮಾಡುತ್ತಿವೆ. ಇಂತಹ ಸಾಂಸ್ಕೃತಿಕ ಪರಿಸರವನ್ನು ಬದಲಾಯಿಸುವ ಸಾಧ್ಯತೆ ರಾಜಕೀಯಕ್ಕಿದೆ. ಆದರೆ, ಇಂತಹ ಸಂಕುಚಿತ ಸಾಂಸ್ಕೃತಿಕ ಪರಿಸರವನ್ನು ಬದಲಾಯಿಸುವ ಬದಲು ಇವನ್ನು ತಮ್ಮ ತಕ್ಷಣದ ರಾಜಕೀಯ ಲಾಭಕ್ಕೆ ಬಳಸಿಕೊಳ್ಳಲು ರಾಜಕೀಯ ಪಕ್ಷಗಳು ಪೈಪೋಟಿ ನಡೆಸುತ್ತಿವೆ. ಹೀಗೆ ನಮ್ಮ ವಿಶಿಷ್ಟ ಸಾಮಾಜಿಕ ಪರಿಸರ ಚರಿತ್ರೆಯಿಂದ ಬಂದ ಅಸ್ಮಿತೆಗಳನ್ನು, ಮೇಲುಕೀಳುಗಳನ್ನು, ನ್ಯಾಯ ಅನ್ಯಾಯದ ಕಲ್ಪನೆಗಳನ್ನು ಮತ್ತು ಅಭಿವೃದ್ಧಿ-ಅನಭಿವೃದ್ಧಿ ಕಲ್ಪನೆಗಳನ್ನು ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಮುಂದುವರಿಸುತ್ತಿವೆ. ಇಂತಹ ಅರೆ ಪರಿವರ್ತಿತ ಮುಂದುವರಿದ ಆರ್ಥಿಕ ಪ್ರಗತಿಗೆ ಅತಿ ಅವಶ್ಯವಿರುವ ಸಾಮಾಜಿಕ ನ್ಯಾಯದ ಕಲ್ಪನೆಗಳನ್ನು, ಹೊಸ ಅವಕಾಶಗಳನ್ನು ಜೀರ್ಣಿಸಿಕೊಳ್ಳುವ ಜನರ ಸಾಮರ್ಥ್ಯಗಳನ್ನು, ಪರಸ್ಪರ ನಂಬಿಕೆ ಮತ್ತು ಸಹಕಾರಗಳನ್ನು ಮತ್ತು ಸರಕಾರದ ಪಾತ್ರವನ್ನು ಗಾಢವಾಗಿ ಪ್ರಭಾವಿಸುತ್ತಿವೆ.

3. ಸಾಮಾಜಿಕ ನ್ಯಾಯ: ಉದಾರೀಕರಣ ನೀತಿಗಳ ಆರಂಭದ ದಿನಗಳಲ್ಲಿ ಮತ್ತು ನಂತರ ಸಾಮಾಜಿಕ ನ್ಯಾಯದ ಕಲ್ಪನೆ ಮಹತ್ತರ ಬದಲಾವಣೆ ಕಂಡಿದೆ. ಆರಂಭದ ದಿನಗಳಲ್ಲಿ ಖರೀದಿಸುವ ಶಕ್ತಿ ಇಲ್ಲದ ತಳಸ್ತರದ ಜನರ ಆಸಕ್ತಿಯನ್ನು ರಕ್ಷಿಸುವ ಗಂಭೀರ ಕ್ರಮಗಳಿದ್ದವು. ಸ್ಥಳೀಯ ಸಂಸ್ಥೆಗಳನ್ನು ಬಲಪಡಿಸುವುದಕ್ಕಾಗಿ ಸಂವಿಧಾನದ 73 ಮತ್ತು 74ನೇ ತಿದ್ದುಪಡಿ, ಉದ್ಯೋಗ ಖಾತರಿ ಯೋಜನೆ, ಮಾಹಿತಿ ಹಕ್ಕು ಕಾಯ್ದೆ, ಶಿಕ್ಷಣದ ಹಕ್ಕು ಕಾಯ್ದೆ, ಆಹಾರ ಭದ್ರತಾ ಕಾಯ್ದೆ, ಬುಡಕಟ್ಟುಗಳ ಹಕ್ಕುಗಳನ್ನು ರಕ್ಷಿಸಲು ಅರಣ್ಯ ಹಕ್ಕು ಕಾಯ್ದೆ, ಕೃಷಿಕರ ಭೂಹಕ್ಕುಗಳನ್ನು ರಕ್ಷಿಸಲು ಭೂಸ್ವಾಧೀನ ಕಾಯ್ದೆ ಇತ್ಯಾದಿಗಳ ಮೂಲಕ ತಳಸ್ತರದ ಆಸಕ್ತಿಯನ್ನು ರಕ್ಷಿಸುವ ಪ್ರಯತ್ನಗಳಿದ್ದವು. ಆದರೆ ಕಾಲಕ್ರಮೇಣ ಬಲಾಢ್ಯರ ಆಸಕ್ತಿಗಳು ಆದ್ಯತೆ ಪಡೆದು ತಳಸ್ತರದ ಜನರ ಮತ್ತು ಸಮುದಾಯಗಳ ಆಸಕ್ತಿಗಳು ಹಿನ್ನೆಲೆಗೆ ಸರಿದವು. ಭೂಸ್ವಾಧೀನ ಕಾಯ್ದೆಗೆ ತಿದ್ದುಪಡಿ, ಬಲಾಢ್ಯ ಸಮುದಾಯಗಳ ಮೀಸಲಾತಿ ಹೋರಾಟಗಳು ಮತ್ತು ಅವರನ್ನು ತೃಪ್ತಿಪಡಿಸಲು ಜಾರಿಗೆ ತಂದ ಆರ್ಥಿಕ ನೆಲೆಯ ಮೀಸಲಾತಿ, ಅವಶ್ಯಕ ಸರಕುಸೇವೆಗಳ ಕಾಯ್ದೆ ತಿದ್ದಪಡಿ, ಪರೋಕ್ಷ ತೆರಿಗೆಯನ್ನು ಹೆಚ್ಚಿಸುವ ಸರಕುಸೇವೆಗಳ ತೆರಿಗೆ ಇವೆಲ್ಲವೂ ಈ ಸಾಲಿನಲ್ಲಿ ನೋಡಬಹುದಾದ ಕ್ರಮಗಳು.

ಅಂದರೆ, ಎಲ್ಲರನ್ನೂ ಸಮನಾಗಿ ನೋಡುವುದು ಮತ್ತು ಎಲ್ಲವನ್ನು ಎಲ್ಲರಿಗೂ ಸಮಾನವಾಗಿ ಹಂಚುವುದೆನ್ನುವ ಅರ್ಥದಲ್ಲಿ ಸಾಮಾಜಿಕ ನ್ಯಾಯವನ್ನು ನಿರ್ವಚಿಸಲಾಯಿತು. ಆದರೆ ನಮ್ಮಂತಹ ಅಸಮಾನ ಸಮಾಜದಲ್ಲಿ ಎಲ್ಲವನ್ನು ಎಲ್ಲರಿಗೆ ಸಮನಾಗಿ ಹಂಚಿದರೆ ಸಮಾನತೆ ಹೆಚ್ಚುವುದಿಲ್ಲ; ಅಸಮಾನತೆ ಹೆಚ್ಚುತ್ತದೆ. ಅಸಮಾನತೆ ಹೆಚ್ಚಿದಂತೆ ಅಭಿವೃದ್ಧಿ ಅವಕಾಶಗಳನ್ನು ಬಳಸಿಕೊಳ್ಳುವ ತಳಸ್ತರದ ಜನರ ಸಾಮರ್ಥ್ಯ ಕುಗ್ಗುತ್ತಾ ಹೋಗುತ್ತದೆ. ಇದಕ್ಕೆ ಉತ್ತಮ ಉದಾಹರಣೆ ಕೋವಿಡ್ -19 ಸಾಂಕ್ರಾಮಿಕದ ಪರಿಣಾಮ. ಕೋವಿಡ್-19 ಎಲ್ಲರನ್ನೂ ಕಾಡಿದೆ.

ಆದರೆ ತಳಸ್ತರದ ಜನರನ್ನು ಅತಿ ಹೆಚ್ಚು ಕಾಡಿದೆ. ಕೋವಿಡ್ ಹೊಡೆತದಿಂದ ಬಸವಳಿದ ಅರ್ಥ ವ್ಯವಸ್ಥೆಯನ್ನು ಪುನಶ್ಚೇತನಗೊಳಿಸಲು ₹26 ಲಕ್ಷ ಕೋಟಿ ಮೊತ್ತದ ಉತ್ತೇಜನ ಪ್ಯಾಕೇಜ್ ಅನ್ನು ಸರ್ಕಾರ ಘೋಷಣೆ ಮಾಡಿದೆ. ಈ ₹26 ಲಕ್ಷ ಕೋಟಿಯಲ್ಲಿ ಕೆಲವು ಸಾವಿರ ಕೋಟಿ ಕೂಡ ತಳಸ್ತರದ ಜನರ ಖರೀದಿಸುವ ಸಾಮರ್ಥ್ಯ ವೃದ್ಧಿಸಲು ನೇರ ಬಳಕೆಯಾಗಲಿಲ್ಲ.

4. ಮಾರುಕಟ್ಟೆಯಲ್ಲಿ ಪಾಲುಗೊಳ್ಳುವ ಸಾಮರ್ಥ್ಯ: ಮಾರುಕಟ್ಟೆಯಲ್ಲಿ ಪಾಲುಗೊಳ್ಳುವ ಸಾಮರ್ಥ್ಯ ಕೇವಲ ಆರ್ಥಿಕ ಸಾಮರ್ಥ್ಯದ ಮೇಲೆ ನಿಂತಿಲ್ಲ. ಸಾಮಾಜಿಕ, ಸಾಂಸ್ಕೃತಿಕ ಸಾಮರ್ಥ್ಯಗಳು ಕೂಡ ಮುಖ್ಯ. ದಲಿತರು, ಮಹಿಳೆಯರು ಮತ್ತು ಅಲ್ಪಸಂಖ್ಯಾತರು ಮಾರುಕಟ್ಟೆಯಲ್ಲಿ ಪಾಲುಗೊಳ್ಳುವ ಸಾಮಾಜಿಕ ಸಾಮರ್ಥ್ಯವನ್ನು ಇಂದಿಗೂ ಜೀವಂತ ಇರುವ ಅಸ್ಪ್ರಶ್ಯತೆ, ಮಹಿಳೆಯರ ಎರಡನೇ ದರ್ಜೆ ಸ್ಥಾನಮಾನ, ಕೋಮುವಾದಿ ರಾಜಕೀಯಗಳು ಗಣನೀಯವಾಗಿ ಕುಗ್ಗಿಸುತ್ತಿವೆ.

ಇದೇ ರೀತಿಯಲ್ಲಿ ಉಣ್ಣುವ, ತಿನ್ನುವ, ಪೂಜಿಸುವ, ಪ್ರೀತಿಸುವ ವಿಷಯಗಳನ್ನು ಮುಂದಿಟ್ಟುಕೊಂಡು ನಡೆಸುವ ಸಾಂಸ್ಕೃತಿಕ ರಾಜಕೀಯ ದಲಿತರ, ಬುಡಕಟ್ಟುಗಳ, ಹಿಂದುಳಿದ ಜಾತಿಗಳ ಸಾಂಸ್ಕೃತಿಕ ಸಾಮರ್ಥ್ಯವನ್ನು ಕುಗ್ಗಿಸುತ್ತಿವೆ. ಇವೆಲ್ಲವೂ ಮಾರುಕಟ್ಟೆ ನಿರ್ದೇಶಿತ ಅಭಿವೃದ್ಧಿಯು ಸೃಷ್ಟಿಸುವ ಹೊಸ ಅವಕಾಶಗಳನ್ನು ಬಳಸಿಕೊಳ್ಳಲು ಇವರಿಗೆ ಅಡ್ಡಿಯಾಗಿವೆ. ಇದರಿಂದಾಗಿ ಮಾರುಕಟ್ಟೆಯಲ್ಲಿ ಜಾತಿ, ಲಿಂಗ, ಧರ್ಮಗಳು ಮುಖ್ಯವಲ್ಲ. ಖರೀದಿಸುವ ಶಕ್ತಿ ಮಾತ್ರ ಮುಖ್ಯ. ಆದುದರಿಂದ ಆರ್ಥಿಕ ನೀತಿಗಳನ್ನು ಸಡಿಲಿಸುತ್ತಾ ಹೋದರೆ ಎಲ್ಲರೂ ಮಾರುಕಟ್ಟೆಯಲ್ಲಿ ಪಾಲುಗೊಳ್ಳಬಹುದೆನ್ನುವ ಗ್ರಹಿಕೆ ನಮ್ಮಲ್ಲಿ ಕೆಲಸ ಮಾಡುತ್ತಿಲ್ಲ. ಏಕೆಂದರೆ ನಮ್ಮಲ್ಲಿ ಖರೀದಿಸುವ ಶಕ್ತಿಗೂ ಜಾತಿ, ಲಿಂಗ, ಧರ್ಮಗಳಿಗೂ ನೇರ ಸಂಬಂಧ ಇದೆ.

5. ಸಮುದಾಯಗಳ ಸಹಬಾಳ್ವೆ: ಸಮುದಾಯಗಳ ನಡುವೆ ಸಹಬಾಳ್ವೆ ಹೆಚ್ಚಿದಂತೆ ದೇಶ, ಸಮುದಾಯಗಳು ಉನ್ನತಿಯತ್ತ ಮತ್ತು ದ್ವೇಷ, ಕಚ್ಚಾಟ ಹೆಚ್ಚಿದಂತೆ ಸಮಾಜ, ಸಂಸ್ಕೃತಿಗಳು ಅವನತಿಯತ್ತ ಸಾಗುತ್ತವೆ ಎನ್ನುವುದು ಚರಿತ್ರೆಯಿಂದ ಕಲಿತ ಪಾಠ. ಇದಕ್ಕೆ ಸಾಕಷ್ಟು ಉದಾಹರಣೆಗಳಿವೆ. ಇವತ್ತು ಅಮೆರಿಕವು ಪ್ರಪಂಚದಲ್ಲೇ ಬಲಿಷ್ಠ ರಾಷ್ಟ್ರ. ಆದರೆ 18ನೇ ಶತಮಾನದಲ್ಲಿ ಅಮೆರಿಕವು ಒಂದು ಬಡ ರಾಷ್ಟ್ರ. ಬಡತನಕ್ಕೆ ಹಲವು ಕಾರಣಗಳಿದ್ದವು. ಅವುಗಳಲ್ಲಿ ಒಂದು ಬಲವಾದ ಕಾರಣ ಜನಾಂಗೀಯ ದ್ವೇಷ. ಕಪ್ಪು- ಬಿಳಿಯರ ನಡುವೆ ಜನಾಂಗೀಯ ದ್ವೇಷ ಹೊತ್ತಿ ಉರಿಯುತ್ತಿತ್ತು. ಅಮೆರಿಕದ ಹಲವು ರಾಜ್ಯಗಳಲ್ಲಿ ಜನಾಂಗೀಯ ತಾರತಮ್ಯವನ್ನು, ದ್ವೇಷವನ್ನು ಬೆಳೆಸುವ ಹಲವು ಕಾನೂನುಗಳಿದ್ದವು. ಇವೆಲ್ಲ ಬದಲಾಗಿ ಎಲ್ಲರ ಸಮಾನತೆ ಕಾಪಾಡುವ ಕಾನೂನು ಜಾರಿಗೆ ಬಂದ ನಂತರ ಅಮೆರಿಕ ಬೆಳೆಯಲು ಆರಂಭಿಸಿತು. ದೂರದ ಉದಾಹರಣೆ ಏಕೆ, ನೆರೆಯ ರಾಷ್ಟ್ರ ಶ್ರೀಲಂಕಾವನ್ನು ನೋಡಿ. ತಮಿಳರು ಮತ್ತು ಬೌದ್ಧರ ನಡುವಿನ ಜನಾಂಗೀಯ ಹೋರಾಟದಿಂದ ಶ್ರೀಲಂಕಾದ ಅರ್ಥ ವ್ಯವಸ್ಥೆ ಸಂಪೂರ್ಣ ನೆಲಕಚ್ಚಿದೆ. ಇದೇ ಸ್ಥಿತಿ ಪಾಕಿಸ್ತಾನದಲ್ಲೂ ಇದೆ. ವಾಸ್ತವ ಹೀಗಿದ್ದರೂ ಜಾತಿ, ಧರ್ಮಗಳ ಹೆಸರಲ್ಲಿ ಜನರನ್ನು ಧ್ರುವೀಕರಿಸುವ ಸಾಂಸ್ಕೃತಿಕ ರಾಜಕೀಯ ಕಡಿಮೆಯಾಗಿಲ್ಲ.

ಕೊನೆಯದಾಗಿ, ಸರ್ಕಾರದ ಪಾತ್ರದ ಕುರಿತು ಹೇಳುವುದಾದರೆ ಮಾರುಕಟ್ಟೆ ದೇವರ ಸೃಷ್ಟಿಯಲ್ಲ; ನಾವು ಚುನಾಯಿಸುವ ಪ್ರತಿನಿಧಿಗಳು ಸೃಷ್ಟಿಸಿದ ಒಂದು ಸಂಸ್ಥೆ. ಜನಪ್ರತಿನಿಧಿಗಳು ಯಾರು ಎನ್ನುವುದರ ಮೇಲೆ ಮಾರುಕಟ್ಟೆ ಯಾರ ಪರ ಕೆಲಸ ಮಾಡುತ್ತದೆ ಎನ್ನುವುದನ್ನು ತೀರ್ಮಾನಿಸಬಹುದು. ನಮ್ಮ ಜನಪ್ರತಿನಿಧಿಗಳು ಕೂಲಿ ಕಾರ್ಮಿಕರಲ್ಲ, ಭೂರಹಿತರಲ್ಲ, ಅಸಂಘಟಿತ ಕಾರ್ಮಿಕರಲ್ಲ, ವಲಸೆ ಕಾರ್ಮಿಕರಲ್ಲ, ಸಣ್ಣ ಕೃಷಿಕರಲ್ಲ, ಸಣ್ಣಪುಟ್ಟ ವ್ಯಾಪಾರಿ, ಉದ್ಯಮಿಗಳಲ್ಲ, ಮೂರು ಹೊತ್ತಿನ ಊಟಕ್ಕೆ ಪರದಾಡುವವರಲ್ಲ. ಇವರಲ್ಲಿ ಶೇ 95ಕ್ಕಿಂತಲೂ ಹೆಚ್ಚಿನವರು ಕೋಟ್ಯಧೀಶ ಪುರುಷರು, ದೊಡ್ಡ ಉದ್ಯಮಿಗಳು, ದೊಡ್ಡ ಕೃಷಿಕರು. ಇವರ ಆದ್ಯತೆಗೂ ಇವರನ್ನು ಚುನಾಯಿಸುವ ಜನಸಾಮಾನ್ಯರ ಆದ್ಯತೆಗೂ ಏನೇನೂ ಸಂಬಂಧ ಇಲ್ಲ.

ಇವೇ ಕಾರಣಗಳಿಂದ ಪ್ರತಿನಿಧಿಗಳು ತಮ್ಮನ್ನು ಚುನಾಯಿಸಿದ ಮತದಾರರ ಆದ್ಯತೆಗಿಂತ ಹೆಚ್ಚು ತಮ್ಮ ಆದ್ಯತೆಯನ್ನು ಪ್ರತಿನಿಧಿಸುವ ಮಾರುಕಟ್ಟೆಯನ್ನು ರೂಪಿಸಿದ್ದಾರೆ. ಬಲಾಢ್ಯರು ರೂಪಿಸಿದ ಮಾರುಕಟ್ಟೆಯಲ್ಲಿ ಭೂಮಿ, ಬಂಡವಾಳ, ಪ್ರಾಕೃತಿಕ ಸಂಪನ್ಮೂಲಗಳು ಮಾರುಕಟ್ಟೆ ನಿಯಮಾನುಸಾರ ಮಾರಾಟ ಆಗುವುದಿಲ್ಲ. ಆದರೆ, ಕಾರ್ಮಿಕರ ಶ್ರಮ ಮಾತ್ರ ಮಾರುಕಟ್ಟೆ ನಿಯಮಕ್ಕೆ ಅನುಸಾರ ಮಾರಾಟ ಆಗುತ್ತಿದೆ. ಈ ಎಲ್ಲ ಅಂಶಗಳು ಉದಾರೀಕರಣ ನೀತಿಯ ಪರಿಣಾಮಗಳನ್ನು ಅರ್ಥಮಾಡಿಕೊಳ್ಳಲು ಸಹಕಾರಿ ಆಗಬಹುದೆನ್ನುವ ನಂಬಿಕೆ ನನ್ನದು.

ಲೇಖಕ: ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕ

ಅಕ್ರಮ ನಿರ್ಮಾಣ ಧ್ವಂಸಗೊಳಿಸಿ: 'ಸುಪ್ರೀಂ'

ಅವಳಿ ಕಟ್ಟಡ ಕೆಡವಲು ಆದೇಶ

ಬಿಲ್ಡರ್‌ಗಳು ಮತ್ತು ಖರೀದಿದಾರರ ಅಪವಿತ್ರ ಮೈತ್ರಿಯ ಫಲವನ್ನು ಅಮಾಯಕ ಖರೀದಿದಾರರು ಅನುಭವಿಸಬೇಕಿದೆ
ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ನೋಯ್ಡಾದಲ್ಲಿ ಸೂಪರ್‌ಟೆಕ್ ಬಿಲ್ಡರ್ಸ್ ನಿರ್ಮಾಣ ಮಾಡಿದ್ದ 40 ಅಂತಸ್ತುಗಳ ಅವಳಿ ಕಟ್ಟಡಗಳನ್ನು ಕೆಡವಲು ಸುಪ್ರೀಂ ಕೋರ್ಟ್ ಆದೇಶಿಸಿದೆ. ಸುರಕ್ಷಾ ನಿಯಮಗಳನ್ನು ಉಲ್ಲಂಘಿಸಿ ಮತ್ತು ನೆರೆಯ ನಿವಾಸಿಗಳಿಗೆ ಬೆಳಕು ಬೀಳುವುದನ್ನು ತಡೆಯುವಂತೆ ಕಟ್ಟಡಗಳನ್ನು ನಿರ್ಮಿಸಲಾಗಿತ್ತು. ಹೀಗಾಗಿ ಈ ಕಟ್ಟಡಗಳನ್ನು ಕೆಡವಲು ಆದೇಶ ನೀಡಲಾಗಿದೆ.

ಅಪಾರ್ಟ್‌ಮೆಂಟ್‌ನಲ್ಲಿನ ಫ್ಲ್ಯಾಟ್‌ಗಳಿಗೆ ಬೆಳಕು ಬಾರದಂತೆ ಮತ್ತು ಗಾಳಿ ಆಡದಂತೆ ಕಟ್ಟಡಗಳನ್ನು ವಿನ್ಯಾಸ ಮಡಲಾಗಿತ್ತು. ಅಲ್ಲದೆ, ಅಗ್ನಿಶಾಮಕ ದಳದ ನಿರಾಕ್ಷೇಪಣಾ ಪತ್ರವನ್ನೂ ಈ ಕಟ್ಟಡಗಳಿಗೆ ಪಡೆದಿರಲಿಲ್ಲ. ಈ ಎಲ್ಲಾ ಅಕ್ರಮಗಳ ವಿರುದ್ಧ ಫ್ಲ್ಯಾಟ್ ಬುಕ್ಕಿಂಗ್ ಮಾಡಿದ್ದವರು, ಖರೀದಿಸಿದ್ದವರು 2012ರಲ್ಲಿ ಅಲಹಾಬಾದ್ ಹೈಕೋರ್ಟ್ ಮೆಟ್ಟಿಲೇರಿದ್ದರು.

ಕಟ್ಟಡಗಳನ್ನು ಕೆಡವಿ ಮತ್ತು ಫ್ಲ್ಯಾಟ್ ಕಾಯ್ದಿರಿಸಿದ್ದವರಿಗೆ ಅವರ ಹಣವನ್ನು ವಾರ್ಷಿಕ ಶೇ 12ರಷ್ಟು ಬಡ್ಡಿ ಸಮೇತ ವಾಪಸ್ ಮಾಡಿ ಎಂದು 2014ರಲ್ಲಿ ಅಲಹಾಬಾದ್ ಹೈಕೋರ್ಟ್ ಆದೇಶ ನೀಡಿತ್ತು. ಈ ಆದೇಶದ ವಿರುದ್ಧ ಸೂಪರ್‌ಟೆಕ್ ಬಿಲ್ಡರ್ಸ್ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು.

ಸೂಪರ್‌ಟೆಕ್ ಬಿಲ್ಡರ್ಸ್ ಮತ್ತು ಖರೀದಿದಾರರ ವಾದವನ್ನು ಆಲಿಸಿದ ಪೀಠವು, ಅಲಹಾಬಾದ್ ಹೈಕೋರ್ಟ್ ತೀರ್ಪನ್ನು ಎತ್ತಿಹಿಡಿದಿದೆ.

'ಈ ಪ್ರಕರಣವು ನೋಯ್ಡಾ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳ ಅಕ್ರಮವನ್ನು ಬಯಲಿಗೆಳೆದಿದೆ. ಅಧಿಕಾರಿಗಳು ಮತ್ತು ಬಿಲ್ಡರ್‌ಗಳು ಗೊತ್ತಿದ್ದೂ, ಕಾನೂನನ್ನು ಉಲ್ಲಂಘಿಸಿದ್ದಾರೆ. ಈ ಮೂಲಕ ಸಾಲುಸಾಲು ಅಕ್ರಮ ಎಸಗಲಾಗಿದೆ. ಅಗ್ನಿಶಾಮಕ ದಳವು ಆಕ್ಷೇಪ ವ್ಯಕ್ತಪಡಿಸಿದ್ದರೂ, ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ಅದನ್ನು ಕಡೆಗಣಿಸಿದ್ದಾರೆ. ಇಂತಹ ಅಪವಿತ್ರ ಮೈತ್ರಿಯ ಕಾರಣ ಇತರರು ಸಮಸ್ಯೆ ಎದುರಿಸಬೇಕಾಗಿದೆ' ಎಂದು ಸುಪ್ರೀಂ ಕೋರ್ಟ್ ಪೀಠವು ಅಭಿಪ್ರಾಯಪಟ್ಟಿದೆ.

'ಇಂತಹ ಅಕ್ರಮದ ವಿರುದ್ಧ ಕೆಲವರಷ್ಟೇ ದನಿ ಎತ್ತುತ್ತಾರೆ. ಆದರೆ ಅವರು ಇಂತಹವರ ವಿರುದ್ಧ ದೀರ್ಘಕಾಲ ಹೋರಾಡಬೇಕಾಗುತ್ತದೆ' ಎಂದು ಪೀಠವು ಅಭಿಪ್ರಾಯಪಟ್ಟಿದೆ.

'ಮುಂದಿನ ಮೂರು ತಿಂಗಳ ಒಳಗೆ ಕಟ್ಟಡ ಕೆಡವುವ ಕಾರ್ಯವನ್ನು ಪೂರ್ಣಗೊಳಿಸಬೇಕು. ನೋಯ್ಡಾ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳ ಸಮ್ಮುಖದಲ್ಲೇ ಕೆಡವುವ ಕಾರ್ಯ ಪೂರ್ಣಗೊಳಿಸಬೇಕು' ಎಂದು ಪೀಠವು ಆದೇಶಿಸಿದೆ.

ನೋಯ್ಡಾದಲ್ಲಿ ನಿರ್ಮಿಸಲಾಗಿರುವ 40 ಅಂತಸ್ತಿನ ಅವಳಿ ಕಟ್ಟಡ ಪಿಟಿಐ ಚಿತ್ರ

ಖರೀದಿದಾರರ ನಿಟ್ಟುಸಿರು

ಸುಪ್ರೀಂ ಕೋರ್ಟ್‌ನ ಈ ಆದೇಶದಿಂದ ಸೂಪರ್‌ಟೆಕ್ ಬಿಲ್ಡರ್ಸ್‌ನ ಅವಳಿ ಕಟ್ಟಡಗಳ ಫ್ಲ್ಯಾಟ್ ಖರೀದಿದಾರರು ನಿಟ್ಟುಸಿರು ಬಿಟ್ಟಿದ್ದಾರೆ.

ಫ್ಲ್ಯಾಟ್ ಖರೀದಿಗೆ ಮುಂಗಡ ನೀಡಿದ್ದವರಿಗೆ, ವಾರ್ಷಿಕ ಶೇ 12ರಷ್ಟು ಬಡ್ಡಿಯ ಜತೆಗೆ ಪೂರ್ಣ ಹಣವನ್ನು ಹಿಂತಿರುಗಿಸಬೇಕು. ನೆರೆಯ ಕಾಲೊನಿಗಳ ನಿವಾಸಿಗಳಿಗೆ ₹2 ಕೋಟಿ ಪರಿಹಾರ ನೀಡಬೇಕು ಎಂದು ಪೀಠವು ಆದೇಶಿಸಿದೆ.

633 ಜನರು ಫ್ಲ್ಯಾಟ್‌ಗಳನ್ನು ಖರೀದಿಸಿದ್ದು, ಅವರಲ್ಲಿ 133 ಮಂದಿ ಖರೀದಿ ರದ್ದು ಮಾಡಿದ್ದಾರೆ. 248 ಜನರಿಗೆ ಈಗಾಗಲೇ ಹಣ ವಾಪಸ್ ಮಾಡಲಾಗಿದೆ. 252 ಜನರಿಗೆ ಇನ್ನಷ್ಟೇ ಹಣ ವಾಪಸ್ ಮಾಡಬೇಕಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಕಾಶ್ಮೀರದ ಶ್ರೀನಗರದಲ್ಲಿ ಬರೋಬ್ಬರಿ 32 ವರ್ಷಗಳ ನಂತರ ಕೃಷ್ಣಜನ್ಮಾಷ್ಟಮಿ ನಡೆಯುತ್ತಿದೆ. ಇದು ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಿಂದ ಮಾತ್ರ ಸಾಧ್ಯವಾಯಿತು' ಎಂಬ ವಿವರ ಇರುವ ಟ್ವೀಟ್ ಮತ್ತು ಫೇಸ್‌ಬುಕ್ ಪೋಸ್ಟ್‌ಗಳು ವೈರಲ್ ಆಗಿವೆ. ಈ ಟ್ವೀಟ್ ಮತ್ತು ಪೋಸ್ಟ್‌ಗಳ ಜತೆಗೆ ಕೃಷ್ಣಜನ್ಮಾಷ್ಟಮಿಯ ವಿಡಿಯೊ ಸಹ ವೈರಲ್ ಆಗಿದೆ. ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಅವರ ಪುತ್ರ ಶೌರ್ಯ ಡೊಭಾಲ್ ಈ ಟ್ವೀಟ್ ಅನ್ನು ರಿಟ್ವೀಟ್ ಮಾಡಿದ್ದಾರೆ. ಸುದರ್ಶನ ಟಿವಿಯ ಸುರೇಶ್ ಚೌಹಾಣ್ಕೆ ಮತ್ತು ಆರ್‌ಎಸ್‌ಎಸ್ ಮುಖವಾಣಿ ಆರ್ಗನೈಸರ್ ಸಹ ಇದನ್ನು ಪ್ರತಿಪಾದಿಸಿವೆ.

ಆದರೆ ಇದು ಸುಳ್ಳು ಸುದ್ದಿ ಎಂದು ಆಲ್ಟ್ ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. '32 ವರ್ಷಗಳಲ್ಲಿ ಕೃಷ್ಣ ಜನ್ಮಾಷ್ಟಮಿ ನಡೆದದ್ದು ಇದೇ ಮೊದಲು ಎಂಬ ಪ್ರತಿಪಾದನೆಯಲ್ಲಿ ಹುರುಳಿಲ್ಲ. ಬಿಜೆಪಿಯ ಹಲವು ನಾಯಕರು ಈ ಹಿಂದೆಯೂ ಇಂತಹ ವಿಚಾರಗಳನ್ನೇ ಪ್ರತಿಪಾದಿಸಿದ್ದರು. ಆದರೆ, ಕಾಶ್ಮೀರದಲ್ಲಿ, 32 ವರ್ಷಗಳಿಂದಲೂ ಕೃಷ್ಣ ಜನ್ಮಾಷ್ಟಮಿ ನಡೆಯುತ್ತಲೇ ಇದೆ ಎಂಬುದಕ್ಕೆ ಸುದ್ದಿ ಸಂಸ್ಥೆಗಳ ಫೋಟೊ ಲೈಬ್ರರಿಯಲ್ಲಿ ಹಲವು ಚಿತ್ರಗಳು ಲಭ್ಯವಿವೆ. ಗೆಟ್ಟಿ ಇಮೇಜ್, ರಾಯಿಟರ್ಸ್, ಪಿಟಿಐ ಮತ್ತು ಅಲಾಮಿ ಸ್ಟಾಕ್ ಫೋಟೋಸ್‌ನಲ್ಲಿ ಹಲವು ಚಿತ್ರಗಳು ಲಭ್ಯವಿವೆ. ಹೀಗಾಗಿ ಈ ಪ್ರತಿಪಾದನೆ ಒಂದು ಸುಳ್ಳು ಸುದ್ದಿ' ಎಂದು ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಿದೆ.

ಗುಂಡಣ್ಣ



ಬೆರಗಿನ ಬೆಳಕು
ಗುರುರಾಜ ಕರಜಗಿ

ಅಜ್ಜನ ಮುಂದೆ ಮೊಮ್ಮಕ್ಕಳು

ದೇವತೆಗಳ ದಯೆಯಿಂದ ಮಕ್ಕಳು ಆರೋಗ್ಯವಂತರಾಗಿಯೇ ಇದ್ದರು. ಅದಲ್ಲದೆ ಆ ಮುದುಕ ಬ್ರಾಹ್ಮಣನ ತಲೆಯ ಮೇಲೂ ದೇವತೆಗಳು ಏರಿದ್ದರು. ಹೀಗಾಗಿ ಆತ ತನ್ನ ಊರಾದ ಕಳಿಂಗ ದೇಶವನ್ನು ತಲುಪುವುದರ ಬದಲಾಗಿ, ಜೆತುತ್ತರ ನಗರಕ್ಕೆ ಬಂದುಬಿಟ್ಟ. ಆ ದಿನ ಬೆಳಗ್ಗಿನ ಮುಹೂರ್ತದಲ್ಲಿ ರಾಜನಾದ ಸಿವಿ ಚಕ್ರವರ್ತಿಗೆ ಒಂದು ಕನಸು ಬಿತ್ತು. ಕನಸಿನಲ್ಲಿ ರಾಜ ತನ್ನ ದರ್ಬಾರಿನಲ್ಲಿ ಕುಳಿತಿದ್ದ. ಆಗ ಮನುಷ್ಯನೊಬ್ಬ ಮುಂದೆ ಬಂದು ಎರಡು ಕಮಲದ ಹೂವುಗಳನ್ನು ತಂದು ಕೊಟ್ಟ. ಅದೇಕೋ, ಅವುಗಳ ಮೇಲೆ ತುಂಬ ಪ್ರೀತಿ ಉಕ್ಕಿ ಬಂದು ಆ ಹೂವುಗಳನ್ನು ತನ್ನ ಎರಡೂ ಕಿವಿಗಳ ಮೇಲೆ ಸಿಕ್ಕಿಸಿಕೊಂಡ. ಹಾಗೆ ಸಿಕ್ಕಿಸಿಕೊಳ್ಳುತ್ತಿರುವಾಗ ಕಮಲದ ರೇಣುಗಳು ಅವನ ಹೊಟ್ಟೆಯ ಮೇಲೆ ಉದುರಿದವು. ಆಗ ಅವನಿಗೆ ಎಚ್ಚರವಾಯಿತು. ತನ್ನ ದರ್ಬಾರಿನಲ್ಲಿದ್ದ ಜ್ಯೋತಿಷಿಗಳನ್ನು ಕರೆದು ಈ ಕನಸಿನ ಅರ್ಥವನ್ನು ಕೇಳಿದ. ಅವರು ಕನಸನ್ನು ಅರ್ಥೈಸಿಕೊಂಡು ಹೇಳಿದರು, 'ಪ್ರಭೂ, ಇದೊಂದು ಶುಭ ಶಕುನ. ಬಹಳ ದಿನಗಳಿಂದ ನಿಮ್ಮನ್ನು ಅಗಲಿಹೋಗಿದ್ದ ನಿಮ್ಮ ರಕ್ತಸಂಬಂಧಿಗಳು ಮರಳಿ ಬಂದು ತಮ್ಮನ್ನು ಕಾಣುತ್ತಾರೆ'.

ದಿನದಂತೆ, ಮಧ್ಯಾಹ್ನ ರಾಜ ಬಂದು ದರ್ಬಾರಿನಲ್ಲಿ ಕುಳಿತ. ಯಾವ ದೇವತೆಗಳು ಮುದುಕ ಬ್ರಾಹ್ಮಣನನ್ನು ಜೆತುತ್ತರ ನಗರಕ್ಕೆ ಕರೆದು ತಂದಿದ್ದರೋ, ಅವರು ಆ ಮೂವರನ್ನು ರಾಜಾಂಗಣಕ್ಕೇ ಕರೆದುಕೊಂಡು ಬಿಟ್ಟರು. ರಾಜನ ದೃಷ್ಟಿ ಮಕ್ಕಳ ಮೇಲೆ ಬಿತ್ತು. ಆತ ಅವರನ್ನು ನೋಡಿ ಹೇಳಿದ, 'ಅಕ್ಕಸಾಲಿಗನ ಬೆಂಕಿಯಿಂದ ಹಾದು ಬಂದ ಬಂಗಾರದಂತೆ, ಪುಟಕ್ಕಿಟ್ಟ ಚಿನ್ನದಂತೆ ಈ ಮಕ್ಕಳ ಮುಖಗಳು ಹೊಳೆಯುತ್ತಿವೆ. ಇಬ್ಬರೂ ಮಕ್ಕಳ ಅಂಗ-ಪ್ರತ್ಯಂಗಗಳು ಒಂದೇ ತೆರನದವಾಗಿವೆ. ಇಬ್ಬರ ಲಕ್ಷಣಗಳೂ ಒಂದೇ ಆಗಿವೆ. ಗಮನಿಸಿ ನೋಡಿದರೆ ಹುಡುಗ ಜಾಲಿಕುಮಾರನಂತೆ ಮತ್ತು ಹುಡುಗಿ ಕೃಷ್ಣಾಜಿನಳಂತೆ ಕಾಣುತ್ತಾರೆ. ಸ್ವರ್ಗದಲ್ಲಿರುವ ದೇವತೆಗಳಂತೆ ಹೊಳೆಯುತ್ತಿದ್ದಾರೆ. ಗುಹೆಯಿಂದ ಸಕಲ ಶಕ್ತಿಗಳೊಂದಿಗೆ ಅಬ್ಬರಿಸಿ ಹೊರಬರುತ್ತಿರುವ ಸಿಂಹಗಳಂತೆ ಆಕರ್ಷಕರಾಗಿದ್ದಾರೆ'.

ನಂತರ ಅಮಾತ್ಯರಿಗೆ ಹೇಳಿ ಮಕ್ಕಳನ್ನು ಹಾಗೂ ಮುದುಕನನ್ನು ಹತ್ತಿರಕ್ಕೆ ಕರೆಸಿದ. ಮುದುಕನನ್ನು ಕೇಳಿದ, 'ಅಯ್ಯಾ, ಈ ಮಕ್ಕಳು ಯಾರು? ನೀನು ಬಂದದ್ದು ಎಲ್ಲಿಂದ?'. ಮುದುಕ ಹೇಳಿದ, 'ಸಂಜಯ ಮಹಾರಾಜಾ, ನನಗೆ ಒಬ್ಬ ಮಹಾತ್ಮನಿಂದ ಈ ಮಕ್ಕಳು ದೊರೆತಿವೆ. ಅವರಿಬ್ಬರೂ ನನ್ನ ಜೊತೆಗೇ ಇದ್ದು ಹದಿನೈದು ದಿನಗಳಾದವು'. 'ಯಾವನು ಆ ಮಹಾತ್ಮ ನಿನಗೆ ಮಕ್ಕಳನ್ನು ಕೊಟ್ಟವನು? ಈ ಮಕ್ಕಳು ಅವನ ಪುತ್ರ, ಪುತ್ರಿಯರೆ? ಯಾರಾದರೂ ಪುತ್ರ, ಪುತ್ರಿಯರನ್ನು ದಾನ ಮಾಡುತ್ತಾರೆಯೆ? ದಯವಿಟ್ಟು ಅದನ್ನು ಹೇಳಿ ನನ್ನಲ್ಲಿ ಶ್ರದ್ಧೆಯನ್ನುಂಟು ಮಾಡು. ಯಾಕೆಂದರೆ ಪುತ್ರದಾನ ಅತ್ಯಂತ ಕಷ್ಟವಾದದ್ದು ಮತ್ತು ಶ್ರೇಷ್ಠವಾದದ್ದು' ಎಂದು ಕೇಳಿದ ರಾಜ. ಆಗ ಆ ಮುದುಕ ಬಾಯಿಬಿಟ್ಟ. 'ಮಹಾರಾಜಾ, ಪ್ರಾಣಿಗಳಿಗೆ ಈ ಭೂಮಿಯೇ ಆಧಾರವಾಗಿರುವಂತೆ, ಎಲ್ಲ ಯಾಚಕರಿಗೂ ಆಧಾರನಾಗಿರುವ ವೆಸ್ಸಂತರ ಬೋಧಿಸತ್ವ ಕಾಡಿನಲ್ಲಿರುವಾಗ ಈ ಮಕ್ಕಳನ್ನು ನನಗೆ ದಾನವಾಗಿ ಕೊಟ್ಟುಬಿಟ್ಟ. ಎಲ್ಲ ನದಿಗಳ ನೀರಿಗೆ ಆಧಾರವಾದ ಸಮುದ್ರದಂತೆ, ಬೇಡುವವರಿಗೆ ಆಶ್ರಯಸ್ಥಾನವಾದ ವೆಸ್ಸಂತರ ಬೋಧಿಸತ್ವ ತನ್ನ ಸ್ವಂತ ಮಕ್ಕಳನ್ನು ನನಗೆ ದಾನವಾಗಿ ಕೊಟ್ಟಿದ್ದಾನೆ'.

ಈ ಮಾತನ್ನು ಕೇಳಿ ಮಹಾರಾಜ ಸಂಜಯ ಬೆರಗಾದ.

ದಿನ ಭವಿಷ್ಯ
ಬುಧವಾರ ಸೆಪ್ಟೆಂಬರ್1, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಶ್ರಾವಣ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಪೂರ್ವಫಲ್ಗುಣಿ ದಶಮಿ ಗಂ. 53-2 (ರಾ. 3-28) ಬುಧವಾರ ನಿತ್ಯ ನಕ್ಷತ್ರ ಮೃಗಶಿರ ಗಂ. 12-29 (ಹ. 11-14) ವಜ್ರ ನಾಮ ಯೋಗ ಗಂ. 8-20 ವಣಿಜ ಕರಣ ಗಂ. 20-47 ವಿಷ ಗಂ. 35-29 ಅಮೃತ ಗಂ. 1-46: ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00: ಸೂರ್ಯೋದಯ: 6-12 ಸೂರ್ಯಾಸ್ತ: 6-28 ಅದೃಷ್ಟ ಸಂಖ್ಯೆ 3, 7

ಮೇಷ: ಹಮ್ಮಿಕೊಂಡಿರುವ ಯೋಜನೆಗಳನ್ನು ಪೂರೈಸಲು ಅನಾನುಕೂಲತೆ. ಆರ್ಥಿಕ ಮುಗ್ಗಟ್ಟು ತಲೆದೋರೀತು. ಕೃಷಿ ಕೈಗಾರಿಕಾ ಕ್ಷೇತ್ರದಲ್ಲಿ ಲಾಭಾಂಶ ಹೆಚ್ಚಳವಾಗಲಿದೆ. ರಾಜಕೀಯದಲ್ಲಿ ಸೂಕ್ತ ಸ್ಥಾನ ದೊರಕುವ ಸಾಧ್ಯತೆ.

ವೃಷಭ: ಶುಭಕಾರ್ಯಗಳು ಮನದಿಚ್ಛೆಯಂತೆ ನೆರವೇರುವುದು. ಮಂಗಳಕಾರ್ಯಗಳ ವಿಚಾರದಲ್ಲಿ ನಿರ್ಧಾರ ಸಾಧ್ಯತೆ. ಆತ್ಮವಿಶ್ವಾಸ ಮತ್ತು ಪ್ರಯತ್ನ ಬಲದಿಂದಾಗಿ ಕಾರ್ಯಾನುಕೂಲ. ಸಂಗಾತಿಯ ಆರೋಗ್ಯದಲ್ಲಿ ವ್ಯತ್ಯಯ.

ಮಿಥುನ: ಆರ್ಥಿಕ ಅಡಚಣೆಗಳು ಹಂತ ಹಂತವಾಗಿ ನಿವಾರಣೆಯಾಗಲಿವೆ. ಗಹನವಾದ ವಿಚಾರವಾಗಿ ಗೆಳೆಯರೊಂದಿಗೆ ಚರ್ಚಿಸಲಿದ್ದೀರಿ. ಶಾರೀರಿಕ ಆಯಾಸ ತೋರಿ ಬಂದರೂ ದಿನದ ಅಂತ್ಯದಲ್ಲಿ ಕೆಲಸಗಳಲ್ಲಿ ಪ್ರಗತಿ.

ಕರ್ಕಾಟಕ: ನಿರುದ್ಯೋಗಿಗಳಿಗೆ ಉದ್ಯೋಗಾವಕಾಶಗಳು ತೆರೆದುಕೊಳ್ಳುವ ಸಾಧ್ಯತೆ. ನ್ಯಾಯಾಲಯದಲ್ಲಿನ ಕಟ್ಟಳೆಗಳಿಗೆ ಚಾಲನೆ ದೊರಕಲಿದೆ. ಖರೀದಿ ಮಾರಾಟ ವ್ಯವಹಾರಗಳಲ್ಲಿ ಉತ್ತಮ ಲಾಭ.

ಸಿಂಹ: ಕೆಲಸಕಾರ್ಯಗಳಲ್ಲಿ ಅನುಕೂಲಕರವಾಗಿ ತೋರಿಬರಲಿದೆ. ಆತ್ಮವಿಶ್ವಾಸದಿಂದ ಉದ್ಯೋಗ ವ್ಯಾಪಾರಗಳಲ್ಲಿ ತೊಡಗಿಕೊಳ್ಳುವುದರಿಂದ ಯಶಸ್ಸು. ಆಸ್ತಿ ಲಾಭದ ಲಕ್ಷಣಗಳು ಕಂಡುಬರುವುದು. ಮಾನಸಿಕ ನೆಮ್ಮದಿ.

ಕನ್ಯಾ: ಉನ್ನತ ಅಧ್ಯಯನಕ್ಕೆ ಬಂಧುಗಳ ಸಹಕಾರ. ಸಾರಾಸಾರ ವಿವೇಚನೆಯಿಂದ ವೈವಾಹಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ಗೃಹ ಕಲಹಗಳಿಗೆ ಬಂಧುಗಳ ಹಿರಿಯರ ಸಕಾಲಿಕ ಮಾರ್ಗದರ್ಶನದಿಂದಾಗಿ ಮುಕ್ತಿ.

ತುಲಾ: ಸರ್ಕಾರಿ ಕೆಲಸದಲ್ಲಿರುವವರಿಗೆ ಬಿಡುವಿಲ್ಲದ ಕೆಲಸದಿಂದಾಗಿ ವೈಯಕ್ತಿಕ ಕೆಲಸಗಳು ನಿಧಾನವಾದೀತು. ಮನೆಯವರ ಪ್ರಯಾಣಕ್ಕಾಗಿ ವಿಶೇಷ ಖರ್ಚು. ಬಂಧುಗಳ ಮನೆಯ ಕಾರ್ಯಕ್ರಮಗಳಲ್ಲಿ ಭಾಗಿಯಾಗುವ ಅವಕಾಶ.

ವೃಶ್ಚಿಕ: ಉದ್ಯೋಗಾಕಾಂಕ್ಷಿಗಳಿಗೆ ಅನಿರೀಕ್ಷಿತವಾಗಿ ಉದ್ಯೋಗಾವಕಾಶ ದೊರಕಲಿದೆ. ವಿದೇಶಿ ವ್ಯವಹಾರಸ್ಥರೊಂದಿಗಿನ ಸಂಪರ್ಕದಿಂದಾಗಿ ವ್ಯವಹಾರಕ್ಕೊಂದು ತಿರುವು. ಅನಾರೋಗ್ಯದಿಂದಾಗಿ ಅತಿಯಾದ ಆಯಾಸ.

ಧನು: ಉನ್ನತಾಧಿಕಾರಿಗಳ ಅನುಗ್ರಹದಿಂದಾಗಿ ನೌಕರಿಯಲ್ಲಿ ಅನುಕೂಲತೆ. ಸಾಮಾಜಿಕ ಸೇವೆಯಲ್ಲಿ ದಿನವಿಡೀ ತೊಡಗಿಕೊಂಡು ಸಂತಸ. ಮಕ್ಕಳಿಂದ ಆರ್ಥಿಕ ಸಹಕಾರ ದೊರೆಯುವ ಸಾಧ್ಯತೆಗಳು ಕಂಡುಬರುತ್ತಿವೆ.

ಮಕರ: ಗೃಹ ನವೀಕರಣ ಕಾರ್ಯಗಳು ಭರದಿಂದ ಸಾಗಲಿವೆ. ಲೇವಾದೇವಿ ವ್ಯವಹಾರದಲ್ಲಿ ಹೆಚ್ಚಿನ ಲಾಭ. ಭೂ ಖರೀದಿ ವ್ಯವಹಾರ ಮಾಡಲು ಸಕಾಲವಾಗಿದೆ. ಅತಿಯಾದ ಕೆಲಸದಿಂದಾಗಿ ದೇಹಾಲಸ್ಯ ಉಂಟಾದೀತು.

ಕುಂಭ: ಹೊಗಳಿಕೆಯಿಂದಾಗಿ ನಷ್ಟ ಅನುಭವಿಸಬೇಕಾದ ಪ್ರಸಂಗ. ನಿಮ್ಮ ಒಳ್ಳೆಯತನದ ದುರುಪಯೋಗವಾಗದಂತೆ ಎಚ್ಚರಿಕೆ ವಹಿಸುವುದು ಒಳ್ಳೆಯದು. ಅವಶ್ಯಕತೆಗಿಂತ ಹೆಚ್ಚಾಗಿ ಹಣಕಾಸಿನ ನೆರವು ದೊರೆಯಲಿದೆ.

ಮೀನ: ಕಾರ್ಮಿಕ ವರ್ಗದವರಿಗೆ ಬಿಡುವಿಲ್ಲದ ಕೆಲಸ. ಕಟ್ಟಡ ಕೆಲಸದಲ್ಲಿ ತೊಡಗಿರುವವರು ಜಾಗರೂಕರಾಗಿರುವುದು ಅಗತ್ಯ. ಸರ್ಕಾರಿ ಅಧಿಕಾರಿಗಳಿಗೆ ಸ್ಥಾನ ಬದಲಾವಣೆಯ ಸಾಧ್ಯತೆ. ಆರೋಗ್ಯದ ಬಗ್ಗೆ ವಿಶೇಷ ಗಮನ

ನಿಮ್ಮ ಜನ್ಮದಿನ 1-ಸೆಪ್ಟೆಂಬರ್ ಇಂದು ಅತ್ಯಂತ ಶುಭದಾಯಕ. ಸರ್ಕಾರಿ ಉದ್ಯೋಗವನ್ನು ತ್ಯಜಿಸುವ ಬಗೆಗಿನ ವಿಚಾರವನ್ನು ಮುಂದೂಡುವುದು ಉತ್ತಮ. ವ್ಯವಹಾರದಲ್ಲಿ ಹೆರವರ ಮೇಲೆ ಅವಲಂಬನೆಯನ್ನು ಕಡಿಮೆ ಮಾಡಿಕೊಳ್ಳುವುದು ಉತ್ತಮ. ಸ್ವತಂತ್ರ ಯೋಚನೆಗೆ ಧಕ್ಕೆಯುಂಟಾಗಿ ನಿಮ್ಮನ್ನೇ ಕಳೆದುಕೊಳ್ಳುವ ಸಾಧ್ಯತೆ.

ಪದಬಂಧ 4706
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ನೀರನ್ನು ದಾಟುವ ಸಾಧನ (4)
3.ಲೋಕಕ್ಕೆಲ್ಲಾ ಪೂಜ್ಯನಾದವನು (4)
5.ಕಣ್ಣಿಗೆ ಕಾಣಿಸುವಿಕೆ (3)
6.ತಿರುಗಿರುವ ಭಲ್ಲೂಕ (3)
8.ಉತ್ತರದವರ ನಲ್ಲಿಯು ಉಲ್ಟಾ ಕಾಣುತ್ತಿದೆ (2)
11.ಕಮ್ಮಾರನ ಕೈಯಿದು (2)
13.ಪುರುಷವಾಚಕ ಲಿಂಗ (3)
15.ಲೆಕ್ಕಶಾಸ್ತ್ರವಿಲ್ಲಿ ದೀರ್ಘವಾಗಿ ಕೊನೆಗೊಂಡಿದೆ (3)
16.ಆಪತ್ತಿನ ಕಾಲಕ್ಕೆ ಒದಗಲೆಂದು ಕೂಡಿಡುವ ಧನ (4)
17.ಪಕ್ಷ ಬಂದಾಗ ತೋರಿದ ಭೇದಭಾವ (4)

ಮೇಲಿಂದ ಕೆಳಕ್ಕೆ
1.ತಾಳ ಹಾಕುತ್ತಲೇ ಹೂಡಿದ ಸಂಪು (4)
2.ಮೊಸರು ಕಡೆಯುವ ಕೋಲು ಉಲ್ಟಾ ಆಗಿಬಿಟ್ಟಿದೆ (4)
3.ವಂದರಿ ಇಲ್ಲಿದೆ (3)
7.ಕನ್ನ ಹಾಕಿ ಕದ್ದೊಯ್ದು ಚಾಳೀಸು (4)
9.ಪುಂಗವರ ಹತ್ತಿರ ಹರಡಿದ ಸುವಾಸನೆ (4)
10.ಅತಿಯಾದ ದುಃಖ (4)
12.ಸೂರ್ಯನ ಮಗ (4)
14.ಗಮನವಿಟ್ಟು ನೋಡಿದಾಗ ಆಕಾಶ ಕಾಣಿಸಿತೇ? (3)



4705ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಆಲಿಂಗನ 3.ವಿನಿಮಯ 5.ಸುದಾಮ 6.ನಗ 8.ಸ್ಥಾನ 9.ಕಂಬ 10.ಕರ 12.ಸಾಹಸ 14.ವರ್ಧಮಾನ 15.ಸಮಾಚಾರ
ಮೇಲಿಂದ ಕೆಳಕ್ಕೆ: 1.ಆಪೋಶನ 2.ನನಸು 3.ವಿಷಮ 4.ಯಜಮಾನ 7.ಗರೀಬ 8.ಸ್ಥಾಪಕ 9.ಕಂಠೀರವ 11.ರತ್ನಾಕರ 12.ಸಾಧನ 13.ಸಮಾಸ

ಸುಡೊಕು 5092

2		9			7	1		4
				3			5	
5		7	4		6	2		3
					5			1
	5	1		8			2	7
3			9					
		2		1			9	
			7		8			2
	8			2		4		6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5091 ಸುಡೊಕು

2	1	6	3	7	4	8	5	9
9	4	7	5	8	6	3	1	2
3	8	5	9	2	1	4	6	7
1	2	3	8	6	5	9	7	4
5	9	8	2	4	7	1	3	6
6	7	4	1	9	3	5	2	8
7	3	9	6	1	8	2	4	5
4	5	2	7	3	9	6	8	1
8	6	1	4	5	2	7	9	3

ಸೆನ್ಸೆಕ್ಸ್, ನಿಫ್ಟಿ ಸಾರ್ವಕಾಲಿಕ ದಾಖಲೆ

ಮುಂಬೈ (ಪಿಟಿಐ): ದೇಶದ ಷೇರು ಪೇಟೆಗಳು ಮಂಗಳವಾರ ಸಾರ್ವಕಾಲಿಕ ಗರಿಷ್ಠ ಮಟ್ಟದಲ್ಲಿ ವಹಿವಾಟು ಅಂತ್ಯಗೊಳಿಸಿವೆ. ಮುಂಬೈ ಷೇರುಪೇಟೆ (ಬಿಎಸ್ಇ) ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಇದೇ ಮೊದಲ ಬಾರಿಗೆ 57 ಸಾವಿರದ ಗಡಿಯನ್ನು ದಾಟಿದರೆ, ರಾಷ್ಟ್ರೀಯ ಷೇರುಪೇಟೆ (ಎನ್ಎಸ್ಇ) ಸಂವೇದಿ ಸೂಚ್ಯಂಕ ನಿಫ್ಟಿ 17 ಸಾವಿರದ ಗಡಿ ದಾಟಿತು.

ಆಗಸ್ಟ್ ತಿಂಗಳಿನಲ್ಲಿ ಸೆನ್ಸೆಕ್ಸ್ ಹಲವು ದಾಖಲೆಗಳನ್ನು ಬರೆದಿದ್ದು, ಶೇಕಡ 9ಕ್ಕೂ ಹೆಚ್ಚಿನ ಏರಿಕೆ ಕಂಡಿದೆ. ಮಂಗಳವಾರದ ವಹಿವಾಟಿನಲ್ಲಿ ಸೆನ್ಸೆಕ್ಸ್ 663 ಅಂಶ ಏರಿಕೆ ಕಂಡು 57,552 ಅಂಶಗಳ ದಾಖಲೆಯ ಮಟ್ಟದಲ್ಲಿ ವಹಿವಾಟು ಅಂತ್ಯವಾಯಿತು. ಮಾರುಕಟ್ಟೆ ಬಂಡವಾಳ ಮೌಲ್ಯವು ₹ 250 ಲಕ್ಷ ಕೋಟಿಗೆ ತಲುಪಿದೆ.

ಸೆನ್ಸೆಕ್ಸ್ ಹಾದಿ

1,608 ಅಂಶ
ನಾಲ್ಕು ದಿನಗಳಲ್ಲಿ ಸೆನ್ಸೆಕ್ಸ್ ಕಂಡಿರುವ ಏರಿಕೆ

9,801 ಅಂಶ
ಈ ವರ್ಷದಲ್ಲಿ ಇಲ್ಲಿಯವರೆಗೆ ಸೆನ್ಸೆಕ್ಸ್ ಕಂಡಿರುವ ಏರಿಕೆ

ಎನ್ಎಸ್ಇ ನಿಫ್ಟಿ 201 ಅಂಶ ಹೆಚ್ಚಾಗಿ ಸಾರ್ವಕಾಲಿಕ ಗರಿಷ್ಠ ಮಟ್ಟವಾದ 17,132 ಅಂಶಗಳಿಗೆ ತಲುಪಿದೆ.

ಎಲ್ಲ ವಲಯಗಳಲ್ಲಿಯೂ ನಿರಂತರವಾಗಿ ಖರೀದಿ ನಡೆದಿದ್ದು ಹಾಗೂ ಜಾಗತಿಕ ಮಾರುಕಟ್ಟೆಗಳಲ್ಲಿ ಉತ್ತಮ ವಹಿವಾಟು ನಡೆದಿದ್ದು ದೇಶಿ ಷೇರುಪೇಟೆಗಳ ಸೂಚ್ಯಂಕಗಳಿಗೆ ವೇಗ ನೀಡಿದವು. ಎಲ್ಲ ಪ್ರಮುಖ ವಲಯಗಳ ಸೂಚ್ಯಂಕಗಳು ಗಳಿಕೆ ಕಂಡವು. ಲೋಹ, ಹಣಕಾಸು (ಬ್ಯಾಂಕ್ ಹೊರತುಪಡಿಸಿ) ಮತ್ತು ಔಷಧ ವಲಯಗಳು ಉತ್ತಮ ಚೇತರಿಕೆ ಕಂಡಿವೆ ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ರೂಪಾಯಿ ಮೌಲ್ಯ ವೃದ್ಧಿ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಮಂಗಳವಾರ ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು 29 ಪೈಸೆ ಹೆಚ್ಚಾಯಿತು. ಇದರಿಂದ ಒಂದು ಡಾಲರ್‌ಗೆ ₹ 73ರಂತೆ ವಿನಿಮಯಗೊಂಡಿತು. ನಾಲ್ಕು ದಿನಗಳ ಡಾಲರ್ ಎದುರು ರೂಪಾಯಿ ಮೌಲ್ಯ 124 ಪೈಸೆಗಳಷ್ಟು ಹೆಚ್ಚಾಗಿದೆ.

ಷೇರುಪೇಟೆ ವಹಿವಾಟು



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	16,931
ಇಂದಿನ ಅಂತ್ಯ	17,132
▲	201
ದಿನದ ಗರಿಷ್ಠ	17,153

ವಿನಿಮಯ ದರ

$ ಡಾಲರ್	73
£ ಪೌಂಡ್	100.52
€ ಯುರೊ	86.31
¥ ಯೆನ್ (100ಕ್ಕೆ)	67

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹420
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹421

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಿನ್ ಮಾಡಿರಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ

ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಮುಂಬೈ ಧಾರಣೆ

ಶೇಂಗಾ

31-8-2021

ಜಾವಾ 70/80(ಹೊಸ)	10350-10400
ಜಾವಾ 80/90(ಹೊಸ)	9550-9600
ದಪ್ಪ ಮಧ್ಯಪ್ರದೇಶ(ಹೊಸ)	10300-10400
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1800)
ಒಂದು ವಾರದ ಡೆಲಿವರಿ	1595 (1595)
ಸೋಯಾ ಕಚ್ಚಾ	1360 (1365)
ಪಾಮ್ ವಾರದ ಡೆಲಿವರಿ	1263 (1263)
ಸೂರ್ಯಕಾಂತಿ ಎಣ್ಣೆ ಕಚ್ಚಾ	1430 (1430)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
46,950 (47,250)
ಬೆಳ್ಳಿ ಕೆ.ಜಿ 63,350 (63,750)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹1395(1395)
ಸೂರ್ಯಕಾಂತಿ (ರಿಫೈನ್ಡ್)	₹1480(1480)

ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ಶೇ 20.1ರಷ್ಟು ಪ್ರಗತಿ

ಜಿಡಿಪಿ: ದಾಖಲೆಯ ಬೆಳವಣಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್ ಕಾರಣದಿಂದಾಗಿ ಉಂಟಾಗಿದ್ದ ಕುಸಿತದಿಂದ ಮೇಲೆದ್ದು ಬಂದಿರುವ ದೇಶದ ಅರ್ಥ ವ್ಯವಸ್ಥೆಯು, ಏಪ್ರಿಲ್–ಜೂನ್ ಅವಧಿಯಲ್ಲಿ ದಾಖಲೆಯ ಗರಿಷ್ಠ ಮಟ್ಟದ ತ್ರೈಮಾಸಿಕ ಬೆಳವಣಿಗೆಯನ್ನು ಕಂಡಿದೆ. ಜೂನ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ದರವು ಶೇಕಡ 20.1ರಷ್ಟು ಇತ್ತು ಎಂದು ಕೇಂದ್ರ ಸರ್ಕಾರ ಮಂಗಳವಾರ ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಹೇಳಿವೆ.

ತಯಾರಿಕಾ ವಲಯದಲ್ಲಿ ಭಾರಿ ಬೆಳವಣಿಗೆ ಸಾಧ್ಯವಾಗಿದ್ದು, ಕಟ್ಟಡ ನಿರ್ಮಾಣ ವಲಯದಲ್ಲಿ ಒಳ್ಳೆಯ ಚೇತರಿಕೆ ಕಂಡುಬಂದಿದ್ದು ಜಿಡಿಪಿಯ ಈ ಬೆಳವಣಿಗೆಗೆ ಕಾರಣ. ಹಿಂದಿನ ವರ್ಷದ ಜೂನ್ ತ್ರೈಮಾಸಿಕದಲ್ಲಿ ಜಿಡಿಪಿಯು ಶೇ (–)24.4ರಷ್ಟು ಕುಸಿತ ಕಂಡಿತ್ತು. ಹೋಲಿಕೆಯ ಮಟ್ಟವಾದ ಹಿಂದಿನ ವರ್ಷದ ಜೂನ್ ತ್ರೈಮಾಸಿಕದಲ್ಲಿ ಜಿಡಿಪಿ ಭಾರಿ ಕುಸಿತ ಕಂಡಿದ್ದು ಕೂಡ, ಈ ತ್ರೈಮಾಸಿಕದಲ್ಲಿ ಬೆಳವಣಿಗೆ ದರ ಇಷ್ಟಿರುವುದಕ್ಕೆ ಒಂದು ಕಾರಣ.

ಏಪ್ರಿಲ್–ಜೂನ್ ಅವಧಿಯಲ್ಲಿ ತಯಾರಿಕಾ ವಲಯವು ಶೇ 49.6ರಷ್ಟು ಬೆಳವಣಿಗೆ ಸಾಧಿಸಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಶೇ (–)36ರಷ್ಟು ಕುಸಿತ ಆಗಿತ್ತು. ಹಿಂದಿನ ವರ್ಷದ

ಜೂನ್ ತ್ರೈಮಾಸಿಕದಲ್ಲಿ ಕುಸಿತ ಕಂಡಿದ್ದ ನಿರ್ಮಾಣ ಚಟುವಟಿಕೆಗಳು ಈ ಬಾರಿ ಶೇ 68.3ರಷ್ಟು ಏರಿಕೆ ಕಂಡಿವೆ. ಗಣಿಗಾರಿಕೆ ವಲಯದಲ್ಲಿ ಶೇ 18ರಷ್ಟು ಏರಿಕೆ ಈ ಬಾರಿ ದಾಖಲಾಗಿದೆ. ವಾಣಿಜ್ಯ, ಹೋಟೆಲ್, ಸಾರಿಗೆ, ಸಂವಹನ ಮತ್ತು ಅದಕ್ಕೆ ಸಂಬಂಧಿಸಿದ ಸೇವಾ ವಲಯದ ಬೆಳವಣಿಗೆಯು ಶೇ 34.3ರಷ್ಟು ಆಗಿದೆ.

ಕೋವಿಡ್ ಎರಡನೆಯ ಅಲೆಯ ಪರಿಣಾಮ ಏನೇ ಇದ್ದರೂ 2022ರ ಮಾರ್ಚ್‌ಗೆ ಕೊನೆಗೊಳ್ಳಲಿರುವ ಹಾಲಿ ಹಣಕಾಸು ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ದರವು ಶೇ 11ರ ಆಸುಪಾಸಿನಲ್ಲಿ ಇರಲಿದೆ ಎಂದು ಕೇಂದ್ರ ಸರ್ಕಾರದ ಮುಖ್ಯ ಆರ್ಥಿಕ ಸಲಹೆಗಾರ ಕೆ.ವಿ. ಸುಬ್ರಮಣಿಯನ್ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಆದರೆ, ಖಾಸಗಿ ವಲಯದಿಂದ ಬರುತ್ತಿರುವ ಬೇಡಿಕೆಗಳು ಹಾಗೂ ಆಗುತ್ತಿರುವ ಹೂಡಿಕೆಗಳು ಕೋವಿಡ್‌ಗೂ ಮೊದಲಿನ ಮಟ್ಟಕ್ಕಿಂತ ಕೆಳಗೆ ಇವೆ ಎಂದು ಅರ್ಥಶಾಸ್ತ್ರಜ್ಞರು ಎಚ್ಚರಿಸಿದ್ದಾರೆ.

‘ತಯಾರಿಕಾ ವಲಯ ಹಾಗೂ ನಿರ್ಮಾಣ ವಲಯಗಳು ಹಾಲಿ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿನ ಬೆಳವಣಿಗೆಗೆ ಪ್ರಮುಖ ಕಾರಣಗಳು. ಆದರೆ, ಈ ಎಲ್ಲ ವಲಯಗಳಲ್ಲಿನ ಜೂನ್ ತ್ರೈಮಾಸಿಕದಲ್ಲಿನ ಚಟುವಟಿಕೆಗಳು ಕೋವಿಡ್‌ಗೂ ಮೊದಲಿನ ಸ್ಥಿತಿಗಿಂತ ಕಡಿಮೆ ಮಟ್ಟದಲ್ಲಿ ಇವೆ. ಕೃಷಿ ಮತ್ತು ವಿದ್ಯುತ್ ವಲಯಗಳು ಮಾತ್ರ ಕೋವಿಡ್‌ಗೂ ಮೊದಲಿನ ಮಟ್ಟಕ್ಕಿಂತ ಮೇಲಕ್ಕೆ ಬಂದಿವೆ’ ಎಂದು ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಯ್ಯರ್ ಹೇಳಿದ್ದಾರೆ.

‘ಹಿಂದಿನ ವರ್ಷದ ಕುಸಿತದಿಂದ ನಾವು ಇನ್ನೂ ಪೂರ್ತಿಯಾಗಿ ಹೊರ ಬಂದಿಲ್ಲ’ ಎಂದು ಕೇಂದ್ರದ ಮಾಜಿ ಹಣಕಾಸು ಸಚಿವ, ಕಾಂಗ್ರೆಸ್ ಮುಖಂಡ ಪಿ. ಚಿದಂಬರಂ ಹೇಳಿದ್ದಾರೆ. ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಕೋವಿಡ್‌ನ ಎರಡನೆಯ ಅಲೆಯು ತೀವ್ರವಾಗಿ ಇದ್ದರೂ ಜಿಡಿಪಿ ಬೆಳವಣಿಗೆ ಶೇ 20.1 ರಷ್ಟು ಇದ್ದುದು, ಅರ್ಥವ್ಯವಸ್ಥೆಯು ಕುಸಿತ ಕಂಡಷ್ಟೇ ವೇಗವಾಗಿ ಚೇತರಿಕೆ ಕಾಣಲಿದೆ ಎಂದು ಸರ್ಕಾರ ಮಾಡಿದ್ದ ಅಂದಾಜಿಗೆ ಪೂರಕವಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಹೇಳಿದೆ.

ಮುಖ್ಯಾಂಶಗಳು

- ಜಿಡಿಪಿ ಬೆಳವಣಿಗೆಗೆ ನೆರವಾದ ತಯಾರಿಕಾ ವಲಯ
- ‘ಹಿಂದಿನ ವರ್ಷದ ಕುಸಿತದಿಂದ ಅರ್ಥ ವ್ಯವಸ್ಥೆ ಇನ್ನೂ ಹೊರಬಂದಿಲ್ಲ’

ತಲುಪಿಲ್ಲ ಕೋವಿಡ್ ಪೂರ್ವದ ಸ್ಥಿತಿ

ನವದೆಹಲಿ (ಪಿಟಿಐ): ಹಿಂದಿನ ವರ್ಷದ ಜೂನ್ ತ್ರೈಮಾಸಿಕಕ್ಕೆ ಹೋಲಿಸಿದರೆ ಜಿಡಿಪಿಯು ಬೆಳವಣಿಗೆ ಕಂಡಿದ್ದರೂ, ಕೋವಿಡ್‌ಗೂ ಮೊದಲಿನ 2019ರ ಏಪ್ರಿಲ್–ಜೂನ್ ತ್ರೈಮಾಸಿಕದ ಮಟ್ಟಕ್ಕೆ ಹೋಲಿಸಿದರೆ ಜಿಡಿಪಿಯು ಶೇಕಡ 9.2ರಷ್ಟು ಕಡಿಮೆ ಇದೆ.

ಭಾರತ ಅರ್ಥ ವ್ಯವಸ್ಥೆಯು ಈಗಲೂ ಕೋವಿಡ್ ಪೂರ್ವದ ಸ್ಥಿತಿಯನ್ನು ತಲುಪಿಲ್ಲ. 2019ರ ಏಪ್ರಿಲ್–ಜೂನ್ ಅವಧಿಯಲ್ಲಿ ದೇಶದ ಅರ್ಥ ವ್ಯವಸ್ಥೆಯ ಗಾತ್ರವು ₹ 35.66 ಲಕ್ಷ ಕೋಟಿ ಆಗಿತ್ತು. ಇದು 2020ರ ಜೂನ್ ತ್ರೈಮಾಸಿಕದಲ್ಲಿ ₹ 26.95 ಲಕ್ಷ ಕೋಟಿಗೆ ಕುಸಿಯಿತು. ಈ ಬಾರಿಯ ಜೂನ್ ತ್ರೈಮಾಸಿಕದಲ್ಲಿ ಇದು ₹ 32.38 ಲಕ್ಷ ಕೋಟಿಗೆ ಹೆಚ್ಚಳ ಆಗಿದೆ.

ಪ್ರಶ್ನೋತ್ತರ



ಯು.ಪಿ.ಪುರಾಣಿಕ್
ಬ್ಯಾಂಕಿಂಗ್–ಹಣಕಾಸು ತಜ್ಞ
uppuranik@gmail.com
ಮೊ: 9448015300

ಭಾಗ್ಯಲಕ್ಷ್ಮಿ, ಎಚ್‌ಆರ್‌ಬಿಆರ್ ಲೇಔಟ್, ಬೆಂಗಳೂರು

- **ಪ್ರಶ್ನೆ: ನನ್ನ ಪತಿ 1985ರಲ್ಲಿ ಎಚ್‌ಆರ್‌ಬಿಆರ್ ಲೇಔಟ್‌ನಲ್ಲಿ 30X40 ಅಳತೆಯ ನಿವೇಶನ ₹ 28 ಸಾವಿರಕ್ಕೆ ಖರೀದಿಸಿದ್ದರು. ನಮ್ಮ ಮಕ್ಕಳ ಒತ್ತಾಯದ ಮೇಲೆ ಅದನ್ನು ಈಗ ಮಾರಾಟ ಮಾಡಬೇಕಾಗಿದೆ. ಈಗ ಈ ನಿವೇಶನದ ಬೆಲೆ ಸುಮಾರು ₹ 2 ಕೋಟಿ ಎನ್ನುತ್ತಾರೆ. ಮಾರಾಟ ಮಾಡಿ ಬಂದಿರುವ ಹಣವನ್ನು ಮಕ್ಕಳಿಗೆ ಹಂಚಬೇಕೆಂದಿದ್ದೇವೆ. ತೆರಿಗೆ ಉಳಿಸಲು ಸರಿಯಾದ ಮಾರ್ಗದರ್ಶನ ಮಾಡಿ.**

ಉತ್ತರ: ನಿವೇಶನ 1985ರಲ್ಲಿ ಕೊಂಡರೂ ಹಣದುಬ್ಬರದ ಪರಿಣಾಮ ಕಂಡುಕೊಳ್ಳಲು 2001ರ ಏಪ್ರಿಲ್ 1ರಂದು ನಿವೇಶನದ ಸರ್ಕಾರಿ ಬೆಲೆ ಎಷ್ಟಿತ್ತು ಎಂಬುದನ್ನು ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ತಿಳಿಯಬೇಕಾಗುತ್ತದೆ. 2001ರ ಏಪ್ರಿಲ್ 1ರಿಂದ 2021ರವರೆಗಿನ ಹಣದುಬ್ಬರದ ಲೆಕ್ಕಹಾಕಿ, ಅಲ್ಲಿ ಬರುವ ಮೊತ್ತಕ್ಕೆ ಸಂಪೂರ್ಣ ತೆರಿಗೆ ವಿನಾಯಿತಿ ಇದೆ. ಉಳಿದ ಮೊತ್ತದಲ್ಲಿ ಸೆಕ್ಷನ್ 54ಇಸಿ ಆಧಾರದ ಮೇಲೆ ಗರಿಷ್ಠ ₹ 50 ಸಾವಿರವನ್ನು ಎನ್‌ಎಚ್‌ಎಐ–ಆರ್‌ಇಸಿ ಬಾಂಡ್‌ಗಳಲ್ಲಿ ತೊಡಗಿಸಿ. ಉಳಿದ ಮೊತ್ತದಲ್ಲಿ ಮನೆ ಕಟ್ಟಬಹುದು ಅಥವಾ ಮನೆ ಕೊಳ್ಳಬಹುದು. ಇದರಿಂದ ಸಂಪೂರ್ಣವಾಗಿ ತೆರಿಗೆ ವಿನಾಯಿತಿ ಪಡೆಯಬಹುದು. ಈ ಮಾರ್ಗ ಹೊರತುಪಡಿಸಿ ತೆರಿಗೆ ಉಳಿಸಲು ಬೇರಾವ ಉಪಾಯಗಳಿಲ್ಲ. ಈ ಮಾರ್ಗ ಅನುಸರಿಸದೇ ಇದ್ದಲ್ಲಿ ಶೇಕಡ 20ರಷ್ಟು ತೆರಿಗೆ ಕೊಟ್ಟು ನಂತರವೇ ಉಳಿದ ಹಣ ಮಕ್ಕಳಿಗೆ ಹಂಚಬಹುದು. ಏನಾದರೂ ಗೊಂದಲ ಇದ್ದರೆ ನನಗೆ ಕರೆ ಮಾಡಿ.

ಸಾವಿತ್ರಿ, ಊರುಬೇಡ

- **ಪ್ರಶ್ನೆ: ನಾನು ಇಲ್ಲಿಯವರೆಗೆ ನೀವು ಕೊಡುವ ಸಲಹೆಯ ಮೇರೆಗೆ ಆರ್.ಡಿ. ಮಾಡುತ್ತಾ ಬಂದು ಸುಮರು ₹ 35 ಲಕ್ಷ ಬ್ಯಾಂಕ್ ಠೇವಣಿ ಮಾಡಿದ್ದೇನೆ. ವೃತ್ತಿಯಲ್ಲಿ ನಾನು ಸರ್ಕಾರಿ ಹೈಸ್ಕೂಲ್ ಮುಖ್ಯೋಪಾಧ್ಯಾಯಿನಿ. ಇದೇ ಡಿಸೆಂಬರ್‌ನಲ್ಲಿ ನನಗೆ ನಿವೃತ್ತಿಯಾಗಲಿದೆ. ನಿವೃತ್ತಿಯಿಂದ ಕನಿಷ್ಠ ₹ 65 ಲಕ್ಷ ಬರಬಹುದು. ನನಗೆ ಇಬ್ಬರು ಮಕ್ಕಳು. ಇಬ್ಬರಿಗೂ ಮದುವೆಯಾಗಿದೆ, ನಮ್ಮೊಡನಿದ್ದಾರೆ. ನಿವೃತ್ತಿಯಿಂದ ಬರುವ ಹಣವನ್ನು ಮಕ್ಕಳ ಹೆಸರಿನಲ್ಲಿ ಠೇವಣಿ ಮಾಡಿದರೆ ನನಗಾಗಲಿ, ಮಕ್ಕಳಿಗಾಗಲಿ ತೆರಿಗೆ ಬರಬಹುದೇ? ಉಳಿತಾಯವನ್ನು ಸಮರ್ಪಕವಾಗಿ, ಭದ್ರತೆಯೊಂದಿಗೆ ಹೇಗೆ ಹೂಡಿಕೆ ಮಾಡಲಿ?**

ಉತ್ತರ: ನೀವು ಈಗಾಗಲೇ ಒಗ್ಗೂಡಿಸಿದ ₹ 35 ಲಕ್ಷ ಹಾಗೂ ನಿಮಗೆ ಬರಲಿರುವ ₹ 65 ಲಕ್ಷ ಇವೆರಡರಿಂದ ₹ 1 ಕೋಟಿ ನಿಮ್ಮೊಡನಿರುತ್ತದೆ. ಕ್ರಮಬದ್ಧವಾಗಿ ಹೂಡಿಕೆ ಮಾಡುತ್ತಾ ಬಂದು ₹ 35 ಲಕ್ಷ ಠೇವಣಿ ಮಾಡಿದ ನಿಮಗೆ ಅಭಿನಂದನೆ. ನಿಮಗೆ ಕನಿಷ್ಠ ₹ 50 ಸಾವಿರ ತಿಂಗಳಿಗೆ ಪಿಂಚಣಿ ಬರಬಹುದು. ಮಕ್ಕಳಿಗೆ ಮದುವೆ ಆಗಿರುವುದರಿಂದ ನಿಮಗೆ ಅಷ್ಟೊಂದು ಜವಾಬ್ದಾರಿ ಇರುವುದಿಲ್ಲ.

ನೀವು ನಿವೃತ್ತಿಯಿಂದ ಬರುವ ಅಥವಾ ನಿಮ್ಮೊಡನಿರುವ ಹಣವನ್ನು ಮಕ್ಕಳ ಹೆಸರಿಗೆ ವರ್ಗಾಯಿಸಿದ ನಂತರ ಆ ಹಣದ ಮೇಲಿನ ಹಕ್ಕು ನಿಮಗಿರುವುದಿಲ್ಲ. ಬಡ್ಡಿ ಆದಾಯದಿಂದ ಬರುವ ತೆರಿಗೆ ಉಳಿಸಲು ಕೆಲವರು ಈ ಮಾರ್ಗ ಅನುಸರಿಸುತ್ತಾರೆ. ಸಾಧ್ಯವಾದರೆ ಎರಡು ನಿವೇಶನ ನಿಮ್ಮ ಹೆಸರಿನಲ್ಲಿ ಕೊಂಡು ಇಬ್ಬರೂ ಮಕ್ಕಳಿಗೆ ಅನುಕೂಲ ಆಗುವಂತೆ ಉಯಿಲು ಬರೆದಿಡಿ. ನಿವೃತ್ತಿಯಿಂದ ಬರುವ ಹಣದಲ್ಲಿ ₹ 15 ಲಕ್ಷ ಅಂಚೆ ಕಚೇರಿ ಹಿರಿಯ ನಾಗರಿಕರ ಠೇವಣಿ ಹಾಗೂ ಇನ್ನು ₹ 15 ಲಕ್ಷ ಎಲ್‌ಐಸಿ ವಯೋವಂದನಾ ಯೋಜನೆಯಲ್ಲಿ ತೊಡಗಿಸಿ. ಇನ್ನುಳಿದ ಹಣ ಪಿಂಚಣಿ ಪಡೆಯುವ ಬ್ಯಾಂಕ್‌ನಲ್ಲಿ ಒಮ್ಮೆಗೇ ಬಡ್ಡಿಬರುವ ಠೇವಣಿಯಲ್ಲಿ 5 ವರ್ಷಗಳ ಅವಧಿಗೆ ಇರಿಸಿ. ನಿಮ್ಮ ನಿವೃತ್ತ ಜೀವನ ಸುಖಮಯವಾಗಿರಲಿ ಎಂದು ಹಾರೈಸುತ್ತೇನೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001. ಇ–ಮೇಲ್: businessdesk@prajavani.co.in

ಸಂಕ್ಷಿಪ್ತ ಸುದ್ದಿ

₹ 14 ಲಕ್ಷ ಕೋಟಿ ದಾಟಿದ ಟಿಸಿಎಸ್ ಮಾರುಕಟ್ಟೆ ಮೌಲ್ಯ

ನವದೆಹಲಿ (ಪಿಟಿಐ): ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಕಂಪನಿಯ ಮಾರುಕಟ್ಟೆ ಬಂಡವಾಳ ಮೌಲ್ಯವು ಮಂಗಳವಾರದ ವಹಿವಾಟಿನಲ್ಲಿ ₹ 14 ಲಕ್ಷ ಕೋಟಿಯ ಗಡಿ ದಾಟಿತು. ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಬಳಿಕ ಈ ಮೈಲಿಗಲ್ಲು ತಲುಪಿದ ದೇಶದ ಎರಡನೇ ಕಂಪನಿ ಟಿಸಿಎಸ್.

ಬಿಎಸ್‌ಇನಲ್ಲಿ ಮಂಗಳವಾರ ಟಿಸಿಎಸ್ ಷೇರು ಮೌಲ್ಯ ಶೇಕಡ 2.30ರಷ್ಟು ಏರಿಕೆ ಕಂಡು, ವಹಿವಾಟಿನ ಅಂತ್ಯದ ವೇಳೆಗೆ ಪ್ರತಿ ಷೇರಿನ ಬೆಲೆ ₹ 3,786.55ಕ್ಕೆ ತಲುಪಿತು. ಇದರಿಂದಾಗಿ ಕಂಪನಿಯ ಮಾರುಕಟ್ಟೆ ಬಂಡವಾಳ ಮೌಲ್ಯವು ₹ 14,00,664.30 ಕೋಟಿಗೆ ಏರಿತು.

‘6 ತಿಂಗಳಲ್ಲಿ ಜೈವಿಕ ಇಂಧನ ವಾಹನ ತಯಾರಿಕೆ ಕಡ್ಡಾಯ’

ಮುಂಬೈ (ಪಿಟಿಐ): ಜೈವಿಕ ಇಂಧನ ಬಳಸಿ ಚಲಿಸುವ ವಾಹನಗಳನ್ನು ಮಾರುಕಟ್ಟೆಗೆ ಬಿಡುವುದನ್ನು ಆಟೊಮೊಬೈಲ್ ಕಂಪನಿಗಳಿಗೆ ಇನ್ನು ಆರು ತಿಂಗಳುಗಳಲ್ಲಿ ಕಡ್ಡಾಯಗೊಳಿಸಲಾಗುವುದು ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ಜೈವಿನ ಇಂಧನವು ಗ್ರಾಹಕರ ಪಾಲಿಗೆ ಕಡಿಮೆ ಖರ್ಚಿನದ್ದಾಗಿರುತ್ತದೆ. ಒಂದು ಲೀಟರ್ ಜೈವಿಕ ಎಥೆನಾಲ್ ಬೆಲೆ ₹ 65 ಮಾತ್ರ. ಇದು ಕಡಿಮೆ ಮಾಲಿನ್ಯ ಉಂಟುಮಾಡುತ್ತದೆ, ದೇಶದ ವಿದೇಶಿ ವಿನಿಮಯ ಉಳಿತಾಯದಲ್ಲಿ ನೆರವಾಗುತ್ತದೆ ಎಂದು ಗಡ್ಕರಿ ಹೇಳಿದ್ದಾರೆ.

‘ಜೈವಿಕ ಇಂಧನ ಬಳಸಿಯೂ ಚಲಿಸಬಲ್ಲ ವಾಹನಗಳನ್ನು ಮಾರುಕಟ್ಟೆಗೆ ಬಿಡುವುದು ಕಡ್ಡಾಯ ಎಂಬ ಆದೇಶವು ಆರು ತಿಂಗಳೊಳಗೆ ಬರಲಿದೆ’ ಎಂದು ಅವರು ತಿಳಿಸಿದ್ದಾರೆ. ಜೈವಿಕ ಇಂಧನ ಮಾರಾಟಕ್ಕೆ ವ್ಯವಸ್ಥೆ ಮಾಡುವಂತೆ ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳಿಗೆ ಸೂಚನೆ ನೀಡಲಾಗಿದೆ ಎಂದಿದ್ದಾರೆ.

ಮಾರುತಿ: ಶೇ 60ರಷ್ಟು ಕುಸಿಯಲಿರುವ ತಯಾರಿಕೆ

ನವದೆಹಲಿ (ಪಿಟಿಐ): ಸೆಮಿಕಂಡಕ್ಟರ್ ಕೊರತೆಯಿಂದಾಗಿ ಸೆಪ್ಟೆಂಬರ್ ತಿಂಗಳಿನಲ್ಲಿ ಹರಿಯಾಣ ಮತ್ತು ಗುಜರಾತ್ ಘಟಕಗಳಲ್ಲಿನ ವಾಹನ ತಯಾರಿಕೆಯು ಒಟ್ಟಾರೆ ಸಾಮರ್ಥ್ಯದ ಶೇಕಡ 40ರಷ್ಟು ಮಾತ್ರವೇ ಇರಲಿದೆ ಎಂದು ಮಾರುತಿ ಸುಜುಕಿ ಇಂಡಿಯಾ ಕಂಪನಿ ಮಂಗಳವಾರ ಹೇಳಿದೆ.

ಸೆಮಿಕಂಡಕ್ಟರ್ ಕೊರತೆಯಿಂದಾಗಿ ಎಲೆಕ್ಟ್ರಾನಿಕ್ ಬಿಡಿಭಾಗಗಳ ಪೂರೈಕೆ ಮೇಲೆ ಪರಿಣಾಮ ಉಂಟಾಗಿದೆ. ಇದರಿಂದಾಗಿ ಸೆಪ್ಟೆಂಬರ್‌ನಲ್ಲಿ ಹರಿಯಾಣ ಮತ್ತು ಗುಜರಾತ್‌ನಲ್ಲಿನ ಸುಜುಕಿ ಮೋಟರ್ ಗುಜರಾತ್ (ಎಸ್‌ಎಂಜಿ) ಘಟಕದಲ್ಲಿ ತಯಾರಿಕೆಗೆ ಪೆಟ್ಟು ಬೀಳುವ ಸಾಧ್ಯತೆ ಇದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಹರಿಯಾಣದ ಗುರುಗ್ರಾಮ ಮತ್ತು ಮಾನೇಸರ ಘಟಕಗಳ ವಾರ್ಷಿಕ ತಯಾರಿಕಾ ಸಾಮರ್ಥ್ಯವು 15 ಲಕ್ಷ. ಅಲ್ಲದೆ, ಜಪಾನ್ ಸುಜುಕಿ ಮೋಟರ್ ಕಾರ್ಪೊರೇಷನ್‌ನ ಅಂಗಸಂಸ್ಥೆ ಆಗಿರುವ ಎಸ್‌ಎಂಜಿ ವಾರ್ಷಿಕವಾಗಿ 7.5 ಲಕ್ಷ ಹೆಚ್ಚುವರಿ ತಯಾರಿಕಾ ಸಾಮರ್ಥ್ಯವನ್ನೂ ಹೊಂದಿದೆ.

ಜುಲೈನಲ್ಲಿ ಒಟ್ಟಾರೆ ತಯಾರಿಕೆಯು ಶೇ 58ರಷ್ಟು ಹೆಚ್ಚಾಗಿ 1.70 ಲಕ್ಷಕ್ಕೆ ತಲುಪಿದೆ. 2020ರ ಜುಲೈಗೆ ಹೋಲಿಸಿದರೆ 2021ರ ಜುಲೈನಲ್ಲಿ ಸಗಟು ಮಾರಾಟವು ಶೇ 50ರಷ್ಟು ಹೆಚ್ಚಾಗಿದೆ ಎಂದೂ ಹೇಳಿದೆ.

ಪರಸ್ಪರ ಅಂತರ ಕಾಯ್ದುಕೊಳ್ಳಿ

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಗ್ರೀನ್ ಟಾಕ್
ಕಲ್ಮಶ ನಿವಾರಕ ವಿಘ್ನೇಶ



https://bit.ly/3t1T3I0

ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್:
ದಿನದ ವಿಶೇಷ: ಝುಣ ಝುಣ ಕಾಂಚಾಣ
ಪ್ರತೀ ದಿನ: ವಚನವಾಣಿ, ದಿನದ ಸೂಕ್ತಿ, ಪ್ರಜಾವಾಣಿ ವಾರ್ತೆ, ಸಂಪಾದಕೀಯ, ಪ್ರಚಲಿತ

ನಾಳೆ

ಸಂವಾದ
ಬೆಳಿಗ್ಗೆ 11ರಿಂದ 12
ಯಡಿಯೂರಪ್ಪ ರಾಜ್ಯ ಪ್ರವಾಸದ ಗುಟ್ಟೇನು? ಬೇಕೆ?:
ವಿ.ಎಸ್.ಉಗ್ರಪ್ಪ, ಮಾಜಿ ಸಂಸದ, ಕಾಂಗ್ರೆಸ್,
ಎನ್. ರವಿಕುಮಾರ್, ವಿಧಾನ ಪರಿಷತ್ ಸದಸ್ಯ, ಬಿಜೆಪಿ.,
ಜಿ.ಎನ್.ನಾಗರಾಜ್, ಸಿಪಿಎಂ ರಾಜ್ಯ ಮಂಡಳಿ ಸದಸ್ಯ.,
ಎಸ್.ಸುಧಾಕರ ಶೆಟ್ಟಿ, ರಾಜ್ಯ ಉಪಾಧ್ಯಕ್ಷ, ಜೆಡಿಎಸ್.,
ಎಂ.ಕೆ.ಭಾಸ್ಕರ ರಾವ್, ಹಿರಿಯ ಪತ್ರಕರ್ತ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	405
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-46000
ಹಳತು	42500-51000
ಪುತ್ತೂರು	
ಕೋಕ	10500-26000
ಹೊಸತು	31500-46000
ಸಿದ್ದಾಪುರ	
ಬಿಳಿಗೋಟು	28899-35689
ಚಾಲಿ	38191-41299
ಕೋಕ	21889-34799
ಕೆಂಪುಗೋಟು	28899-35569
ರಾಶಿ	40819-46899
ತಟ್ಟಿಬೆಟ್ಟೆ	33199-42519
ಶಿರಸಿ	
ಬೆಟ್ಟೆ	30869-44500
ಬಿಳಿಗೋಟು	24601-37462
ಚಾಲಿ	39099-41599
ರಾಶಿ	42699-47299
ಯಲ್ಲಾಪುರ	
ಬಿಳಿಗೋಟು	31212-36899
ಚಾಲಿ	37400-41410
ಕೋಕ	22812-33776
ಕೆಂಪುಗೋಟು	30899-34899
ರಾಶಿ	44009-48689
ತಟ್ಟಿಬೆಟ್ಟೆ	38399-43809
ಶಿವಮೊಗ್ಗ ಎಪಿಎಂಸಿ	
ಗೊರಬಲು	17505-39069
ರಾಶಿ	44100-52099
ಸಾಗರ	
ಬಿಳಿಗೋಟು	16829-37699
ಚಾಲಿ	29309-40229
ಕೋಕ	21369-37799
ಕೆಂಪುಗೋಟು	21869-40199
ರಾಶಿ	34009-50729
ಸಿಪ್ಪೆಗೋಟು	23720-23720
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	289-433
ದ್ವಿತಳಿ (ಬಿ.ವಿ)	271-521

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14250	13000	13250	199.9 ಸೆಂಟ್ಸ್
ಎಸಿ	6300	4800	5375	
ಆರ್‌ಪಿ	6200	6000	6250	ಲಂಡನ್
ಆರ್‌ಸಿ	3535	3500	3625	2018 ಡಾಲರ್ಸ್

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಕವಿ ಲಾಜಿಸ್ಟಿಕ್ಸ್ ಬೆಂಗಳೂರು ಹೈದರಾಬಾದ್ ಮಾರ್ಗದಲ್ಲಿ ಚಲಾಯಿಸಲು ಡ್ರೈವರ್ಸ್ ಬೇಕಾಗಿದ್ದಾರೆ, ಹೆವಿ ಡ್ರೈವಿಂಗ್ ಲೈಸೆನ್ಸ್ ನೊಂದಿಗೆ ನಂ.4/1, 2ನೇ ಮುಖ್ಯ ರಸ್ತೆ, ಶ್ರೀರಾಂಪುರಂ, ಬೆಂಗಳೂರು: 9738421001, 9886683188

General

ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾಜಿಲ್ಲೆಗಳಲ್ಲಿನ ಕಂಪನಿಗಳಿಗೆ ಹಾಗೂ ಆಫೀಸ್‌ಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC,PUC,ITI Degree Pass/Fail ಆದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ಉಚಿತ ವಸತಿಯೂಟದೊಂದಿಗೆ ESI/PFನೊಂದಿಗೆ ಸಂಬಳ:16,500/-ರಿಂದ 45000/-ದವರೆಗೆ. 7829256781, 7829215432

TVS, ವಿಡಿಯೋಕಾನ್, TOYOTA, ಬ್ರಿಟಾನಿಯಾ MNC ಕಂಪನಿಗಳಿಗೆ SSLC, PUC, Degree, ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) 17,800-56,000/- ವಸತಿಯೂಟವಿದೆ. 9611715755

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧ ಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-. 9980295449, 9902839010

ಖಾಸಗಿ ಬ್ಯಾಂಕ್ ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC, Degree ಸಂಬಳ 15000-28000 ಸಂಪರ್ಕಿಸಿರಿ 9980814578, 9980812378

Multiple Vacancy

ಬೇಕಾಗಿದ್ದಾರೆ: ಸೆಕ್ಯೂರಿಟೀ ಗಾರ್ಡ್‌ಗಳು, ಅಟೆಂಡರ್, ಕ್ಲೀನರ್, ಆಯಾಗಳು, ಸಂಪರ್ಕಿಸಿ: ಕ್ಯಾಮ್ಲಿನ್ ಆಂಗ್ಲ ಶಾಲೆ, 6ನೇ 'ಸಿ' ಮೇನ್, 4ನೇ ಕ್ರಾಸ್, ಹಂಪಿನಗರ, ಬೆಂಗಳೂರು. ದೂರವಾಣಿ: 08023301363

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Security & Detectives

2 ವರ್ಷ ಅನುಭವವಿರುವ 45 ವರ್ಷದೊಳಗಿನ ಶಾಲೆಯ ಸುತ್ತಮುತ್ತ ವಾಸವಿರುವ ಸೆಕ್ಯೂರಿಟೀ ಗಾರ್ಡ್ (Security Guard) ಬೇಕಾಗಿದ್ದಾರೆ. ಸಂಬಳ 10,000 ದಿಂದ 15,000. ಊಟ ಮತ್ತು ವಸತಿ ಸೌಕರ್ಯವಿರುವುದಿಲ್ಲ. ಚಿತ್ರಕೂಟ ಶಾಲೆ, ನಾಗದೇವನಹಳ್ಳಿ, ಬೆಂಗಳೂರು.560056. ಸಂಪರ್ಕಿಸಿ: 7829647333

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ, ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು ಉಚಿತ ಊಟ ವಸತಿ ಸಂಬಳ 10,000 ರಿಂದ 15,000/- ESI & PF ಸೌಲಭ್ಯವಿರುತ್ತದೆ.ಬೆಂಗಳೂರು-56 ಸಂಪರ್ಕಿಸಿ: 9606385001, 9606523337

ನೇರನೇಮಕಾತಿ 7TH,SSLC, PUC, Degree,ITI ನವರು TOYOTA, TATA ಮೋಟಾರ್ಸ್, ಬಿಗ್‌ಬಜಾರ್ಸ್, TVS ಗಳಿಗೆ 18,000-60,000/- ವಸತಿಯೂಟವಿದೆ. 7795837319, 9901312461

ಮನೆಯಿಂದಲೆ ಕುಳಿತು ಡಾಟಾ ಎಂಟ್ರಿ ಫಾರಂ-ಫಿಲ್ಲಿಂಗ್ ಬರವಣಿಗೆ Offline. Weekly ಪೇಮೆಂಟ್ಸ್ 3000- 5000. ಸಂಪರ್ಕಿಸಿ: 7624918246, 7259848246.

ಬೆಂಗಳೂರು ಮನೆಕೆಲಸ ಮಾಡುವ ಒಬ್ಬ ಮಹಿಳೆ, ಮನೆಯಲ್ಲಿ ಉಳಿದುಕೊಳ್ಳುವಂತವರು, ವಯಸ್ಸು 35ರ ಒಳಗೆಇರಬೇಕು , ಊಟ, ವಸತಿ ಇರುತ್ತದೆ: 9901931555

ವ್ಯಾಪಾರ

Business to Business

Business

ರೇಡಿಯೇಟರ್ ಕೂಲಂಟ್ ಲಭ್ಯವಿದೆ @ ರೂ .35/ ಪ್ರತಿ ಲೀಟರ್‌ಗೆ. ಸಂಪರ್ಕಿಸಿ: ಸಾಯಿಶಬ್ದ್ ಇಂಡಸ್ಟ್ರೀಸ್ (ಮಧ್ಯ ಪ್ರದೇಶ), 9827091911

Others

ಯಾರನ್ನು ಸಂಪರ್ಕಿಸಬೇಕಾಗಿಲ್ಲ, ನಿಮ್ಮದೇ ಮೊಬೈಲ್ ನಿಂದ ಬ್ಯಾಂಕ್ ಅಕೌಂಟಿಗೆ ಇವತ್ತಿಂದಲೇ 2000 ಜಮೆಯಾಗುವಂತ ಮೊಬೈಲ್ ಗೇಮ್,ಸಾಕ್ಷಿಸಮೇತ ಉಪಾಯ, ವಿಶ್ವಾಸವಿದ್ದವರಿಗೆ. 8884826120

Business Offers

General

ನಮ್ಮಲ್ಲಿ ಕರ್ಪೂರ ಹೋಲ್ ಸೇಲ್ ದರದಲ್ಲಿ ದೊರೆಯುತ್ತದೆ. ಅಂಗಡಿಯವರಿಗೆ, ದೇವಸ್ಥಾನಗಳಿಗೆ ರಿಯಾಯಿತಿ ದರದಲ್ಲಿ ಕೊಡಲಾಗುವುದು. ಸಂಪರ್ಕಿಸಿ : ರಾಘವೇಂದ್ರ 9342808865.

ಭವಿಷ್ಯ

Astrology

★॥ಶ್ರೀಆಂಜನೇಯಸ್ವಾಮಿ॥★ ಆರಾಧನೆಯಿಂದ ಪ್ರೀತಿಪ್ರೇಮ, ವಶೀಕರಣ, ಸಾಲದಬಾಧೆ, ಕೋರ್ಟ್ ಕೇಸ್, ವ್ಯಾಪಾರ, ಸಂತಾನ ಇನ್ನೂ ಯಾವುದೇ ಗುಪ್ತ ಸಮಸ್ಯೆಗಳಿಗೆ ಫೋನಿನ ಮೂಲಕ ಪರಿಹಾರ. 9880977623

★॥ವಶೀಕರಣ ಸ್ಪೆಷಲಿಸ್ಟ್॥★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ ಮೂಲಕ, ಮಾತನಾಡುವ ಮೂಲಕ, ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಶಾಶ್ವತ ಪರಿಹಾರ. 9900511008''

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

ಶಕ್ತಿಶಾಲಿ ಮಹಾಲಕ್ಷ್ಮಿ ಯಂತ್ರ ವ್ಯಾಪಾರ ಅಭಿವೃದ್ಧಿ, ಹಣಕಾಸಿನ ಸಮಸ್ಯೆಯಿಂದ ಆರ್ಥಿಕ ಅಭಿವೃದ್ಧಿ ಹೊಂದಲು ಲಕ್ಷ್ಮಿಯಂತ್ರ ಉಚಿತವಾಗಿ ಕೊಡಲಾಗುತ್ತದೆ ಹಾಗೂ ಎಲ್ಲಾ ಕಠಿಣ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ: 9606701007, 8892501007

★॥ಸಿಗಂದೂರು ಚೌಡೇಶ್ವರಿ॥★ ವಶೀಕರಣಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಇತರೆ

Medical

ಶ್ರೀಶಕ್ತಿ ಹೆಲ್ತ್-ಕೇರ್ ವತಿಯಿಂದ ಯಾವುದೇ ಶಸ್ತ್ರಚಿಕಿತ್ಸೆವಿಲ್ಲದೆ ಮಂಡಿನೋವು, ಬೆನ್ನುನೋವು, ಕತ್ತುನೋವು, ವೆರಿಕೋಸ್ ವೈನ್ಸ್, ಸೊಂಟ ಮತ್ತು ಕಾಲುಗಳಲ್ಲಿ ಶಕ್ತಿ ಕಳೆದುಕೊಂಡವರು, ಸಂಧಿವಾತ, ಟೆನ್ನಿಸ್ ಎಲ್ಬೋವೇನ್, ತಲೆನೋವು, ಮೈಗ್ರೇನ್, ರೋಮೆಟೋ ಆರ್ಥ್ರೈಟಿಸ್, ಹಿಮ್ಮಡಿನೋವು, ಬುಜದನೋವುಗಳಿಗೆ ಎಲೆಕ್ಟ್ರೋ ಮ್ಯಾಗ್ನೆಟಿಕ್ ಚಿಕಿತ್ಸೆ ಕೊಡಲಾಗುವುದು ಸ್ಥಳ ಹುಮನಾಬಾದ ಜಿ// ಬೀದರ್: 6366656745

ವೈಯಕ್ತಿಕ

Change of Name

ನಾನು ಶ್ರೀಮತಿ ಮುನಿಲಕ್ಷ್ಮಮ್ಮW/o ನಾರಾಯಣಸ್ವಾಮಿ ವಿ. ಎನ್. ರವರ ಧರ್ಮಪತ್ನಿಯಾಗಿದ್ದು ನಂ. 146, ವಾಜರಹಳ್ಳಿ, ಕನಕಪುರ ಮುಖ್ಯ ರಸ್ತೆ, ತಲಘಟ್ಟಪುರ, ಬೆಂಗಳೂರು-560 109 ರಲ್ಲಿ ವಾಸವಾಗಿದ್ದು ಹಳೆ ದಾಖಲೆಗಳಲ್ಲಿ ನನ್ನ ಹೆಸರು ನೀಲಮ್ಮ ಎಂದು ಇರುವುದಾಗಿ ಇದನ್ನು ಮುನಿಲಕ್ಷ್ಮಮ್ಮ ಎಂದು ಬದಲಾಯಿಸಿಕೊಂಡಿರುತ್ತೇನೆ. ನೋಟರಿ ದಿನಾಂಕ 31-08-2021 ಮುದ್ರಾಂಕ: L. ಶಂಕರನಾರಾಯಣ, ಬೆಂಗಳೂರು.

ಸಮಾಜಸೇವೆ

Old Age Home

ಸೇವಾ ಮನೋಭಾವವುಳ್ಳ ಯುವಕ, ಯುವತಿಯರು ಹಾಗೂ ದಂಪತಿಗಳು ಬೆಂಗಳೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ,ಉಚಿತ ಊಟ ವಸತಿಯೊಂದಿಗೆ ಉತ್ತಮ ಸಂಬಳ, ತರಬೇತಿ ನೀಡಲಾಗುವುದು ಸಂಪರ್ಕಿಸಿ: 9900371597, 9739320897, 9916551457, 9916544057, 9620761222

ಪ್ರವಾಸ

Travel

ಅಂಡಮಾನ್ ಹವಳದ್ವೀಪ ಸೆಪ್ಟಂಬರ್, ಅಕ್ಟೋಬರ್, ನವೆಂಬರ್‌ನಲ್ಲಿ 5 ದಿನಗಳು ವಿಮಾನದಲ್ಲಿ. Royal Package. ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್ 9845560219/ 9739847429.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ Classifieds

EFFECTIVE FROM JUNE 3rd, 2020

DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

20 ವರ್ಷಗಳ ಸಮರ ಮುಗಿಸಿ ಮರಳಿದ ಅಮೆರಿಕ, ನ್ಯಾಟೊ ಪಡೆ: ತಾಲಿಬಾನ್ ಕೈಗೆ ದೇಶದ ಚುಕ್ಕಾಣಿ

ಕದನ ಕೊನೆ: ಅಫ್ಗನ್ ಈಗ ಭೀತಿಯ ಮನೆ

ಕಾಬೂಲ್ (ಎಎಫ್‌ಪಿ): ಅಮೆರಿಕದ ಕೊನೆಯ ಯುದ್ಧ ವಿಮಾನವು ಕಾಬೂಲ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಹಾರುವುದರೊಂದಿಗೆ ಎರಡು ದಶಕಗಳ ಯುದ್ಧವೊಂದು ಕೊನೆಗೊಂಡಿದೆ. ತಾಲಿಬಾನ್ ಸಂಘಟನೆಗೆ ಗೆಲುವಾಗಿದೆ ಮತ್ತು ಈ ಮೂಲಕ ಮತ್ತೊಂದು ಅವಧಿಯ ಅನಿಶ್ಚಿತ ಸ್ಥಿತಿಯು ಅಫ್ಘಾನಿಸ್ತಾನದ ಜನರಿಗೆ ಎದುರಾಗಿದೆ.

1996–2001ರ ಅವಧಿಯಲ್ಲಿ ಅಫ್ಘಾನಿಸ್ತಾನದಲ್ಲಿ ತಾಲಿಬಾನ್ ಆಳ್ವಿಕೆ ಇತ್ತು. ಆಗ ಜಾರಿಯಲ್ಲಿದ್ದ ಕಠಿಣ ನಿಯಮಗಳು, ತಾಲಿಬಾನ್ ವಿರೋಧಿಗಳು ಅನುಭವಿಸಬೇಕಾಗಿ ಬಂದಿದ್ದ ಕ್ರೌರ್ಯ, ಮಹಿಳೆಯರ ಹಕ್ಕುಗಳ ದಮನವನ್ನು ಜನರು ಈಗಲೂ ಮರೆತಿಲ್ಲ.

ಕೊನೆಗೂ ಯುದ್ಧ ನಿಂತಿತಲ್ಲ ಎಂದು ಅಫ್ಗನ್ನರು ಅದರಲ್ಲೂ ವಿಶೇಷವಾಗಿ ಗ್ರಾಮೀಣ ಪ್ರದೇಶದ ಜನರು ನಿರಾಳರಾಗಿರುವುದು ಹೌದು. ಆದರೆ, ಯುದ್ಧ ಮತ್ತು ಬರಗಾಲವು ಸೃಷ್ಟಿಸಿರುವ ಆರ್ಥಿಕ, ರಾಜಕೀಯ ಮತ್ತು ಭದ್ರತಾ ಸವಾಲುಗಳು ಜನರನ್ನು ದೀರ್ಘ ಕಾಲ ಕಾಡಲಿದೆ.

ಹೊಸ ಆಳ್ವಿಕೆಯು ಹಿಂದಿನಂತೆ ಇರುವುದಿಲ್ಲ ಎಂಬ ಭರವಸೆಯನ್ನು ತಾಲಿಬಾನ್ ನೀಡಿದೆ. ಆದರೆ, ನೀತಿಯ ಮಟ್ಟದ ಯಾವುದೇ ವಿವರಗಳನ್ನು ಬಹಿರಂಗಪಡಿಸಿಲ್ಲ. ಹಿಂದಿಗಿಂತ ಸೌಮ್ಯ ಆಳ್ವಿಕೆ, ವಿರೋಧಿಗಳಿಗೆ ಕ್ಷಮಾದಾನ, ಮಹಿಳೆಯರು ಕೆಲವು ಕ್ಷೇತ್ರಗಳಲ್ಲಿ ಕೆಲಸ ಮಾಡಲು ಅವಕಾಶ ಮುಂತಾದ ಭರವಸೆಗಳನ್ನು ತಾಲಿಬಾನ್ ನೀಡಿದೆ. ಅಫ್ಘಾನಿಸ್ತಾನವನ್ನು ಉಗ್ರರು ಬಳಸಿಕೊಳ್ಳುವುದಕ್ಕೆ ಅವಕಾಶ ನೀಡುವುದಿಲ್ಲ, ತನಗೆ ಅಂತರರಾಷ್ಟ್ರೀಯ ಮನ್ನಣೆ ಬೇಕು ಎಂದೂ ತಾಲಿಬಾನ್ ಹೇಳಿದೆ. ಅಮೆರಿಕದ ತೆರವು ಕಾರ್ಯಾಚರಣೆ ಒಪ್ಪಂದದ ಪ್ರಮುಖ ಅಂಶ ಇದು ಎನ್ನಲಾಗಿದೆ.

ಎಲ್ಲರನ್ನೂ ಒಳಗೊಂಡ ಸರ್ಕಾರ ರಚಿಸಲಾಗುವುದು. ಹಾಗಾಗಿ, ಬುಡಕಟ್ಟು ಸಮುದಾಯದ ಪ್ರಾಬಲ್ಯವಿರುವ ಪಂಜ್‌ಶಿರ್ ಕಣಿವೆಯ ನಾಯಕರ ಜತೆಗೆ ಮಾತುಕತೆಗೆ ತಾಲಿಬಾನ್ ಮುಂದಾಗಿದೆ ಎನ್ನಲಾಗಿದೆ. ಹಝರಾ ಸಮುದಾಯದ ಜತೆಗೆ ಮಾತುಕತೆಗೂ ಪ್ರತಿನಿಧಿಗಳನ್ನು ಕಳುಹಿಸಲಾಗಿದೆ. ಮೊದಲ ಅವಧಿಯಲ್ಲಿ, ಶಿಯಾ ಪಂಗಡದ ಈ ಸಮುದಾಯದ ಜನರ ಹತ್ಯಾಕಾಂಡವನ್ನೇ ತಾಲಿಬಾನ್ ನಡೆಸಿತ್ತು. ಆದರೆ, ಈ ಭರವಸೆಗಳನ್ನು ಅಫ್ಘಾನಿಸ್ತಾನದ ಜನರು ನಂಬಿಲ್ಲ. ಜನರ ಮನದಲ್ಲಿರುವ ಭೀತಿ ಮರೆಯಾಗಿಲ್ಲ. ತಾಲಿಬಾನ್ ಆಳ್ವಿಕೆಯಿಂದ ತಪ್ಪಿಸಿಕೊಳ್ಳುವ ಯೋಚನೆಯಲ್ಲಿ ಸಾವಿರಾರು ಜನರು ಇದ್ದಾರೆ. ಮಹಿಳೆಯರಲ್ಲಿ ಅಪಾರ ಭೀತಿ ಮನೆ ಮಾಡಿದೆ.

ಪತ್ರಕರ್ತರು ಮತ್ತು ಮಾನವ ಹಕ್ಕು ಹೋರಾಟಗಾರರು ಸೇರಿದಂತೆ ಹಲವರು ಇನ್ನೂ ಅಫ್ಘಾನಿಸ್ತಾನದಲ್ಲಿ ಇದ್ದಾರೆ. ಇವರೆಲ್ಲರಲ್ಲಿಯೂ ಭೀತಿ ಇದೆ.

ಕಾಬೂಲ್‌ನ ಬೀದಿಗಳಲ್ಲಿ ತಾಲಿಬಾನ್ ಸೈನಿಕರ ಸಂಭ್ರಮಾಚರಣೆ ಎಎಫ್‌ಪಿ ಚಿತ್ರ

ಹೆಲಿಕಾಪ್ಟರ್‌ನಲ್ಲಿ ನೇತಾಡಿದ ದೇಹ?

ಸೇನಾ ಹೆಲಿಕಾಪ್ಟರ್ ವ್ಯಕ್ತಿಯೊಬ್ಬರನ್ನು ನೇತಾಡಿಸಿಕೊಂಡು ಅಫ್ಗಾನಿಸ್ತಾನದ ಕಂದಹಾರ್ ಮೇಲೆ ಹಾರಾಡುತ್ತಿದೆ ಎನ್ನಲಾದ ವಿಡಿಯೊವೊಂದನ್ನು ತಾಲಿಬ್ ಟೈಮ್ಸ್ ಎಂಬ ಟ್ವಿಟರ್ ಖಾತೆಯಲ್ಲಿ ಪ್ರಕಟಿಸಲಾಗಿದೆ. ಈ ವಿಡಿಯೊವನ್ನು ಪತ್ರಕರ್ತರು ಸೇರಿ ಹಲವರು ಹಂಚಿಕೊಂಡಿದ್ದಾರೆ.

ತಾಲಿಬ್ ಟೈಮ್ಸ್ ಎಂಬುದು ತಾಲಿಬಾನ್‌ನ ಅಧಿಕೃತವಾದ ಇಂಗ್ಲಿಷ್ ಭಾಷಾ ಟ್ವಿಟರ್ ಖಾತೆ ಎಂದು ಖಾತೆಯಲ್ಲಿ ಹೇಳಿಕೊಳ್ಳಲಾಗಿದೆ. 'ನಮ್ಮ ಹೆಲಿಕಾಪ್ಟರ್ ನಗರದ ಮೇಲೆ ಗಸ್ತು ನಡೆಸುತ್ತಿದೆ' ಎಂದು ಟ್ವೀಟ್‌ನಲ್ಲಿ ವಿವರಿಸಲಾಗಿದೆ. 'ಇದು ನಮ್ಮ ವಾಯುಪಡೆ! ಇಸ್ಲಾಮಿಕ್ ಎಮಿರೇಟ್‌ನ ವಾಯುಪಡೆಯ ಹೆಲಿಕಾಪ್ಟರ್ ಕಂದಹಾರ್ ನಗರದ ಮೇಲೆ ಹಾರಾಡುತ್ತಿದೆ' ಎಂದು ಟ್ವೀಟ್‌ನಲ್ಲಿ ಇದೆ.

ನೇತಾಡುತ್ತಿರುವ ವ್ಯಕ್ತಿಯು ಅಮೆರಿಕಕ್ಕೆ ನೆರವಾದ ದುಭಾಷಿ. ಅದಕ್ಕಾಗಿಯೇ ಅಮೆರಿಕದ ಸೇನೆಯು ವಾಪಸಾದ ಬಳಿಕ ಆ ವ್ಯಕ್ತಿಯ ಹತ್ಯೆ ಮಾಡಿ ಹೆಲಿಕಾಪ್ಟರ್‌ಗೆ ನೇತು ಹಾಕಲಾಗಿದೆ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿವೆ. ಆದರೆ, ಈ ಬಗ್ಗೆ ಯಾವುದೇ ಸ್ಪಷ್ಟನೆ ಇಲ್ಲ.

ತಾಲಿಬಾನ್ ಎದುರು ಐದು ಸವಾಲುಗಳು

ಕಾಬೂಲ್ (ಎಎಫ್‌ಪಿ): ತಾಲಿಬಾನಿಗಳು ಯುದ್ಧ ಗೆದ್ದಾಗಿದೆ, ಅವರೀಗ ಅಫ್ಘಾನಿಸ್ತಾನದ ಆಡಳಿತವನ್ನು ಸೂಕ್ತವಾಗಿ ನಿರ್ವಹಿಸಬೇಕಿದೆ.

ನಾಲ್ಕು ದಶಕಗಳಿಗಿಂತಲೂ ಹೆಚ್ಚು ಅವಧಿಯ ಯುದ್ಧದಿಂದ, ತೀವ್ರವಾದ ರಾಜಕೀಯ ಮತ್ತು ಸಾಮಾಜಿಕ ಸಮಸ್ಯೆಗಳು ಜಟಿಲಗೊಂಡು ಬಡವಾಗಿರುವ, ರಾಜತಾಂತ್ರಿಕವಾಗಿ ಪ್ರತ್ಯೇಕವಾಗಿರುವ ಅಫ್ಘಾನಿಸ್ತಾನದ ಆಡಳಿತವು ತಾಲಿಬಾನ್‌ಗೆಗ ದೊಡ್ಡ ಅಗ್ನಿಪರೀಕ್ಷೆಯೇ ಆಗಿದೆ. ತಾಲಿಬಾನ್ ಮುಂದಿನ ಪ್ರಮುಖ ಐದು ಸವಾಲುಗಳು ಹೀಗಿವೆ:

1. 1996ರಿಂದ 2001ರವರೆಗೆ ಆಡಳಿತ ನಡೆಸಿದ್ದ ತಾಲಿಬಾನ್, ಇಸ್ಲಾಂನ ಕಠಿಣ ನಿಯಮಗಳನ್ನು ಅಫ್ಘಾನಿಸ್ತಾನದಲ್ಲಿ ಹೇರಿತ್ತು. ಮಹಿಳೆಯರು ಸಾರ್ವಜನಿಕವಾಗಿ ಕಾಣಿಸಿಕೊಳ್ಳುವುದು, ಶಿಕ್ಷಣ ಪಡೆಯುವುದು ನಿಷಿದ್ಧವಾಗಿದ್ದವು. ರಾಜಕೀಯ ವಿರೋಧಿಗಳನ್ನು ಬರ್ಬರವಾಗಿ ಹತ್ಯೆ ಮಾಡಲಾಗಿತ್ತು. ಧಾರ್ಮಿಕ ಮತ್ತು ಜನಾಂಗೀಯ ಅಲ್ಪಸಂಖ್ಯಾತರ ಹತ್ಯಾಕಾಂಡ ನಡೆದಿತ್ತು.

ಈ ಬಾರಿ ಸುಧಾರಿತ ಆಡಳಿತ ನೀಡುವುದಾಗಿ ತಾಲಿಬಾನ್ ಭರವಸೆ ನೀಡಿದೆ. ಅಮೆರಿಕ ಬೆಂಬಲಿತ ಮಾಜಿ ಅಧ್ಯಕ್ಷ ಹಮೀದ್ ಕರ್ಜೈ ಸೇರಿದಂತೆ ವಿವಿಧ ನಾಯಕರ ಜೊತೆ ಮಾತುಕತೆಯನ್ನು ಪ್ರಸ್ತಾಪಿಸಿರುವ ತಾಲಿಬಾನ್, ಎಲ್ಲರನ್ನೂ ಒಳಗೊಂಡ ಸರ್ಕಾರ ರಚಿಸುವುದಾಗಿ ತಿಳಿಸಿದೆ.

2. ಅಫ್ಘಾನಿಸ್ತಾನವು ಜಗತ್ತಿನ ಬಡ ರಾಷ್ಟ್ರಗಳಲ್ಲಿ ಒಂದು. 2001ರಲ್ಲಿ ತಾಲಿಬಾನ್ ಪತನದ ಬಳಿಕ ದೊಡ್ಡ ಪ್ರಮಾಣದ ಅಂತರರಾಷ್ಟ್ರೀಯ ನೆರವು ಹರಿದುಬಂದಿತು. 2020ರಲ್ಲಿ ದೇಶದ ಜಿಡಿಪಿಯ ಶೇ 40ರಷ್ಟು ಹಣ ನೆರವಿನದ್ದೇ ಆಗಿತ್ತು. ಆದರೆ ಈ ಪೈಕಿ ಬಹುಪಾಲು ನಿಂತುಹೋಗಿದೆ. ಉಳಿದದ್ದರ ಬಗ್ಗೆ ಖಾತರಿಯಿಲ್ಲ. ಅಮೆರಿಕದಲ್ಲಿರುವ ಅಫ್ಘಾನ್ ಕೇಂದ್ರೀಯ ಬ್ಯಾಂಕ್ ನಿಧಿ ಪಡೆಯಲು ತಾಲಿಬಾನ್‌ಗೆ ಯಾವುದೇ ಅವಕಾಶ ಇಲ್ಲ.

ಆರ್ಥಿಕ ಸಮಸ್ಯೆಯು ದೇಶದ ಬಿಕ್ಕಟ್ಟನ್ನು ಉಲ್ಬಣಗೊಳಿಸಲಿದೆ. ಸರ್ಕಾರಿ ನೌಕರರಿಗೆ ಹೇಗೆ ಸಂಬಳ ನೀಡಬೇಕು ಮತ್ತು ನೀರು, ವಿದ್ಯುತ್ ಮೊದಲಾದ ಮೂಲಸೌಕರ್ಯಗಳ ನಿರ್ವಹಣೆ ಹೇಗೆ ಮಾಡುವುದು ಎಂಬುದಕ್ಕೆ ತಾಲಿಬಾನ್ ಸಿದ್ಧವಾಗಬೇಕಿದೆ. ದೇಶದಲ್ಲಿ ಮುಗಿಯುತ್ತಾ ಬಂದಿರುವ ದಿನಸಿ ದಾಸ್ತಾನು ಹಾಗೂ ಎದುರಾಗಲಿರುವ ತೀವ್ರ ಬರಗಾಲದ ಬಗ್ಗೆ ವಿಶ್ವಸಂಸ್ಥೆ ಈಗಾಗಲೇ ಎಚ್ಚರಿಕೆ ನೀಡಿದೆ.

ಬಂಡುಕೋರರಾಗಿದ್ದಾಗ ತಾಲಿಬಾನ್ ದೊಡ್ಡ ಆದಾಯ ಹೊಂದಿತ್ತು. ಆದರೆ ಅಫ್ಘಾನಿಸ್ತಾನದ ರಾಷ್ಟ್ರೀಯ ಅವಶ್ಯಕತೆಗಳಿಗೆ ಹೋಲಿಸಿದರೆ ಇದು ಒಂದು ಸಣ್ಣ ಮೊತ್ತ ಎಂದು ತಜ್ಞರು ಹೇಳಿದ್ದಾರೆ. ಗಡಿ ದಾಟಲು ಸುಂಕ ಸೇರಿದಂತೆ, ಅಧಿಕಾರ ವಹಿಸಿಕೊಂಡ ಬಳಿಕ ಕೆಲವು ಆದಾಯದ ಮೂಲಗಳನ್ನು ತಾಲಿಬಾನ್ ಕಂಡುಕೊಂಡಿದೆ.

3. ಆರ್ಥಿಕ ಸಂಪನ್ಮೂಲದ ಜೊತೆಗೆ ತಾಲಿಬಾನ್‌ಗೆ ಅತಿಮುಖ್ಯವಾಗಿ ಬೇಕಿರುವುದು ಕೌಶಲಯುತ ಜನ. ಅತ್ತ ಅಮೆರಿಕದ ಪಡೆಗಳು ದೇಶ ತೊರೆಯುತ್ತಿದ್ದಂತೆಯೇ, ಇತ್ತ ಸರ್ಕಾರವು ನಿಯಂತ್ರಣ ಕಳೆದುಕೊಂಡಿತು. ಕೌಶಲ, ಅನುಭವ ಮತ್ತು ಸಂಪನ್ಮೂಲ ಹೊಂದಿರುವ ಅಫ್ಗನ್ನರೂ ನಿರ್ಗಮನಕ್ಕೆ ಮುಂದಾದರು.

ಅಧಿಕಾರಿಗಳು, ಬ್ಯಾಂಕರ್‌ಗಳು, ವೈದ್ಯರು, ಎಂಜಿನಿಯರ್‌ಗಳು, ಪ್ರಾಧ್ಯಾಪಕರು, ವಿಶ್ವವಿದ್ಯಾಲಯಗಳ ಪದವೀಧರರು ತಾಲಿಬಾನ್ ಆಡಳಿತದ ಬಗ್ಗೆ ಭೀತಿ ಹೊಂದಿದ್ದಾರೆ. ಈ ಬಗ್ಗೆ ತಾಲಿಬಾನಿಗಳಿಗೂ ಅರಿವಿದೆ. ಹೀಗಾಗಿಯೇ, ವೈದ್ಯರು, ಎಂಜಿನಿಯರ್‌ಗಳಂತಹ ನುರಿತ ಅಫ್ಗನ್ನರ ಅಗತ್ಯವಿದ್ದು, ಅವರು ದೇಶ ಬಿಡಬಾರದು ಎಂದು ತಾಲಿಬಾನ್ ವಕ್ತಾರರು ಒತ್ತಾಯಿಸಿದ್ದಾರೆ.

4. ತಾಲಿಬಾನ್‌ನ ಮೊದಲ ಅವಧಿಯ ಆಡಳಿತವು ಏಕಮುಖವಾಗಿತ್ತು. ಈ ಬಾರಿ ಅಂತರರಾಷ್ಟ್ರೀಯ ಸಮುದಾಯದ ಒಲವು ಗಳಿಸುವ ಉದ್ದೇಶವನ್ನು ತಾಲಿಬಾನ್ ಹೊಂದಿದೆಯಾದರೂ, ಹಲವು ದೇಶಗಳು ಈಗಾಗಲೇ ಅಫ್ಗನ್‌ನಲ್ಲಿರುವ ರಾಯಭಾರ ಕಚೇರಿಗಳನ್ನು ಮುಚ್ಚಿವೆ.

ಈ ಕಾರಣದಿಂದ ತಾಲಿಬಾನ್ ಸಂಘಟನೆಯು ಪ್ರಾದೇಶಿಕ ಶಕ್ತಿಗಳಾದ ಪಾಕಿಸ್ತಾನ, ಇರಾನ್, ರಷ್ಯಾ ಮತ್ತು ಚೀನಾ ಜೊತೆ ಸಂಪರ್ಕ ಹೊಂದಿದೆ. ಅಮೆರಿಕ ಸೇರಿದಂತೆ ಯಾವ ದೇಶಗಳು ಇದನ್ನು ಮಾನ್ಯ ಮಾಡಿಲ್ಲ. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ನಿರ್ಣಯದ ವೇಳೆ ಚೀನಾ ಮತ್ತು ರಷ್ಯಾಗಳು ಗೈರಾಗಿರುವುದು, ತಾಲಿಬಾನ್ ಅನ್ನು ಹೇಗೆ ನಿರ್ವಹಿಸಬೇಕು ಎಂಬ ವಿಚಾರದಲ್ಲಿ ಸ್ಪಷ್ಟ ಭಿನ್ನಮತ ಕಂಡುಬಂದಿದೆ.

5. ತಾಲಿಬಾನ್ ಈಗ ಅಫ್ಘಾನಿಸ್ತಾನವನ್ನು ನಿಯಂತ್ರಣಕ್ಕೆ ಪಡೆದಿದ್ದರೂ, ದೇಶದಲ್ಲಿ ಭಯೋತ್ಪಾದಕ ಕೃತ್ಯಗಳಿಗೆ ಪರಿಹಾರ ಸಿಕ್ಕಿಲ್ಲ. ವಿರೋಧಿ ಬಣವಾದ ಐಎಸ್ ಖೊರಾಸನ್ ಈಗಾಗಲೇ ಸಕ್ರಿಯವಾಗಿದ್ದು, ಕಾಬೂಲ್ ವಿಮಾನ ನಿಲ್ದಾಣದ ಬಳಿ ಆತ್ಮಾಹುತಿ ದಾಳಿ ನಡೆಸಿ ನೂರಕ್ಕೂ ಹೆಚ್ಚು ಜೀವ ಬಲಿ ಪಡೆದಿದೆ.

ಅಫ್ಘಾನಿಸ್ತಾನದಲ್ಲಿ ಹೋರಾಟ ಮುಂದುವರಿಸುವುದಾಗಿ ಐಎಸ್ ಹೇಳಿದೆ. ತಾಲಿಬಾನ್ ಅನ್ನು ಧರ್ಮಭ್ರಷ್ಟ ಎಂದೂ ಕರೆದಿದೆ. ತಾಲಿಬಾನ್ ಈಗ ವಹಿಸುವ ಪಾತ್ರ ನಿರ್ಣಾಯಕವಾಗಿದೆ. ತಮ್ಮ ಬಂಡುಕೋರರು ಹಲವು ವರ್ಷಗಳಿಂದ ನಡೆಸಿದ ಅದೇ ರೀತಿಯ ದಾಳಿಗಳಿಂದ ಈಗ ಅವರು ಅಫ್ಗನ್ ಜನರನ್ನು ರಕ್ಷಿಸಬೇಕಿದೆ.

ಕಾಬೂಲ್ ವಿಮಾನ ನಿಲ್ದಾಣದಲ್ಲಿ ತಾಲಿಬಾನ್ ವಕ್ತಾರ ಝುಬೀವುಲ್ಲಾ ಮಾಧ್ಯಮಗಳ ಪ್ರತಿನಿಧಿಗಳೊಂದಿಗೆ ಮಾತನಾಡಿದರು – ಎಎಫ್‌ಪಿ ಚಿತ್ರ

20 ವರ್ಷ ಬಳಿಕ ಹೀನಾಯ ನಿರ್ಗಮನ

ಕಾಬೂಲ್ (ರಾಯಿಟರ್ಸ್): ಕಾಬೂಲ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ನಿಯಂತ್ರಣವನ್ನು ಮಂಗಳವಾರ ನಸುಕಿಗೂ ಮುನ್ನವೇ ತಾಲಿಬಾನ್ ಕೈಗೆತ್ತಿಕೊಂಡಿದೆ.

ಗಾಳಿಯಲ್ಲಿ ಗುಂಡು ಹಾರಿಸುವ ಮೂಲಕ ತಾಲಿಬಾನ್ ಸೈನಿಕರು ಸಂಭ್ರಮ ಆಚರಿಸಿದ್ದಾರೆ. ಇದರೊಂದಿಗೆ, 2001ರಿಂದ ಅಫ್ಘಾನಿಸ್ತಾನದಲ್ಲಿ ಅಮೆರಿಕವು ನಡೆಸುತ್ತಿದ್ದ ಯುದ್ಧವು ಕೊನೆಗೊಂಡಿದೆ.

ಅಮೆರಿಕದ ಸೈನಿಕರು ಕೊನೆಯ ಸಿ–17 ವಿಮಾನದಲ್ಲಿ ಕಾಬೂಲ್ ತೊರೆದ ಬಳಿಕ, ತನ್ನ ಸೈನಿಕರು ವಿಮಾನ ನಿಲ್ದಾಣ ಪ್ರವೇಶಿಸುವ ಅಸ್ಪಷ್ಟ ವಿಡಿಯೊವನ್ನು ತಾಲಿಬಾನ್ ಮಂಗಳವಾರ ಬಿಡುಗಡೆ ಮಾಡಿದೆ.

ಅಮೆರಿಕದ ಕೊನೆಯ ವಿಮಾನವು ಸೋಮವಾರ ರಾತ್ರಿ 12 ಗಂಟೆಗೆ ಮೊದಲೇ ಕಾಬೂಲ್ ಬಿಟ್ಟಿತು. ಇದು, ಅಮೆರಿಕ ಮತ್ತು ನ್ಯಾಟೊ ಮಿತ್ರಕೂಟಕ್ಕೆ ಹೀನಾಯ ಸೋಲು ಎಂದೇ ಹೇಳಲಾಗುತ್ತಿದೆ.

'ಇದು ಚಾರಿತ್ರಿಕ ದಿನ ಮತ್ತು ಕ್ಷಣ' ಎಂದು ತಾಲಿಬಾನ್ ವಕ್ತಾರ ಜಬೀವುಲ್ಲಾ ಮುಜಾಹಿದ್ ಹೇಳಿದ್ದಾರೆ.

'ಈ ಕ್ಷಣದ ಬಗ್ಗೆ ನಮಗೆ ಹೆಮ್ಮೆ ಇದೆ. ದೊಡ್ಡ ಶಕ್ತಿಯೊಂದರ ಕೈಯಿಂದ ದೇಶವನ್ನು ನಾವು ಬಿಡುಗಡೆಗೊಳಿಸಿದ್ದೇವೆ' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಅಫ್ಘಾನಿಸ್ತಾನವನ್ನು ಅಲ್ ಕೈದಾ ಉಗ್ರ ಸಂಘಟನೆಯು ತನ್ನ ನೆಲೆಯಾಗಿ ಬಳಸುವುದನ್ನು ಎರಡು ದಶಕಗಳ ಯುದ್ಧವು ತಡೆದಿತ್ತು. ಆದರೆ, ಈಗ ತಾಲಿಬಾನ್ ಸಂಘಟನೆಯು ಕಳೆದ ಬಾರಿ ಇದ್ದುದಕ್ಕಿಂತ ಹೆಚ್ಚು ಪ್ರದೇಶವನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಿದೆ.

ತೆರವು ಕಾರ್ಯಾಚರಣೆಯು ಮುಕ್ತಾಯಗೊಂಡ ಬಳಿಕವೂ ಅಫ್ಘಾನಿಸ್ತಾನದಲ್ಲಿ ಅಮೆರಿಕ, ಬ್ರಿಟನ್ ಮತ್ತು ಇತರ ಕೆಲವು ದೇಶಗಳ ನಾಗರಿಕರು ಉಳಿದಿದ್ದಾರೆ. ಸುಮಾರು ನೂರು ಮಂದಿ ಅಮೆರಿಕ ಪ್ರಜೆಗಳು ಅಫ್ಘಾನಿಸ್ತಾನದಲ್ಲಿ ಇರಬಹುದು ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಹೇಳಿದ್ದಾರೆ.

ಬ್ರಿಟನ್‌ನ ಸುಮಾರು ನೂರು ಮಂದಿ ಇನ್ನೂ ಉಳಿದಿರಬಹುದು ಎಂದು ಆ ದೇಶದ ವಿದೇಶಾಂಗ ಕಾರ್ಯದರ್ಶಿ ಡಾಮಿನಿಕ್ ರಾಬ್ ಹೇಳಿದ್ದಾರೆ.

'ತೆರವಿಗೆ ಸಂಬಂಧಿಸಿ ಬಹಳ ನೋವು ಇದೆ. ನಾವು ಹೊರಗೆ ಕರೆತರಬೇಕು ಎಂದು ಬಯಸಿದ್ದ ಎಲ್ಲರನ್ನೂ ಕರೆತರಲು ಆಗಿಲ್ಲ, ಇನ್ನೂ ಹತ್ತು ದಿನ ಸಿಕ್ಕಿದ್ದರೆ ಎಲ್ಲವೂ ಸಾಧ್ಯವಾಗುತ್ತಿತ್ತು' ಎಂದು ಅಮೆರಿಕದ ಸೆಂಟ್ರಲ್ ಕಮಾಂಡ್‌ನ ಕಮಾಂಡರ್ ಫ್ರಾಂಕ್ ಮೆಕೆನ್ಸಿ ಹೇಳಿದ್ದಾರೆ.

ಯುದ್ಧವಿಮಾನ ಧ್ವಂಸಗೊಳಿಸಿದ ಅಮೆರಿಕ

ಈ ಹಿಂದೆ ಅಫ್ಘಾನಿಸ್ತಾನದ ಅತ್ಯಂತ ಸುರಕ್ಷಿತ ಸ್ಥಳವಾಗಿದ್ದ ವಿಮಾನ ನಿಲ್ದಾಣದ ಪ್ರಯಾಣಿಕರ ಟರ್ಮಿನಲ್ ಹಾಳಾಗಿದೆ. ಖಾಲಿ ಇರುವ ಬುಲೆಟ್ ಕೇಸ್‌ಗಳು ನಿಲ್ದಾಣದ ಪ್ರವೇಶ ದ್ವಾರದಲ್ಲಿಯೇ ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ.

ಮಂಗಳವಾರ ಕಾಬೂಲ್ ಚಿತ್ರಣವೇ ಬದಲಾಗಿತ್ತು. ತಾಲಿಬಾನ್ ಯೋಧರು ಅತ್ಯಂತ ಖುಷಿಯಲ್ಲಿದ್ದು, ವಾಹನ ಚಾಲಕರಿಗೆ ಹಾಗೂ ಪ್ರಯಾಣಿಕರಿಗೆ ಹಸ್ತಲಾಘವ ನೀಡಿದರು. ಅಲ್ಲದೇ, ವಿಮಾನ ನಿಲ್ದಾಣಕ್ಕೆ ತೆರಳುವ ಮಾರ್ಗದಲ್ಲಿ ಹಾಕಿದ್ದ ಎಲ್ಲ ಚೆಕ್‌ಪೋಸ್ಟ್‌ಗಳನ್ನೂ ತೆರವುಗೊಳಿಸಲಾಗಿದೆ. ಅಮೆರಿಕದ ಸೇನಾಪಡೆಯ ಕೊನೆಯ ತುಕಡಿಯು ಅಫ್ಘಾನಿಸ್ತಾನ ತೊರೆಯುವ ಮುನ್ನ, ಕಾಬೂಲ್ ವಿಮಾನ ನಿಲ್ದಾಣದಲ್ಲಿದ್ದ ತನ್ನ ವಿಮಾನಗಳನ್ನು, ಸೇನಾ ಹೆಲಿಕಾಪ್ಟರ್‌ಗಳನ್ನು ನಾಶಗೊಳಿಸಿದೆ ಎಂದು ಅಮೆರಿಕ ರಕ್ಷಣಾ ಇಲಾಖೆ ಮಾಹಿತಿ ನೀಡಿದೆ.

73 ಯುದ್ಧವಿಮಾನಗಳು, ಶಸ್ತ್ರಸಜ್ಜಿತವಾದ 70 ವಾಹನಗಳನ್ನು, 27 ಜೀಪುಗಳನ್ನು ಮತ್ತೆ ಬಳಸಲಾಗದಂತೆ ಧ್ವಂಸಮಾಡಲಾಗಿದೆ. ವಿಮಾನದ ಕಿಟಕಿ ಹಾಗೂ ಕಾಕ್‌ಪಿಟ್‌ಗಳನ್ನೂ ಜಜ್ಜಿ ಹಾಕಲಾಗಿದ್ದು, ಟೈರ್‌ಗಳನ್ನೂ ನಾಶಗೊಳಿಸಲಾಗಿದೆ ಎಂದು ಹೇಳಿದೆ.

ಸುದೀರ್ಘ ಯುದ್ಧಕ್ಕೆ ಭಾರಿ ಬೆಲೆತೆತ್ತ ಅಮೆರಿಕ

ಅಮೆರಿಕವು ತನ್ನ ಅತ್ಯಂತ ದೀರ್ಘವಾದ ಸೇನಾ ಕಾರ್ಯಾಚರಣೆಯನ್ನು ಮಂಗಳವಾರ ಕೊನೆಗೊಳಿಸಿದೆ. 2001ರಿಂದ 2021ರ ಆಗಸ್ಟ್ 31ರವರೆಗೆ ಅಫ್ಘಾನಿಸ್ತಾನದಲ್ಲಿ ತಾಲಿಬಾನಿಗಳ ವಿರುದ್ಧ ಹೋರಾಡಿದ ಅಮೆರಿಕದ ಸೈನಿಕರು ಈಗ ತಾಯ್ನಾಡಿಗೆ ಮರಳಿದ್ದಾರೆ. ಅಮೆರಿಕದ ಸೈನಿಕರ ಕೊನೆಯ ತಂಡ ಮಂಗಳವಾರ ಕಾಬೂಲ್ ತೊರೆದಿದೆ. ಆದರೆ 20 ವರ್ಷಗಳ ಸುದೀರ್ಘ ಸೇನಾ ಕಾರ್ಯಾಚರಣೆಯ ಪರಿಣಾಮವನ್ನು ಹಲವು ತಲೆಮಾರಿನ ಅಮೆರಿಕನ್ನರು ಅನುಭವಿಸಬೇಕು ಎಂದು ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

ಆಧಾರ: ಎಪಿ

ಅಮೆರಿಕನ್ನರಿಗೆ ಸಾಲದ ಹೊರೆ

20 ವರ್ಷಗಳ ಸುದೀರ್ಘ ಹೋರಾಟದಲ್ಲಿ ಸೇನಾ ಕಾರ್ಯಾಚರಣೆ, ಶಸ್ತ್ರಾಸ್ತ್ರ, ಅಫ್ಗನ್ನರಿಗೆ ನೆರವು ಮುಂತಾದ ರೂಪದಲ್ಲಿ ಅಮೆರಿಕವು ಲಕ್ಷಾಂತರ ಕೋಟಿ ಡಾಲರ್ ವೆಚ್ಚ ಮಾಡಿದೆ.

ಅದರಲ್ಲಿ ಪ್ರತಿ ಡಾಲರ್ ಹಣವನ್ನೂ ಸಾಲದ ಮೂಲಕ ಒದಗಿಸಲಾಗಿದೆ. ಅಷ್ಟೂ ಸಾಲವು ಈಗ ಅಮೆರಿಕದ ಜನತೆ ಮೇಲಿದೆ. ಮುಂದಿನ ಮೂರು ತಲೆಮಾರು ಸಹ ಈ ಸಾಲದ ಹೊರೆಯನ್ನು ಹೊರಬೇಕಿದೆ. ಕೊರಿಯಾ ಯುದ್ಧ, ವಿಯೆಟ್ನಾಂ ಯುದ್ಧದ ವೆಚ್ಚವನ್ನು ಭರಿಸಲು ಅಂದಿನ ಅಮೆರಿಕ ಸರ್ಕಾರವು ವಿವಿಧ ತೆರಿಗೆಗಳನ್ನು ವಿಪರೀತ ಪ್ರಮಾಣದಲ್ಲಿ ಏರಿಕೆ ಮಾಡಿದ್ದವು. ಆದರೆ ಇರಾಕ್ ಮತ್ತು ಅಫ್ಗನ್ ಯುದ್ಧದ ವೆಚ್ಚವನ್ನು ಸಾಲದ ಮೂಲಕ ಒದಗಿಸಲಾಗಿತ್ತು.

2 ಲಕ್ಷ ಕೋಟಿ ಡಾಲರ್ (ಸುಮಾರು ₹150 ಲಕ್ಷ ಕೋಟಿ): ಅಫ್ಗನ್ ಮತ್ತು ಇರಾಕ್ ಯುದ್ಧಕ್ಕೆ ಅಮೆರಿಕವು ವಿನಿಯೋಗಿಸಿರುವ ಮೊತ್ತ

6.5 ಲಕ್ಷ ಕೋಟಿ ಡಾಲರ್ (ಸುಮಾರು ₹480 ಲಕ್ಷ ಕೋಟಿ): ಈ ಸಾಲವನ್ನು ತೀರಿಸುವಷ್ಟರಲ್ಲಿ 2050ರ ವೇಳೆಗೆ ಆಗುವ ವೆಚ್ಚ

ಅಪಾರ ಜೀವ ಹಾನಿ

20 ವರ್ಷಗಳ ಕಾರ್ಯಾಚರಣೆಯಲ್ಲಿ ಸಾವಿರಾರು ಜನರು ಜೀವ ಕಳೆದುಕೊಂಡಿದ್ದಾರೆ. ಸೈನಿಕರು, ನಾಗರಿಕರು, ಮಾನವ ಹಕ್ಕುಗಳ ಹೋರಾಟಗಾರರು, ಪತ್ರಕರ್ತರು, ಉಗ್ರರು... ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ

- 2,462 ಅಮೆರಿಕ ಸೈನಿಕರು
- 3,846 ಅಮೆರಿಕ ಸರ್ಕಾರದ ನೌಕರರು
- 66,000 ಅಫ್ಘಾನಿಸ್ತಾನ ಸೈನಿಕರು ಮತ್ತು ಪೊಲೀಸರು
- 1,144 ನ್ಯಾಟೊ ಪಡೆ ಸೈನಿಕರು
- 47,245 ಅಫ್ಗನ್ ನಾಗರಿಕರು
- 51,191 ತಾಲಿಬಾನ್ ಮತ್ತು ಇತರ ಉಗ್ರ ಸಂಘಟನೆ ಸದಸ್ಯರು
- 444 ಮಾನವ ಹಕ್ಕುಗಳ ಹೋರಾಟಗಾರರು
- 72 ಪತ್ರಕರ್ತರು

20 ವರ್ಷಗಳ ಬದಲಾವಣೆ

ಈ ಕಾರ್ಯಾಚರಣೆಯ ಅವಧಿಯಲ್ಲಿ ಅಫ್ಘಾನಿಸ್ತಾನದ ಸಾಮಾಜಿಕ ಸ್ಥಿತಿಯಲ್ಲಿ ಗಣನೀಯ ಬದಲಾವಣೆಯಾಗಿದೆ.

ಮಹಿಳೆಯರ ಶಿಕ್ಷಣ, ವಿದ್ಯುತ್ ಸಂಪರ್ಕ ಮೊದಲಾದ ಕ್ಷೇತ್ರಗಳಲ್ಲಿ ಗಣನೀಯ ಪರಿವರ್ತನೆ ಕಂಡಿದೆ

- **50 %** ಅಮೆರಿಕವು ಕಾರ್ಯಾಚರಣೆ ಆರಂಭಿಸಿದ ನಂತರ ಅಫ್ಘಾನಿಸ್ತಾನದಲ್ಲಿ ಶಿಶುಮರಣದಲ್ಲಿ ಆದ ಇಳಿಕೆ ಪ್ರಮಾಣ
- **37 %** ಈಗ ಶಿಕ್ಷಣ ಪಡೆಯುತ್ತಿರುವ ಅಫ್ಘಾನಿಸ್ತಾನದ ಬಾಲಕಿಯರು ಮತ್ತು ಯುವತಿಯರ ಪ್ರಮಾಣ
- **98 %** ವಿದ್ಯುತ್ ಸಂಪರ್ಕ ಪಡೆದಿರುವ ಕುಟುಂಬಗಳ ಪ್ರಮಾಣ (2005ರಲ್ಲಿ ಈ ಪ್ರಮಾಣ ಶೇ 22ರಷ್ಟು ಮಾತ್ರ)

ಪಂಜ್‌ಶಿರ್ ಕಣಿವೆಯಲ್ಲಿ 8 ತಾಲಿಬಾನ್ ಸೈನಿಕರ ಹತ್ಯೆ

ಕಾಬೂಲ್ (ರಾಯಿಟರ್ಸ್): ಅಫ್ಘಾನಿಸ್ತಾನ ರಾಜಧಾನಿ ಕಾಬೂಲ್‌ನ ಉತ್ತರ ಭಾಗದಲ್ಲಿರುವ ಪಂಜ್‌ಶಿರ್ ಕಣಿವೆಯಲ್ಲಿ ಸೋಮವಾರ ರಾತ್ರಿ ತಾಲಿಬಾನ್ ಹಾಗೂ ಅದರ ವಿರೋಧಿ ಪಡೆ ನಡುವೆ ನಡೆದ ಕದನದಲ್ಲಿ ಎಂಟು ಮಂದಿ ತಾಲಿಬಾನ್ ಉಗ್ರರು ಹತರಾಗಿದ್ದಾರೆ.

ಅಫ್ಘಾನಿಸ್ತಾನದ ಬಹುತೇಕ ಎಲ್ಲ ಪ್ರದೇಶಗಳನ್ನೂ ವಶಕ್ಕೆ ಪಡೆದಿರುವ ತಾಲಿಬಾನ್‌ಗೆ, ಪಂಜ್‌ಶಿರ್ ಕಣಿವೆಯನ್ನು ವಶಪಡಿಸಿಕೊಳ್ಳುವುದು ಆಗಿಲ್ಲ. ಪಂಜ್‌ಶಿರ್, ಯಾವುದೇ ಕಾರಣಕ್ಕೂ ತಾಲಿಬಾನ್ ಕೈವಶವಾಗದಂತೆ ನೋಡಿಕೊಳ್ಳಲು ಕಣಿವೆಯ ಸ್ಥಳೀಯ ಯೋಧರು ತಾಲಿಬಾನ್ ಜತೆ ಸೆಣಸಾಟಕ್ಕೆ ನಿಂತಿದ್ದಾರೆ.

ಪಂಜಶಿರ್‌ನ ಸ್ಥಳೀಯ ನಾಯಕ ಅಹಮ್ಮದ್ ಮಸೂದ್‌ಗೆ ನಿಷ್ಠವಾದ ರಾಷ್ಟ್ರೀಯ ಪ್ರತಿರೋಧ ಪಡೆಯ (ಎನ್‌ಆರ್‌ಎಫ್) ವಕ್ತಾರ ಫಾಹಿಂ ದಾಸ್ತಿ, 'ತಾಲಿಬಾನ್ ಉಗ್ರರು, ಸೋಮವಾರ ರಾತ್ರಿ ಕಣಿವೆಯ ಪಶ್ಚಿಮ ದ್ವಾರದ ಮೂಲಕ ಎನ್‌ಆರ್‌ಎಫ್ ನೆಲೆಗಳ ಮೇಲೆ ದಾಳಿ ಮಾಡಿದರು. ಆ ಸಂಘರ್ಷದಲ್ಲಿ ಎಂಟು ಮಂದಿ ಉಗ್ರರು ಹತರಾಗಿದ್ದು, ಅಷ್ಟೇ ಜನ ಗಾಯಗೊಂಡಿದ್ದಾರೆ. ಎನ್‌ಆರ್‌ಎಫ್‌ನ ಇಬ್ಬರು ಸಿಬ್ಬಂದಿಯೂ ಗಾಯಗೊಂಡಿದ್ದಾರೆ' ಎಂದು ಹೇಳಿದ್ದಾರೆ.

ಕಣಿವೆಯಲ್ಲಿನ ರಕ್ಷಣಾ ಸಾಮರ್ಥ್ಯದ ಪರೀಕ್ಷಾರ್ಥವಾಗಿ ಈ ದಾಳಿ ನಡೆಸಿರಬಹುದು ಎಂದಿರುವ ದಾಸ್ತಿ, ಉಗ್ರರನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಲಾಗಿದೆ ಎಂದು ಹೇಳಿದ್ದಾರೆ.

ಆದರೆ, ಈ ಬಗ್ಗೆ ತಾಲಿಬಾನ್ ವಕ್ತಾರರಿಂದ ಯಾವುದೇ ಪ್ರತಿಕ್ರಿಯೆ ಸಿಕ್ಕಿಲ್ಲ.

ಪಂಜ್‌ಶಿರ್‌ನ ಸ್ಥಳೀಯ ನಾಯಕ ಅಹಮ್ಮದ್ ಮಸೂದ್, ಈ ಕಣಿವೆಯಲ್ಲಿ ಸಾವಿರಾರು ಸ್ಥಳೀಯ ಯೋಧರನ್ನು ಸಜ್ಜುಗೊಳಿಸಿ ಕಣಿವೆಯನ್ನು ಕಾಯಲು ರಕ್ಷಣಾಪಡೆಯನ್ನು ಕಟ್ಟಿಕೊಂಡಿದ್ದಾರೆ.

ಮಸೂದೆ ಅಂಗೀಕರಿಸಿದ ಡಿಎಂಕೆ ಸರ್ಕಾರ

ಸರ್ಕಾರದ ಕ್ರಮವನ್ನು ವಿರೋಧಿಸಿ ಎಐಎಡಿಎಂಕೆ ಶಾಸಕರು ಪನ್ನೀರ್ ಸೆಲ್ವಂ ಅವರ ನೇತೃತ್ವದಲ್ಲಿ ಕಲಾಪ ಬಹಿಷ್ಕರಿಸಿ, ರಸ್ತೆ ತಡೆ ನಡೆಸಿದ್ದಾರೆ

ಅಣ್ಣಾಮಲೈ ವಿ.ವಿಯೊಂದಿಗೆ ಜಯಲಲಿತಾ ವಿ.ವಿ. ವಿಲೀನ

ಚೆನ್ನೈ: ದಿವಂಗತ ಜೆ.ಜಯಲಲಿತಾ ವಿಶ್ವವಿದ್ಯಾಲಯದ ವಿಲೀನಕ್ಕೆ ಸಂಬಂಧಿಸಿದ ಮಸೂದೆಯನ್ನು ಮಂಗಳವಾರ ವಿಧಾನಸಭೆಯಲ್ಲಿ ಅಂಗೀಕರಿಸಿದ್ದು, ಈ ಕ್ರಮಕ್ಕೆ ವಿರೋಧ ಪಕ್ಷಗಳಿಂದ ಭಾರಿ ವಿರೋಧ ವ್ಯಕ್ತವಾಗಿದೆ.

ಉನ್ನತ ಶಿಕ್ಷಣ ಸಚಿವ ಕೆ.ಪೊನ್‌ಮುಡಿ ಅವರು ಮಸೂದೆಯನ್ನು ಮಂಡಿಸುತ್ತಿದ್ದಂತೆಯೇ, ಎಐಎಡಿಎಂಕೆ ಸದಸ್ಯರು ವಿರೋಧ ವ್ಯಕ್ತಪಡಿಸಿ ಸಭಾತ್ಯಾಗ ಮಾಡಿದರು. ತಮಿಳುನಾಡಿನ ವಿಲ್ಲುಪುರಂನಲ್ಲಿರುವ ಜೆ.ಜಯಲಿತಾ ವಿಶ್ವವಿದ್ಯಾಲಯವನ್ನು ಅಣ್ಣಾಮಲೈ ವಿಶ್ವವಿದ್ಯಾಲಯದ ಜೊತೆಗೆ ವಿಲೀನಗೊಳಿಸುವ ಈ ಮಸೂದೆಗೆ ಆಕ್ಷೇಪ ವ್ಯಕ್ತಪಡಿಸಿರುವ ಎಐಡಿಎಂಕೆ 'ಇದೊಂದು ರಾಜಕೀಯ ದ್ವೇಷದ ಕ್ರಮ' ಎಂದು ದೂರಿದೆ. ಎಐಎಡಿಎಂಕೆಯ ಮಿತ್ರ ಪಕ್ಷ ಬಿಜೆಪಿ ಕೂಡ ಈ ಕ್ರಮವನ್ನು ವಿರೋಧಿಸಿದೆ.



'ಜಯಲಲಿತಾ ಅವರು ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿ ಉಂಟು ಮಾಡಿದ್ದಾರೆ. ಅವರು ಶೈಕ್ಷಣಿಕ ಅಭಿವೃದ್ಧಿಗಾಗಿ ಉಚಿತ ಲ್ಯಾಪ್‌ಟಾಪ್ ಸೇರಿ ಹಲವು ಯೋಜನೆಗಳನ್ನು ಪರಿಚಯಿಸಿದ್ದರು. ತಮಿಳುನಾಡಿನಲ್ಲಿ ಶಾಲಾ ದಾಖಲಾತಿ ಪ್ರಮಾಣವು ದ್ವಿಗುಣಗೊಂಡಿತ್ತು. ಜಯಲಲಿತಾ ವಿಶ್ವವಿದ್ಯಾಲಯವನ್ನು ಅಣ್ಣಾಮಲೈ ವಿ.ವಿ. ಜೊತೆಗೆ ವಿಲೀನಗೊಳಿಸುವ ತೀರ್ಮಾನವನ್ನು ನಾವು ಪ್ರಾಥಮಿಕ ಹಂತದಲ್ಲಿಯೇ ವಿರೋಧಿಸಿದೆವು. ರಾಜಕೀಯ ದ್ವೇಷದ ತೀರ್ಮಾನ ವಿರೋಧಿಸಿದ ನಾವು ಕಲಾಪ ಬಹಿಷ್ಕರಿಸಿದೆವು' ಎಂದು ಪನ್ನೀರ್ ಸೆಲ್ವಂ ಹೇಳಿದ್ದಾರೆ.

ಮೌಖಿಕ ನಿರ್ದೇಶನವಲ್ಲ; ತೀರ್ಪಿನ ಮೂಲಕ ಮಾತಾಡಿ- ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ನ್ಯಾಯಮೂರ್ತಿಗಳು ಮೌಖಿಕ ನಿರ್ದೇಶನಗಳ ಬದಲಾಗಿ, ತಮ್ಮ ತೀರ್ಪು ಮತ್ತು ಆದೇಶದ ಮುಖಾಂತರವೇ ಮಾತನಾಡಬೇಕು' ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ನ್ಯಾಯಾಲಯವು ಹೊರಡಿಸುವ ಮೌಖಿಕ ನಿರ್ದೇಶನಗಳು ನ್ಯಾಯಾಂಗದ ದಾಖಲೆಗಳನ್ನು ರೂಪಿಸುವಂಥವುಗಳಲ್ಲ. ಹೀಗಾಗಿ ಅವುಗಳನ್ನು ತಪ್ಪಿಸಬೇಕು ಎಂದು ನ್ಯಾಯಮೂರ್ತಿಗಳಾದ ಡಿ.ವೈ ಚಂದ್ರಚೂಡ ಹಾಗೂ ಎಂ.ಆರ್. ಶಾ ಅವರನ್ನು ಒಳಗೊಂಡ ಪೀಠ ತಿಳಿಸಿದೆ.

ವಂಚನೆ ಮತ್ತು ವಿಶ್ವಾಸದ್ರೋಹದ ಪ್ರಕರಣವೊಂದರಲ್ಲಿ, ಆರೋಪಿಯನ್ನು ಬಂಧಿಸದಂತೆ ಗುಜರಾತ್ ಹೈಕೋರ್ಟ್ ಆದೇಶ ನೀಡಿತ್ತು. ಇದು ಮೌಖಿಕ ನಿರ್ದೇಶನ ರೂಪದಲ್ಲಿತ್ತು. ಅದರ ವಿರುದ್ಧ ಸಲ್ಲಿಸಲಾದ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರಟ್ ಹೀಗೆ ಹೇಳಿದೆ.

'ಲಿಖಿತ ಆದೇಶವು ಕಡ್ಡಾಯ. ಬಂಧಿಸದಂತೆ ತಡೆಯುವ ಬಗ್ಗೆ ಮೌಖಿಕವಾಗಿ (ಬಹುಶಃ ಪಬ್ಲಿಕ್ ಪ್ರಾಸಿಕ್ಯೂಟರ್‌ಗೆ) ನಿರ್ದೇಶನ ನೀಡುವುದು ಅಧಿಕೃತವಾಗಿ ದಾಖಲಾಗುವುದಿಲ್ಲ. ಅಂಥ ಪದ್ಧತಿಯನ್ನು ಕೈಬಿಡಬೇಕು' ಎಂದು ನ್ಯಾಯಪೀಠ ತಿಳಿಸಿದೆ.

ಆರೋಪಿಯನ್ನು ಬಂಧಿಸುವುದಕ್ಕೆ ತಡೆಕೊಟ್ಟು ನಿರ್ದೇಶನ ನೀಡುವಾಗ ಹೈಕೋರ್ಟ್ ಅನುಸರಿಸಿದ ವಿಧಾನವೇ ಕ್ರಮಬದ್ಧವಾಗಿಲ್ಲ. ಒಂದು ವೇಳೆ, ನ್ಯಾಯಾಲಯಕ್ಕೆ ವಾದಿ–ಪ್ರತಿವಾದಿಗಳ ನಡುವೆ ರಾಜಿ ಸಾಧ್ಯತೆಯ ಅವಕಾಶವಿದೆ ಎನ್ನಿಸಿ ಅದರ ಆಧಾರದ ಮೇಲೆ ಆರೋಪಿಯನ್ನು ಬಂಧಿಸದಂತೆ ಮಧ್ಯಂತರ ರಕ್ಷಣೆ ನೀಡಿದ್ದರೆ, ಆ ಬಗ್ಗೆ ನ್ಯಾಯಾಲಯದಿಂದ ನಿರ್ದಿಷ್ಟ ಆದೇಶ ಅಗತ್ಯವಾಗಿತ್ತು ಎಂದು ತಿಳಿಸಿತು.

ನ್ಯಾಯಾಂಗದ ಆದೇಶ ಇಲ್ಲದೇ ಹೋದಲ್ಲಿ, ಬಂಧನಕ್ಕೆ ತಡೆ ನೀಡುವಂತಹ ಹೈಕೋರ್ಟ್ ಆದೇಶದ ಅಧಿಕೃತ ದಾಖಲೆಯು ತನಿಖಾಧಿಕಾರಿಗೂ ಸಿಗುವುದಿಲ್ಲ ಎಂದು ಹೇಳಿತು.

ಸಲೀಂಭಾಯಿ ಮೆನನ್ ಎಂಬಾತನ ವಿರುದ್ಧ ವಂಚನೆ ಪ್ರಕರಣ ದಾಖಲಾಗಿತ್ತು. ಗುಜರಾತ್ ಹೈಕೋರ್ಟ್‌ನಲ್ಲಿ ವಿಚಾರಣೆ ಬಾಕಿ ಇರುವಾಗಲೇ ಆತನ ಬಂಧನವಾಗಿತ್ತು.

ವಿಚಾರಣೆ ಆರಂಭವಾದಾಗ, ವಾದಿ–ಪ್ರತಿವಾದಿಗಳ ವಕೀಲರಿಗೆ ರಾಜಿ ಸಾಧ್ಯತೆಯ ಅವಕಾಶವನ್ನು ಹೈಕೋರ್ಟ್ ಕಲ್ಪಿಸಿತ್ತು. ಅದರ ಆಧಾರದ ಮೇಲೆ ಆರೋಪಿಗೆ ಬಂಧನದಿಂದ ರಕ್ಷಣೆ ನೀಡಿ ಮೌಖಿಕ ನಿರ್ದೇಶನ ನೀಡಿತ್ತು.

ಏಕಕಾಲಕ್ಕೆ ಪ್ರಮಾಣ ವಚನ ಸ್ವೀಕರಿಸಿದ 9 ನ್ಯಾಯಮೂರ್ತಿಗಳು

ನವದೆಹಲಿ (ಪಿಟಿಐ): ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿದ್ದ ಅಭಯ್ ಶ್ರೀನಿವಾಸ ಓಕಾ ಮತ್ತು ಕರ್ನಾಟಕದವರೇ ಆದ ಹೈಕೋರ್ಟ್ ನ್ಯಾಯಮೂರ್ತಿ ಬಿ.ವಿ. ನಾಗರತ್ನ ಸೇರಿ ಸುಪ್ರೀಂಕೋರ್ಟ್‌ಗೆ ನೇಮಕಗೊಂಡಿರುವ 9 ನೂತನ ನ್ಯಾಯಮೂರ್ತಿಗಳು ಮಂಗಳವಾರ ಏಕಕಾಲಕ್ಕೆ ಪ್ರಮಾಣವಚನ ಸ್ವೀಕರಿಸಿದರು.

ಸುಪ್ರೀಂಕೋರ್ಟ್ ಮುಖ್ಯನ್ಯಾಯಮೂರ್ತಿ ಎನ್.ವಿ.ರಮಣ ಅವರು ನೂತನ ನ್ಯಾಯಮೂರ್ತಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು. 9 ನ್ಯಾಯಮೂರ್ತಿಗಳು ಏಕಕಾಲಕ್ಕೆ ಏಕಕಾಲಕ್ಕೆ ಪ್ರಮಾಣವಚನ ಸ್ವೀಕರಿಸಿರುವುದು ಸುಪ್ರೀಂಕೋರ್ಟ್‌ನ ಇತಿಹಾಸದಲ್ಲಿ ಇದೇ ಮೊದಲು.

ಜಲಿಯನ್ ವಾಲಾಬಾಗ್ ಸ್ಮಾರಕ ನವೀಕರಣ

ಹುತಾತ್ಮರಿಗೆ ಅವಮಾನ: ಆಕ್ಷೇಪ

ನವದೆಹಲಿ: ಸರ್ಕಾರ ಜಲಿಯನ್‌ವಾಲಾ ಬಾಗ್ ಸ್ಮಾರಕವನ್ನು ನವೀಕರಣಗೊಳಿಸುವ ಸಂದರ್ಭದಲ್ಲಿ ಕೈಗೊಂಡ ಬದಲಾವಣೆಗಳಿಗೆ ವಿರೋಧ ಪಕ್ಷಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿವೆ.

ರಾಹುಲ್ ಗಾಂಧಿ

'ಇದು ಹುತಾತ್ಮರಿಗೆ ಮಾಡಿದ ಅವಮಾನ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.

'ಹುತಾತ್ಮ ಎನ್ನುವ ಅರ್ಥ ತಿಳಿಯದ ವ್ಯಕ್ತಿ ಮಾತ್ರ ಹೀಗೆ ಹುತಾತ್ಮರಿಗೆ ಅವಮಾನ ಮಾಡಲು ಸಾಧ್ಯ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸ್ಮಾರಕದ ನವೀಕರಣದ ಬಗ್ಗೆ ಸಾಮಾಜಿಕ ಮಾಧ್ಯಮದಲ್ಲಿ ಆಕ್ರೋಶ ವ್ಯಕ್ತಪಡಿಸಿರುವ ವರದಿಯನ್ನು ಅವರು ಟ್ವಿಟರ್‌ನಲ್ಲಿ ಟ್ಯಾಗ್ ಮಾಡಿದ್ದಾರೆ.

'ನವೀಕರಣದ ಹೆಸರಿನಲ್ಲಿ ಇತಿಹಾಸ ತಿರುಚುವ ಪ್ರಯತ್ನ ಮಾಡಲಾಗಿದೆ' ಎಂದು ಹಲವರು ಆಕ್ರೋಶ ವ್ಯಕ್ತಪಡಿಸಿರುವುದನ್ನು ರಾಹುಲ್ ಪ್ರಸ್ತಾಪಿಸಿದ್ದಾರೆ.

'ನಾನು ಹುತಾತ್ಮರ ಮಗ. ಹುತಾತ್ಮರಿಗೆ ಮಾಡಿರುವ ಅವಮಾನವನ್ನು ನಾನು ಸಹಿಸುವುದಿಲ್ಲ. ಇಂಥ ಕ್ರೌರ್ಯದ ವಿರುದ್ಧ ನಾವೆಲ್ಲರೂ ಹೋರಾಡುತ್ತೇವೆ' ಎಂದು ರಾಹುಲ್ ಟ್ವೀಟ್ ಮಾಡಿದ್ದಾರೆ.

'ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳದವರಿಗೆ ಈ ವಿಷಯಗಳು ಅರ್ಥವಾಗುವುದಿಲ್ಲ' ಎಂದು ಕಿಡಿಕಾರಿದ್ದಾರೆ.

ಪ್ರಧಾನಿ ನರೇಂದ್ರ ಮೋದಿಯವರು ನವೀಕೃತ ಜಲಿಯನ್ ವಾಲಾ ಬಾಗ್ ಸ್ಮಾರಕವನ್ನು ಶನಿವಾರ ದೇಶಕ್ಕೆ ಸಮರ್ಪಿಸಿದ್ದರು.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಅವರು ಸಹ, 'ನಮ್ಮ ಹುತಾತ್ಮರಿಗೆ ಮಾಡಿದ ಅವಮಾನ' ಎಂದು ಕಿಡಿಕಾರಿದ್ದಾರೆ.

'ಜಲಿಯನ್‌ವಾಲಾ ಬಾಗ್‌ನ ಪ್ರತಿಯೊಂದು ಇಟ್ಟಿಗೆಯೂ ಬ್ರಿಟಿಷರ ಕರಾಳ ಆಡಳಿತವನ್ನು ನೆನಪಿಸುತ್ತವೆ. ಹಿಂದೂಗಳು, ಮುಸ್ಲಿಂ, ಸಿಖ್ಖರ ಹತ್ಯಾಕಾಂಡ ಇಲ್ಲಿ ನಡೆದಿದೆ. ಸ್ವಾತಂತ್ರ್ಯ ಹೋರಾಟದಿಂದ ದೂರ ಉಳಿದವರಿಂದ ಮಾತ್ರ ಇಂತಹ ತಪ್ಪುಗಳನ್ನು ಮಾಡಲು ಸಾಧ್ಯ' ಎಂದು ಹೇಳಿದ್ದಾರೆ.

'ಮಹತ್ವದ ಮತ್ತು ಘನತೆ ಹೊಂದಿರುವ ಸ್ಮಾರಕದಲ್ಲಿ ಡಿಸ್ಕೊ ದೀಪಗಳನ್ನು ಅಳವಡಿಸುವುದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಇಂತಹ ಆಡಂಬರ ಜಲಿಯನ್ ವಾಲಾ ಬಾಗ್‌ನಲ್ಲಿ ನಡೆದಿರುವ ಕರಾಳ ಘಟನೆಯ ಗಂಭೀರತೆಯನ್ನು ಕಡಿಮೆ ಮಾಡುತ್ತದೆ. ಇದು ಮನರಂಜನೆ ಸ್ಥಳವಲ್ಲ' ಎಂದು ಲೋಕಸಭೆಯಲ್ಲಿನ ಕಾಂಗ್ರೆಸ್ ಉಪ ನಾಯಕ ಗೌರವ್ ಗೊಗೊಯಿ ಹೇಳಿದ್ದಾರೆ.

'ಬ್ರಿಟಿಷ್ ಆಡಳಿತದಲ್ಲಿ ಜನರಲ್ ಡಯರ್ ನಡೆಸಿದ ದೌರ್ಜನ್ಯಗಳ ಕಲೆಗಳನ್ನು ಅಳಿಸುವ ಪ್ರಯತ್ನವನ್ನು ಕೇಂದ್ರ ಸರ್ಕಾರ ಮಾಡುತ್ತಿದೆ. ಹುತಾತ್ಮರಿಗೆ ಅವಮಾನಿಸುವ ಕೃತ್ಯ ನಡೆದಿದೆ' ಎಂದು ಕಿಡಿಕಾರಿದ್ದಾರೆ.

ಇತಿಹಾಸಕಾರ ಎಸ್. ಇರ್ಫಾನ್ ಹಬೀಬ್, 'ಸ್ಮಾರಕಗಳ ಮೌಲ್ಯ ಕಡಿಮೆ ಮಾಡುವ ಪ್ರಯತ್ನ ಮಾಡಲಾಗಿದೆ' ಎಂದು ಹೇಳಿದ್ದಾರೆ.

'ಸ್ಮಾರಕ ಚೆನ್ನಾಗಿ ಕಾಣಿಸುತ್ತಿದೆ'

ಸ್ಮಾರಕ ನವೀಕರಣಕ್ಕೆ ಪಂಜಾಬ್ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

'ಈಗ ಸ್ಮಾರಕ ಚೆನ್ನಾಗಿ, ಅಂದವಾಗಿ ಕಾಣಿಸುತ್ತಿದೆ. ಸ್ಮಾರಕದ ನವೀಕರಣದ ಸಂದರ್ಭದಲ್ಲಿ ಏನನ್ನು ತೆಗೆದುಹಾಕಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ವಿಡಿಯೊ ಕಾನ್ಫರೆನ್ಸ್ ಮೂಲಕವೇ ನಾನು ಸಹ ನವೀಕರಣಗೊಂಡಿರುವ ಸ್ಮಾರಕದ ಉದ್ಘಾಟನೆಯಲ್ಲಿ ಭಾಗಿಯಾಗಿದ್ದೆ' ಎಂದು ತಿಳಿಸಿದ್ದಾರೆ.

ಟೋಕಿಯೊ ಪ್ಯಾರಾಲಿಂಪಿಕ್ಸ್: ಕಂಚಿನ ಪದಕಕ್ಕೆ ಮುತ್ತಿಟ್ಟ ಶರದ್ ಕುಮಾರ್, ಸಿಂಗರಾಜ್

ಅಲ್ಪ ಅಂತರದಲ್ಲಿ ತಂಗವೇಲು ಕೈತಪ್ಪಿದ ಚಿನ್ನ



ಶರದ್ ಕುಮಾರ್– ಟ್ವಿಟರ್ ಚಿತ್ರ

ಪುರುಷರ ಹೈಜಂಪ್‌ನಲ್ಲಿ ಚಿನ್ನದ ಪದಕ ಗೆದ್ದ ಅಮೆರಿಕದ ಸ್ಯಾಮ್ ಗ್ರೀವ್– ರಾಯಿಟರ್ಸ್ ಚಿತ್ರ

ಟೋಕಿಯೊ (ಪಿಟಿಐ): ಹಾಲಿ ಚಾಂಪಿಯನ್ ಮಾರಿಯಪ್ಪನ್ ತಂಗವೇಲು ಅವರು ನಿರೀಕ್ಷೆ ಹುಸಿಗೊಳಿಸಲಿಲ್ಲ. ಶರದ್ ಕುಮಾರ್ ಕೂಡ ಮಿಂಚಿದರು.

ಇವರಿಬ್ಬರು ಮಂಗಳವಾರ ಪ್ಯಾರಾಲಿಂಪಿಕ್ಸ್‌ನ ಪುರುಷರ ಹೈಜಂಪ್ ಟಿ63 ವಿಭಾಗದಲ್ಲಿ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕಗಳಿಗೆ ಕೊರಳೊಡ್ಡಿದರು. ಶೂಟಿಂಗ್‌ನಲ್ಲಿ ಸಿಂಗರಾಜ್ ಅದಾನಾ ಅವರಿಗೆ ಕಂಚು ಒಲಿಯಿತು. ಇದರೊಂದಿಗೆ ಕೂಟದಲ್ಲಿ ಭಾರತ ಗೆದ್ದ ಪದಕಗಳ ಸಂಖ್ಯೆ 10ಕ್ಕೆ ತಲುಪಿತು.

26 ವರ್ಷದ ಮಾರಿಯಪ್ಪನ್ 2016ರ ರಿಯೊ ಒಲಿಂಪಿಕ್ಸ್‌ನಲ್ಲಿ ಮಾರಿಯಪ್ಪನ್ ಚಿನ್ನದ ಪದಕ ಗೆದ್ದುಕೊಂಡಿದ್ದರು.

ಐದು ವರ್ಷದವರಿದ್ದಾಗಲೇ ತಮಿಳುನಾಡಿನ ಮಾರಿಯಪ್ಪನ್ ಅವರ ಮೇಲೆ ಬಸ್ಸು ಹರಿದು ಬಲಗಾಲು ಊನಗೊಂಡಿತ್ತು. ತಂದೆ ಯಾವದೋ ಕಾರಣಕ್ಕೆ ಕುಟುಂಬವನ್ನು ತೊರೆದಾಗ ತಾಯಿ ಕೂಲಿ ಮತ್ತು ತರಕಾರಿ ವ್ಯಾಪಾರ ಮಾಡಿ ಮಕ್ಕಳನ್ನು ಬೆಳೆಸಿದರು.

ಪಾಟ್ನಾದ ಶರದ್ ಕುಮಾರ್ ಎರಡು ವರ್ಷದವರಿದ್ದಾಗ ಎಡಗಾಲಿಗೆ ಪಾರ್ಶ್ವವಾಯು ಬಾಧಿಸಿತ್ತು. ಏಷ್ಯನ್ ಪ್ಯಾರಾ ಕ್ರೀಡಾಕೂಟದಲ್ಲಿ ಅವರು ಎರಡು ಬಾರಿ ಚಿನ್ನ ಗೆದ್ದುಕೊಂಡಿದ್ದಾರೆ.

ಭಾರತದ ಇನ್ನೊರ್ವ ಸ್ಪರ್ಧಿ, 2016ರ ರಿಯೊ ಪ್ಯಾರಾಲಿಂಪಿಕ್ಸ್ ಕಂಚು ವಿಜೇತ ವರುಣ್ ಸಿಂಗ್ ಭಾಟಿ ಏಳನೇ ಸ್ಥಾನ ಗಳಿಸಿದರು.

ಭಾರತ ಕೂಟದಲ್ಲಿ ಇದುವರೆಗೆ ಎರಡು ಚಿನ್ನ, ಐದು ಬೆಳ್ಳಿ ಮತ್ತು ಮೂರು ಕಂಚು ಗೆದ್ದಿದೆ.

ಮಾರಿಯಪ್ಪನ್‌ಗೆ ₹ 2 ಕೋಟಿ ಬಹುಮಾನ: ಮಾರಿಯಪ್ಪನ್ ಅವರನ್ನು ಅಭಿನಂದಿಸಿರುವ ತಮಿಳುನಾಡು ಸರ್ಕಾರವು ₹ 2 ಕೋಟಿ ಬಹುಮಾನವನ್ನು ಪ್ರಕಟಿಸಿದೆ.

ಸರೆಹ್ ವಿಶ್ವದಾಖಲೆ: ಮಹಿಳೆಯರ 10 ಮೀ. ಏರ್ ಪಿಸ್ತೂಲ್ ಎಸ್‌ಎಚ್1 ಸ್ಪರ್ಧೆಯಲ್ಲಿ ಇರಾನ್ ಸರೆಹ್ ಜವನ್‌ಮರ್ದಿ ವಿಶ್ವದಾಖಲೆಯ (239.2) ಸ್ಕೋರ್‌ನೊಂದಿಗೆ ಚಿನ್ನ ಗೆದ್ದುಕೊಂಡರು. ಈ ಹಿಂದಿನ ದಾಖಲೆಯು ಭಾರತದ ರುಬಿನಾ ಫ್ರಾನ್ಸಿಸ್ (238.1) ಅವರ ಹೆಸರಿನಲ್ಲಿತ್ತು. ಪೆರುವಿನ ಲಿಮಾದಲ್ಲಿ ಜೂನ್‌ನಲ್ಲಿ ನಡೆದ ವಿಶ್ವಕಪ್ ಟೂರ್ನಿಯಲ್ಲಿ ರುಬಿನಾ ಈ ದಾಖಲೆ ಬರೆದಿದ್ದರು.

ರುಬಿನಾ ಅವರು ಈ ಕೂಟದಲ್ಲಿ ಏಳನೇ ಸ್ಥಾನ ಗಳಿಸಿದರು.

ಆರ್ಚರಿ ಕಂಪೌಂಡ್ ವಿಭಾಗದಲ್ಲಿ ಭಾರತದ ಸವಾಲು ಅಂತ್ಯ: ಆರ್ಚರಿ ಸ್ಪರ್ಧೆಯ ಕಂಪೌಂಡ್ ವಿಭಾಗದ ಕ್ವಾರ್ಟರ್‌ಫೈನಲ್‌ನಲ್ಲಿ ಭಾರತದ ರಾಕೇಶ್ ಕುಮಾರ್ 143–145ರಿಂದ ಚೀನಾದ ಕ್ರಿಸ್ ಲಿಯಾಂಗ್ ಐ ಎದುರು ಎಡವಿದರು. ಇದರೊಂದಿಗೆ ಭಾರತದ ಸವಾಲು ಅಂತ್ಯವಾಯಿತು.

ಮಾರಿಯಪ್ಪನ್ ತಂಗವೇಲು– ಪಿಟಿಐ ಚಿತ್ರ

ಕ್ವಾರ್ಟರ್‌ನಲ್ಲಿ ಸೋತ ಮಹಿಳಾ ಟಿಟಿ ತಂಡ

ಭಾವಿನಾಬೆನ್ ಪಟೇಲ್ ಅವರನ್ನೊಳಗೊಂಡ ಭಾರತದ ಮಹಿಳಾ ಟೇಬಲ್ ಟೆನಿಸ್ ತಂಡವು ಕ್ವಾರ್ಟರ್‌ಫೈನಲ್‌ನಲ್ಲಿ ಚೀನಾ ಎದುರು ಮುಗ್ಗರಿಸಿತು.ಕ್ಲಾಸ್ 4–5 ವಿಭಾಗದಲ್ಲಿ ಸ್ಪರ್ಧಿಸಿದ್ದ ಭಾವಿನಾ– ಸೋನಲ್ ಪಟೇಲ್ 2–11, 4–11, 2–11ರಿಂದ ಯಿಂಗ್ ಜೌ ಮತ್ತು ಜಾಂಗ್ ಬಿಯಾನ್ ಅವರಿಗೆ ಸೋತರು. ಕೇವಲ 13 ನಿಮಿಷಗಳಲ್ಲಿ ಈ ಪಂದ್ಯ ಮುಗಿಯಿತು.

ಕಂಚು ಗೆದ್ದ ಸಿಂಗರಾಜ್ ಅದಾನಾ

ಕೇವಲ ನಾಲ್ಕು ವರ್ಷಗಳ ಹಿಂದೆ ಶೂಟಿಂಗ್ ಕ್ರೀಡೆಗೆ ಬಂದ ಸಿಂಗರಾಜ್ ಅದಾನಾ ಅವರು ಕಂಚು ತಮ್ಮದಾಗಿಸಿಕೊಂಡಿದ್ದಾರೆ. ಪುರುಷರ ಪಿ1 10 ಮೀ. ಏರ್ ಪಿಸ್ತೂಲ್ ಎಸ್‌ಎಚ್1 ವಿಭಾಗದಲ್ಲಿ ಅವರು ಪದಕ ಗೆದ್ದುಕೊಂಡಿದ್ದಾರೆ.

ಪೋಲಿಯೊ ಪೀಡಿತರಾಗಿದ್ದ 39 ವರ್ಷದ ಸಿಂಗರಾಜ್ ಎರಡೂ ಕಾಲುಗಳ ಬಲ ಕಳೆದುಕೊಂಡವರು. ಊರುಗೋಲುಗಳೇ ಅವರಿಗೆ ಆಸರೆಯಾಗಿದ್ದವು. ಅವರ ಪದಕದ ಕನಸಿಗೆ ತಾಯಿಯ ಪ್ರೇರಣೆ ಹೆಚ್ಚಿನದು. ಪತ್ನಿಯೂ ತಮ್ಮ ಮೈಮೇಲಿನ ಆಭರಣ ಮಾರಿ ಪತಿಯ ಸಾಧನೆಯಲ್ಲಿ ಪಾಲು ಗಳಿಸಿದವರು.

ಸಿಂಗರಾಜ್ ಇಲ್ಲಿ ನಡೆದ ಸ್ಪರ್ಧೆಯ ಫೈನಲ್‌ನಲ್ಲಿ ಒಟ್ಟು 216.8 ಪಾಯಿಂಟ್ಸ್ ಗಳಿಸಿ ಮೂರನೇ ಸ್ಥಾನ ಪಡೆದರು. ಅರ್ಹತಾ ಸುತ್ತಿನಲ್ಲಿ ಅವರಿಗೆ ಆರನೇ ಸ್ಥಾನ ಸಿಕ್ಕಿತ್ತು. ಭಾರತದ ಇನ್ನೊರ್ವ ಸ್ಪರ್ಧಿ ಮನೀಷ್ ನರ್ವಾಲ್ ಅರ್ಹತಾ ಸುತ್ತಿನಲ್ಲಿ ಅಗ್ರಸ್ಥಾನ ಗಳಿಸಿದರೂ ಫೈನಲ್‌ನಲ್ಲಿ ಏಳನೇ ಸ್ಥಾನ ಪಡೆದು ನಿರಾಸೆ ಮೂಡಿಸಿದರು. ದೀಪೆಂದರ್ ಸಿಂಗ್ 10ನೇ ಸ್ಥಾನ ಗಳಿಸಿದರು.

ಈ ವಿಭಾಗದ ಚಿನ್ನ ಮತ್ತು ಬೆಳ್ಳಿ ಪದಕಗಳು ಚೀನಾದ ಚಾವೊ ಯಾಂಗ್ (237.9, ಪ್ಯಾರಾಂಪಿಕ್ ದಾಖಲೆ) ಮತ್ತು ಹುವಾಂಗ್ ಕ್ಸಿಂಗ್ (237.5) ಅವರ ಪಾಲಾದವು.

ಶೂಟಿಂಗ್ ವಿಭಾಗದಲ್ಲಿ ಭಾರತಕ್ಕೆ ಇದು ಎರಡನೇ ಪದಕ. ಸೋಮವಾರ ಅವನಿ ಲೇಖರಾ ಚಿನ್ನ ಗೆದ್ದುಕೊಂಡಿದ್ದರು.

ಸಿಂಗರಾಜ್ ಅವರು ಈ ವರ್ಷ ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ನಡೆದ ಪ್ಯಾರಾ ಸ್ಪೋರ್ಟ್ ವಿಶ್ವಕಪ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದರು.

ಸಿಂಗರಾಜ್ ಅದಾನಾ– ಪಿಟಿಐ ಚಿತ್ರ

2022ರ ಮಾರ್ಚ್‌ನಲ್ಲಿ ಕ್ರೀಡಾಮೇಳ

ಪ್ರಜಾವಾಣಿ ವಾರ್ತೆ

ಹಾವೇರಿ: ‘2022ರ ಮಾರ್ಚ್‌ನಲ್ಲಿ 11 ದಿನ ರಾಜ್ಯದಲ್ಲಿ ‘ಕ್ರೀಡಾಮೇಳ’ ಆಯೋಜನೆ ಮಾಡಲಿದ್ದು, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ 7 ಸಾವಿರ ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಕೂಡ ಕ್ರೀಡಾಮೇಳಕ್ಕೆ ಆಗಮಿಸುವ ನಿರೀಕ್ಷೆಯಿದೆ’ ಎಂದು ಕ್ರೀಡಾ ಸಚಿವ ಕೆ.ಸಿ. ನಾರಾಯಣಗೌಡ ಹೇಳಿದರು.

ಮಂಗಳವಾರ ಮಾಧ್ಯಮದವರೊಂದಿಗೆ ಮಾತನಾಡಿ, ‘75 ಕ್ರೀಡಾಪಟುಗಳನ್ನು ರಾಜ್ಯ ಸರ್ಕಾರ ದತ್ತು ಪಡೆದಿದೆ. 2024ರ ಒಲಿಂಪಿಕ್ಸ್‌ಗೆ ಕಳುಹಿಸಲು ವಿಶೇಷ ತರಬೇತಿ ನೀಡುತ್ತಿದೆ. ಅಂತರರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಲು ಸುಮಾರು ₹30 ಲಕ್ಷ ಖರ್ಚು ಬರುತ್ತದೆ. ಇದನ್ನು ಭರಿಸಲು ಬಡ ಕ್ರೀಡಾಪಟುಗಳಿಂದ ಸಾಧ್ಯವಿಲ್ಲ. ಹೀಗಾಗಿ 150 ಖಾಸಗಿ ಕಂಪನಿಗಳನ್ನು ಕರೆಸಿ, ಅವರಿಗೂ ಜವಾಬ್ದಾರಿ ನೀಡುವ ಕೆಲಸ ಮಾಡುತ್ತೇವೆ ಎಂದು ಹೇಳಿದರು.

ರಾಜ್ಯದಲ್ಲಿ 2.31 ಲಕ್ಷ ಯುವ ಜನರನ್ನು ಕೌನ್ಸೆಲಿಂಗ್ ಮಾಡಿ, ಅರ್ಹರಿಗೆ ಕ್ರೀಡಾ ತರಬೇತಿ ನೀಡಲು ಕ್ರಮ ಕೈಗೊಂಡಿದ್ದೇವೆ. ಸಿಬ್ಬಂದಿ ಮತ್ತು ಕ್ರೀಡಾ ತರಬೇತುದಾರರ ಹುದ್ದೆಗಳ ಭರ್ತಿಗೂ ಕ್ರಮ ಕೈಗೊಳ್ಳುತ್ತೇನೆ ಎಂದರು.

ವೇಗಿ ಡೇಲ್ ಸ್ಟೇನ್ ನಿವೃತ್ತಿ

ಜೋಹಾನ್ಸ್‌ಬರ್ಗ್(ಪಿಟಿಐ): ದಕ್ಷಿಣ ಆಫ್ರಿಕಾದ ವೇಗದ ಬೌಲರ್ ಡೇಲ್ ಸ್ಟೇನ್ ಮಂಗಳವಾರ ಕ್ರಿಕೆಟ್ ನ ಎಲ್ಲ ಮಾದರಿಗಳಿಂದ ನಿವೃತ್ತಿ ಘೋಷಿಸಿದರು.

ಕ್ರಿಕೆಟ್ ಕ್ಷೇತ್ರದ ದಿಗ್ಗಜ ವೇಗಿಗಳಲ್ಲಿ ಡೇಲ್ ಸ್ಟೇನ್ ಕೂಡ ಒಬ್ಬರು. ತಮ್ಮ ಬಿರುಗಾಳಿ ವೇಗದ ಎಸೆತಗಳ ಮೂಲಕ ಬಹುತೇಕ ಎಲ್ಲ ತಂಡಗಳ ಆಟಗಾರರಿಗೂ ಸಿಂಹಸ್ವಪ್ನರಾಗಿದ್ದರು. ಲೈನ್ ಮತ್ತು ಲೆಂಗ್ತ್ ಹಾಗೂ ಸ್ವಿಂಗ್ ಬೌಲಿಂಗ್‌ನಲ್ಲಿ ಡೇಲ್ ಸಿದ್ಧಹಸ್ತರು.

38 ವರ್ಷದ ಸ್ಟೇನ್ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು, ಗುಜರಾತ್ ಲಯನ್ಸ್ ಮತ್ತು ಸನ್‌ರೈಸರ್ಸ್ ಹೈದರಾಬಾದ್ ತಂಡಗಳಲ್ಲಿಯೂ ಆಡಿದ್ದಾರೆ.

ಸ್ಟೇನ್ 2019ರಲ್ಲಿ ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಹೇಳಿದ್ದರು. ಇದೀಗ ಸೀಮಿತ ಓವರ್‌ಗಳ ಕ್ರಿಕೆಟ್‌ಗೂ ವಿದಾಯ ಘೋಷಿಸಿದ್ದಾರೆ.

‘ಸ್ಟೇನ್ ಮಹಾನ್ ವ್ಯಕ್ತಿ ಮತ್ತು ಬೌಲರ್. ಬೆಂಕಿಯಂತಹ ಎಸೆತಗಳನ್ನು ಹಾಕುತ್ತಿದ್ದ ಅವರು ನಾನು ನೋಡಿದ ಕೆಲವೇ ಕೆಲವು ಶ್ರೇಷ್ಠರಲ್ಲಿ ಒಬ್ಬರು’ ಎಂದು ಭಾರತದ ಮಾಜಿ ಕ್ರಿಕೆಟಿಗ ವೀರೇಂದ್ರ ಸೆಹ್ವಾಗ್ ಟ್ವೀಟ್ ಮಾಡಿದ್ದಾರೆ.

‘ನನ್ನ ಅತ್ಯಂತ ನೆಚ್ಚಿನ ಆಟಗಾರ ಡೇಲ್ ಸ್ಟೇನ್ ಅವರಿಗೆ ನಿವೃತ್ತಿ ಜೀವನ ಸಂತಸ ತರಲಿ’ ಎಂದು ಭಾರತದ ಹಾರ್ದಿಕ್ ಪಾಂಡ್ಯ ಶುಭ ಹಾರೈಸಿದ್ದಾರೆ.

ಇಂಗ್ಲೆಂಡ್‌ನ ಕೆವಿನ್ ಪೀಟರ್ಸನ್, ಮೈಕೆಲ್ ವಾನ್, ಆಸ್ಟ್ರೇಲಿಯಾದ ಪ್ಯಾಟ್ ಕಮಿನ್ಸ್, ದಕ್ಷಿಣ ಆಫ್ರಿಕಾದ ಮಾಜಿ ಆಟಗಾರ ಎಬಿ ಡಿವಿಲಿಯರ್ಸ್, ಶ್ರೀಲಂಕಾ ತಂಡದ ಮಾಜಿ ನಾಯಕ ಮಹೇಲಾ ಜಯವರ್ಧನೆ ಅವರು ಡೇಲ್ ಅವರಿಗೆ ಶುಭ ಕೋರಿದ್ದಾರೆ.

ಡೇಲ್ ಸ್ಟೇನ್

ಮಾದರಿ	ಪಂದ್ಯ	ವಿಕೆಟ್	ಶ್ರೇಷ್ಠ	ಗಳಿಸಿದ ರನ್	ಶ್ರೇಷ್ಠ
ಟೆಸ್ಟ್	93	439	51ಕ್ಕೆ7	1251	76
ಏಕದಿನ	125	196	39ಕ್ಕೆ6	365	60
ಟಿ20	47	64	9ಕ್ಕೆ4	21	5*
ಐಪಿಎಲ್	95	97	8ಕ್ಕೆ3	167	19

‘2022ರ ಐಪಿಎಲ್‌ನಿಂದ ₹5000 ಕೋಟಿ ನಿರೀಕ್ಷೆ’

ನವದೆಹಲಿ(ಪಿಟಿಐ): 2022ರ ಐಪಿಎಲ್‌ಗೆ ಎರಡು ಹೊಸ ಫ್ರಾಂಚೈಸಿಗಳು ಸೇರ್ಪಡೆಗೊಳ್ಳುವ ಸಾಧ್ಯತೆ ಇದ್ದು, ಇದರಿಂದ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಗೆ (ಬಿಸಿಸಿಐ) 5 ಸಾವಿರ ಕೋಟಿ ರೂಪಾಯಿ ಆದಾಯ ದೊರೆಯುವ ನಿರೀಕ್ಷೆ ಇದೆ.

ಹೊಸ ಫ್ರಾಂಚೈಸಿಗಳು ಅಸ್ತಿತ್ವಕ್ಕೆ ಬಂದಲ್ಲಿ ಮುಂದಿನ ಋತುವಿನಲ್ಲಿ ಒಟ್ಟು 10 ತಂಡಗಳು ಟೂರ್ನಿಯಲ್ಲಿ ಭಾಗವಹಿಸಲಿವೆ.

‘₹75 ಕೋಟಿ ನೀಡಿ ಯಾವುದೇ ಕಂಪನಿ ಬಿಡ್ ದಾಖಲೆಗಳನ್ನು ಖರೀದಿಸಬಹುದು. ಈ ಹಿಂದೆ ಹೊಸ ತಂಡಗಳಿಗೆ ₹1,700 ಕೋಟಿ ಮೂಲ ಬೆಲೆ ನಿಗದಿಪಡಿಸಲು ಚಿಂತನೆ ನಡೆಸಲಾಗಿತ್ತು. ನಂತರ ₹2,000 ಕೋಟಿ ನಿಗದಿಪಡಿಸಲು ನಿರ್ಧರಿಸಲಾಯಿತು’ ಎಂದು ಬಿಸಿಸಿಐ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ದೊಡ್ಡ ಉದ್ಯಮ ಸಂಸ್ಥೆಗಳು ಫ್ರಾಂಚೈಸಿ ಖರೀದಿಗೆ ಮುಂದಾದರೆ ಕಡಿಮೆ ಎಂದರೂ ₹5,000 ಕೋಟಿವರೆಗೆ ಆದಾಯ ಗಳಿಸಬಹುದು ಎಂಬುದು ಬಿಸಿಸಿಐ ನಿರೀಕ್ಷೆ. ಮುಂದಿನ ಋತುವಿನಲ್ಲಿ 74 ಪಂದ್ಯಗಳು ಇರಲಿವೆ ಎಂದು ಈ ಹಿಂದೆ ಐಪಿಎಲ್‌ನ ಹಣಕಾಸು ವಿಭಾಗವನ್ನು ನಿರ್ವಹಿಸಿದ್ದ ಮೂಲಗಳು ಹೇಳಿವೆ. ವಾರ್ಷಿಕ ₹3,000 ಕೋಟಿ ಆದಾಯ ಇರುವ ಕಂಪನಿಗಳಿಗೆ ಮಾತ್ರ ಬಿಡ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವ ಕಾಶ ನೀಡಲಾಗುತ್ತದೆ ಎಂದು ತಿಳಿದು ಬಂದಿದೆ.

ಹೊಸ ತಂಡಗಳಿಗೆ ಅಹಮದಾಬಾದ್, ಲಖನೌ ಮತ್ತು ಪುಣೆಯಲ್ಲಿ ಸ್ಥಾನ ಕಲ್ಪಿಸುವ ಸಾಧ್ಯತೆ ಇದೆ. ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣ, ಲಖನೌನ ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣ ದೊಡ್ಡದಾಗಿದ್ದು ಫ್ರಾಂಚೈಸಿಗಳ ಆದ್ಯತೆಯಾಗುವ ಸಾಧ್ಯತೆ ಇದೆ.

ಅದಾನಿ ಗ್ರೂಪ್, ಆರ್‌ಪಿಜಿ ಸಂಜೀವ್ ಗೋಯೆಂಕಾ ಗ್ರೂಪ್, ಟೊರೆಂಟ್ ಕಂಪನಿಗಳು ಬಿಡ್‌ನಲ್ಲಿ ಭಾಗವಹಿಸುವ ನಿರೀಕ್ಷೆ ಇದೆ ಎಂದು ಮೂಲಗಳು ತಿಳಿಸಿವೆ.

ಭಾರತದ ತಿರುಗೇಟು ತಡೆಗೆ ಸಿದ್ಧತೆ: ಕಾಲಿಂಗ್‌ವುಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೀಡ್ಸ್ ಟೆಸ್ಟ್ ಪಂದ್ಯದಲ್ಲಿ ಸೋತಿರುವ ಭಾರತ ತಂಡವು ಬಹಳಷ್ಟು ಟೀಕೆಗಳನ್ನು ಎದುರಿಸುತ್ತಿದೆ. ಆದ್ದರಿಂದ ಮುಂದಿನ ಪಂದ್ಯದಲ್ಲಿ ಇಂಗ್ಲೆಂಡ್‌ಗೆ ತಿರುಗೇಟು ನೀಡುವುದು ಖಚಿತ. ಆ ಸವಾಲನ್ನು ಎದುರಿಸಲು ತಮ್ಮ ತಂಡವು ಬಹಳಷ್ಟು ಕಠಿಣ ಅಭ್ಯಾಸ ನಡೆಸುತ್ತಿದೆ ಎಂದು ಇಂಗ್ಲೆಂಡ್ ಕ್ರಿಕೆಟ್ ತಂಡದ ಸಹಾಯಕ ಕೋಚ್ ಪಾಲ್ ಕಾಲಿಂಗ್‌ವುಡ್ ಹೇಳಿದರು.

5 ಪಂದ್ಯಗಳ ಸರಣಿಯಲ್ಲಿ ಉಭಯ ತಂಡಗಳು 1–1ರ ಸಮಬಲ ಸಾಧಿಸಿವೆ. ಇನ್ನೂ ಎರಡು ಪಂದ್ಯಗಳು ಬಾಕಿಯಿವೆ. ಮೂರನೇ ಪಂದ್ಯದಲ್ಲಿ ಭಾರತವು 76 ರನ್‌ಗಳಿಂದ ಪರಾಭವಗೊಂಡಿತ್ತು.

‘ಅಭಿಮಾನಿಗಳು ಭಾರತದ ಬ್ಯಾಟ್ಸ್‌ಮನ್‌ಗಳನ್ನು ಟೀಕಿಸುವುದು ಸುಲಭ ಮತ್ತು ಸಹಜ. ಆದರೆ ನಮ್ಮ ಬೌಲರ್‌ಗಳು ಅದ್ಭುತವಾಗಿ ಬೌಲಿಂಗ್ ಮಾಡಿದರು. ಪಿಚ್‌ನಲ್ಲಿಯೂ ಚೆಂಡಿನ ಚಲನೆ ಉತ್ತಮವಾಗಿತ್ತು. ಅದನ್ನೂ ಸಮರ್ಥವಾಗಿ ಬಳಸಿಕೊಳ್ಳುವಲ್ಲಿ ನಮ್ಮ ಬೌಲರ್‌ಗಳು ಯಶಸ್ವಿಯಾದರು’ ಎಂದು ಪಾಲ್ ಮಂಗಳವಾರ ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್ ಆಯೋಜಿಸಿದ್ದ ವರ್ಚುವಲ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಕಾಲಿಂಗ್‌ವುಡ್

‘ಭಾರತವು ತಿರುಗೇಟು ನೀಡುವ ಛಲದಲ್ಲಿದೆ. ಅವರ ಸವಾಲು ತಡೆಯಲು ನಾವು ಎಲ್ಲ ರೀತಿಯಿಂದ ಸಿದ್ಧತೆ ನಡೆಸಿದ್ದೇವೆ. ಅವರ ತಂಡದಲ್ಲಿ ಶ್ರೇಷ್ಠ ಆಟಗಾರರು ಇದ್ದಾರೆ. ನಾವು ಯಾವುದೇ ರೀತಿಯಲ್ಲಿಯೂ ನಿರ್ಲಕ್ಷಿಸುವಂತಿಲ್ಲ ಮತ್ತು ಅತಿಯಾದ ಆತ್ಮವಿಶ್ವಾಸದಲ್ಲಿ ತೇಲುವಂತೆಯೂ ಇಲ್ಲ’ ಎಂದರು.

‘ಹೆಡಿಂಗ್ಲೆಯಲ್ಲಿ ನಡೆದ ಪಂದ್ಯದಲ್ಲಿ ಡೇವಿಡ್ ಮಲಾನ್ ಮತ್ತು ಹಸೀಬ್ ಹಮೀದ್ ಅವರ ಆಟ ಗಮನ ಸೆಳೆಯಿತು. ನಾಯಕ ಜೋ ರೂಟ್ ಅವರು ತಮ್ಮ ಜೀವನಶ್ರೇಷ್ಠ ಫಾರ್ಮ್‌ನಲ್ಲಿದ್ದಾರೆ’ ಎಂದು ಪಾಲ್ ಹೇಳಿದರು.

ಯೂತ್ ಬಾಕ್ಸಿಂಗ್: ಭಾರತಕ್ಕೆ ಆರು ಚಿನ್ನ

ನವದೆಹಲಿ (ಪಿಟಿಐ): ದುಬೈನಲ್ಲಿ ನಡೆಯುತ್ತಿರುವ ಏಷ್ಯನ್ ಯೂತ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಬಾಕ್ಸರ್‌ಗಳು ಪಾರಮ್ಯ ಮೆರೆದಿದ್ದಾರೆ. ಇದುವರೆಗೆ ಒಟ್ಟು ಆರು ಚಿನ್ನ, ಒಂಬತ್ತು ಬೆಳ್ಳಿ ಮತ್ತು ಐದು ಕಂಚಿನ ಪದಕಗಳನ್ನು ಗೆದ್ದುಕೊಂಡಿದ್ದಾರೆ.

ಸೋಮವಾರ ತಡರಾತ್ರಿ ನಡೆದ ಫೈನಲ್ ಬೌಟ್‌ಗಳಲ್ಲಿ ಎದುರಾಳಿಗಳಿಗೆ ಸೋಲುಣಿಸಿದ ಸ್ನೇಹಾ ಕುಮಾರಿ (ಮಹಿಳೆಯರ 66 ಕೆಜಿ ವಿಭಾಗ), ಖುಷಿ (75 ಕೆಜಿ), ಪ್ರೀತಿ ದಹಿಯಾ (60 ಕೆಜಿ) ಮತ್ತು ನೇಹಾ (54 ಕೆಜಿ) ಚಿನ್ನದ ಪದಕಗಳಿಗೆ ಕೊರಳೊಡ್ಡಿದರು.

ಫೈನಲ್ ಬೌಟ್‌ನಲ್ಲಿ ಪ್ರೀತಿ 3–2ರಿಂದ ಕಜಕಸ್ತಾನದ ಜುಲ್‌ದೀಜ್ ಶಯಕ್ಮೆತೊವಾ ಎದುರು, ಸ್ನೇಹಾ ಅವರು ಯುಎಇಯ ರೆಹಮಾ ಖಲ್ಫಾನ್ ವಿರುದ್ಧ, ಖುಷಿ 3–0ರಿಂದ ಕಜಕಸ್ತಾನದ ದಾನಾ ದಿದಾಯ್ ವಿರುದ್ಧ ಜಯ ಗಳಿಸಿದರು. ಪುರುಷರ ವಿಭಾಗದಲ್ಲಿ ಈಗಾಗಲೇ ವಿಶ್ವಾಮಿತ್ರ ಚೋಂಗಥಮ್ (51 ಕೆಜಿ), ವಿಶಾಲ್ (80 ಕೆಜಿ) ಪ್ರಶಸ್ತಿ ಗೆದ್ದುಕೊಂಡಿದ್ದರು.

ಟೆನಿಸ್: ಜ್ವೆರೆವ್ ಮುನ್ನಡೆ

ನ್ಯೂಯಾರ್ಕ್ (ಎಎಫ್‌ಪಿ/ರಾಯಿಟರ್ಸ್): ಟೋಕಿಯೊ ಒಲಿಂಪಿಕ್ಸ್ ಚಾಂಪಿಯನ್ ಅಲೆಕ್ಸಾಂಡರ್ ಜ್ವೆರೆವ್ ಅವರು ಅಮೆರಿಕ ಓಪನ್ ಟೆನಿಸ್ ಟೂರ್ನಿಯಲ್ಲಿ ಎರಡನೇ ಲಗ್ಗೆಯಿಟ್ಟಿದ್ದಾರೆ. ಮಂಗಳವಾರ ನಡೆದ ಮೊದಲ ಸುತ್ತಿನ ಹಣಾಹಣಿಯಲ್ಲಿ ಅವರು 6-4, 7-5, 6-2ರಿಂದ ಅಮೆರಿಕದ ಸ್ಯಾಮ್ ಕ್ವೆರಿ ಅವರನ್ನು ಮಣಿಸಿದರು. ಜರ್ಮನಿ ಆಟಗಾರನಿಗೆ ಇದು ಸತತ 12ನೇ ಪಂದ್ಯದ ಜಯವಾಗಿದೆ.

ಸೋಮವಾರ ರಾತ್ರಿ ನಡೆದ ಪುರುಷರ ಸಿಂಗಲ್ಸ್ ಮೊದಲ ಸುತ್ತಿನ ಹಣಾಹಣಿಯಲ್ಲಿ ರಷ್ಯಾದ ಡ್ಯಾನಿಯಲ್ ಮೆಡ್ವೆಡೆವ್ 6-4 6-3 6-1ರಿಂದ ರಷ್ಯಾದ ರಿಚರ್ಡ್ ಗ್ಯಾಸ್ಕೆಟ್ ಅವರನ್ನು ಮಣಿಸಿದರು. 25 ವರ್ಷದ ರಷ್ಯಾ ಆಟಗಾರನಿಗೆ ಇದು ವೃತ್ತಿಜೀವನದ 200ನೇ ಗೆಲುವಾಗಿತ್ತು.

ಪುರುಷರ ವಿಭಾಗದ ಮೊದಲ ಸುತ್ತಿನ ಇನ್ನೊಂದು ಪಂದ್ಯದಲ್ಲಿ ಗ್ರೀಸ್‌ನ ಸ್ಟೆಫನೊಸ್ ಸಿಟ್ಸಿಪಾಸ್ 2-6, 7-6 (9/7), 3-6, 6-3, 6-4ರಿಂದ ಬ್ರಿಟನ್ ಆ್ಯಂಡಿ ಮರೆ ಎದುರು, ಮಹಿಳೆಯರ ವಿಭಾಗದ ಪಂದ್ಯದಲ್ಲಿ ಜಪಾನ್‌ನ ನವೊಮಿ ಒಸಾಕ 6-4, 6-1ರಿಂದ ಜೆಕ್ ಗಣರಾಜ್ಯದ ಮರಿಯಾ ಬೌಜ್‌ಕೊವಾ ಎದುರು ಗೆಲುವು ಸಾಧಿಸಿದರು.

ಅಲೆಕ್ಸಾಂಡರ್ ಜ್ವೆರೆವ್ ಆಟದ ಶೈಲಿ– ಎಎಫ್‌ಪಿ ಚಿತ್ರ

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ನಾಲ್ವರಿಗೆ, ಒಂದು ಸಂಸ್ಥೆಗೆ ಪ್ರಶಸ್ತಿ ಪ್ರಕಟ

ಬಾಂಗ್ಲಾದೇಶದ ಲಸಿಕಾ ವಿಜ್ಞಾನಿಗೆ ಮ್ಯಾಗ್ಸೆಸೆ

ಮನಿಲಾ (ಎಎಫ್‌ಪಿ): ವಿವಿಧ ಕ್ಷೇತ್ರಗಳಲ್ಲಿ ಮಹತ್ವದ ಸಾಧನೆ ಮಾಡಿದ ನಾಲ್ವರಿಗೆ ಮತ್ತು ಒಂದು ಸಂಸ್ಥೆಯನ್ನು 2021ನೇ ಸಾಲಿನ ರಾಮನ್ ಮ್ಯಾಗ್ಸೆಸೆ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಕಾಲರಾ ವಿರುದ್ಧ ಕಡಿಮೆ ದರದ ಲಸಿಕೆ ಅಭಿವೃದ್ಧಿಪಡಿಸಿದ ಬಾಂಗ್ಲಾದೇಶದ ವಿಜ್ಞಾನಿ ಫಿರ್ದೌಸಿ ಖಾದ್ರಿ (70), ಪಾಕಿಸ್ತಾನದ ಮೈಕ್ರೊಫೈನಾನ್ಸ್ ಪ್ರವರ್ತಕ ಮುಹಮ್ಮದ್ ಅಮ್ಜದ್ ಸಾಖಿಬ್ (64), ಫಿಲಿಪ್ಪೀನ್ಸ್‌ನ ಮೀನುಗಾರ ರಾಬರ್ಟೊ ಬಲ್ಲೋನ್ (53) ಮತ್ತು ಅಮೆರಿಕದ ಸ್ಟೀವನ್ ಮನ್ಸಿ ಹಾಗೂ ಇಂಡೊನೇಷ್ಯಾದ ಸಾಕ್ಷ್ಯಚಿತ್ರ ನಿರ್ಮಿಸುವ ‘ವಾಚ್‌ಡಾಕ್’ಗೆ ಈ ಪ್ರಶಸ್ತಿ ನೀಡಲು ನಿರ್ಧರಿಸಲಾಗಿದೆ.

ಕಾಲರಾ ಮತ್ತು ಟೈಫಾಯ್ಡ್‌ಗೆ ಕೈಗೆಟಕುವ ದರದ ಲಸಿಕೆ ಅಭಿವೃದ್ಧಿಪಡಿಸುವಲ್ಲಿ ಖಾದ್ರಿ ಮಹತ್ವದ ಪಾತ್ರವಹಿಸಿದ್ದಾರೆ. ಖಾದ್ರಿ ಅವರು ನೀಡಿದ ಕೊಡುಗೆಯನ್ನು ಪರಿಗಣಿಸಿ ಈ ಪ್ರಶಸ್ತಿ ನೀಡಲಾಗಿದೆ ಎಂದು ರಾಮನ್ ಮ್ಯಾಗ್ಸೆಸೆ ಪ್ರಶಸ್ತಿ ಪ್ರತಿಷ್ಠಾನವು ತಿಳಿಸಿದೆ. ಢಾಕಾದ ಅತಿಸಾರ ಕಾಯಿಲೆ ಕುರಿತಾದ ಅಂತರರಾಷ್ಟ್ರೀಯ ಸಂಶೋಧನಾ ಕೇಂದ್ರದಲ್ಲಿ ಖಾದ್ರಿ ಕಾರ್ಯನಿರ್ಹಿಸುತ್ತಿದ್ದಾರೆ.

ಬಾಂಗ್ಲಾದೇಶದ ಕಾಕ್ಸ್ ಬಜಾರ್ ಜಿಲ್ಲೆಯಲ್ಲಿ ರೋಹಿಂಗ್ಯಾ ನಿರಾಶ್ರಿತರ ಶಿಬಿರಗಳಲ್ಲಿಯೂ ಸಾಮೂಹಿಕ ಲಸಿಕೆ ಅಭಿಯಾನ ಕೈಗೊಳ್ಳುವ ಮೂಲಕ ಕಾಲರಾ ಹಬ್ಬುವುದನ್ನು ಖಾದ್ರಿ ನಿಯಂತ್ರಿಸಿದ್ದರು. ‘ನನಗೆ ಅಪಾರ ಸಂತೋಷವಾಗಿದೆ’ ಎಂದು ಖಾದ್ರಿ ಪ್ರತಿಕ್ರಿಯಿಸಿದ್ದಾರೆ.

ಮೈಕ್ರೊ ಫೈನಾನ್ಸ್ ಯೋಜನೆಯ ಮೂಲಕ ನೆರವಾಗುತ್ತಿರುವ ಪಾಕಿಸ್ತಾನದ ಮುಹಮ್ಮದ್ ಅಮ್ಜದ್ ಸಾಖಿಬ್ ಅವರು ಲಕ್ಷಾಂತರ ಬಡಕುಟುಂಬಗಳ ಅಭಿವೃದ್ಧಿಗೆ ಕಾರಣರಾಗಿದ್ದಾರೆ.

‘ಅಖುವಾಟ್’ ಸಂಸ್ಥೆ ಮೂಲಕ ಈ ಯೋಜನೆ ಆರಂಭಿಸಿ ಎರಡು ದಶಕಗಳಾಗಿವೆ. ಈಗ ದೇಶದ ಬೃಹತ್ ಮೈಕ್ರೊಫೈನಾನ್ಸ್ ಸಂಸ್ಥೆಯಾಗಿ ಬೆಳೆದಿದ್ದು, 90 ಕೋಟಿ ಡಾಲರ್ (₹6569.7075 ಕೋಟಿ) ಸಾಲ ವಿತರಿಸಿದೆ ಮತ್ತು ಶೇಕಡ 100ರಷ್ಟು ಸಾಲ ಮರುಪಾವತಿಯಾಗಿದೆ ಎಂದು ಫೌಂಡೇಷನ್ ತಿಳಿಸಿದೆ.

ಫಿಲಿಪ್ಪೀನ್ಸ್‌ನ ಮೀನುಗಾರ ರಾಬರ್ಟೊ ಬಲ್ಲೋನ್ ಅವರು ಸಂಕಷ್ಟದಲ್ಲಿದ್ದ ಮೀನುಗಾರಿಕೆ ಉದ್ಯಮಕ್ಕೆ ಪುನಶ್ಚೇತನ ನೀಡುವ ಮೂಲಕ ಮಹತ್ವದ ಕಾರ್ಯ ಕೈಗೊಂಡಿದ್ದಾರೆ. ಸರ್ಕಾರದ ನೆರವಿನೊಂದಿಗೆ ಬಲ್ಲೋನ್ ಮತ್ತು ಇತರ ಮೀನುಗಾರರು 500 ಹೆಕ್ಟೇರ್ ಪ್ರದೇಶದಲ್ಲಿ ಕಾಂಡ್ಲಾ ವನ ಅಭಿವೃದ್ಧಿಪಡಿಸಿದ್ದಾರೆ.

ನಿರಾಶ್ರಿತರಿಗೆ ನೆರವು ನೀಡುವ ಕಾರ್ಯದಲ್ಲಿ ಅಮೆರಿಕದ ಸ್ಟೀವನ್ ಮನ್ಸಿ ತೊಡಗಿಸಿಕೊಂಡಿದ್ದಾರೆ. ನೈಸರ್ಗಿಕ ವಿಪತ್ತುಗಳಿಂದ ಸಂತ್ರಸ್ತರಾದವರಿಗೆ ಸಹಾಯ ಹಸ್ತ ಚಾಚಿದ್ದಾರೆ.

ಸಾಕ್ಷ್ಯಚಿತ್ರ ನಿರ್ಮಾಣದಲ್ಲಿ ತೊಡಗಿರುವ ಇಂಡೊನೇಷ್ಯಾದ ‘ವಾಚ್‌ಡಾಕ್’ ಮಾನವ ಹಕ್ಕುಗಳು, ಸಾಮಾಜಿಕ ನ್ಯಾಯ ಮತ್ತು ಪರಿಸರ ಕುರಿತ ವಿಷಯಗಳ ಬಗ್ಗೆ ಹೆಚ್ಚು ಗಮನಹರಿಸಿದೆ.

1957ರಲ್ಲಿ ಈ ಪ್ರಶಸ್ತಿಯನ್ನು ಸ್ಥಾಪಿಸ ಲಾಗಿದೆ. 2020ರಲ್ಲಿ ಕೊರೊನಾ ವೈರಸ್ ಕಾರಣಕ್ಕೆ ವರ್ಚುವಲ್ ವ್ಯವಸ್ಥೆ ಮೂಲಕ ಪ್ರಶಸ್ತಿ ಪ್ರದಾನ ಮಾಡಲಾಗಿತ್ತು.

ಬಾಂಗ್ಲಾದೇಶದ ವಿಜ್ಞಾನಿ ಫಿರ್ದೌಸಿ ಖಾದ್ರಿ ಅವರು ಢಾಕಾದಲ್ಲಿ ವ್ಯಕ್ತಿಯೊಬ್ಬರಿಗೆ ಲಸಿಕೆ ಹಾಕುತ್ತಿರುವುದು–ಸಂಗ್ರಹ ಚಿತ್ರ/ಎಎಫ್‌ಪಿ

ಕೋವಿಡ್: ಲಸಿಕಾ ಅಭಿಯಾನ ತೀವ್ರಗೊಳಿಸಲು ಏಮ್ಸ್ ಸಲಹೆ

ನವದೆಹಲಿ: ಲಸಿಕೆಯ ಎರಡು ಡೋಸ್‌ಗಳನ್ನು ಪಡೆದವರು ಕೋವಿಡ್‌ನ ತೀವ್ರಸ್ವರೂಪದ ಸೋಂಕಿಗೆ ಒಳಗಾಗುವ ಅಪಾಯ ಕಡಿಮೆ ಎಂದು ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ (ಏಮ್ಸ್) ತಂಡ ನಡೆಸಿರುವ ಅಧ್ಯಯನದಿಂದ ತಿಳಿದು ಬಂದಿದೆ.

ಹೀಗಾಗಿ, ಎಲ್ಲರಿಗೂ ಸಂಪೂರ್ಣ ಎರಡು ಡೋಸ್‌ಗಳನ್ನು ತ್ವರಿತಗತಿಯಲ್ಲಿ ನೀಡಲು ಕ್ರಮ ಕೈಗೊಳ್ಳಬೇಕು ಎಂದು ಅಧ್ಯಯನ ತಂಡವು ಸಲಹೆ ನೀಡಿದೆ.

ಜನವರಿ 16ರಿಂದ ಲಸಿಕಾ ಅಭಿಯಾನ ಆರಂಭಿಸಿದ ಬಳಿಕ ಇದುವರೆಗೆ 65 ಕೋಟಿಗೂ ಹೆಚ್ಚು ಮಂದಿಗೆ ಲಸಿಕೆ ನೀಡಲಾಗಿದೆ. ಇವರಲ್ಲಿ 50 ಕೋಟಿ ಮಂದಿ ಮೊದಲ ಡೋಸ್ ಪಡೆದಿದ್ದಾರೆ ಮತ್ತು ಕೇವಲ 15 ಕೋಟಿ ಮಂದಿ ಎರಡನೇ ಡೋಸ್ ಪಡೆದಿದ್ದಾರೆ.

ಮಂಗಳವಾರ 2ನೇ ಬಾರಿ ಒಂದು ಕೋಟಿಗೂ ಹೆಚ್ಚು ಡೋಸ್‌ಗಳನ್ನು ನೀಡಲಾಗಿದೆ. 94.47 ಕೋಟಿ ವಯಸ್ಕರಲ್ಲಿ ಇದುವರೆಗೆ ಶೇಕಡ 53ರಷ್ಟು ಮೊದಲ ಡೋಸ್ ಹಾಗೂ ಶೇಕಡ 16ರಷ್ಟು ಮಾತ್ರ ಎರಡೂ ಡೋಸ್ ಪಡೆದಿದ್ದಾರೆ.

‘ಬೋಧಕ–ಬೋಧಕೇತರ ಸಿಬ್ಬಂದಿಗೆ ನೀಡಿ’

ಶಾಲೆಗಳಲ್ಲಿನ ಎಲ್ಲ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಕನಿಷ್ಠ ಒಂದು ಡೋಸ್ ಲಸಿಕೆ ಪಡೆಯಬೇಕು. ಈ ಬಗ್ಗೆ ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಸೂಕ್ತ ಕ್ರಮಕೈಗೊಳ್ಳಬೇಕು ಎಂದು ಕೇಂದ್ರ ಸರ್ಕಾರ ಸೂಚಿಸಿದೆ.

ಸ್ವಾಮಿ ಪ್ರಭುಪಾದರ ಸ್ಮರಣಾರ್ಥ ₹ 125ರ ನಾಣ್ಯ ಬಿಡುಗಡೆ ಇಂದು

ನವದೆಹಲಿ (ಪಿಟಿಐ): ಇಸ್ಕಾನ್ ಸಂಸ್ಥಾಪಕ ಶ್ರೀಲ ಭಕ್ತಿವೇದಾಂತ ಸ್ವಾಮಿ ಪ್ರಭುಪಾದರ 125ನೇ ಜಯಂತಿ ಅಂಗವಾಗಿ ₹125ರ ವಿಶೇಷ ನಾಣ್ಯವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಬಿಡುಗಡೆ ಮಾಡಲಿದ್ದಾರೆ.ಅಲ್ಲದೇ ವಿಡಿಯೊ ಕಾನ್ಫರೆನ್ಸ್ ಮೂಲಕ ಭಾಷಣ ಮಾಡಲಿದ್ದಾರೆ ಎಂದು ಪ್ರಧಾನಿ ಕಚೇರಿ ತಿಳಿಸಿದೆ. ಇಸ್ಕಾನ್ ಶ್ರೀಮದ್ ಭಗವದ್ಗೀತೆ ಮತ್ತು ಇತರ ವೇದ ಸಾಹಿತ್ಯಗಳನ್ನು 89 ಭಾಷೆಗಳಲ್ಲಿ ಭಾಷಾಂತರಿಸಿದೆ. ವಿಶ್ವದಾದ್ಯಂತ ವೈದಿಕ ಸಾಹಿತ್ಯದ ಪ್ರಸಾರದಲ್ಲಿ ಅತ್ಯುತ್ತಮ ಪಾತ್ರ ವಹಿಸುತ್ತಿದೆ ಎಂದು ಪ್ರಧಾನ ಮಂತ್ರಿ ಕಚೇರಿ ತಿಳಿಸಿದೆ.

ಸ್ವಾಮಿ ಪ್ರಭುಪಾದರು

ಸಂಕ್ಷಿಪ್ತ ಸುದ್ದಿ

95 ಸಾವಿರ ವಿಷಯಗಳ ತೆಗೆದುಹಾಕಿದ ಗೂಗಲ್

ನವದೆಹಲಿ: ‘ಭಾರತದಲ್ಲಿ ಜುಲೈ ತಿಂಗಳೊಂದರಲ್ಲೇ ಕೃತಿಸ್ವಾಮ್ಯ, ಅಶ್ಲೀಲ ಚಿತ್ರ, ನ್ಯಾಯಾಲಯದ ಆದೇಶ, ಟ್ರೇಡ್ ಮಾರ್ಕ್, ವಂಚನೆ ವಿಷಯಗಳು ಸೇರಿದಂತೆ ಒಟ್ಟು 95,680 ತುಣುಕುಗಳನ್ನು (ಕಂಟೆಂಟ್ ಪೀಸಸ್) ತೆಗೆದುಹಾಕಲಾಗಿದೆ’ ಎಂದು ಗೂಗಲ್ ಕಂಪನಿಯು ಮಂಗಳವಾರ ತಿಳಿಸಿದೆ.

‘ಬಳಕೆದಾರರಿಂದ 36,934 ದೂರುಗಳನ್ನು ಸ್ವೀಕರಿಸಲಾಗಿದ್ದು, ಒಟ್ಟು 95,680 ತುಣುಕುಗಳನ್ನು ಗೂಗಲ್‌ನಿಂದ ತೆಗೆದುಹಾಕಲಾಗಿದೆ. ಬಳಕೆದಾರರ ದೂರುಗಳ ಹೊರತಾಗಿಯೂ 5,76,892 ವಿಷಯಗಳ ತುಣುಕುಗಳನ್ನು ಜುಲೈನಲ್ಲಿ ತೆಗೆದುಹಾಕಲಾಗಿದೆ’ ಎಂದು ಗೂಗಲ್ ತನ್ನ ಮಾಸಿಕ ಪಾರದರ್ಶಕ ವರದಿಯಲ್ಲಿ ಮಾಹಿತಿ ನೀಡಿದೆ.

ಬಾಂಗ್ಲಾದೇಶ: ಮಾಜಿ ಮೇಜರ್‌ಗೆ ಗಲ್ಲು ಶಿಕ್ಷೆ

ಢಾಕಾ (ಪಿಟಿಐ): ಸೇನೆಯ ಮಾಜಿ ಮೇಜರ್ ಮತ್ತು ಇತರ ಐವರು ಉಗ್ರರಿಗೆ ಬಾಂಗ್ಲಾದೇಶದ ಭಯೋತ್ಪಾದನಾ ನಿಗ್ರಹ ನ್ಯಾಯಾಲಯ ಮಂಗಳವಾರ ಗಲ್ಲು ಶಿಕ್ಷೆ ವಿಧಿಸಿದೆ.

2016ರಲ್ಲಿ ಸಲಿಂಗಿಗಳ ಹಕ್ಕುಗಳ ಕಾರ್ಯಕರ್ತ ಕ್ಸುಲ್ಹಾಜ್ ಮನ್ನನ್ ಅವರ ಭೀಕರ ಹತ್ಯೆ ನಡೆಸಿದ್ದಕ್ಕಾಗಿ ಈ ಶಿಕ್ಷೆ ವಿಧಿಸಲಾಗಿದೆ. ನ್ಯಾಯಾಧೀಶ ಎಂ.ಡಿ ಮಜಿಬುರ್ ರಹಮಾನ್ ಈ ತೀರ್ಪು ನೀಡಿದ್ದಾರೆ.

ಬಲೂಚಿಸ್ತಾನದಲ್ಲಿ 11 ಉಗ್ರರ ಹತ್ಯೆ

ಕರಾಚಿ (ಪಿಟಿಐ): ದೇಶದ ಬಲೂಚಿಸ್ತಾನ ಪ್ರಾಂತ್ಯದಲ್ಲಿ ಇಸ್ಲಾಮಿಕ್ ಸ್ಟೇಟ್ (ಐಎಸ್) ಭಯೋತ್ಪಾದಕರ ಗುಂಪಿಗೆ ಸೇರಿದ 11 ಉಗ್ರರನ್ನು ಹತ್ಯೆ ಮಾಡಲಾಗಿದೆ ಎಂದು ಪಾಕಿಸ್ತಾನದ ಭಯೋತ್ಪಾದನಾ ನಿಗ್ರಹ ಅಧಿಕಾರಿಗಳು ತಿಳಿಸಿದರು. ಬಲೂಚಿಸ್ತಾನ ಪ್ರಾಂತ್ಯದ ಮಸ್ತುಂಗ್ ಜಿಲ್ಲೆಯಲ್ಲಿ ನಡೆದ ಗುಂಡಿನ ಚಕಮಕಿಯಲ್ಲಿ ಐಎಸ್ ಉಗ್ರರನ್ನು ಹತ್ಯೆ ಮಾಡಲಾಗಿದೆಎಂದು ಅಧಿಕಾರಿಯೊಬ್ಬರು ಹೇಳಿದರು.

ಮತ್ತೊಬ್ಬ ಬಿಜೆಪಿ ಶಾಸಕ ತೃಣಮೂಲ ಕಾಂಗ್ರೆಸ್ ತೆಕ್ಕೆಗೆ

ಕೋಲ್ಕತ್ತ (ಪಿಟಿಐ): ಬಿಜೆಪಿ ಶಾಸಕ ತನ್ಮಯ್ ಘೋಷ್ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಸೇರಿದ ಬೆನ್ನಲ್ಲೇ ಮತ್ತೊಬ್ಬ ಬಿಜೆಪಿ ಶಾಸಕ ವಿಸ್ವಜಿತ್ ದಾಸ್ ಮಂಗಳವಾರ ಟಿಎಂಸಿ ಸೇರಿದ್ದಾರೆ.

ಇವರು ಬಗ್ದಾ ವಿಧಾನಸಭಾ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಮೇ ತಿಂಗಳಲ್ಲಿ ವಿಧಾನಸಭಾ ಚುನಾವಣೆ ಫಲಿತಾಂಶ ಪ್ರಕಟವಾದ ನಂತರ ಬಿಜೆಪಿ ತೊರೆದ ಮೂರನೇ ಶಾಸಕ ಇವರು. ಟಿಎಂಸಿಯಿಂದ ಎರಡು ಬಾರಿ ಶಾಸಕರಾಗಿದ್ದ ದಾಸ್ 2019ರಲ್ಲಿ ಬಿಜೆಪಿ ಸೇರಿದ್ದರು.

ಟಿಎಂಸಿ ಪ್ರಧಾನ ಕಾರ್ಯದರ್ಶಿ ಪಾರ್ಥ ಚಟರ್ಜಿ ಅವರ ಸಮ್ಮುಖದಲ್ಲಿ ಪಕ್ಷಕ್ಕೆ ಸೇರಿದ ನಂತರ ಮಾತನಾಡಿದ ವಿಸ್ವಜಿತ್ ದಾಸ್ ಅವರು, ‘ಬಿಜೆಪಿ ಬಂಗಾಳಕ್ಕೆ ಏನನ್ನೂ ಮಾಡಿಲ್ಲ. ನಾನು ಬಿಜೆಪಿಯಲ್ಲಿ ಎಂದಿಗೂ ಆರಾಮದಾಯಕವಾಗಿರಲಿಲ್ಲ. ನಾನು ಬಹಳ ಹಿಂದೆಯೇ ಟಿಎಂಸಿಗೆ ಮರಳಲು ಬಯಸಿದ್ದೆ’ ಎಂದರು.

ಬಿಜೆಪಿ ಶಾಸಕ ತನ್ಮಯ್ ಘೋಷ್ ಅವರು ಸೋಮವಾರವಷ್ಟೇ ಟಿಎಂಸಿಗೆ ಮರಳಿದ್ದರು. ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿ ಪಕ್ಷವನ್ನು ನಾಲ್ಕು ವರ್ಷಗಳ ಹಿಂದೆ ತೊರೆದಿದ್ದ ಬಿಜೆಪಿ ಶಾಸಕ ಮತ್ತು ಪಕ್ಷದ ರಾಷ್ಟ್ರೀಯ ಉಪಾಧ್ಯಕ್ಷ ಮುಕುಲ್ ರಾಯ್ ಅವರು ಜೂನ್‌ನಲ್ಲಿ ಮತ್ತೆ ಟಿಎಂಸಿಗೆ ಸೇರಿದ್ದರು.

Date: 1st September, 2021

MARUTI SUZUKI

PUBLIC NOTICE
MARUTI SUZUKI INDIA LIMITED
1, NELSON MANDELA ROAD, VASANT KUNJ, NEW DELHI – 110070

BEWARE OF FRAUDULENT PROMOTIONAL OFFERS

Our attention has been drawn by certain members of the public that they have received communication, links for promotional offers through social media platforms offering cars or rewards from Maruti Suzuki. These individuals/companies who are offering links or promotional offers are wrongfully using Maruti Suzuki's registered trademark as well as using look-alike social media handles of Maruti Suzuki to lure innocent members of the public to fall into this trap.

We would like to categorically state that these communications, links for promotional offers are purely made with the intent to defraud the public and Maruti Suzuki has not authorised any person or company to carry out these kinds of promotions. We urge the public not to be misled by such communications or promotions purportedly made by our company through any medium. Should you require any further information about genuinity or otherwise of such communications or promotions which you may receive, you are requested to please get in touch with us on our toll-free numbers: 1800-1800-180/1800-102-1800/1800-200-6392/1800-102-6392 or log on to our website www.marutisuzuki.com or reach out to your nearest authorized dealer of Maruti Suzuki.

For Maruti Suzuki India Limited
General Counsel and Executive Director – Legal